# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 09.09.2011 ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, |
| ಲತಾ. ಕೆ – ಸದಸ್ಯರು | ಜಂಟಿ ಅಯುಕ್ತರು (ಕಲ್ಯಾಣ), |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), (ಆರೋಗ್ಯ), |
| ವಿ. ವಾಗಿಶ್ – ಸದಸ್ಯರು | ಸಹಾಯಕ ಆಯುಕ್ತರು (ಆಡಳಿತ), |
| ಮಂಜುನಾಥ – ಸದಸ್ಯರು | ಸಹಾಯಕ ನಿಯಂತ್ರಕರು (ಕಂದಾಯ), |
| ಎಲ್. ನಾಗರತ್ನ – ಸದಸ್ಯರು | ಮುಖ್ಯ ಅಭಿಯಂತರರು (ಕೆರೆಗಳು), (ರಾಜ ರಾಜೇಶ್ವರಿನಗರ), (ಶಾಂತಿನಗರ), (ವಿದ್ಯುತ್–ಬೊಮ್ಮನಹಳ್ಳಿ), (ವಿದ್ಯುತ್–ದಕ್ಷಿಣ), (ಯೋಜನೆ–ರಾಜ ರಾಜೇಶ್ವರಿನಗರ), |
| ವರಲಕ್ಷ್ಮಿ. ಜೆ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಕೆರೆಗಳು), (ಯೋಜನೆ–ಪೂರ್ವ), (ಶಿವಾಜಿನಗರ), |
| ಆಶಾ ಸುರೇಶ್ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳು), |
| ಎನ್. ಜಯಪಾಲ – ಸದಸ್ಯರು | |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

### ***01]. ವಿಷಯದ ಸಂಖ್ಯೆ :–ತೆಆಸ್ಥಾಸ/119/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 23–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್–ದಂಡುಪ್ರದೇಶ, ಸದರಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಸದರಿ ಸಂಘವು ಅಂಬೇಡ್ಕರ್ ಜಯಂತಿ, ಕನ್ನಡ ರಾಜ್ಯೋತ್ಸವ ಹಾಗೂ ವಿವಿಧ ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಚರಿಸುವ ಪ್ರಯುಕ್ತ 2011–12ನೇ ಸಾಲಿನ ಆಯವ್ಯಯದಲ್ಲಿ ರೂ.20.00 ಲಕ್ಷ ಅನುದಾನ ಮೀಸಲಿಡಬೇಕೆಂದು ಕೋರಿರುತ್ತಾರೆ. ಈ ಬಗ್ಗೆ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :** ***ದಿನಾಂಕ : 23–06–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಸಂಸ್ಥೆಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಸಹಾಯಧನ/ಕೊಡುಗೆಗಳು ಲೆಕ್ಕಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿ ರೂ.5.00 (ಐದು ಲಕ್ಷ)ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

### ***02]. ವಿಷಯದ ಸಂಖ್ಯೆ :–ತೆಆಸ್ಥಾಸ/143/2011–12***

ಆಯುಕ್ತರ ಟಿಪ್ಪಣಿ ದಿನಾಂಕ ಃ 07–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಮಹಾಪೌರರು ಮತ್ತು ವಾರ್ಡ್ 16 ಜಾಲಹಳ್ಳಿ ಪಾಲಿಕೆ ಸದಸ್ಯರು ಆದ ಶ್ರೀ. ಆರ್. ನಾರಾಯಣಸ್ವಾಮಿರವರು, ಕಡತದಲ್ಲಿ ಲಗತ್ತಿಸಿರುವ 4 ಪತ್ರಗಳನ್ನು ನೀಡಿ ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಮೋರಿಗಳ ನಿರ್ಮಾಣ, ಮೋರಿಗಳಿಗೆ ಹೊದಿಕೆ, ಪಾದಚಾರಿ ರಸ್ತೆಗಳ ನಿರ್ಮಾಣ ಹಾಗೂ ಇತರೇ ಕಾಮಗಾರಿಗಳಿಗೆ ಒಟ್ಟು 50 ಕಾಮಗಾರಿಗಳಿಗೆ ರೂ827.46 ಲಕ್ಷಗಳ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿರುತ್ತಾರೆ. 2010–11ನೇ ಸಾಲಿನ ಆಯವ್ಯಯದಲ್ಲಿ ಹೆಚ್ಚುವರಿ ಅನುದಾನ ಅಭ್ಯವಿರುವುದಿಲ್ಲ.

ಕಂಡಿಕೆ 4ರಲ್ಲಿ 2011–12ನೇ ಸಾಲಿನ ಆಯವ್ಯಯದಲ್ಲಿ ಪ್ರಸ್ತಾಪಿಸುವಂತೆ ಸೂಚಿಸಬಹುದೆಂದು ತಿಳಿಸಲಾಗಿದೆ. 2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅನುದಾನದ ಮೊತ್ತ ರೂ.827.46 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ :</u> ***<u>ದಿನಾಂಕ : 07–06–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ನಂ.16 ಕ್ಕೆ (ವಾರ್ಡ್ ನಂ. ಹದಿನಾರು) ಒದಗಿಸಿರುವ ಅನುದಾನದ ಮಿತಿಯೊಳಗೆ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>03]. ವಿಷಯದ ಸಂಖ್ಯೆ :–ತೆಆಸ್ಥಾಸ/145/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 14–07–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 90ರಲ್ಲಿ ಹದಗೆಟ್ಟಿರುವ ರಸ್ತೆಗಳಿಗೆ ಡಾಂಬರೀಕರಣ ಮಾಡುವ ಕಾಮಗಾರಿ ಅಂದಾಜು ಮೊತ್ತ ರೂ.59.25 ಲಕ್ಷಗಳಿಗೆ 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ0619 ಅಡಿ 082-10-N-G-E-R-AS-001 ಕಾಮಗಾರಿ ಸಂಕೇತ ನೀಡಲಾಗಿದ್ದು, ಕಾರಾಣಾಂತರಗಳಿಂದ ಕಾಮಗಾರಿ ಪ್ರಾರಂಭಿಸದೆ ಇದ್ದುದರಿಂದ ಸದರಿ ಕಾಮಗಾರಿಯನ್ನು ರದ್ದುಗೊಳಿಸಿ ಗುತ್ತಿಗೆದಾರರ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಪ್ರಸ್ತುತ ಸದರಿ ರಸ್ತೆಗಳನ್ನು ತುರ್ತಾಗಿ ಅಭಿವೃದ್ಧಿಗೊಳಿಸಬೇಕಾಗಿರುವುದರಿಂದ ಮೇಲ್ಕಂಡ ಕಾಮಗಾರಿಗೆ ರೂ.59.25 ಲಕ್ಷಗಳಿಗೆ ಹೊಸದಾಗಿ ಅಂದಾಜುಪಟ್ಟಿ ತಯಾರಿಸಲಾಗಿದ್ದು, ಸದರಿ ಮೊತ್ತವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಪರಿಗಣಿಸಿ 2011–12ನೇ ಸಾಲಿನ ಆಯವ್ಯಯದ “ವಲಯ ರಸ್ತೆಗಳ ಡಾಂಬರೀಕರಣ ಪಿ0619” ಅಡಿ ಸೂಕ್ತ ಅನುದಾನ ಒದಗಿಸಿಕೊಂಡು ಹಾಗೂ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಬಗ್ಗೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ :</u> ***<u>ದಿನಾಂಕ : 14–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡುಗಳಿಗೆ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>04]. ವಿಷಯದ ಸಂಖ್ಯೆ :–ತೆಆಸ್ಥಾಸ/156/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 14–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–160ರ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ.ಜಿ.ಹೆಚ್.ರಾಮಚಂದ್ರ ರವರು ತಾವು ಪ್ರತಿನಿಧಿಸುವ ವಾರ್ಡ್ ನಂ.160 ರಾಜರಾಜೇಶ್ವರಿನಗರವು ಅತಿ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶವಾಗಿದ್ದು ಹಾಗೂ ಅನೇಕ ಪ್ರತಿಷ್ಠಿತ ಶಾಲಾ, ಕಾಲೇಜುಗಳಿದ್ದು, ಸದರಿ ಪ್ರದೇಶದಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಯಾವುದೇ ಈಜುಕೊಳವು ಇಲ್ಲದೆ ಇರುವುದರಿಂದ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಈಜುವ ಸೌಲಭ್ಯದಿಂದ ವಂಚಿತರಾಗಿ ದೈಹಿಕ ಕಸರತ್ತು ಮತ್ತು ಈಜು ಸ್ಪರ್ದೆಗೆ ಭಾಗವಹಿಸಲು ಆಸ್ಪದವಿಲ್ಲದಿರುವುದರಿಂದ, ರಾಜರಾಜೇಶ್ವರಿನಗರ ಪ್ರದೇಶದಲ್ಲಿ ಈಜುವ ಕೊಳ ನಿರ್ಮಿಸಲು 2011–12ನೇ ಸಾಲಿನ ಆಯವ್ಯಯದಲ್ಲಿ ರೂ.8.00 ಕೋಟಿ ಅನುದಾನ ಮೀಸಲಿರಿಸಲು ಕೋರಿರುತ್ತಾರೆ.

ಮಾನ್ಯ ಪಾಲಿಕೆ ಸದಸ್ಯರು ಕೋರಿರುವಂತೆ ಪ್ರಸ್ತಾಪಿತ ಈಜುಕೊಳ ಪ್ರದೇಶದ ವಿಸ್ತೀರ್ಣವು 100.00*69.00ಮೀ ಗಳಷ್ಟಿದ್ದು ಸುಸಜ್ಜಿತ ಈಜುಕೊಳವನ್ನು ನಿರ್ಮಿಸುವುದಕ್ಕಾಗಿ ರೂ.800.00 ಲಕ್ಷಗಳ ಅಂದಾಜು ತಯಾರಿಸಿದ್ದು, ಸದರಿ ಕಾಮಗಾರಿ

ಕೈಗೊಳ್ಳಲು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಲು ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ :– ದಿನಾಂಕ : 14–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *05]. ವಿಷಯದ ಸಂಖ್ಯೆ :–ತೆಆಸ್ಥಾಸ/165/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/90/11–12, ದಿನಾಂಕ : 20–05–2011ರಲ್ಲಿ ವಿವರಿಸಿರುವಂತೆ, ಆಯುಕ್ತರ ದಿನಾಂಕ:20–05–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಜಗಜೀವನರಾಮ್‌ನಗರ ವಲಯದ ವ್ಯಾಪ್ತಿಗೆ ಬರುವ ವಾರ್ಡ್ ನಂ.138 ರಲ್ಲಿ ಬರುವ ಚೆಲುವಾದಿಪಾಳ್ಯದ ''ಜೈಭೀಮ್‌ನಗರ'' ಕೊಳಚೆ ಪ್ರದೇಶವು ನಗರ ಪಾಲಿಕೆ ವ್ಯಾಪ್ತಿಗೆ ಸೇರಿದ್ದು, ಇಲ್ಲಿನ ಫಲಾನುಭವಿಗಳು ಸುಮಾರು 30 ರಿಂದ 40 ವರ್ಷಗಳಿಂದಲೂ ವಾಸವಾಗಿರುತ್ತಾರೆ. ಈ ಪ್ರದೇಶದಲ್ಲಿ ಮೂಲ ಸೌಕರ್ಯಗಳನ್ನು ಸಹಾ ಒದಗಿಸಲಾಗಿರುತ್ತದೆ. ಈ ಪ್ರದೇಶವನ್ನು ದಿನಾಂಕ: 11–12–1974 ರಂದು ಕೊಳಚೆ ಪ್ರದೇಶವೆಂದು ಘೋಷಿಸಿದ್ದು ಕರ್ನಾಟಕ ಗೆಜೆಟ್ ನೋಟೀಫಿಕೇಷನ್ ಆಗಿರುವುದು ಕಂಡು ಬಂದಿರುತ್ತದೆ. ಆದುದರಿಂದ ಈ ಹಿಂದೆ 1994ರಲ್ಲಿ ಅಂದಿನ ನಗರ ಪಾಲಿಕೆ ಅಧಿಕಾರಿಗಳು, ನಗರ ಸಭಾ ಸದಸ್ಯರು ಸೇರಿ ಹಿಂದೆ ಇದ್ದ 27ನೇ ವಿಭಾಗಕ್ಕೆ (ಚಿಕ್ಕಪೇಟೆ ವಲಯ) ಸಂಬಂಧಿಸಿದ ಫ್ಲವರ್ ಗಾರ್ಡನ್, ದೊರೈಸ್ವಾಮಿನಗರ, ಭಂಗಿ ಕಾಲೋನಿ ಮತ್ತು ಜೈಭೀಮ್‌ನಗರದಲ್ಲಿನ ಸುಮಾರು 25 ಮಂದಿ ಆರ್ಥಿಕ ಹಿಂದುಳಿದವರು ಹಾಗೂ ಬಡ ಕುಟುಂಬಕ್ಕೆ ಸೇರಿದ ಫಲಾನುಭವಿಗಳಿಗೆ ದಿನಾಂಕ:24–09–1994 ರಲ್ಲಿ ನಗರ ಪಾಲಿಕೆ ವತಿಯಿಂದ ಸ್ವಾಧೀನ ಪತ್ರಗಳನ್ನು ಹಂಚಿಕೆ ಮಾಡಲಾಗಿದೆ. (ಈ ಎಲ್ಲಾ ಪ್ರದೇಶವು ಹಾಲಿ ವಾರ್ಡ್ ನಂ.138, ಚೆಲುವಾದಿಪಾಳ್ಯ ವ್ಯಾಪ್ತಿಗೆ ಸೇರುತ್ತದೆ) ಈ ಪೈಕಿ ಫ್ಲವರ್ ಗಾರ್ಡನ್‌ನಲ್ಲಿನ ಫಲಾನುಭವಿಗಳಿಗೆ ಸ್ವಾಧೀನ ಪತ್ರಗಳನ್ನು ನೀಡಿ, ನಂತರ ಸರ್ಕಾರದ ಆದೇಶದ ಸಂಖ್ಯೆ ನಅಇ 20 ಎಂಎನ್‌ಜಿ 99 ದಿನಾಂಕ:17–02–2004 ರಂತೆ ಗುತ್ತಿಗೆ–ಕಂ–ಮಾರಾಟದ ಕರಾರು ಪತ್ರವನ್ನು ಹಲವಾರು ಮಂದಿಗೆ ನೋಂದಾಯಿಸಿ ನೀಡಲಾಗಿದೆ.

ಸುಮಾರು 30–40 ವರ್ಷಗಳಿಂದ ವಾಸವಾಗಿರುವ ಆರ್ಥಿಕವಾಗಿ ಹಿಂದುಳಿದವರು, ಬಡ ಕುಟುಂಬದವರಾಗಿರುವ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಜನಾಂಗಕ್ಕೆ ಸೇರಿದವರಾಗಿರುವ ಜೈಭೀಮನಗರದ 227 ಫಲಾನುಭವಿಗಳಿಗೆ ಸರ್ಕಾರದ ಆದೇಶದ ಸಂಖ್ಯೆ:ನಅಇ 36 ಎಂಎನ್‌ಯು 09 ದಿ:20–02–2009 ರಂತೆ ಚದರ ಮೀಟರ್ ಒಂದಕ್ಕೆ ರೂ.200/– ರಂತೆ ನಿಗಧಿಪಡಿಸಿ, ಗುತ್ತಿಗೆ ಮತ್ತು ಮಾರಾಟ ಕರಾರು ಒಪ್ಪಂದದ ಹಕ್ಕುಪತ್ರವನ್ನು ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 20–05–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05–07–2011ರ ನಿರ್ಣಯ.

**ನಿರ್ಣಯ :** ***ದಿನಾಂಕ : 05–07–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಸರ್ಕಾರದ ಇತ್ತೀಚಿನ ಆದೇಶದ ಪ್ರಕಾರ ದರವನ್ನು ನಿಗಧಿಪಡಿಸಿ ಹಕ್ಕು ಪತ್ರವನ್ನು ನೀಡಲು ಸಮಿತಿಯು ತೀರ್ಮಾನಿಸಿತು.***

## *06]. ವಿಷಯದ ಸಂಖ್ಯೆ :–ತೆಆಸ್ಥಾಸ/166/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/07/11–12, ದಿನಾಂಕ : 07–05–2011ರಲ್ಲಿ ವಿವರಿಸಿರುವಂತೆ, ಆಯುಕ್ತರ ದಿನಾಂಕ : 07–05–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:145, ಹೊಂಬೇಗೌಡನಗರ ವ್ಯಾಪ್ತಿಯ ನಾರಾಯಣಪುರ ಕೊಳಚೆ ಪ್ರದೇಶದಲ್ಲಿ ಮೂಲ ಹಂಚಿಕೆದಾರರಿಂದ 10 ವರ್ಷಗಳ ನಂತರ ಕ್ರಯಕ್ಕೆ ಪಡೆದಿರುವ 52 ಮಂದಿ ಹಾಗೂ 10 ವರ್ಷದ ಒಳಗೆ ಕ್ರಯಕ್ಕೆ ಪಡೆದಿರುವ 63 ಫಲಾನುಭವಿಗಳು ಹಾಲಿ ಸ್ಥಳದಲ್ಲಿ ವಾಸಿಸುತ್ತಿದ್ದು, ಕ್ರಯಪತ್ರ ನೀಡಲು ಕೋರಿರುತ್ತಾರೆ.

ನಾರಾಯಣಪುರ ಕೊಳಚೆ ಪ್ರದೇಶದಲ್ಲಿ ಪಾಲಿಕೆ ವತಿಯಿಂದ ದಿನಾಂಕ:27–01–1992 ರಂದು 10 ವರ್ಷಗಳು ಪರಬಾರೆ ಮಾಡಬಾರದೆಂದು ಷರತ್ತು ವಿಧಿಸಿ ಹಕ್ಕುಪತ್ರ ನೀಡಲಾಗಿರುತ್ತದೆ. ಇದರಲ್ಲಿ ಹಕ್ಕು ಪತ್ರ ಪಡೆದ ಮೂಲ ಹಂಚಿಕೆದಾರರಿಂದ 10 ವರ್ಷಗಳ ನಂತರ 52 ಮಂದಿ ಫಲಾನುಭವಿಗಳು ಕ್ರಯ/ಜಿ.ಪಿ.ಎ. ಮುಖಾಂತರ ಪಡೆದಿದ್ದು, ಸ್ಥಳದಲ್ಲಿ ವಾಸಿಸುತ್ತಿರುತ್ತಾರೆ. ಇನ್ನೂ 63 ಫಲಾನುಭವಿಗಳು 10 ವರ್ಷಗಳು ಅವದಿ ಪೂರ್ಣಗೊಳ್ಳದೇ ಇರುವ ಮೂಲ ಹಂಚಿಕೆದಾರರಿಂದ ಕ್ರಯ/ಜಿ.ಪಿ.ಎ. ಮುಖಾಂತರ ಪಡೆದು ವಾಸ ಮಾಡುತ್ತಿರುತ್ತಾರೆ. ತಮಗೆ ಪಾಲಿಕೆವತಿಯಿಂದ

ಹಕ್ಕುಪತ್ರ ನೀಡಬೇಕೆಂದು ಕೋರಿದ್ದು, ಕೊಳಚೆ ಪ್ರದೇಶದಲ್ಲಿ ಮೂಲ ಹಂಚಿಕೆದಾರರಿಂದ ಕ್ರಯ/ಜಿ.ಪಿ.ಎ. ಮುಖಾಂತರ ಪಡೆದು ಸ್ಥಳದಲ್ಲಿ ವಾಸವಾಗಿರುವುದರಿಂದ, ಸರ್ಕಾರದ ಆದೇಶ ಸಂಖ್ಯೆ:ನಅಇ/36/ಎಂಎನ್‌ಯು/2009, ದಿ:20–02–2009 ರಂತೆ 10–ವರ್ಷಗಳ ಮಾರಾಟ ಮಾಡಬಾರದೆಂಬ ಷರತ್ತುಬದ್ದ ಶುದ್ದಕ್ರಯಪತ್ರ ನೀಡುವ ಬಗ್ಗೆ ಕಡತ ಪ್ರಸ್ತಾಪಿಸಿರುತ್ತಾರೆ.

ಈ ಫಲಾನುಭವಿಗಳು ವಾಸವಾಗಿರುವ ಪ್ರದೇಶ, ಕೊಳಚೆ ಪ್ರದೇಶಗಳೆಂದು ಘೋಷಿಸಲ್ಪಟ್ಟಿರುವುದಿಲ್ಲ. ಪ್ರಸಕ್ತ ಮಾರುಕಟ್ಟೆ ಆಧಾರದ ಮೇಲೆ ದರ ನಿಗಧಿಪಡಿಸಿ, ಸರ್ಕಾರದ ಅನುಮೋದನೆ ಪಡೆದು ಹಕ್ಕುಪತ್ರ ನೀಡಲು ಸರ್ಕಾರಕ್ಕೆ ಪ್ರಸ್ತಾಪಿಸಬಹುದಾಗಿರುತ್ತದೆ. ಈ ಪಟ್ಟಿಯಲ್ಲಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಿಗೆ ಪಾಲಿಕೆಯ ಶೇ:22.75%ರ ಅನುದಾನದಡಿಯಲ್ಲಿ ಭರಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 07–05–2011 ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 05–07–2011ರ ನಿರ್ಣಯ.

**ನಿರ್ಣಯ :** ***ದಿನಾಂಕ : 05–07–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಪರಿಶಿಷ್ಟ ಜಾತಿ / ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ಪಾಲಿಕೆಯ ಶೇ.22.75 ಅನುದಾನದಲ್ಲಿ ಭರಿಸುವಂತೆ ಹಾಗು ಉಳಿದವರಿಗೆ ಪ್ರಸಕ್ತ ಮಾರುಕಟ್ಟೆ ದರದ ಆಧಾರ ದರ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *07]. ವಿಷಯದ ಸಂಖ್ಯೆ :–ತೆಆಸ್ಥಾಸ/167/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ፡ ಮುಲೆಅ/ಆಯವ್ಯಯ/ಪಿಆರ್/150/11–12, ದಿನಾಂಕ ፡ 12–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸುವಂತೆ ಪ್ರದಾನ ಕಾರ್ಯದರ್ಶಿಗಳು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘ (ನೋ), ಮಹಾನಗರ ಪಾಲಿಕೆ ಸದಸ್ಯರು, ಕಾ.ಪಾ.ರವರು, ಹಾಗೂ ಮಾನ್ಯ ಆಡಳಿತ ಪಕ್ಷದ ನಾಯಕರು ರವರುಗಳು ಕೋರಿಕೆ ಸಲ್ಲಿಸಿರುತ್ತಾರೆ. ವಿವರ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಕೋರಿಕೆ ಸಲ್ಲಿಸಿರುವವರು | ಅನುದಾನ ಒದಗಿಸಲು ಕೋರಿರುವ ಉದ್ದೇಶ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 01 | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘ (ನೋ) | ಅನುದಾನ | 10.00 |
| 02 | ಶ್ರೀ.ಡಿ.ಚಂದ್ರಪ್ಪ, ಮಾನ್ಯ ಸದಸ್ಯರು, ವಾರ್ಡ್ ನಂ–145 | 1. ವಾರ್ಡ್ ನಂ–145ರಲ್ಲಿ ಹೊಂಬೇಗೌಡನಗರದಲ್ಲಿ ಮಳೆ ನೀರು ಒಳ ಚರಂಡಿ ನಿರ್ಮಾಣಕ್ಕೆ<br>2. ವಾಡ್ ನಂ–145ರಲ್ಲಿ ಗಣೇಶ ವಿಸರ್ಜನೆಗೆ ನೀರಿನ ತೊಟ್ಟಿ ನಿರ್ಮಾಣ | 100.00<br>100.00 |
| 03 | ಶ್ರೀಮತಿ. ಎನ್. ಶಕುಂತಲ ದೊಡ್ಡಲಕ್ಕಪ್ಪ, ಮಾನ್ಯ ಸದಸ್ಯರು, ವಾರ್ಡ್ ನಂ–125 | ವಾರ್ಡ್ ನಂ–125ರ ಮಾರೇನಹಳ್ಳಿಯಲ್ಲಿರುವ ಕೆ.ಜೆ.ಎಸ್. ಬಡಾವಣೆಯ 1ನೇ ಮುಖ್ಯರಸ್ತೆಯಲ್ಲಿನ ಬಿ.ಬಿ.ಎಂ.ಪಿ ಖಾಲಿ ನಿವೇಶನದಲ್ಲಿ ಲೈಬ್ರರಿ ಮತ್ತು ಒಳಂಗಣ ಕ್ರಿಡಾ ಸಂಕೀರ್ಣ ನಿರ್ಮಾಣ | 165.00 |
| 04 | ಶ್ರೀ. ಎಸ್.ಹರೀಶ್ ಬಿಇ, ಮಾನ್ಯ ಉಪ ಮಹಾಪೌರರು ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ(ರಿ) ರವರ ಮನವಿಯಂತೆ ಅನುದಾನ ನಿಗಧಿ | 1. ಡೋಬಿ ಘಾಟ್‌ಗಳ ಅಭಿವೃದ್ಧಿಗೆ ಹಣ ನಿಗಧಿಪಡಿಸುವುದು.<br>2. ಕಲ್ಯಾಣ ಕಾರ್ಯಕ್ರಮಗಳಿಗೆ ಆರ್ಥಿಕ ಸೌಲಭ್ಯ ಒದಗಿಸುವ ಬಗ್ಗೆ.<br>3. ಮಾಚಿದೇವರ ಜಯಂತ್ಸೋತ್ಸವಕ್ಕೆ ಹಣ ಕಾದಿರಿಸುವ ಬಗ್ಗೆ<br>4. ನಿವೇಶನ ಒದಗಿಸಿ ಬಡಮಕ್ಕಳ ವಿದ್ಯಾಬ್ಯಾಸಕ್ಕೆ ಹಾಸ್ಟೆಲ್ ನಿರ್ಮಾಣ ಮಾಡುವುದು | 2000.00<br>ಮೊತ್ತ ನಮೂದಿಸಿಲ್ಲ<br>50.00 |

| | | | |
|---|---|---|---|
| | ಪಡಿಸಲು ಕೋರಿರುತ್ತಾರೆ. | 5. ಕರ್ನಾಟಕ ರಾಜ್ಯ ಮಡಿವಾಳ ಕ್ಷೇಮಾಭಿವೃದ್ಧಿ ಸಂಘಕ್ಕೆ ಅನುದಾನ ಒದಗಿಸುವ ಬಗ್ಗೆ | 100.00<br><br>100.00 |
| 5 | ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಪುರ ವಿಭಾಗ | HAL Airport ಉಪವಿಭಾಗದ ಕಛೇರಿಗೆ ಹೊಸ ಕಟ್ಟಡ ನಿರ್ಮಾಣ ಮಾಡಲು | 115.00 |
| 6 | ಶ್ರೀ.ಬಿ.ಆರ್. ನಂಜುಂಡಪ್ಪ, ಮಾನ್ಯ ಆಡಳಿತ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. | 1. Providing drain and road, behind MES Road in ward No.17<br>2. Proiding Cement concrete road in Bandappa Garden in Ward No.17<br>3. Providing drain & road behind Murali Theatre in Ward No.17<br>4. Providing CC roads & drain to Dross Roads in Muthyalanagar (N/S) in Ward No.17<br>5. Providing drain & road behind silver wing School in Ward No.17 | 10.74<br>10.74<br>10.74<br>10.73<br>10.73 |
| 7 | ಶ್ರೀ.ವೈ.ಎನ್.ಅಶ್ವಥ್.ಬಿಎಸ್ಸಿ. ಸದಸ್ಯರು, ಕೆಂಪೇಗೌಡ ವಾರ್ಡ್‌ನಂ.01, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. | 1. ಯಲಹಂಕ ಓಲ್ಡ್ ಟೌನ್ ಬಸ್ ನಿಲ್ದಾಣ ರೈಲ್ವೆ ಸ್ಟೇಷನ್ ಪಕ್ಕದ ರೈಲ್ವೆ ಗೇಟ್ ಬಳಿ ಕೆಳಸೇತುವೆ ನಿರ್ಮಿಸುವ ಬಗ್ಗೆ.<br>2. ಕಾಮಾಕ್ಷಮ್ಮ ಲೇಔಟ್‌ನಿಂದ ಜಯಪ್ರಕಾಶ್ ನಾರಾಯಣ್ ನಗರಕ್ಕೆ ಪಾದಚಾರಿಗಳ ಮೇಲ್ ಸೇತುವೆ ನಿರ್ಮಿಸುವ ಬಗ್ಗೆ. (2ನೇ ವಾರ್ಡ್)<br>3. ಯಲಹಂಕದಲ್ಲಿ ವಿದ್ಯುತ್ ಚಿತಾಗಾರ ನಿರ್ಮಿಸುವ ಬಗ್ಗೆ ( ಚಿತಾಗಾರಕ್ಕೆ ಬೇಕಾಗುವ ಸಾಮಾಗ್ರಿಗಳನ್ನು 2001ನೇ ಸಾಲಿನಲ್ಲೇ ಖರೀದಿಸಲಾಗಿದೆ)<br>4. 1ನೇ ವಾರ್ಡ್‌ನಲ್ಲಿ 8–10 ದಿನಗಳಿಗೊಮ್ಮೆ ನೀರು ಸರಬರಾಜಾಗುತ್ತಿದ್ದು, ಹೊಸ ಬೋರ್‌ವೆಲ್‌ಗಲನ್ನು ಕೊರೆಯಿಸಿ, ಮೋಟರ್‌ಗಳನ್ನು ಅಲವಡಿಸುವ ಬಗ್ಗೆ. | ಮೊತ್ತ ನಮೂದಿಸಿಲ್ಲ |
| 8 | ಶ್ರೀ. ವಿಜಯನ್.ಎಸ್, ಸದಸ್ಯರು, ವನ್ನಾರಪೇಟೆ ವಾರ್ಡ್‌ನಂ.115, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ. | ವಾರ್ಡ್ ನಂ.115ರ ವ್ಯಾಪ್ತಿಯ ನೀಲಸಂದ್ರ ಪ್ರದೇಶದಲ್ಲಿ ಬಿ.ಬಿ.ಎಂ.ಪಿ ಪ್ರೈಮರಿ ಶಾಲೆಯಲ್ಲಿ 4–5 ಕೊಠಡಿಗಳು ಖಾಲಿ ಇದ್ದು. ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರ/ ಹೆರಿಗೆ ಆಸ್ಪತ್ರೆ ಪ್ರಾರಂಭಿಸಲು ಅನುದಾನ ಒದಗಿಸುವ ಬಗ್ಗೆ. | ಮೊತ್ತ ನಮೂದಿಸಿಲ್ಲ |

ಮೇಲ್ಕಂಡ ಕಾಮಗಾರಿಗಳಿಗೆ ಹಾಗೂ ಸಂಘ ಸಂಸ್ಥೆಗಳಿಗೆ ಅನುದಾನ ನಿಗಧಿ ಪಡಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ :</u> ***<u>2011–12ರ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂತಿರಿಗಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>08]. ವಿಷಯದ ಸಂಖ್ಯೆ :–ತೆಆಸ್ಥಾಸ/172/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 16–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–2 ರವರು, ಮುಖ್ಯ ಅಭಿಯಂತರರು (ಯೋಜನೆ) ರವರ ಮೂಲಕ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ರೂ.220.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl.No. | Name of Works | Amount (Rs.in.lakhs) |
|---|---|---|
| 1 | Proposed construction of Eight Lane Corridor with loops, Underpass and Road under Bridges between Okalipuram Junction and fountain circle. | 220.00 |
| | Total Rs. | 220.00 |

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## ***091. ವಿಷಯದ ಸಂಖ್ಯೆ :–ತೆಆಸ್ಥಾಸ/173/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 16–07–2011ರಲ್ಲಿ ವಿವರಿಸಿರುವಂತೆ, ಬೊಮ್ಮನಹಳ್ಳಿ ವಲಯದ ಹೆಚ್.ಎಸ್.ಆರ್ ಬಡಾವಣೆಯ 14ನೇ ಮುಖ್ಯರಸ್ತೆಯ 17ನೇ ಅಡ್ಡರಸ್ತೆಯಿಂದ 27ನೇ ಅಡ್ಡರಸ್ತೆವರೆಗೆ 775.00ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ 170.00 ಲಕ್ಷಗಳಿಗೆ 2009–10ರ PWD SR ಸೂಚಿಯಂತೆ ತಯಾರಿಸಿ ಕಾಮಗಾರಿಯ ಸಂಖ್ಯೆ : 000-10N-P-R-E-AS-046 ರಲ್ಲಿ (000-10-N-P-R-E-AS-075) ಕಂಡಿಕೆ (9) ರಲ್ಲಿ ಹಾಗೂ (44) ಆಯುಕ್ತರ ಅನುಮೋದನೆ ಪಡೆಯಲಾಗಿದ್ದು, ಅದರಂತೆ ಗುತ್ತಿಗೆ ಕರೆದು ಗುತ್ತಿಗೆದಾರರಾದ ಶ್ರೀ ಆರ್. ಲೋಕೇಶ್ ರವರಿಗೆ ಕಾಮಗಾರಿಯನ್ನು ಕೈಗೊಳ್ಳಲು ಕಾಯಾದೇಶವನ್ನು ಕಂಡಿಕೆ (51–52) ರಲ್ಲಿ ನೀಡಲಾಗಿತ್ತು.

ಸದರಿ ಕಾಮಗಾರಿಗೆ ನೀಡಲಾದ work code ನವೀಕರಿಸಲು ನಿಗಧಿತ Revalidation ನಮೂನೆಯಲ್ಲಿ ಭರ್ತಿ ಮಾಡಿ ಕಾಮಗಾರಿ ಸಂಖ್ಯೆಯನ್ನು ನವೀಕರಣಗೊಳಿಸಲು ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಂಡಿಕೆ (93) ರಲ್ಲಿ ಕಡತವನ್ನು ಕಳುಹಿಸಲಾಗಿತ್ತು. ನಮೂನೆಯನ್ನು ಪರಿಶೀಲಿಸಿ job code No: 001802 ನೀಡಿ ಕೈಗೊಳ್ಳುವ ಕಾಮಗಾರಿಗೆ ಟಿವಿಸಿಸಿ ರವರಿಂದ ಕಾಮಗಾರಿಯ ಅಂದಾಜಿಗೆ ಫ್ರೀ ಆಡಿಟ್ ಮಾಡಿಸಿದ ನಂತರ ನವೀಕರಿಸಿದ ಕಾಮಗಾರಿಯ ಸಂಕೇತವನ್ನು ನೀಡಲಾಗುವುದು ಎಂದು ತಿಳಿಸಿ ಕಡತವನ್ನು ಹಿಂದಿರಿಗಿಸಿರುತ್ತಾರೆ. (ಪುಟ ಸಂಖ್ಯೆ : 34)

ದಿನಾಂಕ : 07–05–2011ರ ಮಾನ್ಯ ಬೊಮ್ಮನಹಳ್ಳಿ ಶಾಸಕರ ಪತ್ರ (ಪುಟ ಸಂಖ್ಯೆ 36) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ ಎಲ್.ರಮೇಶ್ ವಾರ್ಡ್ ಸಂಖ್ಯೆ 187 ಪುಟ್ಟೇನಹಳ್ಳಿ ಪತ್ರದ ಅನುಸಾರವಾಗಿ ಮಾನ್ಯ ಆಯುಕ್ತರು, ಶಾಸಕರು ಹಾಗೂ ಸದಸ್ಯರು ಕೋರಿರುವ ರಸ್ತೆಗೆ ಅಂದಾಜನ್ನು ತಯಾರಿಸಿ, ಮೂಲ ಅಂದಾಜನ್ನು ಸದರಿ ರಸ್ತೆಗೆ ಕಾಮಗಾರಿಯನ್ನು ಸ್ಥಳ ಬದಲಾವಣೆ ಮಾಡಿ ಟೆಂಡರ್ ಕರೆಯಲು ಬರುವುದಿಲ್ಲ.

ಅದರಂತೆ ಈಗ ಜೆ.ಪಿ.ನಗರದ ಪಾಂಡುರಂಗ ಲೇಔಟ್ ರಸ್ತೆಗಳಿಗೆ Side Drain ಅಳವಡಿಸಿ, ವೆಂಕಟಾದ್ರಿ ಲೇಔಟ್ 1ನೇ ಮುಖ್ಯ ಹಾಗೂ ಅಡ್ಡ ರಸ್ತೆಗೆ ಉದ್ದ –90 ಮೀಟರ್‌ಗೆ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜನ್ನು PWD ದರ ಸೂಚಿ 2010–11ರಂತೆ ರೂ.170.00 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ. ಸದರಿ ರಸ್ತೆಯು ಸಬ್–ಆರ್ಟೀರಿಯಲ್ ರಸ್ತೆಯಾಗಿದ್ದು ವಾರ್ಡ್ ವತಿಯಿಂದ ಕೈಗೊಳ್ಳಲು ಬರುವುದಿಲ್ಲ.

ಸದರಿ ಅಂದಾಜನ್ನು ಟಿವಿಸಿಸಿ ರವರಿಂದ ದಿನಾಂಕ : 15–06–2011 ರಂದು ಸ್ಥಳ ಪರಿಶೀಲನೆ ಮಾಡಲಾಗಿದೆ. ಪ್ರಸ್ತುತ ರಸ್ತೆಯು ಬನ್ನೇರುಘಟ್ಟ ರಸ್ತೆಗೆ ಮುಖ್ಯ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ವಾಹನ ಸಂಚಾರ ದಟ್ಟಣೆಯು ಅತ್ಯಂತ ಹೆಚ್ಚಾಗಿದ್ದು, ಪಾದಚಾರಿಗಳು ಚಲಿಸುವುದು ಬಹಳ ಕಷ್ಟಕರವಾಗಿರುತ್ತದೆ. ಈಗಿರುವ BS slab Drain ಶಿಥಿಲಗೊಂಡು, depleted ಸ್ಥಿತಿಯಲ್ಲಿದ್ದು, ಪೂರ್ಣ ಪ್ರಮಾಣದ ಹೂಳು ತುಂಬಿದ್ದು Drain ಆಳವು ಸುಮಾರು 1.00 ಮೀಟರ್ ನಿಂದ 1.10 ಇರುತ್ತದೆ. ಇದರಿಂದ ಪಾದಚಾರಿಗಳು Drain ನಲ್ಲಿ ಬೀಳುವ ಸಂಭವವಿರುತ್ತದೆ. ಆದ್ದರಿಂದ ಸ್ಥಳೀಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ.ಎಲ್. ರಮೇಶ್ ರವರು (ವಾರ್ಡ್ 187, ಪುಟ್ಟೇನಹಳ್ಳಿ ವಾರ್ಡ್) ಸ್ಥಳ ಪರಿಶೀಲನೆ ನಡೆಸಿ ರಸ್ತೆ ಮೂಲಭೂತ ಸೌಕರ್ಯ ರವರಿಂದ ಸಮಗ್ರವಾಗಿ ಹೊಸದಾಗಿ RCC drain ನ್ನು ಹಾಗೂ Cover slab ಅಳವಡಿಸಿ ಪಾಡುರಂಗ ಹಾಗೂ ವೆಂಕಟಾದ್ರಿ ಲೇಔಟ್ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಕೋರಿರುವ ಪತ್ರವನ್ನು ಮಾನ್ಯ ಬೊಮ್ಮನಹಳ್ಳಿ ಶಾಸಕರಿಗೆ ಪತ್ರ ಬರೆದಿರುತ್ತಾರೆ. ಮಾನ್ಯ ಶಾಸಕರು ರವರ ಪತ್ರದಲ್ಲಿ ಪಾಂಡುರಂಗ ಲೇಔಟ್ ರಸ್ತೆಯನ್ನು

ಸಮಗ್ರವಾಗಿ ಅಭಿವೃದ್ಧಿಪಡಿಸಲು ಮಾನ್ಯ ಆಯುಕ್ತರಿಗೆ ಕೋರಿದ್ದು, ಮಾನ್ಯ ಆಯುಕ್ತರ ಟಿಪ್ಪಣಿ ಅನ್ವಯ ಮೂಲ ಅಂದಾಜನ್ನು ಬದಲಾವಣೆ ಮಾಡಿ ಮರು ಟೆಂಡರ್ ಕರೆಯಲು ಸೂಚಿಸಿದ್ದಾರೆ.

ಸದರಿ ಕಾಮಗಾರಿಯನ್ನು ಕೈಗೊಳ್ಳಲು ಹಾಲಿ ನೀಡಲಾದ work code ಬಳಸಿಕೊಂಡು ಸದರಿ ಕಾಮಗಾರಿಗೆ ಮರು ಟೆಂಡರ್ ಕರೆಯಲು ಪ್ರಸ್ತಾಪಿಸಲಾಗಿದೆ. ಈಗಾಗಲೇ ನೀಡಿರುವ ಗುತ್ತಿಗೆ ಕರಾರನ್ನು ರದ್ದುಪಡಿಸಿ ಮರು ಟೆಂಡರ್‌ನ್ನು ಕರೆಯಲಾಗುವುದು ಆದ್ದರಿಂದ ಈ ಕೆಳಕಂಡ ಅಂಶಗಳಿಗೆ

- ಬದಲಾವಣೆ ಮಾಡಿರುವ ಸ್ಥಳದ ಕಾಮಗಾರಿಯ ಅಂದಾಜು ರೂ.170.00 ಲಕ್ಷಗಳಿಗೆ ಅನುಮೋದನೆ
- ಮರುಟೆಂಡರ್ ಕರೆಯಲು ಅನುಮೋದನೆ ಕೋರಿ ಕಡತವನ್ನು ಮಂಡಿಸಲಾಗಿತ್ತು.

ಮುಂದುವರೆದು ಕಂಡಿಕೆ (134) ಮಾನ್ಯ ಆಯುಕ್ತರವರು ಸದರಿ ಕಾಮಗಾರಿಯ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿರುತ್ತಾರೆ.

ಮಾನ್ಯ ಶಾಸಕರಾದ ಶ್ರೀ.ಎಸ್.ಸತೀಶ್ ರೆಡ್ಡಿ (ಬೊಮ್ಮನಹಳ್ಳಿ ವಿಧಾನ ಸಭಾಕ್ಷೇತ್ರ) ಹಾಗೂ ಶ್ರೀ ಎಲ್.ರಮೇಶ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು (ವಾರ್ಡ್ ಸಂಖ್ಯೆ : 187 ಪುಟ್ಟೇನಹಳ್ಳಿ) ರವರು ಸಹ ಮಾನ್ಯ ಆಯುಕ್ತರಿಗೆ ಸದರಿ ಕಾಮಗಾರಿ ಕೈಗೊಳ್ಳಲು ಮನವಿ ಮಾಡಿರುತ್ತಾರೆ.

ಆದ್ದರಿಂದ ಸದರಿ ಕಾಮಗಾರಿಗೆ 2011–12 ಸಾಲಿನ ಆಯವ್ಯಯದಲ್ಲಿ ರೂ.170.00 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುದಾನ ಒದಗಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## *10]. ವಿಷಯದ ಸಂಖ್ಯೆ :–ತೆಆಸ್ಥಾಸ/176/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 18–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ, ಬೊಮ್ಮನಹಳ್ಳಿ ವಲಯರವರು ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ ವಲಯರವರ ಮೂಲಕ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ರೂ.190.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl.No. | Name of Works | Amount (Rs.in.lakhs) |
|---|---|---|
| 1 | Providing Street light fittings in Bommanahalli constituency | 114.00 |
| 2 | Providing M.S.Tubular poles in Bommanahalli constituency | 76.00 |
| | Total Rs. | 190.00 |

2011–12ನೆ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ : ***2011–12ನೇ ಸಾಲಿನ ಆಯವ್ಯಯದಲ್ಲಿ ಶಾಸಕರ ಕ್ಷೇತ್ರಕ್ಕೆ ಒದಗಿಸಿರುವ ಅನುದಾನದಲ್ಲಿ ದಿನಾಂಕ : 18–07–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಯನ್ನು ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## *11]. ವಿಷಯದ ಸಂಖ್ಯೆ :–ತೆಆಸ್ಥಾಸ/177/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್‌ಆರ್(4)28/11–12, ದಿನಾಂಕ : 18–07–2011ರಲ್ಲಿ ವಿವರಿಸಿರುವಂತೆ, ಡಾ॥ ಅಶ್ವಥ ನಾರಾಯಣ ಸಿ.ಎನ್. ಮಾನ್ಯ ಶಾಸಕರು ಹಾಗೂ ಉಪಾಧ್ಯಕ್ಷರು, ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ಭಾರತೀಯ ಅಥ್ಲೆಟಿಕ್ ಸಂಸ್ಥೆಯು ಕರ್ನಾಟಕಕ್ಕೆ 51ನೇ ರಾಷ್ಟ್ರೀಯ ಹಿರಿಯರ ಅಥ್ಲೆಟಿಕ್ಸ್ ಕ್ರೀಡಾ

ಕೂಟವನ್ನು ನಡೆಸಲು ಅವಕಾಶವನ್ನು ಮಾಡಿ ಕೊಟ್ಟಿರುತ್ತದೆಂದು, ಈ ಕ್ರೀಡಾ ಕೂಟವನ್ನು ಕರ್ನಾಟಕ ಅಥ್ಲೆಟಿಕ್ ಸಂಸ್ಥೆಯು ಕರ್ನಾಟಕ ಸರ್ಕಾರದ ಸಹಕಾರದೊಂದಿಗೆ ದಿನಾಂಕ 11 ರಿಂದ 14 ನೇ ಜೂನ್ 2011 ರವರೆಗೆ ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ಏರ್ಪಡಿಸಲು ನಿಶ್ಚಯಿಸಲಾಗಿದೆಯೆಂದು, ಸದರಿ ಪಂದ್ಯಾವಳಿಯಲ್ಲಿ ಭಾಗವಹಿಸಲು ದೇಶದ ವಿವಿಧ ರಾಜ್ಯಗಳಿಂದ ಸುಮಾರು 800 ಅಂತರ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಕ್ರೀಡಾಪಟುಗಳು, ಏಷಿಯನ್ ಕ್ರೀಡಾಕೂಟದ ಪದಕ ವಿಜೇತರು, ಕಾಮನ್ವೆಲ್ತ್ ಪದಕ ವಿಜೇತರು ತಾಂತ್ರಿಕ ಅಧಿಕಾರಿಗಳು ಮತ್ತು ಪತ್ರಿಕಾ ವರದಿಗಾರರು ಬರುತ್ತಿದ್ದಾರೆಂದು, ಈ ಕ್ರೀಡಾ ಕೂಟದಲ್ಲಿ ಗೆದ್ದಂತಹ ಸಂಭವನೀಯ ಕ್ರೀಡಾ ಪಟುಗಳನ್ನು ಮುಂಬರುವ ಅಂತರ ರಾಷ್ಟ್ರೀಯ ಕ್ರೀಡಾಕೂಟ ಹಾಗೂ ಒಲಂಪಿಕ್ ಕ್ರೀಡಾಕೂಟಕ್ಕೆ ಆಯ್ಕೆ ಮಾಡಲಾಗುವುದು. ಹಾಗೂ ಈ ಕ್ರೀಡಾಕೂಟವನ್ನು ದೂರದರ್ಶನ ಕೇಂದ್ರದವರು ರಾಷ್ಟ್ರೀಯ ಚಾನಲ್‌ನಲ್ಲಿ ನೇರ ಪ್ರಸಾರ ಮಾಡುತ್ತಿದ್ದಾರೆಂದು ಈ ಕ್ರೀಡಾಕೂಟವನ್ನು ಯಶಸ್ವಿಯಾಗಿ ನಡೆಸಲು ಸುಮಾರು 20 ಲಕ್ಷ ರೂಪಾಯಿಗಳನ್ನು ಅಂದಾಜಿಸಲಾಗಿದೆಯೆಂದು ತಿಳಿಸಿ ತಮ್ಮ ಪತ್ರದೊಂದಿಗೆ ಅಂದಾಜು ಪಟ್ಟಿಯನ್ನು ಲಗತ್ತಿಸುತ್ತಾ, ಈ ಕ್ರೀಡಾಕೂಟವನ್ನು ಯಶಸ್ವಿಯಾಗಿ ಆಯೋಜಿಸಲು ಪಾಲಿಕೆ ವತಿಯಿಂದ ರೂ. 5.00 (ಐದು) ಲಕ್ಷ ರೂಪಾಯಿಗಳನ್ನು ಪ್ರಾಯೋಜಕತ್ವ ರೂಪದಲ್ಲಿ ನೀಡಲು ಕೋರಿರುತ್ತಾರೆ.

ಪಾಲಿಕೆಯಿಂದ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗಸೂಚಿಗಳನ್ವಯ ಸಂಘ ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/- ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ.

ಪ್ರಸಕ್ತ 2011-12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ನಿರ್ಣಯ : ***ದಿನಾಂಕ : 18-07-2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಸಂಸ್ಥೆಗೆ 2011-12ನೇ ಸಾಲಿನ ಆಯವ್ಯಯದಲ್ಲಿ ಸಹಾಯಧನ/ಕೊಡುಗೆಗಳು ಲೆಕ್ಕಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿ ರೂ.2.50 ಲಕ್ಷ (ಎರಡು ಲಕ್ಷದ ಐವತ್ತು ಸಾವಿರ)ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *12]. ವಿಷಯದ ಸಂಖ್ಯೆ :-ತೆಆಸ್ಥಾಸ/179/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಮು.ಲೆ.ಅ/ಆಯವ್ಯಯ/ಪಿಆರ್/138/11-12, ದಿನಾಂಕ : 18-07-2011ರಲ್ಲಿ ವಿವರಿಸಿರುವಂತೆ, ಪಿ.ದಯಾನಂದ್ ಅಧ್ಯಕ್ಷರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರರ ಕೇಂದ್ರಿಯ ಸಂಘ (ರಿ) ರವರು ನೀಡಿರುವ ಮನವಿ ಪತ್ರ ದಿನಾಂಕ : 04-04-2011ರ ಪತ್ರದಲ್ಲಿ 2011-12ನೇ ಸಾಲಿನ ಆಯವ್ಯಯದಲ್ಲಿ ರೂ.20.00 ಲಕ್ಷಗಳ ಅನುದಾನ ಮೀಸಲಿಡಬೇಕೆಂದು ಕೋರಿರುತ್ತಾರೆ. ಈ ಸಂಬಂಧ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

ನಿರ್ಣಯ : ***ದಿನಾಂಕ : 18-07-2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಸಂಘಕ್ಕೂ ಮತ್ತೊಂದು ಸಂಘಕ್ಕೂ ವಿವಾದ ಇರುವ ಹಿನ್ನೆಲೆಯಲ್ಲಿ ಸದರಿ ಸಂಘಗಳ ಚುನಾವಣೆ ನಡೆದು ಕಾನೂನಿನನ್ವಯ ಮಾನ್ಯತೆ ಪಡೆದ ಸಂಘಕ್ಕೆ ಅನುದಾನ ನೀಡುವ ಬಗ್ಗೆ ನಂತರ ಕೋರುವುದೆಂದು ಸಮಿತಿಯು ತೀರ್ಮಾನಿಸಿತು.***

## *13]. ವಿಷಯದ ಸಂಖ್ಯೆ :-ತೆಆಸ್ಥಾಸ/181/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 16-07-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳು ರವರು, ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ರೂ.2.50 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl.No. | Name of Works | Amount (Rs.in.lakhs) |
|---|---|---|
| 1 | Consultancy services for preparation of DPR for development of Road connecting ORR Mahadevapura main road (via Goshale Garudacharpalya) | 2.50 |
| | **Total Rs.** | **2.50** |

ಆಯವ್ಯಯ ಲೆಕ್ಕ ಶೀರ್ಷಿಕೆ ಪಿ.0090 ರಲ್ಲಿ ಸೂಕ್ತ ಅನುದಾನವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿಕೊಂಡು ಕಾಮಗಾರಿ ಸಂಖ್ಯೆಯನ್ನು ನೀಡಬಹುದಾಗಿರುತ್ತದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಳ್ಳಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 16–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *14]. ವಿಷಯದ ಸಂಖ್ಯೆ :–ತೆಆಸ್ಥಾಸ/182/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 18–07–2011ರಲ್ಲಿ ವಿವರಿಸಿರುವಂತೆ, ಮಲ್ಲೇಶ್ವರಂ ಕ್ಷೇತ್ರದ ಶಾಸಕರಾದ ಡಾ॥ ಅಶ್ವತ್ಥ್ ನಾರಾಯಣ್ ರವರು ದಿನಾಂಕ: 14.02.2011 ರಂದು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ಸದರಿ ಕ್ಷೇತ್ರದಲ್ಲಿರುವ ಮಲ್ಲೆಶ್ವರಂ 18ನೇ ಅಡ್ಡರಸ್ತೆ, ಮಾರ್ಗೋಸಾ ಕೂಡುರಸ್ತೆ, ಸಂಪಿಗೆ ರಸ್ತೆ ಕಡೆಯಿಂದ ಓಡಾಡುವ ಭಾರಿ ವಾಹಗಳು ಹೆಚ್ಚಾಗಿರುತ್ತದೆ. ಈ ಕೂಡು ರಸ್ತೆಯಲ್ಲಿ ಈಗಾಗಲೇ ಸಿಗ್ನಲ್ ಇದ್ದು, ಇದರ ಬಳಿಯಲ್ಲಿಯೇ ಇರುವ ಬಸ್ ನಿಲ್ದಾಣದಲ್ಲಿ ಬಸ್‌ಗಳು ನಿಂತಾಗ ವಾಹನಗಳು ಸ್ಥಗಿತಗೊಂಡು ಅತ್ಯಂತ ತೊಂದರೆ ಉಂಟಾಗುತ್ತಿದೆ ಎಂದು ತಿಳಿಸಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಕೋರಿರುತ್ತಾರೆ. ಅದರಂತೆ ಸದರಿ ಕಾಮಗಾರಿಗೆ **ರೂ.19.60** ಲಕ್ಷಗಳ ಅಂದಾಜನ್ನು ತಯಾರಿಸಿಲಾಗಿರುತ್ತದೆ. ಮುಂದುವರೆದಂತೆ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, 2011–12ನೇ ಸಾಲಿನ ಪಿ–0536 ಬಸ್ ಬೇಗಳ ನಿರ್ಮಾಣ ಮತ್ತು ಆಟೋರಿಕ್ಷಾ ನಿಲ್ದಾಣ ಲೆಕ್ಕ ಶಿರ್ಷಿಕೆ ಯಡಿಯಲ್ಲಿ ಮೀಸಲಾತಿ ನೀಡಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 18–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *15]. ವಿಷಯದ ಸಂಖ್ಯೆ :–ತೆಆಸ್ಥಾಸ/183/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 18–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀ.ದೊಡ್ಡಣ್ಣ ರವರು ದಿನಾಂಕ: 10.02.2011 ರಂದು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ವಾರ್ಡ್ ಸಂಖ್ಯೆ:132, ಅತ್ತಿಗುಪ್ಪೆ ವ್ಯಾಪ್ತಿಯಲ್ಲಿ ಬಾಲಾಜಿ ಟೆಕ್ಸಟೈಲ್ಸಿನಿಂದ ಕೈಲೆಶ್ವರ ದೇವಸ್ಥಾನದ ರಸ್ತೆ ಹಾಗೂ 80' ಅಡಿರಸ್ತೆಯಲ್ಲಿ ಸ್ಕೈಲೈನ್ ಅಪಾರ್ಟ್‌ಮೆಂಟ್ ಅಟ್ಟರಸ್ತೆಯಿಂದ ಚಂದ್ರಗಿರಿ ಪ್ಯೆಆಲೆಸ್ ಪಾರ್ಕ್‌ನವರೆಗೆ ರಸ್ತೆಗಳು ಕಿರಿದಾಗಿದ್ದು, ಅಧಿಕ ವಾಹನಗಳು ಸಂಚರಿಸುವುದರಿಂದ ತೊಂದರೆಯುಂಟಾಗಿ ಟ್ರಾಫಿಕ್ ಜಾಮ್ ಆಗುತ್ತಾ ಇರುತದೆ ಹಾಗೂ ಸಣ್ಣಮಟ್ಟ ಅಪಘಾತಗಳು ಸಹ ಆಗುತ್ತಾ ಇರುತ್ತದೆ. ಇದರಿಂದ ವಾಹನಗಳು ಸಂಚರಿಸಲು ಹಾಗೂ ಜನ ಸಾಮಾನ್ಯರು ಪುಟ್ಪಾತ್ಗಳಲ್ಲಿ ಹಾಗೂ ರಸ್ತೆ ದಾಟಲು ತುಂಬ ತೊಂದರೆಯಾಗಿದೆ ಎಂದು ತಿಳಿಸಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಕೋರಿರುತ್ತಾರೆ. ಅದರಂತೆ ಸದರಿ ಕಾಮಗಾರಿಗೆ **ರೂ.98.60** ಲಕ್ಷಗಳ ಅಂದಾಜನ್ನು ತಯಾರಿಸಿಲಾಗಿರುತ್ತದೆ. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ. ಅದರಂತೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:23/2011–12 ದಿನಾಂಕ:19.05.2011 ರಲ್ಲಿ ಸದರಿ ಕಾಮಗಾರಿಯನ್ನು 2011–12 ನೆ

ಸಾಲಿನ ಆಯವ್ಯಯದಲ್ಲಿ ಕೈಗೆತ್ತಿಕೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ. ಮುಂದುವರೆದಂತೆ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಟಿ.ಇ.ಸಿ ವಿಭಾಗದ ಆಯವ್ಯಯ ಲೆಕ್ಕಶೀರ್ಷಿಕೆ – 20 ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ – ಮುಖ್ಯ ರಸ್ತೆ / ಆರ್ಟೀರಿಯಲ್ / ಉಪ ಆರ್ಟೀರಿಯಲ್ ರಸ್ತೆ ಮುಖ್ಯ ರಸ್ತೆಗಳ ವಿಭಾಗ ಪಿ.ಸಂಖ್ಯೆ 2019/128 ಲೆಕ್ಕ ಶೀರ್ಷಿಕೆಯಡಿಯಲ್ಲಿ ಮೀಸಲಾತಿ ನೀಡಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** **ದಿನಾಂಕ 18–07–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡುಗಳಿಗೆ ಒದಗಿಸುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀಮಾನಿಸಿತು.**

## *16]. ವಿಷಯದ ಸಂಖ್ಯೆ :–ತೆಆಸ್ಥಾಸ/184/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 18–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ದಕ್ಷಿಣ ವಿಭಾಗ ರವರು ಅಪರ ಆಯುಕ್ತರು (ದಕ್ಷಿಣ) ರವರ ಮೂಲಕ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ರೂ.3.40 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಶ್ರೀ ಎಸ್.ಕೆ.ನಟರಾಜ್, ಮಾಜಿ ಮಹಾಪೌರರು ನೀಡಿರುವ ಪತ್ರವನ್ನು ಕಡತದಲ್ಲಿ ಲಗತ್ತಿಸಲಾಗಿದೆ.

| Sl.No. | Name of Works | Amount (Rs.in.lakhs) |
|---|---|---|
| 1 | Providing mini High mast system at Sarakki Market Junction in Sarakki ward No.178 | 3.40 |
| | Total Rs. | 3.40 |

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಳ್ಳಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 18–07–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಯನ್ನು ಕೈಬಿಡುವುದೆಂದು ಸಮಿತಿಯು ತೀರ್ಮಾನಿಸಿತು.***

## *17]. ವಿಷಯದ ಸಂಖ್ಯೆ :–ತೆಆಸ್ಥಾಸ/185/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 16–07–2011ರಲ್ಲಿ ವಿವರಿಸಿರುವಂತೆ, ವನ್ನಾರಪೇಟೆ ವಾರ್ಡ್ ಸಂಖ್ಯೆ : 115 ರ ವ್ಯಾಪ್ತಿಯಲ್ಲಿ ಇನ್‌ಫೆಂಟ್ ಜೀಸಸ್ ಜಂಕ್ಷನ್ ರಸ್ತೆಯು ಪ್ರಮುಖ ರಸ್ತೆಯಾಗಿದ್ದು, ಈ ರಸ್ತೆಯಲ್ಲಿ ಪ್ರಸಿದ್ಧವಾದ ಚರ್ಚ್ ಇರುವ ಪ್ರಯುಕ್ತ ಅತೀ ಹೆಚ್ಚಿನ ವಾಹನ ಸಂಚಾರದಿಂದ ರಸ್ತೆಯು ಹಾಳಾಗಿದ್ದು, ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಕೋರಿ ವಾರ್ಡ್ ಸಂಖ್ಯೆ : 115ರ ಸದಸ್ಯರಾದ ಶ್ರೀ.ಎಸ್. ವಿಜಯನ್ ರವರು ಪತ್ರ ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ರಸ್ತೆಯ ಅಭಿವೃದ್ಧಿ ಕಾಮಗಾರಿಗೆ ರೂ.108.00 ಲಕ್ಷಗಳನ್ನು ಅಂದಾಜಿಸಲಾಗಿದ್ದು, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಆದರಂತೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.108.00 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 16–07–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್‌ಗಳಿಗೆ ನಿಗಧಿಪಡಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## *18]. ವಿಷಯದ ಸಂಖ್ಯೆ :–ತೆಆಸ್ಥಾಸ/187/2011–12*

ಆಯುಕ್ತರ ಟಿಪ್ಪಣಿ ದಿನಾಂಕ ಃ 01–06–2011ರಲ್ಲಿ ವಿವರಿಸಿರುವಂತೆ, ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯು ಮೈಸೂರು ರಸ್ತೆಯಲ್ಲಿ ಕೆಂಗೇರಿಯಿಂದ ಪ್ರಾರಂಭಗೊಂಡು ಕೆಂಗೇರಿ ಉಪನಗರ ಹೊಯ್ಸಳ ವೃತ್ತ, ನೇತಾಜಿ ನಗರ, ನಾಗದೇವನಹಳ್ಳಿ, ಬೆಂಗಳೂರು ವಿಶ್ವವಿದ್ಯಾಲಯ ಪಶ್ಚಿಮ ದ್ವಾರ, ಮರಿಯಪ್ಪನಪಾಳ್ಯ, ಉಲ್ಲಾಳು ಕ್ರಾಸ್, ಮಲ್ಲತಹಳ್ಳಿ ಕ್ರಾಸ್, ಕೆಂಗುಟ್ಟೆ, ಅಂಬೇಡ್ಕರ್ ಕಾಲೇಜ್, ಪಾಪರೆಡ್ಡಿ ಪಾಳ್ಯ, ಕೆ.ಎಲ್.ಇ ವಿದ್ಯಾಸಂಸ್ಥೆಗಳು, ನಾಗರಭಾವಿ ಬಿ.ಡಿ.ಎ. ಕಾಂಪ್ಲೆಕ್ಸ್, ವಿಶ್ವೇಶ್ವರಯ್ಯ ಕಾನೂನು ಕಾಲೇಜ್, ಶ್ರೀಗಂಧದ ಕಾವಲ್ ಪಿ.ಯು ಕಾಲೇಜು ಮಾರ್ಗ, ಶ್ರೀಗಂಧದ ಕಾವಲ್ ಬಳಿ ಮಾಗಡಿ ಮುಖ್ಯ ರಸ್ತೆಯನ್ನು ಸಂಪರ್ಕಿಸುತ್ತದೆ. ನಂತರ ಮಾಗಡಿ ರಸ್ತೆಯಲ್ಲಿ ಹಾದು ಪುನ: ಸುಮನಹಳ್ಳಿ ಬಳಿಯಿಂದ ರಿಂಗ್ ರಸ್ತೆಯಾಗಿ ಪ್ರಾರಂಭಗೊಂಡು ಚೌಡೇಶ್ವರಿ ನಗರ, ಕೆಂಪೇಗೌಡ ನಗರ, ಲಗ್ಗೆರೆ, ಸ್ವಾತಂತ್ರ್ಯ ಯೋಧರ ನಗರ, ಡಾ|| ರಾಜ್ ಕುಮಾರ್ ಸಮಾಧಿ ಮಾರ್ಗ ತುಮಕೂರು ರಸ್ತೆಯನ್ನು ಸಂಪರ್ಕಿಸುತ್ತದೆ. ಈ ರಿಂಗ್ ರಸ್ತೆಯು ಮೇಲೆ ವಿವರಿಸಿರುವಂತೆ, ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಯ ಹಾಗೂ ತುಮಕೂರು ರಸ್ತೆಯನ್ನು ಮತ್ತು ಏಷ್ಯಾದಲ್ಲಿಯೇ ಪ್ರಮುಖ ಕೈಗಾರಿಕಾ ವಸಾಹತುವಾದ ಪೀಣ್ಯ ಕೈಗಾರಿಕಾ ಪ್ರದೇಶವನ್ನು ಸಂಪರ್ಕಿಸುವ ಬಾರಿ ಸಂಚಾರದ ಒತ್ತಡವಿರುವ ಹೊರವರ್ತುಲ ರಸ್ತೆಯಾಗಿದೆ. ರಿಂಗ್ ರಸ್ತೆಯ ಮೈಸೂರು ರಸ್ತೆ, ಮಾಗಡಿ ರಸ್ತೆ ಸಂಪರ್ಕಿಸುವ ರಸ್ತೆ ಭಾಗವು ದ್ವಿಮುಖ ಸಂಚಾರದ ಎರಡು ಪಥದ, ವಿಶೇಷವಾಗಿ ಬಾರಿ ಸರಕು ಸಾಗಣೆ ವಾಹನಗಳು, ಲಾರಿಗಳು, ನೂರಾರು ಬಿ.ಎಂ.ಟಿ.ಸಿ ಬಸ್ಸುಗಳು ಸಂಚರಿಸುತ್ತವೆ. ಈ ರಸ್ತೆ ಭಾಗದಲ್ಲಿ ರಸ್ತೆಯ ಎರಡು ಬದಿಗಳು ಸೇರಿದಲ್ಲಿ ಒಟ್ಟಾರೆ 33 ಬಸ್ ನಿಲುಗಡೆಗಳಿದ್ದು, ಬಸ್‌ಗಳ ಸಂಚಾರ ನಿಲುಗಡೆಗಳಿರುತ್ತವೆ. ರಿಂಗ್ ರಸ್ತೆಯನ್ನು ಹೊಂದಿಕೊಂಡಂತೆ, ನೂರಾರು ಜನ ವಸತಿಗಳು, ಬೆಂಗಳೂರು ವಿಶ್ವವಿದ್ಯಾಲಯ ಒಳಗೊಂಡಂತೆ, ಹಲವಾರು ವಿದ್ಯಾಸಂಸ್ಥೆಗಳು, ಪ್ರೌಢಶಾಲೆಗಳು, ಕಾಲೇಜುಗಳು, ಪಾಲಿಟೆಕ್ನಿಕ್/ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಕಾಲೇಜುಗಳು, ಬಹಳಷ್ಟು ವಾಣಿಜ್ಯ ಮಳಿಗೆ ಹಾಗೂ ಸಂಕೀರ್ಣಗಳು, ಇತ್ಯಾದಿಗಳಿಗೆ ಈ ರಿಂಗ್ ರಸ್ತೆಯ ಸಂಪರ್ಕ ನಾಡಿಯಾಗಿರುತ್ತದೆ. ಮುಂದುವರೆದ ಭಾಗವಾಗಿ ವಾಣಿಜ್ಯ ಮಳಿಗೆಗಳು, ದರ್ಶಿನಿಗಳು, ಹೋಟೆಲ್‌ಗಳು, ಪೆಟ್ರೋಲ್ ಪಂಪ್‌ಗಳು, ಮಾರುಕಟ್ಟೆಗಳು, ಸಿನಿಮಾ ಮಂದಿರಗಳು ಸಹ ತಳವೂರುತ್ತಿರುತ್ತವೆ.

ಮೇಲೆ ವಿವರಿಸಿರುವಂತೆ, ಇತ್ತೀಚಿನ ದಿನಗಳಲ್ಲಿ ಈ ರಸ್ತೆಯಲ್ಲಿ ಭಾರಿ ವಾಹನಗಳ ಹಾಗೂ ಬಹಳಷ್ಟು ವಾಹನಗಳ ಸಂಚಾರದಟ್ಟಣೆ ಹೆಚ್ಚುತ್ತಿದ್ದು, ವೇಗ ಸಂಚಾರವು ಹೆಚ್ಚಾಗಿರುವುದರಿಂದ ಸಾರ್ವಜನಿಕರು, ಅದರಲ್ಲೂ ಶಾಲಾ ಮಕ್ಕಳು, ಮಹಿಳೆಯರು ಮತ್ತು ಹಿರಿಯನಾಗರಿಕರು ಪಾದಚಾರಿ ಮಾರ್ಗವನ್ನು ಬಳಸುವುದು ಅನಿವಾರ್ಯವಾಗಿದೆ. ಆದರೆ ಹಾಲಿ ಇರುವ ಪಾದಚಾರಿ ಮಾರ್ಗ ಸಮತಟ್ಟಾಗಿರದೆ, ಏರಿಳಿತಗಳಿಂದ, ಬಹಳೆಡೆ ಗುಂಡಿಗಳಿಂದ, ಕಟ್ಟಡ ಸಾಮಾಗ್ರಿಗಳು/ಭಗ್ನಾವಶೇಷಗಳಿಂದ, ಫುಟ್‌ಪಾತ್ ವ್ಯಾಪಾರದಿಂದ, ಶಿಥಿಲ ತೋಳು ಚರಂಡಿಗಳಿಂದ, ಮುರಿದ ಕರ್ಬುಗಳಿಂದ ಇದ್ದು, ಇದರಿಂದಾಗಿ ಪಾದಚಾರಿಗಳಿಗೆ ನಡೆಯುವುದು ಕಷ್ಟ ಸಾಧ್ಯವಾಗಿದೆ. ಸ್ವಲ್ಪ ಮಟ್ಟಿಗೆ ಉತ್ತಮ ಸ್ಥಿತಿಯಲ್ಲಿದೆ ಎನ್ನಬಹುದಾದ ಪಾದಚಾರಿ ಮಾರ್ಗದಲ್ಲಿಯೂ ವಿದ್ಯುತ್ ಕಂಬಗಳು, ಟ್ರಾನ್ಸಫಾರ್ಮರ್‌ಗಳು ಮತ್ತಿತರ ಅಡೆತಡೆಗಳು ಕಾಲ್ನಡಿಗೆಯ ಆಸೆಗೆ ತಣ್ಣೀರು ಎರಚುವಂತಿವೆ. ಸದಾ ಅಪಾಯಕ್ಕೆ ಆಹ್ವಾನ ನೀಡುವಂತಿವೆ.

ನಾಗರಿಕರ ಆರೋಗ್ಯದ ದೃಷ್ಟಿಯಿಂದಲೂ ಕಾಲ್ನಡಿಗೆ ಅಭ್ಯಾಸ ಬೆಳೆಸಿಕೊಂಡರೆ, ಅದಕ್ಕೆ ಪೂರಕವಾಗಿ ಪಾದಚಾರಿ ಮಾರ್ಗಗಳು ಅಭಿವೃದ್ಧಿಯಾದರೆ ಅದರಿಂದ ಸಮಾಜದ ಆರೋಗ್ಯ ಸುಧಾರಿಸಲಿದೆ. ಇದರ ಜೊತೆಯಲ್ಲಿಯೇ ಸೈಕಲ್ ತುಳಿಯುವಿಕೆ ಪ್ರೇರೇಪಿಸಲು ಸೈಕಲ್ ಪಥವನ್ನು ಪಾದಚಾರಿ ಮಾರ್ಗದಲ್ಲಿ ಮಿಳಿತಗೊಳಿಸುವುದು ಇಂದಿನ ಪ್ರಸ್ತುತತೆಯಾಗಿದೆ. ಅಷ್ಟರಮಟ್ಟಿಗೆ ವಾಹನಗಳ ಓಡಾಟ ಕಡಿಮೆಯಾದರೆ ಪರಿಸರ ಮಾಲಿನ್ಯ ಕೂಡ ಕಡಿಮೆಯಾಗಲಿದೆ.

ಈ ಪಾದಚಾರಿ ಮಾರ್ಗದ ಆಧುನೀಕರಿಸಿ ಪಾದಚಾರಿಗಳಿಗೆ ನಡಿಗೆಸ್ನೇಹಿಯಾಗಿ ಪರಿವರ್ತಿಸಲು ಸ್ಥಳೀಯ ಬಿ.ಬಿ.ಎಂ.ಪಿ ಸದಸ್ಯರುಗಳಾದ ಶ್ರೀ. ಅಂಜಿನಪ್ಪ ಕೆಂಗೇರಿ ವಾರ್ಡ್, ಶ್ರೀ. ರಾಜನ್ ಉಲ್ಲಾಳು ವಾರ್ಡ್, ಶ್ರೀ. ಎಸ್.ವೆಂಕಟೇಶ್ ಬಾಬು ಕೊಟ್ಟಿಗೆಪಾಳ್ಯ ವಾರ್ಡ್ ರವರುಗಳೂ ತಮ್ಮ ಪತ್ರ ದಿನಾಂಕ:03–04–2011, 20–04–2011 ಗಳಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಲ್ಲಿ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯ ಆದ್ಯತೆಯ ಮತ್ತು ಹೆಮ್ಮೆಯ ಯೋಜನೆಯಾದ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆಯನ್ನು ಪಾದಚಾರಿ ಮಾರ್ಗದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಎಲ್ಲಾ, ಅಂದರೆ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥ ಒಳಗೊಂಡಂತೆ ನಡಿಗೆಯ ಸ್ನೇಹಿ ಪಾದಚಾರಿ ಮಾರ್ಗದ ಉನ್ನತೀಕರಣಗೊಳಿಸಲು 2010–11 ನೇ ಸಾಲಿನ ಲೋಕೋಪಯೋಗಿ, ಬೆಂಗಳೂರು ವೃತ್ತದ ದರಪಟ್ಟಿಯ ಅನುಸಾರ ಕೆಳಕಂಡಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

1. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 0.00 ಕಿ.ಮೀ. ಯಿಂದ 2.00 ಕಿ.ಮಿ ವರೆಗೆ, ಕೆಂಗೇರಿ ವಾರ್ಡ್) – ಅಂದಾಜು ರೂ.298.00 ಲಕ್ಷಗಳು
2. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 2.00 ಕಿ.ಮೀ. ಯಿಂದ 4.50 ಕಿ.ಮಿ ವರೆಗೆ, ಉಲ್ಲಾಳು ವಾರ್ಡ್) – ಅಂದಾಜು ರೂ.290.00 ಲಕ್ಷಗಳು
3. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 4.50 ಕಿ.ಮೀ. ಯಿಂದ 7.00 ಕಿ.ಮಿ ವರೆಗೆ, ಕೊಟ್ಟಿಗೆ ಪಾಳ್ಯ ವಾರ್ಡ್) – ಅಂದಾಜು ರೂ.288.00 ಲಕ್ಷಗಳು
4. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 7.00 ಕಿ.ಮೀ. ಯಿಂದ 9.80 ಕಿ.ಮಿ ವರೆಗೆ, ಕೊಟ್ಟಿಗೆ ಪಾಳ್ಯ ವಾರ್ಡ್) – ಅಂದಾಜು ರೂ.360.00 ಲಕ್ಷಗಳು

ಸದರಿ ಕಾಮಗಾರಿಗಳಿಗೆ 2011–12 ನೇ ಸಾಲಿನ ಪಾದಚಾರಿ ಮಾರ್ಗ ಅಭಿವೃದ್ಧಿಯ ಲೆಕ್ಕ ಶೀರ್ಷಿಕೆ P–2193 ಅಡಿಯಲ್ಲಿ ಭರಿಸಿ ಈ ನಾಲ್ಕು ಅಂದಾಜುಗಳ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕಾದ ಹಿನ್ನಲೆಯಲ್ಲಿ, ಈ ನಾಲ್ಕು ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01–06–2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:16–06–2011 ರ ನಿರ್ಣಯವನ್ನು, "ಆರ್ಥಿಕ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು ತೀರ್ಮಾನಿಸಿರುವ ಪಾಲಿಕೆ ಸಭೆಯ ನಿರ್ಣಯದ ಬಗ್ಗೆ."

***<u>–ಮುಂದೂಡಿದೆ–</u>***

## ***<u>19]. ವಿಷಯದ ಸಂಖ್ಯೆ :–ತೆಆಸ್ಥಾಸ/188/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)ಪಿಆರ್/121/11–12, ದಿನಾಂಕ : 01–07–2011 ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 110 (78) ಕುಮಾರಿ ಎನ್ .ಸುಶೀಲಾ ಅಂಗವಿಕಲೆ, ನಂ.51, ಶಿವಾಜಿನಗರ, ಶಿವಾಜಿ ಅಡ್ಡ ರಸ್ತೆ, ಬೆಂಗಳೂರು ಬಿಎಂಟಿಸಿ ಬಸ್ ನಿಲ್ದಾಣದ ಪಕ್ಕದಲ್ಲಿರುವ 4X4 ಅಡಿಗಳ ದೂರವಾಣಿ ಬೂತ್‌ನ ಗುತ್ತಿಗೆ ಅವಧಿ ನವೀಕರಿಸಲು ಕೋರಿರುತ್ತಾರೆ.

ಕುಮಾರಿ ಎನ್.ಸುಶೀಲಾ ಅಂಗವಿಕಲೆ ರವರಿಗೆ 4X4 ಅಡಿಗಳ ದೂರವಾಣಿ ಬೂತನ್ನು ನಡೆಸಲು ದಿನಾಂಕ:05–03–2005 ರಿಂದ 04–03–2008ರ ವರೆಗೆ ಮಾಸಿಕ ರೂ.150/–ಗಳಂತೆ ಗುತ್ತಿಗೆ ಆಧಾರದ ಮೇಲೆ ನೀಡಿದ್ದು, ಗುತ್ತಿಗೆ ಅವಧಿಯು ಮುಕ್ತಾಯಗೊಂಡಿದೆ. ತದನಂತರ ಗುತ್ತಿಗೆ ಅವಧಿ ನವೀಕರಣವಾಗದೇ ಅನಧಿಕೃತವಾಗಿ ಮುಂದುವರೆದಿದ್ದು, ದಿನಾಂಕ:13–05–20011ರಂದು ತೆರವುಗೊಳಿಸಿರುವುದು ಕಡತದಲ್ಲಿನ ದಾಖಲೆಗಳಿಂದ ತಿಳಿದು ಬಂದಿರುತ್ತದೆ. ಅನುಮತಿಯ ಅವಧಿಯವರೆಗೆ ನಿಗದಿಪಡಿಸಲಾದ ಗುತ್ತಿಗೆಯ ಮೊತ್ತವನ್ನು ಪಾವತಿಸಿರುತ್ತಾರೆ.

ದಿನಾಂಕ: 08–07–2008ರಂದು ಮಾನ್ಯ ಮುಖ್ಯ ಮಂತ್ರಿಗಳಿಗೆ ನೀಡಿರುವ ಅರ್ಜಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನವೀಕರಿಸುವುದು ಎಂಬುದಾಗಿ ಸೂಚಿಸಿದ್ದು, ಪಾಲಿಕೆ ಹಾಗೂ ಪಾಲಿಕೆಯ ಮಾಜಿ ಮಹಾಪೌರರು ದಿನಾಂಕ: 24–05–2011ರಂದು ಟೆಲಿಪೋನ್ ಬೂತ್ ನವೀಕರಿಸಲು ಕೋರಿರುವುದಾಗಿ ಪ್ರಸ್ತಾವನೆ ಸಲ್ಲಿಸಿರುವುದನ್ನು ಜಂಟಿ ಆಯುಕ್ತರು (ಪೂರ್ವ) ರವರು ಅನುಮತಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳ ಪತ್ರ ಉಲ್ಲೇಖಿಸಿ ಮಾನ್ಯ ನಿವೃತ್ತ ನ್ಯಾಯಾಧೀಶರು, ಶ್ರೇಷ್ಠ ನ್ಯಾಯಾಲಯ ಹಾಗೂ ರಾಜ್ಯ ಸಭಾ ಸದಸ್ಯರಾದ ಶ್ರೀ.ರಾಮಾಜೋಯಿಸ್‌ರವರು ದಿನಾಂಕ:21–05–2011ರ ಪತ್ರದಲ್ಲಿ ತುರ್ತು ಕ್ರಮ ತೆಗೆದುಕೊಳ್ಳಲು ಕೋರಿರುವುದಾಗಿ ವಿಶೇಷ ಪ್ರಕರಣವಾಗಿ ಪರಿಗಣಿಸಬಹುದೆಂದು ಸಹಾಯಕ ಆಯುಕ್ತರು (ಆಸ್ತಿಗಳು) ರವರು ವರದಿ ಮಾಡಿರುತ್ತಾರೆ.

ಆದರೆ ದಿನಾಂಕ:01–03–2002ರ ಆಯುಕ್ತರ ಸುತ್ತೋಲೆ ಕ್ರಮಸಂಖ್ಯೆ 21ರನ್ವಯ ರಸ್ತೆ ಬದಿಯಲ್ಲಿ ಪಾದಚಾರಿ ಜಾಗದಲ್ಲಿ ಉದ್ಯಾನವನ ಮತ್ತು ಆಟದ ಮೈದಾನಗಳಲ್ಲಿ ಗುತ್ತಿಗೆಗೆ ನೀಡುವುದು ಸಮಂಜಸವಲ್ಲ ಎಂದಿದೆ.

ದಿನಾಂಕ:18–07–2005 ರಲ್ಲಿ ಹೊರಡಿಸಲಾಗಿರುವ ಸುತ್ತೋಲೆಯಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು ಪಾದಚಾರಿ ಮಾರ್ಗದಲ್ಲಿ ಪಾದಚಾರಿಗಳ ಚಲನವಲನಕ್ಕೆ ಅಡ್ಡಿಮಾಡುವ ಯಾವುದೇ ನಿರ್ಮಾಣಗಳನ್ನು ಸಾರ್ವಜನಿಕ ಹಿತದೃಷ್ಠಿಯಿಂದ ಪರಿಗಣಿಸಬಾರದೆಂದು ಆದೇಶಿಸಿರುವ ಹಿನ್ನೆಲೆಯಲ್ಲಿ ಇಂತಹ ಕೋರಿಕೆಗಳು ಸಲ್ಲಿಸಬಾರದೆಂಬುದಾಗಿ ಸೂಚಿಸಲಾಗಿರುತ್ತದೆ.

ದೂರವಾಣಿ ಬೂತ್ ನವೀಕರಿಸಲು ಪ್ರಸ್ತಾಪಿಸಿರುವ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ 1ಕ್ಕೆ ರೂ.7000/– ಗಳಿದ್ದು, (4X4=16 ಚದರ ಅಡಿ) 16 ಚದರ ಅಡಿಗಳಿಗೆ ಒಟ್ಟು ಮೌಲ್ಯ ರೂ.1,12,000/– ಗಳಾಗುತ್ತದೆ. ಶೇ 10% ರಂತೆ ಪರಿಗಣಿಸಲಾಗಿ ವಾರ್ಷಿಕ ಬಾಡಿಗೆ ರೂ.11,200/– ಗಳಾಗುತ್ತದೆ. ಮಾಸಿಕ ರೂ.933/– ಗಳಾಗುತ್ತದೆ.

ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಈ ಹಿಂದೆ ನಿಗಧಿಪಡಿಸಲಾದ ದರದಂತೆ ಕರಾರು ನೊಂದಾಯಿಸುವ ದಿನಾಂಕದಿಂದ 3 ವರ್ಷಗಳ ಅವಧಿಗೆ ನವೀಕರಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:01–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19–07–2011ರ ನಿರ್ಣಯ.

***<u>ನಿರ್ಣಯ :–</u>*** ***<u>ದಿನಾಂಕ : 19–07–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ ಮಾಸಿಕ ರೂ.300/– (ಮುನ್ನೂರು)ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಲು ಸಮಿತಿ ತೀರ್ಮಾನಿಸಿತು.</u>***

## ***<u>201. ವಿಷಯದ ಸಂಖ್ಯೆ :–ತೆಆಸ್ಥಾಸ/189/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/81/05–06, ದಿನಾಂಕ : 15–07–2011ರಲ್ಲಿ ವಿವರಿಸಿರುವಂತೆ, ವಿವರಿಸಿರುವಂತೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ:158 (ಹಳೆದು–41) ಕಸ್ತೂರಿಬಾ ನಗರದಲ್ಲಿರುವ ಪಾಲಿಕೆ ವಸತಿಗೃಹದಲ್ಲಿ ಪೌರಕಾರ್ಮಿಕರಾದ ಶ್ರೀ ನರಸಿಂಹ ಮತ್ತು ಶ್ರೀಮತಿ.ಮುತ್ಯಾಲಮ್ಮ ರವರು ವಾಸ ಮಾಡುತ್ತಿದ್ದು, ಸದರಿ ವಸತಿಗೃಹದ ಕಟ್ಟಡವು ದಿನಾಂಕ: 02–10–2000 ರಂದು ಕುಸಿದು ಬಿದ್ದ ಕಾರಣ, ಅರ್ಜಿದಾರರಿಗೆ ಪರ್ಯಾಯವಾಗಿ ದೀಪಾಂಜಲಿನಗರದಲ್ಲಿ 15X20 ಅಡಿಗಳ ಜಾಗವನ್ನು ಹಂಚಿಕೆ ಮಾಡಿದ್ದು, ಸದರಿ ನಿವೇಶನಕ್ಕೆ ಖಾತಾ ನೊಂದಾಯಿಸಿ ಹಂಚಿಕೆದಾರರು ಕಂದಾಯವನ್ನು ಪಾವತಿಸಿರುತ್ತಾರೆ. ಅರ್ಜಿದಾರರು ಸದರಿ ನಿವೇಶನದ ಮೇಲೆ ಸಾಲವನ್ನು ಪಡೆದು ಮನೆ ನಿರ್ಮಾಣ ಮಾಡಲು ಹೋದಾಗ ಪ್ರಸ್ತುತ ಸ್ವತ್ತಿನ ಹಕ್ಕುದಾರಿಕೆ ಬಗ್ಗೆ ಖಾಸಗಿಯವರು ಮಾನ್ಯ ಉಚ್ಛನ್ಯಾಯಾಲಯಕ್ಕೆ ರಿಟ್ ಅರ್ಜಿಗಳ ಸಂಖ್ಯೆ:23635/98 (ಹಾಗೂ ಇತರೆ ಅರ್ಜಿಗಳು) ಸಲ್ಲಿಸಿದ್ದು, ಸದರಿ ನ್ಯಾಯಾಲಯವು ದಿನಾಂಕ:05–09–2002ರಲ್ಲಿ ಪ್ರಸ್ತುತ ಜಮೀನು ಖಾಸಗಿಯವರ ಸ್ವತ್ತು ಎಂದು ತೀರ್ಮಾನಿಸಿ ಆದೇಶ ಹೊರಡಿಸಿದ್ದು, ನಗರಪಾಲಿಕೆ ಮನವಿಯನ್ನು ರದ್ದು ಮಾಡಿರುತ್ತದೆ ಎಂಬುದಾಗಿ ವಲಯಾಧಿಕಾರಿಗಳ ವರದಿಯಿಂದ ತಿಳಿದು ಬರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಹಂಚಿಕೆದಾರರು ಮನವಿ ಸಲ್ಲಿಸಿ, ಕಸ್ತೂರಿಬಾ ನಗರದಲ್ಲಿ ಈಗಾಗಲೇ ನಗರಪಾಲಿಕೆಯು ಹಂಚಿರುವ 54 ನಿವೇಶನಗಳ ಪಕ್ಕದಲ್ಲಿ ಉಳಿಕೆ ಇರುವ ಸ್ಥಳವನ್ನು ಮಂಜೂರು ಮಾಡಲು ಕೋರಿದ್ದು, ಅದರ ವಿಸ್ತೀರ್ಣವು 20+11/2X19=294.5 ಚ.ಅ. ಮತ್ತು–14+8/2X27=297 ಚ.ಅಡಿಗಳಿರುತ್ತದೆ. ಅರ್ಜಿದಾರರಿಗೆ ಬದಲೀ ನಿವೇಶನ ನೀಡುವ ಪ್ರಸ್ತಾವನೆಯನ್ನು ಸೂಕ್ತ ತೀರ್ಮಾನಕ್ಕಾಗಿ ನಗರಪಾಲಿಕೆಯ ಸಂಬಂಧಪಟ್ಟ ಸ್ಥಾಯಿಸಮಿತಿಗಳ ಮತ್ತು ನಗರಪಾಲಿಕೆಯ ಸಭೆಯ ಮುಂದೆ ಟಿಪ್ಪಣಿ ಮಂಡಿಸಲಾಗಿರುತ್ತದೆ. ಈ ಪ್ರಸ್ತಾವನೆ ಬಗ್ಗೆ ನಗರಯೋಜನೆ ಅಭಿವೃದ್ಧಿ ಸ್ಥಾಯಿಸಮಿತಿ ದಿ:15–05–2006 ರಂದು ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿಸಮಿತಿ ದಿನಾಂಕ:23–06–2006 ರಂದು ನಡೆದ ಸಭೆಗಳಲ್ಲಿ ಒಪ್ಪಿ ನಿರ್ಣಯ ತೆಗೆದುಕೊಂಡಿರುತ್ತದೆ. ದಿ:27–09–2006 ರಂದು ನಡೆದ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ಸ್ಥಾಯಿಸಮಿತಿಗಳ ನಿರ್ಣಯವನ್ನು ಒಪ್ಪುವುದೆಂದು ತೀರ್ಮಾನ ತೆಗೆದುಕೊಂಡಿರುತ್ತದೆ.

ಪ್ರಸ್ತುತ ಪ್ರಸ್ತಾವನೆಯನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಸಲಹಾ ಸಮಿತಿ ಮುಂದೆ ಮಂಡಿಸುವಂತೆ ನಿರ್ದೇಶನ ನೀಡಿದ್ದರ ಮೇರೆಗೆ, ಸದರಿ ಪ್ರಸ್ತಾವನೆಯನ್ನು ದಿನಾಂಕ: 26–10–2010 ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಂಡಿಸಿದ್ದು,

ಸಮಿತಿ ಸಭೆಯಲ್ಲಿ ಈಗಿನ ಮಾರುಕಟ್ಟೆ ದರದಂತೆ ಶುಲ್ಕ ಪಡೆದು ಅರ್ಜಿದಾರರಿಗೆ ಜಾಗವನ್ನು ನೀಡುವಂತೆ ತೀರ್ಮಾನವಾಗಿರುತ್ತದೆ. ಸಭೆಯ ನಡವಳಿಯ ಪ್ರತಿಯೊಂದಿಗೆ ಸರ್ಕಾರದ ಅನುಮೋದನೆಯನ್ನು ಪತ್ರದ ಮುಖಾಂತರ ಕೋರಲಾಗಿತ್ತು. ಇದಕ್ಕೆ ಸರ್ಕಾರವು ತನ್ನ ಪತ್ರದಲ್ಲಿ ಈ ಪ್ರಸ್ತಾವನೆಯನ್ನು ಈಗಿನ ಮಾರುಕಟ್ಟೆ ದರದಂತೆ ಲೆಕ್ಕಾಚಾರ ಮಾಡಿ, ಪಾಲಿಕೆ ನಿರ್ಣಯದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುತ್ತಾರೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ: 17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.800/-ಗಳಿದ್ದು, ನಿವೇಶನದ ಅಳತೆ 294.5 ಚ.ಅಡಿಗಳಿದ್ದು, 294.5X800=2,35,600/-ರೂ.ಆಗುತ್ತಿದ್ದು, ಸರ್ಕಾರಿ ಆದೇಶದಂತೆ, ಶೇ:20%ರಷ್ಟು ಹೆಚ್ಚಿಸಿ 2,82,720/-ಗಳಾಗುತ್ತದೆ. ಈ ನಿವೇಶನ ಒಬ್ಬರಿಗೆ ಹಾಗೂ ಮತ್ತೊಂದು ನಿವೇಶನದ ಅಳತೆ 297 ಚ.ಅಡಿಗಳಿದ್ದು, 297X800=2,37,600/-ರೂ.ಆಗುತ್ತಿದ್ದು, ಸರ್ಕಾರಿ ಆದೇಶದಂತೆ, ಶೇ:20%ರಷ್ಟು ಹೆಚ್ಚಿಸಿ 2,85,120/-ಗಳಾಗುತ್ತದೆ. ಈ ನಿವೇಶನವನ್ನು ಒಬ್ಬರಿಗೆ ನೀಡಬಹುದಾಗಿರುತ್ತದೆ.

ಅರ್ಜಿದಾರರುಗಳು ದಿನಾಂಕ:29-03-2011 ರಂದು ಸರ್ಕಾರಕ್ಕೆ ಪತ್ರ ಬರೆದು, ಈ ಸ್ವತ್ತು ಹಿಂದೆ ನೀಡಿದ್ದ ನಿವೇಶನಕ್ಕೆ ಬದಲಿಯಾಗಿ ನೀಡುವುದರಿಂದ ಮಾರುಕಟ್ಟೆ ದರ ನಿಗಧಿಪಡಿಸುವ ಬದಲಿಗೆ, ಈ ಹಿಂದೆ ಎಲ್ಲರಿಗೂ ನಿಗಧಿಪಡಿಸಿ ನೀಡಿರುವ ದರ ನಾಮಮಾತ್ರ ಬೆಲೆ 100ಕ್ಕೆ ನೀಡಲು ಕೋರಿರುತ್ತಾರೆ.

ಈ ಮೇಲಿನ ಹಿನ್ನೆಲೆಯಲ್ಲಿ ಅರ್ಜಿದಾರರಿಗೆ ಬದಲೀ ನಿವೇಶನ ನೀಡುವ ಬಗ್ಗೆ ಹಾಗೂ ದರ ನಿಗದಿಪಡಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 15-07-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19-07-2011ರ ನಿರ್ಣಯ.

***ನಿರ್ಣಯ :- ದಿನಾಂಕ : 19-07-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಚದರಡಿ ಒಂದಕ್ಕೆ ರೂ.500/- ರಂತೆ (ಐದು ನೂರು) ದರ ನಿಗಧಿಪಡಿಸಬಹುದೆಂದು ಸಮಿತಿಯು ತೀರ್ಮಾನಿಸಿತು.***

## 21]. ವಿಷಯದ ಸಂಖ್ಯೆ :-ತೆಆಸ್ಥಾಸ/190/2011-12

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/99/11-12, ದಿನಾಂಕ : 04-07-2011ರಲ್ಲಿ ವಿವರಿಸಿರುವಂತೆ, ಕರ್ನಾಟಕ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು ರವರು ತಮ್ಮ ಸಂಘದ ಕಾರ್ಯಚಟುವಟಿಕೆಗಳಿಗಾಗಿ ಭವನ ನಿರ್ಮಾಣ ಮಾಡುವ ಉದ್ದೇಶಕ್ಕೆ ವಾರ್ಡ್ ನಂ.141ರ ಅಜಾದ್‌ನಗರದಲ್ಲಿ ಇರುವ ನಗರ ಪಾಲಿಕೆಗೆ ಸೇರಿದ 30X43 ಅಡಿಗಳ ವಿಸ್ತೀರ್ಣವುಳ್ಳ ಖಾಲಿ ಜಾಗವನ್ನು ಗುರ್ತಿಸಿದ್ದು, ಈ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬೇಕೆಂದು ಕೋರಿರುತ್ತಾರೆ.

ಮೇಲೆ ತಿಳಿಸಿರುವ ಸಂಘವು ಗುರ್ತಿಸಿರುವ ಖಾಲಿ ಜಾಗವು ನಗರ ಪಾಲಿಕೆಗೆ ಸೇರಿದ್ದು, ಇದರಲ್ಲಿ ಯಾವುದೇ ಕಾಮಗಾರಿಯನ್ನು ಪ್ರಸ್ತಾಪಿಸಿರುವುದಿಲ್ಲವೆಂದು ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದು, ಸದರಿ ಸಂಘಕ್ಕೆ ಅವರು ಕೋರಿರುವಂತೆ 30x43 ಅಡಿ ವಿಸ್ತೀರ್ಣವುಳ್ಳ ಖಾಲಿ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದೆಂದು ಜಂಟಿ ಆಯುಕ್ತರು (ಪಶ್ಚಿಮ) ರವರು ಪ್ರಸ್ತುತ ಜಾಗದ ನಕ್ಷೆ ಸಮೇತ ವರದಿ ಮಾಡಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗು (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ.

ಸದರಿ ಸಂಘಕ್ಕೆ ಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಒಟ್ಟು ವಿಸ್ತೀರ್ಣ 30X43=1290 ಚದರ ಅಡಿಗಳು ಆಗುತ್ತದೆ. ಸರ್ಕಾರವು ಪ್ರಕಟಗೊಳಿಸಿರುವ 2007ರ ಮಾರ್ಗ ಸೂಚಿ ದರದಂತೆ ಈ ಪ್ರದೇಶದಲ್ಲಿ ಪ್ರಸ್ತುತ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ

ರೂ1000/-ಇರುತ್ತದೆ. ಇದರಂತೆ ಲೆಕ್ಕಚಾರ ಮಾಡಲಾಗಿ 12,90,000/- ಆಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ದರ ರೂ.1,29,000/- ಆಗುತ್ತದೆ ಹಾಗೂ ಮಾಸಿಕವಾಗಿ ರೂ.10,750/-/- ಗಳಾಗುತ್ತದೆ.

ದಿನಾಂಕ:01-03-2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02-06-2003. ಸುತ್ತೋಲೆ ಪ್ರಕಾರ ಇನ್ನುಳಿದ ಎಲ್ಲಾ ಪ್ರಕರಣಗಳಲ್ಲೂ, ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 04-07-2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19-07-2011ರ ನಿರ್ಣಯ.

***<u>-ಮುಂದೂಡಿದೆ-</u>***

## ***<u>22]. ವಿಷಯದ ಸಂಖ್ಯೆ :-ತೆಆಸ್ಥಾಸ/191/2011-12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/78/11-12, ದಿನಾಂಕ : 01-07-2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್ ರವರು ಪತ್ರ ಬರೆದು, ಕರ್ನಾಟಕ ರಾಜ್ಯದಲ್ಲಿ ಹಿಂದುಳಿದವರೆಂದು ಗುರುತಿಸಲ್ಪಟ್ಟಿರುವ ತಿಗಳರು ತಮ್ಮ ಜೀವನೋಪಾಯಕ್ಕಾಗಿ ಉಳಿಸಿಕೊಂಡಿದ್ದ ತೋಟದ ಜಮೀನುಗಳನ್ನು ಬೆಂಗಳೂರು ಅಭಿವೃಧ್ಧಿಗಾಗಿ ಬಿಟ್ಟುಕೊಟ್ಟು ಸರ್ಕಾರದೊಂದಿಗೆ ಸಹಕರಿಸುತ್ತಿರುವ ತಿಗಳ ಜನಾಂಗದ ಸಂಪರ್ಕ ಕೇಂದ್ರವಾಗಿ ಕರಗಭವನ ಕಟ್ಟಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್‌ಸಂಖ್ಯೆ:119, ಪೈಲ್ವಾನ್ ಕೃಷ್ಣಪ್ಪ ರಸ್ತೆಯಲ್ಲಿರುವ ನಗರ ಪಾಲಿಕೆಯ 5300 ಚದರ ಅಡಿಗಳ ಖಾಲಿ ಜಾಗವನ್ನು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್ ರವರಿಗೆ ಕರಗ ಭವನ ನಿರ್ಮಾಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ದಿನಾಂಕ:02-02-2010ರ ಮಾನ್ಯ ಆಡಳಿತಗಾರರ ನಡವಳಿಯಲ್ಲಿ ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್‌ರವರಿಗೆ ಕರಗ ಭವನ ನಿರ್ಮಾನಕ್ಕಾಗಿ ಮಾರುಕಟ್ಟೆ ದರದಲ್ಲಿ ನೀಡುವ ಪ್ರಸ್ತಾವನೆ ಒಪ್ಪಿ, ಸರ್ಕಾರದ ಅನುಮೋದನೆಗೆ ಪತ್ರ ಬರೆಯಲು ನಿರ್ಣಯಿಸಿದ್ದು, ಅದರಂತೆ, ಸರ್ಕಾರಕ್ಕೆ ಪತ್ರ ಬರೆಯಲಾಗಿ, ಸಲಹಾ ಸಮಿತಿ ಅಭಿಪ್ರಾಯ ಪಡೆದು ಸಲ್ಲಿಸುವಂತೆ ಸೂಚಿಸಿರುತ್ತದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:26-10-2010ರ ಸಲಹಾ ಸಮಿತಿ ಸಭೆಯಲ್ಲಿ ಈ ಪ್ರದೇಶ ಪಾಲಿಕೆ ಉಪಯೋಗಕ್ಕೆ ಅವಶ್ಯವಿರುವುದರಿಂದ ಅಭಿವೃದ್ದಿಪಡಿಸಿ ಪಾಲಿಕೆ ಉದ್ದೇಶಗಳಿಗೆ ಉಪಯೋಗಕ್ಕೆ ಬಳಸಲು ಸೂಚಿಸಿರುತ್ತದೆ.

ಸದರಿ ಸಂಸ್ಥೆಯವರು ಮತ್ತೊಮ್ಮೆ ಮನವಿ ಸಲ್ಲಿಸಿ, ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನದ ಉತ್ಸವಾದಿ ಕಾರ್ಯಕ್ರಮಗಳಿಗೆ ತಿಗಳ ಸಮುದಾಯದ ಉಪಯೋಗಕ್ಕೆ ಕರಗಭವನ ನಿರ್ಮಾಣಕ್ಕೆ ಈ ನಿವೇಶನವನ್ನು ಆದಿಶಕ್ತಿ ವಿದ್ಯಾಸಂಸ್ಥೆ ಟ್ರಸ್ಟ್‌ರವರಿಗೆ ಮಂಜೂರು ಮಾಡಲು ಕೋರಿರುತ್ತಾರೆ. ಈ ಬಗ್ಗೆ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.3300/-ಗಳಿದ್ದು, ಅರ್ಜಿದಾರರು ಕೋರಿರುವ ಜಾಗವು 5300 ಚ.ಅಡಿಗಳಾಗಿದ್ದು, ಇದರಂತೆ 5300X3300 = 1,74,90,000 ರೂಗಳಾಗುತ್ತದೆ. ಸರ್ಕಾರಿ ಮಾರ್ಗಸೂಚಿಯಂತೆ ವಾಣಿಜ್ಯ ಉದ್ದೇಶಕ್ಕೆ ಶೇಕಡ 40ರಷ್ಟು + ಮೂಲೆ ನಿವೇಶನಕ್ಕೆ ಶೇಕಡ 10ರಷ್ಟು ಹೆಚ್ಚಿಸಿ ಲೆಕ್ಕಾಚಾರ ಮಾಡಿದಾಗ ರೂ.2,62,35,000/- ಗಳಷ್ಟು ಮೊತ್ತ ಆಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿ:02–06–2003ರ ಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ.

ಮೇಲಿನ ಅಂಶಗಳೊಂದಿಗೆ ಪ್ರಸ್ತಾಪಿತ ನಿವೇಶನವನ್ನು ಆದಿಶಕ್ತಿ ವಿದ್ಯಾಸಂಸ್ಥೆ ಟ್ರಸ್ಟ್‌ರವರಿಗೆ ಕರಗ ಭವನ ನಿರ್ಮಾಣಕ್ಕೆ ನೀಡುವಲ್ಲಿ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 01–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19–07–2011ರ ನಿರ್ಣಯ

**_–ಮುಂದೂಡಿದೆ–_**

## _23]. ವಿಷಯದ ಸಂಖ್ಯೆ :–ತೆಆಸ್ಥಾಸ/192/2011–12_

ಆಯುಕ್ತರ ಟಿಪ್ಪಣಿ ದಿನಾಂಕ : 22–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–72 ರ ಹೇರೋಹಳ್ಳಿ ವ್ಯಾಪ್ತಿಯಲ್ಲಿ ವಾರ್ಡ್ ಕಛೇರಿ ನಿರ್ಮಾಣ ಕಾಮಗಾರಿಗೆ 2011–12 ನೇ ಸಾಲಿನಲ್ಲಿ ರೂ.100.00 ಲಕ್ಷಗಳ ಅನುದಾನವನ್ನು ಮೀಸಲಿಡುವಂತೆ ಸ್ಥಳೀಯ ಬಿ.ಬಿ.ಎಂ.ಪಿ ಸದಸ್ಯರು ರವರು ಮಾಡಿರುವ ಮನವಿಯ ಮೇರೆಗೆ ವಾರ್ಡ್ ನಂ.72 ರ ಹೇರೋಹಳ್ಳಿಯಲ್ಲಿ ವಾರ್ಡ್ ಕಛೇರಿ ನಿರ್ಮಾಣ ಮಾಡಲು ರೂ.100.00 ಲಕ್ಷಗಳ ಅಂದಾಜನ್ನು ರಾಜರಾಜೇಶ್ವರಿನಗರ ವಲಯ ಯೋಜನಾ ವಿಭಾಗದಿಂದ ತಯಾರಿಸಲಾಗಿರುತ್ತದೆ. 2011–12 ನೇ ಆರ್ಥಿಕ ಸಾಲಿನಲ್ಲಿ ಅನುದಾನವನ್ನು ಮೀಸಲಿಟ್ಟು ಜಾಬ್ ಕೋಡ್ ನೀಡಲು ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**_ನಿರ್ಣಯ :–_** **_ದಿನಾಂಕ : 22–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡುಗಳಿಗೆ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು._**

## _24]. ವಿಷಯದ ಸಂಖ್ಯೆ :–ತೆಆಸ್ಥಾಸ/193/2011–12_

ಆಯುಕ್ತರ ಟಿಪ್ಪಣಿ ದಿನಾಂಕ : 22–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರಾದ ಶ್ರೀ.ದೊಡ್ಡಣ್ಣ ರವರು ದಿನಾಂಕ: 10.02.2011 ರಂದು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ವಾರ್ಡ್ ಸಂಖ್ಯೆ:132, ಅತ್ತಿಗುಪ್ಪೆ ವ್ಯಾಪ್ತಿಯಲ್ಲಿ ಬಾಲಾಜಿ ಟೆಕ್ಸ್‌ಟೈಲ್ಸ್ ನಿಂದ ಕೈಲೇಶ್ವರ ದೇವಸ್ಥಾನದ ರಸ್ತೆ ಹಾಗೂ 80' ಅಡಿರಸ್ತೆಯಲ್ಲಿ ಸ್ಕೈಲೈನ್ ಅಪಾರ್ಟ್‌ಮೆಂಟ್ ಅಟ್ಟರಸ್ತೆಯಿಂದ ಚಂದ್ರಗಿರಿ ಪ್ಯೆಲೆಸ್ ಪಾರ್ಕ್‌ನವರೆಗೆ ರಸ್ತೆಗಳು ಕಿರಿದಾಗಿದ್ದು, ಅಧಿಕ ವಾಹನಗಳು ಸಂಚರಿಸುವಿದರಿಂದ ತೊಂದರೆಯುಂಡಾಗಿ ಟ್ರಾಫಿಕ್ ಜಾಮ್ ಆಗುತ್ತಾ ಇರುತದೆ ಹಾಗೂ ಸಣ್ಣಪುಟ್ಟ ಅಪಘಾತಗಳು ಸಹ ಆಗುತ್ತಾ ಇರುತ್ತದೆ. ಇದರಿಂದ ವಾಹನಗಳು ಸಂಚರಿಸಲು ಹಾಗೂ ಜನ ಸಾಮಾನ್ಯರು ಪುಟ್ಪಾತ್ಗಳಲ್ಲಿ ಹಾಗೂ ರಸ್ತೆ ದಾಟಲು ತುಂಬ ತೊಂದರೆಯಾಗಿದೆ ಎಂದು ತಿಳಿಸಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳುವಂತೆ ಕೋರಿರುತ್ತಾರೆ. ಅದರಂತೆ ಸದರಿ ಕಾಮಗಾರಿಗೆ **ರೂ.73.00** ಲಕ್ಷಗಳ ಅಂದಾಜನ್ನು ತಯಾರಿಸಿಲಾಗಿರುತ್ತದೆ. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ. ಅದರಂತೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:24/2011–12 ದಿನಾಂಕ:19.05.2011 ರಲ್ಲಿ ಸದರಿ ಕಾಮಗಾರಿಯನ್ನು 2011–12 ನೆ ಸಾಲಿನ ಆಯವ್ಯಯದಲ್ಲಿ ಕೈಗೆತ್ತಿಕೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ. ಮುಂದುವರೆದಂತೆ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಟಿ.ಇಸಿ ವಿಭಾಗದ ಆಯವ್ಯಯ ಲೆಕ್ಕಶೀರ್ಷಿಕೆ – 20 ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ – ಮುಖ್ಯ ರಸ್ತೆ / ಆರ್ಟೀರಿಯಲ್ / ಉಪ ಆರ್ಟೀರಿಯಲ್ ರಸ್ತೆ

ಮುಖ್ಯ ರಸ್ತೆಗಳ ವಿಭಾಗ ಪಿ.ಸಂಖ್ಯೆ 2019/128 ಲೆಕ್ಕ ಶೀರ್ಷಿಕೆ ಯಡಿಯಲ್ಲಿ ಮೀಸಲಾತಿ ನೀಡಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :- ದಿನಾಂಕ : 22-07-2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ವಾರ್ಡುಗಳಿಗೆ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## ***25]. ವಿಷಯದ ಸಂಖ್ಯೆ :-ತೆಆಸ್ಥಾಸ/195/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 21-07-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ-73 ಮತ್ತು 198 ರ ಉದ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಮಾನ್ಯ ಅಧ್ಯಕ್ಷರು ತೋಟಗಾರಿಕೆ ಸ್ಥಾಯಿ ಸಮಿತಿ ರವರು ಸೂಚಿಸಿರುವಂತೆ 2011-12 ನೇ ಸಾಲಿಗೆ ಒಟ್ಟು 10 ಉಧ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಮೊತ್ತ ಒಟ್ಟು ರೂ.198.25 ಲಕ್ಷಗಳಿಗೆ 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿ, ಜಾಬ್ ಕೋಡ್ ಪಡೆದು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***-ಮುಂದೂಡಿದೆ-***

## ***26]. ವಿಷಯದ ಸಂಖ್ಯೆ :-ತೆಆಸ್ಥಾಸ/196/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 21-07-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ, ರಸ್ತೆ ಮೂಲಭೂತ ಸೌಕರ್ಯ ವಲಯದ ವತಿಯಿಂದ ಕೆಲವು ಅತೀ ಅವಶ್ಯಕವಿರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಕೋರಿ ಶಾಸಕರು ಹಾಗೂ ಸ್ಥಳೀಯ ನಗರಪಾಲಿಕೆ ಸದಸ್ಯರುಗಳು ಕೋರಿಕೆ ಪತ್ರಗಳನ್ನು ನೀಡಿದ್ದು, ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ 2011-12ನೇ ಸಾಲಿನ ಆಯವ್ಯಯದಲ್ಲಿ ರಸ್ತೆ ಮೂಲಭೂತ ಸೌಕರ್ಯ ವಲಯಕ್ಕೆ ಅನುದಾನವನ್ನು ಮೀಸಲಿಡುವ ಸಂದರ್ಭದಲ್ಲಿ ಈ ಕಾಮಗಾರಿಗಳನ್ನೂ ಸಹ ಪರಿಗಣನೆಗೆ ತೆಗೆದುಕೊಳ್ಳುವಂತೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯನ್ನು ಕೋರುವ ಸಂಬಂಧ ಕಡತವನ್ನು ತಮ್ಮ ಅವಗಾಹನೆಗೆ ಮಂಡಿಸಿದೆ.

ಸ್ಥಳೀಯ ನಗರಪಾಲಿಕೆ ಸದಸ್ಯರುಗಳು ಹಾಗೂ ಶಾಸಕರು ಕೈಗೊಳ್ಳಲು ಕೋರಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತೆ.

| ಕ್ರ.ಸಂ | ಕಾಮಗಾರಿ ವಿವರ | ಷರಾ |
|---|---|---|
| 01 | ಚಿನ್ನಪ್ಪ ಗಾರ್ಡನ್ 4ನೇ ಮುಖ್ಯ ರಸ್ತೆ, ಪೆಮ್ಮೇಗೌಡ ಮುಖ್ಯ ರಸ್ತೆ ಹಾಗೂ ಎಂ.ಎಂ.ರಸ್ತೆಯನ್ನು ಅಭಿವೃದ್ಧಿ ಪಡಿಸುವ ಕಾಮಗಾರಿ. | ಶ್ರೀ. ಎನ್ ಚಂದ್ರ ವಾರ್ಡ್ ಸಂಖ್ಯೆ : 62ರ ಸದಸ್ಯರ ಕೋರಿಕೆ ಪತ್ರ ದಿನಾಂಕ : 13.06.2011 |
| 02 | ವಾರ್ಡ್ ಸಂಖ್ಯೆ : 112 ದೊಮ್ಮಲೂರು ವ್ಯಾಪ್ತಿಯಲ್ಲಿ ಕೆಲವು ಆಯ್ದ ರಸ್ತೆಗಳ ಪಾದಚಾರಿ ಮಾರ್ಗಗಳ ಅಭಿವೃದ್ಧಿ. | ಶ್ರೀಮತಿ ಗೀತಾ ಶ್ರೀನಿವಾಸ ರೆಡ್ಡಿ ವಾರ್ಡ್ ಸಂಖ್ಯೆ : 112ರ ಸದಸ್ಯರ ಕೋರಿಕೆ ಪತ್ರ ದಿನಾಂಕ : 07.05.2011 |
| 03 | ವಾರ್ಡ್ ಸಂಖ್ಯೆ : 112 ದೊಮ್ಮಲೂರು ವ್ಯಾಪ್ತಿಯಲ್ಲಿ ಕೆಲವು ಆಯ್ದ ರಸ್ತೆಗಳ ಡಾಂಬರೀಕರಣ ಕಾಮಗಾರಿ. | ಶ್ರೀಮತಿ ಗೀತಾ ಶ್ರೀನಿವಾಸ ರೆಡ್ಡಿ ವಾರ್ಡ್ ಸಂಖ್ಯೆ : 112ರ ಸದಸ್ಯರ ಕೋರಿಕೆ ಪತ್ರ ದಿನಾಂಕ : 07.05.2011 |
| 04 | ರಿಂಗ್ ರಸ್ತೆ, ಹೆಬ್ಬಾಳ ರಸ್ತೆ, ಸರ್ವಿಸ್ ರಸ್ತೆ ಡಾಂಬರೀಕರಣ ಕಾಮಗಾರಿ. | ಶ್ರೀ. ಎಂ. ಉದಯ ಶಂಕರ್ ವಿರೋಧ ಪಕ್ಷದ ನಾಯಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 23.05.2011 |
| 05 | ವಸಂತನಗರ ವ್ಯಾಪ್ತಿಯ ಕೆಲವು ಪ್ರಮುಖ ರಸ್ತೆಗಳಿಗೆ ಹೊಸದಾಗಿ ಡಾಂಬರೀಕರಣ ಮಾಡುವ ಕಾಮಗಾರಿ. | ಶ್ರೀ ಕಟ್ಟಾ ಜಗದೀಶ್ ಕಾರ್ಪೊರೇಟರ್, ವಾರ್ಡ್ ಸಂಖ್ಯೆ : 93 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 24.05.2011 |

| | | |
|---|---|---|
| 06 | ವಾರ್ಡ್ ಸಂಖ್ಯೆ : 91 ಭಾರತೀನಗರ ಪ್ರದೇಶದಲ್ಲಿ ಕೆಲವು ಆಯ್ದ ರಸ್ತೆಗಳನು ಅಭಿವೃದ್ಧಿಪಡಿಸುವ ಕಾಮಗಾರಿ. | ಶ್ರೀ. ಹೆಚ್. ರವೀಂದ್ರ, ಅಧ್ಯಕ್ಷರು, ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 18.03.2011<br>ಶ್ರೀ. ಶಕೀಲ್ ಅಹಮ್ಮದ್ ಕಾರ್ಪೊರೇಟರ್, ವಾರ್ಡ್ ಸಂಖ್ಯೆ : 91 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ |
| 07 | ಸರ್ ಸಿ.ವಿ ರಾಮನ್‌ನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಅತೀ ಪ್ರಮುಖ ರಸ್ತೆಗಳನ್ನು ಅಬಿವೃದ್ಧಿಪಡಿಸಿ ಡಾಂಬರೀಕರಣಗೊಳಿಸುವ ಕಾಮಗಾರಿ. | ಶ್ರೀ. ಎಸ್. ರಘು, ಶಾಸಕರು, ಸರ್ ಸಿ.ವಿ ರಾಮನ್‌ನಗರ ವಿಧಾನಸಭಾ ಕ್ಷೇತ್ರ, ಕರ್ನಾಟಕ ರವರ ಕೋರಿಕೆ ಪತ್ರ ದಿನಾಂಕ : 23.02.2011. |
| 08 | 1. ತಮ್ಮಯ್ಯ ರಸ್ತೆಯಿಂದ ಸಾಣೀಗುರುವನಹಳ್ಳಿ ರಸ್ತೆ, 8ನೇ ಬಿ ಮೈನ್ ಡಾಮಬರೀಕರಣ.<br>2. 20ನೇ ಮೈನ್, 2ನೇ ಬ್ಲಾಕ್ (20 ಮೈನ್‌ನಿಂದ 32ನೇ ಕ್ರಾಸ್ ಡಾಂಬರೀಕರಣ.<br>3. 19ನೇ ಮೈನ್, 2ನೇ ಬ್ಲಾಕ್ (27ನೇ ಮೈನ್‌ನಿಂದ 32ನೇ ಕ್ರಾಸ್ ಡಾಂಬರೀಕರಣ. | ಶ್ರೀ.ಎಸ್ ಸುರೇಶ್‌ಕುಮಾರ್, ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು ರವರ ಪತ್ರ ದಿನಾಂಕ : 01–03–2010. |
| | 4. 6ನೇ ಕ್ರಾಸ್ ಲಕ್ಷ್ಮೀನಾರಾಯಣಪುರ (ಮಳೆ ನೀರಿನ ಬೃಹತ್ ಚರಂಡಿಯಿಂದ 81ನೇ ಬಸ್ ನಿಲ್ದಾಣದವರೆಗೆ) ಡಾಂಬರೀಕರಣ.<br>5. 5ನೇ ಬ್ಲಾಕ್ (ಕೆ.ಟಿ.ಎಸ್.ವಿ ಯಿಂದ ದಿನತಂತಿ ಮುಖ್ಯ ರಸ್ತೆವರೆಗೆ ಡಾಂಬರೀಕರಣ)<br>6. 58ನೇ ಕ್ರಾಸ್ – 6ನೇ ಮೈನ್‌ನಿಂದ 2ನೇ ಮೈನ್ – ಸ್ಪಂದನ ಆಸ್ಪತ್ರೆ 4ನೇ ಬ್ಲಾಕ್ ರಸ್ತೆ ಡಾಂಬರೀಕರಣ.<br>7. 10ನೇ ಮೈನ್ (36ನೇ ಕ್ರಾಸ್ ನಿಂದ ಎಂಇಐ ಪಾಲಿಟೆಕ್ನಿಕ್‌ವರೆಗೆ ಡಾಂಬರೀಕರಣ.<br>8. ಕಾರ್ಡ್ ರಸ್ತೆಯಿಂದ ನವರಂಗ್ ಬಾರ್ (41ನೇ ಕ್ರಾಸ್ ರಸ್ತೆ ಡಾಂಬರೀಕರಣ) | |
| 09 | ವಾರ್ಡ್ ಸಂಖ್ಯೆ : 43 ರಲ್ಲಿನ ಕೆಲವು ಆಯ್ದ ಪ್ರಮುಖ ರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿ. | ಶ್ರೀ. ಎಂ. ನಾಗರಾಜ್, ವಿರೋಧ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 06.12.2010. |
| 10 | ವಾರ್ಡ್ ಸಂಖ್ಯೆ : 75 ಶಂಕರಮಠ ವ್ಯಾಪ್ತಿಯಲ್ಲಿನ ಕೆಲವು ಪ್ರಮುಖ ರಸ್ತೆಗಳ ಹಾಗೂ ಪಾದಚಾರಿ ಮಾರ್ಗಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ಎಮ್. ಶಿವರಾಜು, ಸದಸ್ಯರು, ವಾರ್ಡ್ ಸಂಖ್ಯೆ : 75, ಸಾರ್ವಜನಿಕ ಸ್ಥಾಯಿ ಸಮಿತಿ, ಬಿ.ಬಿ.ಎಂ.ಪಿ. ರವರ ಕೋರಿಕೆ ಪತ್ರ ದಿನಾಂಕ : 23.02.2011 |
| 11 | ವಾರ್ಡ್ ಸಂಖ್ಯೆ : 68 ರ ವ್ಯಾಪ್ತಿಯಲ್ಲಿನ ಕೆಲವು ಆಯ್ದ ರಸ್ತೆಗಳಲ್ಲಿನ ಪಾದಚಾರಿ ಮಾರ್ಗ ಮತ್ತು ಚರಂಡಿಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ಎಸ್. ಕೇಶವಮೂರ್ತಿ, ನಗರ ಪಾಲಿಕೆ ಸದಸ್ಯರು, ವಾರ್ಡ್ ನಂ : 68, ಬಿ.ಬಿ.ಎಂ.ಪಿ. ರವರ ಕೋರಿಕೆ ಪತ್ರ ದಿನಾಂಕ : 23.02.2011 |
| 12 | ವಾರ್ಡ್ ಸಂಖ್ಯೆ : 95 ರ ವ್ಯಾಪ್ತಿಯಲ್ಲಿ ಬರುವ ಕೆಲವು ಪ್ರಮುಖ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ. | ಶ್ರೀ. ಟಿ.ಮಲ್ಲೇಶ್, ಕಾರ್ಪೊರೇಟರ್, ವಾರ್ಡ್ ನಂ : 95 ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 16.03.2011 |
| 13 | 1. ಪಶ್ಚಿಮ ಕಾರ್ಡ್ ರಸ್ತೆ ಮತ್ತು ರಾಜಾಜಿನಗರ 10ನೆ ಕ್ರಾಸ್ ಮಧ್ಯದಲ್ಲಿ 1ನೇ ಬ್ಲಾಕ್ ಬಳಿ ಪಾದಚಾರಿ ಸುರಂಗ ನಿರ್ಮಾಣ. | ಶ್ರೀ.ನೆ.ಲ.ನರೇಂದ್ರ ಬಾಬು, ವಿಧಾನಸಭಾ ಸದಸ್ಯರು, ಮಹಾಲಕ್ಷ್ಮಿ ಬಡಾವಣೆ ಕ್ಷೇತ್ರ ರವರ ಕೋರಿಕೆ ಪತ್ರ ದಿನಾಂಕ : 24.03.2011. |

| | | |
|---|---|---|
| | 2. ಯಶವಂತಪುರ ರೈಲ್ವೆ ನಿಲ್ದಾಣ ಮತ್ತು ಉಲ್ಲಾಸ್ ಥಿಯೇಟರ್ ಮುಂಭಾಗದ ರಸ್ತೆಯಲ್ಲಿ ಪಾದಚಾರಿ ಸುರಂಗ ನಿರ್ಮಾಣ. | |
| 14 | 1. ವಾರ್ಡ್ ಸಂಖ್ಯೆ : 105ರ ವ್ಯಾಪ್ತಿಯ ಕೆಲವು ಆಯ್ದ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀಮತಿ ರೂಪಾದೇವಿ, ಸದಸ್ಯರು, ವಾರ್ಡ್ ಸಂಖ್ಯೆ : 105, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ |
| 15 | ಸಿದ್ದಯ್ಯ ಪುರಾಣಿಕ್ ರಸ್ತೆಯ ಡಾಂಬರೀಕರಣ ಕಾಮಗಾರಿ. | ಶ್ರೀಮತಿ ರೂಪಾದೇವಿ, ಸದಸ್ಯರು, ವಾರ್ಡ್ ಸಂಖ್ಯೆ : 105, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 12.10.2011 |
| 16 | ಶಂಕರಮಠದಿಂದ ಗೆಳೆಯರ ಬಳಗ ವರೆಗಿನ ರಸ್ತೆಯನ್ನು ಅಭಿವೃದ್ಧಿಪಡಿಸುವುದು | ಶ್ರೀ. ಎಂ. ನಾಗರಾಜ್, ವಿರೋಧ ಪಕ್ಷದ ನಾಯಕರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 23.06.2010. |
| 17 | 1ನೇ ಮೈನ್ ರೋಡ್, 3ನೇ ಹಂತ, 3ನೇ ಬ್ಲಾಕ್ ಹೆಚ್ಐಜಿ, ಕೆಹೆಚ್‌ಬಿ ಬಸವೇಶ್ವರನಗರ (ಹವನೂರು ಚೌಕದಿಂದ ವೆಸ್ಟ್ ಆಫ್ ಕಾರ್ಡ್‌ವರೆಗೆ) ರಸ್ತೆಯನ್ನು ಅಭಿವೃದ್ಧಿಪಡಿಸುವುದು. | ಶ್ರೀ. ಗಂಗಬೈರಯ್ಯ, ಸದಸ್ಯರು, ವಾರ್ಡ್ ನಂ : 106, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 23.06.2011 |
| 18 | 1ನೇ ಮೈನ್ ರೋಡ್, 3ನೇ ಹಂತ, 4ನೇ ಬ್ಲಾಕ್ ಹೆಚ್ಐಜಿ, ಕೆಹೆಚ್‌ಬಿ ಬಸವೇಶ್ವರನಗರ (ಮಾಗಡಿ ಮೈನ್ ರಸ್ತೆಯಿಂದ ಶಂಕರಮಠದವರೆಗೆ) ರಸ್ತೆಯನ್ನು ಅಭಿವೃದ್ಧಿ ಪಡಿಸುವುದು. | ಶ್ರೀ. ಎಸ್.ಎಚ್ ಪದ್ಮರಾಜ್, ಸದಸ್ಯರು, ವಾರ್ಡ್ ನಂ : 100, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 23.06.2011 |
| 19 | ವಾರ್ಡ್ ಸಂಖ್ಯೆ : 106 ರ ವ್ಯಾಪ್ತಿಯ ಕೆಲವು ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ಗಂಗಬೈರಯ್ಯ, ಸದಸ್ಯರು, ವಾರ್ಡ್ ನಂ : 106, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 25.05.2011 |
| 20 | ಬೇಗೂರು–ವಿಟ್ಟಸಂದ್ರ ರಸ್ತೆಯಿಂದ ಬೇಗೂರು ಡಿಯೋಸಿಟಿ ರಸ್ತೆಗೆ (ಬೇಗೂರು ಕೆರೆ ಕೋಡಿ ಹೊಸೂರು ರಸ್ತೆ) ಅಗಲೀಕರಣ ಮತ್ತು ಅಭಿವೃದ್ಧಿಪಡಿಸುವ ಕುರಿತು. | ಶ್ರೀ. ಎಂ. ಶ್ರೀನಿವಾಸ ಸದಸ್ಯರು, ವಾರ್ಡ್ ನಂ : 192, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 29.06.2011 |
| 21 | ಜಯನಗರ ಪೂರ್ವ ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ 28ನೇಯ ಮುಖ್ಯ ರಸ್ತೆಯನ್ನು ಮತ್ತು ರಿಂಗ್ ರಸ್ತೆ ಕೂಡುವ ಸ್ಥಳದಲ್ಲಿ ಅಂಡರ್ ಪಾಸ್ ಅಥವಾ ಮೇಲು ಸೇತುವೆಯನ್ನು ನಿರ್ಮಿಸುವ ಕಾಮಗಾರಿ | ಶ್ರೀ. ಮುನಿಸಂಜೀವಯ್ಯ, ಸದಸ್ಯರು, ವಾರ್ಡ್ ಸಂಖ್ಯೆ : 170, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ |
| 22 | ಪದ್ಮನಾಭನಗರ ವಿಧಾನಸಭಾ ಕ್ಷೇತ್ರದಲ್ಲಿನ ಕೆಲವು ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀಆರ್. ಅಶೋಕ, ಗೃಹ ಮತ್ತು ಸಾರಿಗೆ ಸಚಿವರು ಹಾಗೂ ಬೆಂಗಳೂರು (ದಕ್ಷಿಣ) ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ರವರ ಪತ್ರ ದಿನಾಂಕ : 28.11.2010 |
| 23 | ಜಯನಗರ ಪೂರ್ವ ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಪ್ರಮುಖ ರಸ್ತೆ, ಪಾದಚಾರಿ ಮಾರ್ಗ ಮತ್ತು ರಸ್ತೆ ಬದಿ ಚರಂಡಿಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ | ಶ್ರೀ. ಮುನಿಸಂಜೀವಯ್ಯ, ಕೌನ್ಸಿಲರ್, ವಾರ್ಡ್ ಸಂಖ್ಯೆ : 170, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 17.07.2011 |
| 24 | ವಾರ್ಡ್ ಸಂಖ್ಯೆ : 167ರ ವ್ಯಾಪ್ತಿಯಲ್ಲಿನ ಕೆಲವು ಆಯ್ದ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ರಮೇಶ್ ಎನ್.ಆರ್, ಸದಸ್ಯರು, ವಾರ್ಡ್ ನಂ : 167, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 06.06.2011 |
| 25 | ವಾರ್ಡ್ ಸಂಖ್ಯೆ : 182 ಪದ್ಮನಾಭನಗರ ವ್ಯಾಪ್ತಿಯಲ್ಲಿನ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ಎಲ್.ಶ್ರೀನಿವಾಸ್, ಸದಸ್ಯರು, ವಾರ್ಡ್ ನಂ : 182, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 06.06.2011 |

| | | |
|---|---|---|
| 26 | ವಾರ್ಡ್ ಸಂಖ್ಯೆ : 166ಕ್ಕೆ ಹೊಸದಾಗಿ ಸೇರ್ಪಡೆಗೊಂಡಿರುವ ಪ್ರದೇಶದಲ್ಲಿನ ಅಭಿವೃದ್ಧಿ ಕಾಮಗಾರಿ. | ಶ್ರೀಮತಿ.ಜ್ಯೋತಿಶ್ರೀ ಹರಿರೆಡ್ಡಿ, ಸದಸ್ಯರು, ವಾರ್ಡ್ ನಂ : 166, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 03.06.2011 |
| 27 | ವಾರ್ಡ್ ಸಂಖ್ಯೆ : 181ರ ವ್ಯಾಪ್ತಿಯ ಕೆಲವು ಆಯ್ದರಸ್ತೆಗಳ ಪಾದಚಾರಿ ಮಾರ್ಗ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿ | ಶ್ರೀ. ಸುರೇಶ್.ಹೆಚ್, ಸದಸ್ಯರು, ವಾರ್ಡ್ ನಂ : 181, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 06.06.2011 |
| 28 | ಭುವನೇಶ್ವರಿನಗರದ ವಿಷ್ಣುವರ್ಧನ್ ರಸ್ತೆ ಮೂಲಕ ಅಬ್ಬಯ್ಯನಾಯ್ಡು ಸ್ಟುಡಿಯೋವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿ. | ಶ್ರೀ. ಬಿ.ಎನ್.ವೆಂಕಟಸ್ವಾಮಿ ನಾಯ್ಡು, ಸದಸ್ಯರು, ವಾರ್ಡ್ ಸಂಖ್ಯೆ : 183, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ |
| 29 | ವಾರ್ಡ್ ಸಂಖ್ಯೆ : 170 ಮತ್ತು 171 ರ ವ್ಯಾಪ್ತಿಯಲ್ಲಿ ಬರುವ ಕೆಲವು ಆಯ್ದ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ಮಹಮ್ಮದ್ ರಿಜ್ವಾನ್ ನವಾಬ್, ಸದಸ್ಯರು, ವಾರ್ಡ್ ನಂ : 171, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 16.11.2011 |
| 30 | ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಕೆಲವು ಆಯ್ದ ರಸ್ತೆಗಳಲ್ಲಿನ ಪಾದಚಾರಿ ಮಾರ್ಗಗಳ ಅಭಿವೃದ್ಧಿ ಹಾಗೂ ಡಾಂಬರೀಕರಣ ಕಾಮಗಾರಿ. | ಶ್ರೀ.ಬಿ.ಜೆಡ್ ಜಮೀರ್ ಅಹ್ಮದ್ ಖಾನ್, ಶಾಸಕರು, ಚಾಮರಾಜಪೇಟೆ ಕ್ಷೇತ್ರ ರವರ ಪತ್ರ ದಿನಾಂಕ : 01.03.2011 |
| 31 | ವಾರ್ಡ್ ಸಂಖ್ಯೆ : 10ರ ದೊಡ್ಡಬೊಮ್ಮಸಂದ್ರ ಮುಖ್ಯರಸ್ತೆಯನ್ನು (ನಂಜಪ್ಪ ವೃತ್ತದಿಂದ ಬಿ.ಇ.ಎಲ್ ವೃತ್ತ ಸೇರುವ ರಸ್ತೆ) ಅಗಲೀಕರಣ ಮಾಡಿ ಅಭಿವೃದ್ಧಿಪಡಿಸುವ ಕಾಮಗಾರಿ. | ಶ್ರೀಆರ್. ಅಶೋಕ, ಗೃಹ ಮತ್ತು ಸಾರಿಗೆ ಸಚಿವರು ಹಾಗೂ ಬೆಂಗಳೂರು (ದಕ್ಷಿಣ) ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರು ರವರ ಪತ್ರ ದಿನಾಂಕ : 18.06.2010 |
| 32 | ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಜಾಪುರ ರಸ್ತೆಯ ದೊಡ್ಡಕನ್ನಲ್ಲಿಯಿಂದ ಚಿಕ್ಕನಾಯಕನಹಳ್ಳಿ ದಿನ್ನೆ-ಗಟ್ಟಹಳ್ಳಿ ಮಾಗ್ವಾಗಿ ಪರಪ್ಪನ ಅಗ್ರಹಾರ ಸೇರುವ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿ. | ಶ್ರೀ.ಅರವಿಂದ ಲಿಂಬಾವಳಿ, ಶಾಸಕರು ಹಾಗೂ ಮಾಜಿ ಸಚಿವರು, ಮಹದೇವಪುರ ವಿಧಾನಸಭಾ ಕ್ಷೇತ್ರ ರವರ ಪತ್ರ ದಿನಾಂಕ : 24.02.2011 |
| 33 | ಯಲಹಂಕ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ : 6ರ ಉಕ್ಕಾ ಮಸೀದಿ ರಸ್ತೆಯ ಡಾಮಬರೀಕರಣ ಕಾಮಗಾರಿ. | ಶ್ರೀಮತಿ. ಲಲಿತಾಮುಕುಂದರಾವ್, ವಾರ್ಡ್ ನಂ : 6, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 15.06.2011 |
| 34 | ಮಹದೇವಪುರ ವಿಧಾನಸಭಾ ಕ್ಷೇತ್ರದ ಇಬ್ಬಲೂರು ಜಂಕ್ಷನ್‌ನಿಂದ ಕೊಡತಿಗೇಟ್, ದೊಮ್ಮಸಂದ್ರ, ವರ್ತೂರು, ಕಾಡುಗೊಡಿ, ಕಾಟಂನಲ್ಲೂರು ಗೇಟ್, ಬೂದಿಗೆರೆ ರಸ್ತೆ ಮಾರ್ಗವಾಗಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ರಸ್ತೆಯನ್ನು ಸೇರುವ ರಸ್ತೆಯ ಅಭಿವೃದ್ಧಿ ಕಾಮಗಾರಿ. | ಶ್ರೀ.ಅರವಿಂದ ಲಿಂಬಾವಳಿ, ಶಾಸಕರು ಹಾಗೂ ಮಾಜಿ ಸಚಿವರು, ಮಹದೇವಪುರ ವಿಧಾನಸಭಾ ಕ್ಷೇತ್ರ ರವರ ಪತ್ರ ದಿನಾಂಕ : 03.01.2011 |
| 35 | 1. ವತೂರು ರಸ್ತೆ ಕುಂದಲಹಳ್ಳಿ ಗೇಟ್‌ನಿಂದ ಪಣತ್ತೂರ್ ರೈಲ್ವೆ ಸ್ಟೇಷನ್ (ವಯಾತೂಬರಹಳ್ಳಿ) ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿ.<br>2. ಕಾರ್ಮುಲಾಂ ರಸ್ತೆ – ಸರ್ಜಾಪುರ ರಸ್ತೆಯಿಂದ ವರ್ತೂರು ಮುಖ್ಯರಸ್ತೆ (ಗುಂಜೂರು, ಕೊಡತಿ ಮಾರ್ಗವಾಗಿ) ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿ.<br>3. ಗುಂಜೂರು ರಸ್ತೆಯಿಂದ ಸರ್ಜಾಪುರ ರಸ್ತೆ (ಮುಲ್ಲೂರು ಮಾರ್ಗವಾಗಿ) ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿ.<br>4. ಹೊರ ವರ್ತುಲ ರಸ್ತೆಯಿಂದ ವರ್ತೂರು | ಶ್ರೀ.ಅರವಿಂದ ಲಿಂಬಾವಳಿ, ಶಾಸಕರು ಹಾಗೂ ಮಾಜಿ ಸಚಿವರು, ಮಹದೇವಪುರ ವಿಧಾನಸಭಾ ಕ್ಷೇತ್ರ ರವರ ಪತ್ರ ದಿನಾಂಕ : 24.02.2011 |

| | | |
|---|---|---|
| | ಮುಖ್ಯರಸ್ತೆ (ಮುನ್ನೇಕೊಳಲು ಎಕ್ಸಟೆನ್ಸನ್.<br>5. ತೊಬರಹಳ್ಳಿ ಮಾರ್ಗವಾಗಿ) ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿ.<br>6. ಯಮಲೂರು ರಸ್ತೆ ಲಾಜಿಕಾ ಪಾರ್ಕನಿಂದ ಹೊರವರ್ತುಲ ರಸ್ತೆ (BWSSB Treatement Plant) ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿ | |
| | 7. ಹೊರ ವರ್ತುಲ ರಸ್ತೆಯಿಂದ ಮಹದೇವಪುರ ಮುಖ್ಯ ರಸ್ತೆ (ಗೋಶಾಲೆ, ಗರುಡಾಚಾರ್ ಪಾಳ್ಯ ಮಾರ್ಗವಾಗಿ) ಸೇರುವ ರಸ್ತೆ ಅಭಿವೃದ್ಧಿ ಕಾಮಗಾರಿ. | |
| 36 | ವಾಡ್ ಸಂಖ್ಯೆ : 56, ಎ.ನಾರಾಯಣಪುರ ವ್ಯಾಪ್ತಿಯ ಹಳೆ ಮದ್ರಾಸ್ ರಸ್ತೆಯಿಂದ ಸೇಲಂ ರೈಲ್ವೆ ಟ್ರಾಕ್‌ವರೆಗೆ ರಸ್ತೆ (ಉದಯನಗರ ಮುಖ್ಯ ರಸ್ತೆ ಮಾರ್ಗವಾಗಿ) ಅಗಲೀಕರಣ ಮತ್ತು ಅಭಿವೃದ್ಧಿಪಡಿಸುವ ಕಾಮಗಾರಿ. | ಶ್ರೀ. ಎನ್.ಎಸ್.ಪ್ರಸಾದ್, ಸದಸ್ಯರು, ವಾರ್ಡ್ ನಂ : 56, ಬೃಹತ್ ಕಾಮಗಾರಿ ಸ್ಥಾಯಿ ಸಮಿತಿ, ಬಿ.ಬಿ.ಎಂ.ಪಿ. |
| 37 | ರಾಮಮೂರ್ತಿನಗರ ವಾರ್ಡ್ ಸಂಖ್ಯೆ : 26ರ ಕೆಲವು ಆಯ್ದ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ಎಂ ರೇವಣ್ಣ ಸದಸ್ಯರು, ವಾರ್ಡ್ ನಂ : 26, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |
| 38 | ಅಗ್ರಹಾರ ಗ್ರಾಮದಲ್ಲಿರುವ ಬೆಳತೂರು – ಮೇಡಹಳ್ಳಿ ರಸ್ತೆಯಿಂದ ಕಾಡುಗೋಡಿ – ಕೃಷ್ಣರಾಜಪುರ ರಸ್ತೆವರೆಗಿನ ರಸ್ತೆಯ ಅಭಿವೃದ್ಧಿ ಕಾಮಗಾರಿ. | ಶ್ರೀ. ನಟರಾಜ್, ಸದಸ್ಯರು, ವಾರ್ಡ್ ನಂ : 54, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ. |
| 39 | ವಾರ್ಡ್ ಸಂಖ್ಯೆ :25ರ ವ್ಯಾಪ್ತಿಗೆ ಬರುವ ಕೆಲವು ಆಯ್ದ ಪ್ರಮುಖ ರಸ್ತೆಗಳ ಅಗಲೀಕರಣ ಕಾಮಗಾರಿ. | ಶ್ರೀಮತಿ. ತೇಜಸ್ವಿನಿ ಎನ್. ರಾಜು, ವಾರ್ಡ್ ನಂ : 25, ಮಹಾನಗರ ಪಾಲಿಕೆ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 29.07.2011 |
| 40 | ವಾರ್ಡ್ ಸಂಖ್ಯೆ : 53ರ ಬಸವನಪುರದ ವ್ಯಾಪ್ತಿಯ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀಮತಿ.ಕೆ. ಪೂರ್ಣಿಮಾ, ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿ, ವಾರ್ಡ್ ನಂ : 53, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 17.03.2011 |
| 41 | ವಾರ್ಡ್ ಸಂಖ್ಯೆ : 85ರ ವ್ಯಾಪ್ತಿಯ ಫರ್ನ ಸಿಟಿ ಬಡಾವಣೆಯಲ್ಲಿನ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ. | ಶ್ರೀ. ಆರ್. ಶ್ರೀಧರ್ ರೆಡ್ಡಿ, ಸದಸ್ಯರು, ವಾರ್ಡ್ ನಂ : 85, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 06.06.2011 |
| 42 | ಹೆಣ್ಣೂರು ಮುಖ್ಯ ರಸ್ತೆಯಿಂದ ಅಗರ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ. | ಶ್ರೀಮತಿ. ತೇಜಸ್ವಿನಿ ಎನ್. ರಾಜು, ವಾರ್ಡ್ ನಂ : 25, ಮಹಾನಗರ ಪಾಲಿಕೆ ಸದಸ್ಯರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 19.05.2011 |
| 43 | ಹಗದೂರು ವಾರ್ಡ್ ಸಂಖ್ಯೆ : 84ರಲ್ಲಿ ಆಯ್ದ ಕೆಲವು ಪ್ರಮುಖ ಮುಖ್ಯ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ಹೆಚ್.ಎ.ಶ್ರೀನಿವಾಸ್, ವಾರ್ಡ್ ನಂ : 84, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ರವರ ಕೋರಿಕೆ ಪತ್ರ ದಿನಾಂಕ : 19.01.2011 |
| 44 | ವಾರ್ಡ್ ನಂ.84 ಹಗದೂರು ವ್ಯಾಪ್ತಿಯ ವೈಟ್ ಫೀಲ್ಡ್ ಮುಖ್ಯರಸ್ತೆಯಿಂದ ಇಮ್ಮಡಿಹಳ್ಳಿ ಮಾರ್ಗವಾಗಿ ವಾಲೇಪುರ ರಸ್ತೆಯ ಕೈತೋಟ ಗ್ರಮದವರೆಗೆ ಚರಮಡಿ, ಪಾದಚಾರಿ ಮಾರ್ಗ ಹಾಗೂ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿ. | ಶ್ರೀ. ಹೆಚ್.ಎ.ಶ್ರೀನಿವಾಸ್, ವಾರ್ಡ್ ನಂ : 84, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು, ರವರ ಕೋರಿಕೆ ಪತ್ರ ದಿನಾಂಕ : 10.12.2011 |

| | | |
|---|---|---|
| 45 | ವಾರ್ಡ್ ನಂ.51ರ ಕೆ.ಆರ್ ಪುರ ರೈಲ್ವೆ ನಿಲ್ದಾಣದಿಂದ ಕಸ್ತೂರಿನಗರ ಈಸ್ಟ್ ಆಫ್.ಎನ್.ಜಿ.ಇ.ಎಫ್ ಬಡಾವಣೆಯಲ್ಲಿ ನಿರ್ಮಾಣವಾಗುತ್ತಿರುವ ರೈಲ್ವೆ ಅಂಡರ್ ಪಾಸ್‌ವರೆಗೆ ರಸ್ತೆ ಅಗಲೀಕಣ ಕಾಮಗಾರಿ. | ಶ್ರೀ.ಸುಗುಮಾರ್, ಅಧ್ಯಕ್ಷರು, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ದಿನಾಂಕ : 10.11.2010 |
| 46 | ವಾರ್ಡ್ ನಂ.191, ಸಿಂಗಸಂದ್ರ ವ್ಯಾಪ್ತಿಯಲ್ಲಿನ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ. | ಶ್ರೀಮತಿ. ಕವಿತ ಬಾಬುರಾಜ್, ವಾರ್ಡ್ ನಂ : 191, ಸದಸ್ಯರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 11.05.2011 |
| 47 | ವಾರ್ಡ್ ನಂ.191, ಸಿಂಗಸಂದ್ರ ವ್ಯಾಪ್ತಿಯಲ್ಲಿನ ಕೆಲವು ಆಯ್ದ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ. | ಶ್ರೀಮತಿ. ಕವಿತ ಬಾಬುರಾಜ್, ವಾರ್ಡ್ ನಂ : 191, ಸದಸ್ಯರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 05.07.2011 |
| 48 | ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಮುಖ ರಸ್ತೆಗಳ ಅಭಿವೃದ್ಧಿ ಕಾಮಗಾರಿ. | ಶ್ರೀ. ಎಮ್. ಸತೀಶ್ ರೆಡ್ಡಿ, ಶಾಸಕರು, ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ, ಬೆಂಗಳೂರು. |
| 49 | ವಾರ್ಡ್ ನಂ.72, ಹೇರೋಹಳ್ಳಿ ವ್ಯಾಪ್ತಿಗೆ ಬರುವ ರಸ್ತೆಗಳ ಅಭಿವೃದ್ಧಿ ಮತ್ತು ಅಗಲೀಕರಣ ಕಾಮಗಾರಿ. | ಶ್ರೀ. ಎ.ಎಂ. ಹನುಮಂತೇಗೌಡ, ಸದಸ್ಯರು, ವಾರ್ಡ್ ನಂ : 72, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕೋರಿಕೆ ಪತ್ರ ದಿನಾಂಕ : 07.06.2011 |
| 50 | ವಾರ್ಡ್ ಸಂಖ್ಯೆ : 72ರ ಮುದ್ದಿನ ಪಾಳ್ಯ ಆಂಜನೇಯಸ್ವಾಮಿ ದೇವಸ್ಥಾನದಿಂದ ಗಿಡ್ಡದಕೋನೆನಹಳ್ಳಿ 60 ಅಡಿ ರಸ್ತೆಯ ವರೆಗೆ ಅಭಿವೃದ್ಧಿ ಕಾಮಗಾರಿ. | ಕುಮಾರಿ. ಶೋಭಾ ಕರಂದ್ಲಾಜೆ ವಿದಾನಸಭಾ ಸದಸ್ಯರು, ಯಶವಂತಪುರ ವಿಧಾನ ಸಭಾ ಕ್ಷೇತ್ರ, ಬೆಂಗಳೂರು. |
| 51 | ಹೊಸೂರು ರಸ್ತೆಯಿಂದ ಬೇಗೂರುವರೆಗಿನ ರಸ್ತೆಯನ್ನು ಉನ್ನತ ಮಟ್ಟದ ರಸ್ತೆಯನ್ನಾಗಿ ಅಗಲೀಕರಣ, ಸಬಲೀಕರಣ ಮತ್ತು ಡಾಂಬರೀಕರಣಗೊಳಿಸುವ ಕಾಮಗಾರಿ. | ಶ್ರೀಆರ್. ಅಶೋಕ, ಬೆಂಗಳೂರು ನಗರ ಜಿಲ್ಲಾ ಉಸ್ತುವಾರಿ ಸಚಿವರು ಧ್ಯಕ್ಷತೆಯಲ್ಲಿ, ಮಾನ್ಯ ಆಯುಕ್ತರ ಉಪಸ್ಥಿತಿಯಲ್ಲಿ ಈ ಕಾಮಗಾರಿಯನ್ನು ಕೈಗೊಳ್ಳಲು ತೀರ್ಮಾನಿಸಲಾಯಿತು. |

ಮೇಲಿನ ವಿವರದೊಂದಿಗೆ, ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಸಂಬಂಧ 2011–12ನೆ ಸಾಲಿನ ಆಯವ್ಯಯದಲ್ಲಿ ರಸ್ತೆ ಮೂಲಭೂತ ಸೌಕರ್ಯ ವಲಯಕ್ಕೆ ಅನುದಾನವನ್ನು ಮೀಸಲಿಡುವ ಸಂದರ್ಭದಲ್ಲಿ ಈ ಕಾಮಗಾರಿಗಳನ್ನೂ ಸಹ ಪರಿಗಣನೆಗೆ ತೆಗೆದುಕೊಳ್ಳುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 21–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ವಿಧಾನಸಭಾ ಕ್ಷೇತ್ರ/ವಾರ್ಡುಗಳಿಗೆ ನೀಡಲಾಗಿರುವ ಅನುದಾನದ ಮಿತಿಯೊಳಗೆ ನಿಯಮಾನುಸಾರ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***27]. ವಿಷಯದ ಸಂಖ್ಯೆ :–ತೆಆಸ್ಥಾಸ/197/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 21–07–2011ರಲ್ಲಿ ವಿವರಿಸಿರುವಂತೆ, ಜವಾಹರಲಾಲ್ ನೆಹರು ತಾರಾಲಯದ ನಿರ್ದೇಶಕರಾದ ಪ್ರೊ.ಸಿ.ಎಸ್. ಶುಕ್ರೆ ರವರು ದಿನಾಂಕ : 18–05–2011 ಮತ್ತು 06–10–2010ರ ಪತ್ರದಲ್ಲಿ ವಿಶೇಷ ಆಯುಕ್ತರು ಬಿ.ಬಿ.ಎಂ.ಪಿ ರವರಲ್ಲಿ, ಸಂಸ್ಥೆಯ ರಸ್ತೆಗಳು ವಾಹನ ನಿಲುಗಡೆ ಮತ್ತು ಮಳೆನೀರು ಸಂಗ್ರಹಣೆಗಾಗಿ ಹೆಚ್ಚುವರಿ ಸಂಗ್ರಹಾಗಾರಗಳನ್ನು ನಿರ್ಮಿಸಿ ಕೊಡಲು ಕೋರಿರುತ್ತಾರೆ. ಅದರಂತೆ ಸದರಿ ಕಾಮಗಾರಿಗೆ ರೂ.58.00 ಲಕ್ಷಗಳ ಅಂದಾಜನ್ನು ತಯಾರಿಸಲಾಗಿರುತ್ತದೆ. ಸದರಿ ಕಾಮಗಾರಿಗೆ ಆಡಳಿತ್ಮಾತಕ ಅನುಮೋದನೆಯನ್ನು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಟಿಪಪ್ಪಣಿಯನ್ನು ಮಂಡಿಸಲಾಗಿರುತ್ತದೆ. ಅದರಂತೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ : 62/2011–12 ದಿನಾಂಕ : 24–06–2011ರಲ್ಲಿ ಸದರಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ.

ಮುಂದುವರೆದಂತೆ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಈ ಸಂಬಂಧ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** **ದಿನಾಂಕ 21–07–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ–ಜಲಸಂವರ್ಧನೆಗೆ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *28]. ವಿಷಯದ ಸಂಖ್ಯೆ :–ತೆಆಸ್ಥಾಸ/198/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅ.ಆ/ರಾ.ರಾ.ನ(ಯೋ)/ಪಿಆರ್/1258/11–12, ದಿನಾಂಕ : 21–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–129 ರ ಮಹಾನಗರ ಪಾಲಿಕೆ ಸದಸ್ಯರು ತಾವು ಪ್ರತಿನಿಧಿಸುವ ವಾರ್ಡ್ ನಂ.129 ರ ವ್ಯಾಪ್ತಿಯಲ್ಲಿನ ಹನುಮಂತರಾಯನಪಾಳ್ಯ, ಕೆಬ್ಬೆಹಳ್ಳ ಕಾಲೋನಿ, ಪಾಪರೆಡ್ಡಿಪಾಳ್ಯ ಕಾಲೋನಿ, ಕೆಂಗುಂಟೆ ಕಾಲೋನಿ, ವೀರನಪಾಳ್ಯ ಕಾಲೋನಿ, ಮಲ್ಲತ್ತಹಳ್ಳಿ ಕಾಲೋನಿ, ಮುತ್ತುರಾಯನಗರ ಕಾಲೋನಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ/ಪಂಗಡದ ತುಂಬ ಕಡುಬಡತನ/ ಆರ್ಥಿಕವಾಗಿ ದುರ್ಬಲವಾಗಿರುವ ವಸತಿರಹಿತರಿಗೆ ಶೇ.22.75 ರ ಅನುದಾನದಡಿ 100 ವೈಯಕ್ತಿಕ ಮನೆ ನಿರ್ಮಾಣ ಮಾಡಿಕೊಡಲು ಕೋರಿರುತ್ತಾರೆ.

ಮಾನ್ಯ ಪಾಲಿಕೆ ಸದಸ್ಯರು ಕೋರಿರುವಂತೆ 2010–11 ನೇ ಸಾಲಿನ ಶೇ.22.75 ರ ಅನುದಾನದಡಿ 35 ವೈಯಕ್ತಿಕ ಮನೆ ನಿರ್ಮಾಣಗಳನ್ನು ಕೈಗೊಂಡಿದ್ದು ಬಾಕಿ ಇರುವ 77 ವೈಯಕ್ತಿಕ ಮನೆ ನಿರ್ಮಾಣ ಕಾಮಗಾರಿ ಕೈಗೊಳ್ಳಲು 2011–12 ನೇ ಸಾಲಿನ ಆಯವ್ಯಯದಲ್ಲಿ ಶೇ.22.75 ರ ಅನುದಾನದಡಿ ರೂ.231.00 ಲಕ್ಷಗಳನ್ನು ಮೀಸಲಿರಿಸಲು ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ :– ದಿನಾಂಕ : 21–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು ಶೇಕಡ 22.75 ರಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.*

## *29]. ವಿಷಯದ ಸಂಖ್ಯೆ :–ತೆಆಸ್ಥಾಸ/199/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 21–07–2011ರಲ್ಲಿ ವಿವರಿಸಿರುವಂತೆ, ಮಲ್ಲೇಶ್ವರಂ ಕ್ಷೇತ್ರದ ಶಾಸಕರಾದ ಡಾ|| ಅಶ್ವತ್ಥ್ ನಾರಾಯಣ್ ರವರು ದಿನಾಂಕ: 14.02.2011 ರಂದು ಮಾನ್ಯ ಆಯುಕ್ತರವರಿಗೆ ಪತ್ರ ಬರೆದು ಸದರಿ ಕ್ಷೇತ್ರದಲ್ಲಿರುವ ಮಲ್ಲೇಶ್ವರಂ ವೈಯಾಲಿಕಾವಲ್ ಮುಖ್ಯರಸ್ತೆ ಮತ್ತು ಭಾಷ್ಯ ವೃತ್ತದಲ್ಲಿ ಇತ್ತೀಚಿಗೆ ವಿಪರೀತ ವಾಹನ ಸಂಚಾರವಿದ್ದು, ಇದರಿಂದ ವಾಹನ ದಟ್ಟಣೆ ಹೆಚ್ಚಾಗಿದ್ದು, ಸ್ಥಗಿತಗೊಡು ಬಹಳ ತೊಂದರೆ ಮತ್ತು ಅಪಾಯದ ಪರಿಸ್ಥಿತಿ ಉಂಟಾಗುತ್ತಿರುತ್ತದೆ ಎಂದು ತಿಳಿಸಿದ್ದು ಭಾಷ್ಯಂ ವೃತ್ತದ ಜಂಕ್ಷನ್ ಬಳಿ ರಸ್ತೆ ಅಭಿವೃದ್ಧಿ ಹಾಗೂ ರಸ್ತೆ ವಿಭಜಕಗಳನ್ನು ಜಂಕ್ಷನ್ ಸಮೀಪ ನಾಲ್ಕೂ ರಸ್ತೆಗಳಿಗೆ ಅಳವಡಿಸಿ, ಕಾವೇರಿ ಅಂಡರ್ ಪಾಸ್ ಕಡೆ ವಿಸ್ತರಿಸುವಂತೆ ಕೋರಿರುತ್ತಾರೆ. ಅದರಂತೆ ಸದರಿ ಕಾಮಗಾರಿಗೆ **ರೂ.133.00** ಲಕ್ಷಗಳ ಅಂದಾಜನ್ನು ತಯಾರಿಸಿಲಾಗಿರುತ್ತದೆ. ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಗೆ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ. ಅದರಂತೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:56/2011–12 ದಿನಾಂಕ:19.05.2011 ರಲ್ಲಿ ಸದರಿ ಕಾಮಗಾರಿಯನ್ನು 2011–12 ನೆ ಸಾಲಿನ ಆಯವ್ಯಯದಲ್ಲಿ ಕೈಗೆತ್ತಿಕೊಳ್ಳುವಂತೆ ತೀರ್ಮಾನಿಸಲಾಗಿರುತ್ತದೆ. ಮುಂದುವರೆದಂತೆ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಟಿ.ಇಸಿ ವಿಭಾಗದ ಆಯವ್ಯಯ ಲೆಕ್ಕಶೀರ್ಷಿಕೆ – ಆಯವ್ಯಯ ಲೆಕ್ಕ ಶೀರ್ಷಿಕೆ – 19 – ಯೋಜನೆ ಶಾಖೆ – ರಸ್ತೆಗೆ ಸಂಬಂಧಿಸಿದ ಕೆಲಸಗಳು – ಆಯ್ದ ರಸ್ತೆಗಳ ನವೀಕರಿಸಿದ ಪಾದಚಾರಿ ಮಾರ್ಗಗಳ

ಅಭಿವೃದ್ಧಿ – ಪಿ.ಸಂಖ್ಯೆ.2193/117 ಲೆಕ್ಕ ಶೀರ್ಷಿಕೆ ಯಡಿಯಲ್ಲಿ ಮೀಸಲಾತಿ ನೀಡಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 21–07–2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *301. ವಿಷಯದ ಸಂಖ್ಯೆ :–ತೆಆಸ್ಥಾಸ/200/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 21–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ –160 ರ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಶ್ರೀ.ಜಿ.ಹೆಚ್.ರಾಮಚಂದ್ರ ರವರು ತಾವು ಪ್ರತಿನಿಧಿಸುವ ವಾರ್ಡ್ ನಂ.160 ರಾಜರಾಜೇಶ್ವರಿನಗರವು ಅತಿ ಶೀಘ್ರವಾಗಿ ಅಭಿವೃದ್ಧಿ ಹೊಂದುತ್ತಿರುವ ಪ್ರದೇಶವಾಗಿದ್ದು ಹಾಗೂ ಈ ಪ್ರದೇಶದಲ್ಲಿ ಯಾವುದೇ ಉದ್ಯಾನವನವನ್ನು ಅಭಿವೃದ್ಧಿ ಪಡಿಸದೇ ಇರುವುದರಿಂದ ಈ ಪ್ರದೇಶದಲ್ಲಿ ಸಮರ್ಪಕವಾಗಿ ಉದ್ಯಾನವನವನ್ನು ಅಭಿವೃದ್ಧಿಪಡಿಸಿ ಸ್ಥಳೀಯ ನಾಗರೀಕರಿಗೆ ಅನುಕೂಲ ಕಲ್ಪಿಸಬೇಕಾಗಿರುವುದರಿಂದ, ರಾಜರಾಜೇಶ್ವರಿನಗರ ಪ್ರದೇಶದ ಐಡಿಯಲ್ ಹೋಮ್ 2ನೇ ಹಂತದಲ್ಲಿ ಉದ್ಯಾನವನಕ್ಕಾಗಿ ಮೀಸಲಿಟ್ಟಿರುವ ಸ್ಥಳದಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಈ ಪ್ರದೇಶದ ನಿವಾಸಿಗಳಿಗೆ ಅನುಕೂಲ ಕಲ್ಪಿಸುವ ಸಲುವಾಗಿ, ಈ ಪ್ರದೇಶದಲ್ಲಿ ಉದ್ಯಾನವನಕ್ಕಾಗಿ ಮೀಸಲಿಟ್ಟಿರುವ ಜಾಗದಲ್ಲಿ ಸುತ್ತಲು ತಂತಿ ಬೇಲಿಯನ್ನು ಅಳವಡಿಸುವುದು, ನಡೆದಾರಿ, ಕೊಳವೆ ಬಾವಿ, ಕಾವಲುಗಾರನ ಕೊಠಡಿ ಹಾಗೂ ವೃಕ್ಷವನ ನಿರ್ಮಿಸಿ ಸಮರ್ಪಕವಾಗಿ ಉದ್ಯಾನವನವನ್ನು ನಿರ್ಮಿಸಲು 2011–12ನೇ ಸಾಲಿನ ಆಯವ್ಯಯದಲ್ಲಿ ರೂ.113.10 ಲಕ್ಷಗಳ ಅನುದಾನ ಮೀಸಲಿರಿಸಲು ಕೋರಿರುತ್ತಾರೆ.

ಮಾನ್ಯ ಪಾಲಿಕೆ ಸದಸ್ಯರು ಕೋರಿರುವಂತೆ ಪ್ರಸ್ತಾಪಿತ ಉದ್ಯಾನವನ ಪ್ರದೇಶದ ವಿಸ್ತೀರ್ಣವು 100*400ಮೀ ಗಳಷ್ಟಿದ್ದು ಸಮರ್ಪಕವಾದ ಉದ್ಯಾನವನವನ್ನು ನಿರ್ಮಿಸುವುದಕ್ಕಾಗಿ ರೂ.113.10 ಲಕ್ಷಗಳ ಅಂದಾಜು ತಯಾರಿಸಿದ್ದು, ಸದರಿ ಕಾಮಗಾರಿ ಕೈಗೊಳ್ಳಲು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಲು ಮಂಜೂರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** **ದಿನಾಂಕ 21–07–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ ವೃಕ್ಷವನಗಳು ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *311. ವಿಷಯದ ಸಂಖ್ಯೆ :–ತೆಆಸ್ಥಾಸ/202/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 18–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು–2, ಯೋಜನೆ–2 ರವರು ಮುಖ್ಯ ಅಭಿಯಂತರರು, ಪರಿಸರಕೋಶ ರವರ ಮೂಲಕ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ರೂ.1590.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl.No. | Name of Works | Amount (Rs.in.lakhs) |
|---|---|---|
| 1 | Development of Kalkere Lake Phase-2 in Mahadevapura Zone | 1590.00 |
| | **Total Rs.** | **1590.00** |

2010–11ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ.2098 ರಲ್ಲಿ ಮೀಸಲಿರಿಸಿರುವ ರೂ.325.00 ಲಕ್ಷಗಳಲ್ಲಿ ಪ್ರಸ್ತಾಪಿಸಲಾಗಿದೆ. ಸದರಿ ಅನುದಾನವು ಮುಂದುವರೆದ ಕಾಮಗಾರಿಗಳಿಗೆ ಸೀಮಿತವಾಗಿರುವುದನ್ನು ಕಂಡಿಕೆ 122ರಲ್ಲಿ ಉಲ್ಲೇಖಿಸಲಾಗಿದೆ.

ಘನ ಸರ್ಕಾರವು, ಸರ್ಕಾರದ ಆದೇಶ ಸಂಖ್ಯೆ ನಅಇ/229/ಎಂ.ಎನ್.ವೈ/2009 ಬೆಂಗಳೂರು ದಿನಾಂಕ 06–06–2011ರಂತೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ರೂ.1590.00 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 18–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು ಮೆಗಾಸಿಟಿ ಯೋಜನೆಯಡಿ ಕೆರೆಗಳ ಅನುದಾನದಲ್ಲಿ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.***

## 32]. ವಿಷಯದ ಸಂಖ್ಯೆ :–ತೆಆಸ್ಥಾಸ/203/2011–12

ಆಯುಕ್ತರ ಟಿಪ್ಪಣಿ ದಿನಾಂಕ : 18–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಅಭಿಯಂತರರು, ಬೃಹತ್ ನೀರುಗಾಲುವೆ ಯೋಜನೆ ರವರು ಕಂಡಿಕೆ 27ರಲ್ಲಿ ನಮೂದಿಸಿದ ಒಟ್ಟು 18 ಕಾಮಗಾರಿಗಳಿಗೆ ರೂ.89.82 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಹಾಗೂ ಮಾನ್ಯ ಆಯುಕ್ತರ ಮೂಲಕ ಟಿಪ್ಪಣಿಯನ್ನು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಅನುಮೋದನೆಗಾಗಿ ಮಂಡಿಸಲಾಗಿರುತ್ತದೆ.

ಸದರಿ ಕಾಮಗಾರಿಗಳನ್ನು ತುರ್ತು ಎಂದು ಪರಿಗಣಿಸಿ ಪೂರ್ತಿಗೊಳಸಿಸಿರುವುದು ಕಂಡುಬಂದಿರುತ್ತದೆ.

ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ 02–06–2011 ರಂದು ನಡೆದ ಸಭೆಯ ವಿಷಯ ಸಂಖ್ಯೆ 43/2011–12 ರಂತೆ ಮಾನ್ಯ ಆಯುಕ್ತರು ಮಂಡಿಸಿರುವ ಟಿಪ್ಪಣಿಯನ್ನು ಒಪ್ಪಿರುತ್ತದೆ.

ಆಯವ್ಯಯ ಲೆಕ್ಕ ಶೀರ್ಷಿಕೆ ನಮೂದಿಸಿರುವುದಿಲ್ಲ.

ಆಯವ್ಯಯ ಲೆಕ್ಕ ಶೀರ್ಷಿಕೆ 21–ಕಾಮಗಾರಿ–ಮಳೆ ನೀರಿನಚರಂಡಿಗಳು–ಪಿ ಸಂಖ್ಯೆ 1579 ರಲ್ಲಿ ಪರಿಗಣಿಸಬಹುದಾಗಿರುತ್ತದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** **ದಿನಾಂಕ 18–07–2011 ರ ಆಯುಕ್ತರ ಟಿಪ್ಪಣಿಯಲ್ಲಿನ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಮಳೆ ನೀರಿನ ಚರಂಡಿ ಕಾಮಗಾರಿಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿನ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## 33]. ವಿಷಯದ ಸಂಖ್ಯೆ :–ತೆಆಸ್ಥಾಸ/205/2011–12

ಆಯುಕ್ತರ ಟಿಪ್ಪಣಿ ದಿನಾಂಕ : 22–07–2011ರಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ 63 ರ ವ್ಯಾಪ್ತಿಯಲ್ಲಿ ಬರುವ ಜಯಮಹಲ್ ಉದ್ಯಾನವನದ ಮತ್ತು ಆಟದ ಮೈದಾನದ ಸುತ್ತ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವಂತೆ ಮಾನ್ಯ ನ್ಯಾಯಾಧಿಶರು ಹಾಗೂ ಘನ ಸರ್ಕಾರದ ಮಂತ್ರಿಗಳು ಮತ್ತು ಘನ ಸರ್ಕಾರದ ಅಪರ ಕಾರ್ಯದರ್ಶಿಗಳು, ಗಣ್ಯ ವ್ಯಕ್ತಿಗಳು ದಿನನಿತ್ಯ ವಾಯು ವಿಹಾರಕ್ಕೆ ಹೋಗುವುದರಿಂದ ರಸ್ತೆಯ ಇಕ್ಕೆಲುಗಳಲ್ಲಿ ಬರುವ ಚರಂಡಿ ಮತ್ತು ಪಾದಚಾರಿ ಮಾರ್ಗಗಳು ಶಿಥಿಲಗೊಂಡು ಮಳೆ ನೀರು ಚರಂಡಿಯಲ್ಲಿ ನೀರು ಹರಿದು ಗುಂಡಿ ತಗ್ಗುಗಳಿಂದ ಕೂಡಿರುವುದರಿಂದ ವಾಯುವಿಹಾರಕ್ಕೆ ತೊಂದರೆಯಾಗಿದೆ ಎಂದು ಸದರಿ ಪ್ರದೇಶದಲ್ಲಿ ವಾಸ ಮಾಡುವ ಗಣ್ಯ ವ್ಯಕ್ತಿಗಳು ದೂರು ನೀಡಿರುತ್ತಾರೆ.

ಸದರಿ ದೂರಿನನ್ವಯ ಮುಖ್ಯ ಅಭಿಯಂತರರು ಹಾಗೂ ಜಂಟಿ ಆಯುಕ್ತರು (ಪೂರ್ವ) ರವರು ಸ್ಥಳ ಪರಿಶೀಲನೆ ಮಾಡಿ ಸ್ಥಳದಲ್ಲಿ ಉದ್ಯಾನವನ ಮತ್ತು ಆಟದ ಮೈದಾನದ ಸುತ್ತ ಅಭಿವೃದ್ಧಿ ಕಾಮಗಾರಿಗಳನ್ನು ಗುರುತಿಸಿ ತುರ್ತಾಗಿ ಅಂದಾಜು ಪಟ್ಟಿ ತಯಾರಿಸಲು ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ರವರಿಗೆ ಆದೇಶಿಸಿರುವ ಮೇರೆಗೆ ಕಾರ್ಯಪಾಲಕ ಅಭಿಯಂತರರು ಕೆಳಕಂಡ ಐದು ಕಾಮಗಾರಿಗಳಿಗೆ ಅಂದಾಜನ್ನು ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಆದ್ದರಿಂದ ಸದರಿ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿ ಸಮಗ್ರ ಅಭಿವೃದ್ಧಿಗೆ ಈ ಕೆಳಕಂಡ ಕಾಮಗಾರಿಗಳಿಗೆ ಅನುದಾನವನ್ನು ಮಂಜೂರು ಮಾಡಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

| Sl. No | Particulars | Estimate Amount |
|---|---|---|
| 1 | Improvements to Jaymahal Park and Providing drain and covering slabs on park surrounding in Ward No. 63 | 4930000.00 |
| 2 | Improvements to Jayamahal Park and Re-Asphalting on Park and Re-Asphalting on Park surrounding in Ward No. 63 | 1335000.00 |
| 3 | Improvements to Jaymahal Play Ground and Providing drain and Cvering slab in Ward No. 63 | 3512000.00 |
| 4 | Improvemnets to Jayamahal Play Ground and Re-Asphalting at Play ground Surroundin in Ward No. 63 | 490000.00 |
| 5 | Improvements to Jayamahal Play ground and Providing retaining wall in Ward No. 63 | 1932000.00 |

***ನಿರ್ಣಯ :- ದಿನಾಂಕ : 22-07-2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011-12ರ ಸಾಲಿನ ಆಯವ್ಯಯದಲ್ಲಿ ತುರ್ತು ಕಾಮಗಾರಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## ***34]. ವಿಷಯದ ಸಂಖ್ಯೆ :-ತೆಆಸ್ಥಾಸ/206/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 24-07-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಪರಿಸರ ಕೋಶ ಕೆರೆಗಳು ರವರು ಹೇರೋಹಳ್ಳಿ ಕೆರೆಯ ವಾರ್ಷಿಕ ನಿರ್ವಹಣೆ ಕಾಮಗಾರಿಗಳಿಗೆ ರೂ.14.50 ಲಕ್ಷಗಳಿಗೆ 2011-12ನೇ ಸಾಲಿನಲ್ಲಿ ಕಾಮಗಾರಿ ಸಂಖ್ಯೆ ನೀಡುವಂತೆ ಕೋರಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆಯವ್ಯಯ ಲೆಕ್ಕ ಶೀರ್ಷಿಕೆ ನಮೂದಿಸಿರುವುದಿಲ್ಲ.

ಆಯವ್ಯಯ ಲೆಕ್ಕ ಶೀರ್ಷಿಕೆ 12 – ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ – ಪಿ.2106 – ಹೇರೋಹಳ್ಳಿ ಕೆರೆ ಅಭಿವೃದ್ಧಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಪರಿಗಣಿಸಬೇಕಾಗಿರುತ್ತದೆ.

2011-12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :- ದಿನಾಂಕ : 24-07-2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## ***35]. ವಿಷಯದ ಸಂಖ್ಯೆ :-ತೆಆಸ್ಥಾಸ/207/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಕ.ಅ./ಕೇಂ.ಕ./ಪಿಆರ್/616/11-12, ದಿನಾಂಕ : 24-07-2011ರಲ್ಲಿ ವಿವರಿಸಿರುವಂತೆ, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ರವರ ಪತ್ರದ ಸಂಖ್ಯೆ:ನಅಇ/22/ಎಂಎನ್‌ಜಿ/ 2011, ದಿನಾಂಕ:17.01.2011. ರಲ್ಲಿ ಆಯುಕ್ತರು ರಾಜ್ಯ ಅಂಗವಿಕಲ ವ್ಯಕ್ತಿಗಳ ಕಛೇರಿ ಇವರ ದಿನಾಂಕ: 16.12.2010ರ ಪತ್ರದ ಪ್ರತಿ ಹಾಗೂ ಸದರಿ ಪತ್ರದಲ್ಲಿ ತಿಳಿಸಿರುವಂತೆ ದಿನಾಂಕ:04.08.2009ರ ಸಭೆಯ ನಡವಳಿಯ ವಿಷಯದ ಸಂಖ್ಯೆ:3ರಲ್ಲಿ ವಿಕಲಚೇತನರಿಗೆ ಮನೆ/ನಿವೇಶನ ಹಂಚಿಕೆಯಲ್ಲಿ ಮೀಸಲಾತಿ ನೀಡುವ ಬಗ್ಗೆ ಕೂಲಂಕುಷವಾಗಿ ನಿಯಮಾನುಸಾರ ಪರಿಶೀಲಿಸಿ, ಸೂಕ್ತ ಕ್ರಮವನ್ನು ಕೈಗೊಳ್ಳಬೇಕೆಂದು ಕೋರಿರುತ್ತಾರೆ.

ಸದರಿಯವರು ತಿಳಿಸಿರುವ ದಿನಾಂಕ:04.08.2009ರ ಸಭೆಯ ನಡವಳಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ವಿಕಲಚೇತನರಿಗೆ ಮನೆ/ನಿವೇಶನ ಹಂಚಿಕೆಯಲ್ಲಿ ಶೇ.5ರಷ್ಟು ಮೀಸಲಾತಿ ಕುರಿತಂತೆ ಪ್ರಸ್ತಾಪವಾಗಿರುತ್ತದೆ.

ತತ್ಸಂಬಂಧವಾಗಿ ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ ಪಾಲಿಕೆ ವ್ಯಾಪ್ತಿಯಲ್ಲಿ ಮನೆ ನಿರ್ಮಾಣ, ನಿವೇಶನ ಹಂಚಿಕೆ ಸಂದರ್ಭದಲ್ಲಿ ಸದರಿ ನಡವಳಿಯಲ್ಲಿ ಪ್ರಸ್ತಾಪಿಸಿರುವಂತೆ ವಿಕಲಚೇತನರಿಗೆ ಶೇ.5ರಷ್ಟು ಮೀಸಲಾತಿ ಕಲ್ಪಿಸುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :– ದಿನಾಂಕ : 24–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.</u>***

## ***<u>36]. ವಿಷಯದ ಸಂಖ್ಯೆ :–ತೆಆಸ್ಥಾಸ/208/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 24–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–38, 73, 129, 130 ಮತ್ತು 198 ರ ಉಧ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಮಾನ್ಯ ಅಧ್ಯಕ್ಷರು ತೋಟಗಾರಿಕೆ ಸ್ಥಾಯಿ ಸಮಿತಿ ರವರು ಸೂಚಿಸಿರುವಂತೆ 2011–12 ನೇ ಸಾಲಿಗೆ ಒಟ್ಟು 11 ಉಧ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಮೊತ್ತ ಒಟ್ಟು ರೂ.204.59 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿ, ಜಾಬ್ ಕೋಡ್ ಪಡೆದು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>–ಮುಂದೂಡಿದೆ–</u>***

## ***<u>37]. ವಿಷಯದ ಸಂಖ್ಯೆ :–ತೆಆಸ್ಥಾಸ/209/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 21–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಪರಿಸರ ಕೋಶ ರವರು, ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ರೂ.195.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl.No. | Name of Works | Amount (Rs.in.lakhs) |
|---|---|---|
| 1 | Comprehensive Development of Kudlu Chikkere (Sr.No.70) | 195.00 |
| | **Total Rs.** | **195.00** |

ಸನ್ಮಾನ್ಯ ಶ್ರೀ ಎ.ನಾರಾಯಣಸ್ವಾಮಿ, ಸಮಾಜ ಕಲ್ಯಾಣ, ಬಂದೀಖಾನೆ ಸಚಿವರು ಹಾಗೂ ಕೋಲಾರ ಜಿಲ್ಲಾ ಉಸ್ತುವಾರಿ ಸಚಿವರು ರವರು ಪತ್ರವನ್ನು ನೀಡಿ ಸದರಿ ಕೆರೆ ಅಬಿವೃದ್ಧಿ ತುರ್ತಾಗಿ ಕೈಗೊಳ್ಳಲು ಸೂಕ್ತ ಕ್ರಮ ವಹಿಸುವಂತೆ ಕೋರಿರುತ್ತಾರೆ. 2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :– ದಿನಾಂಕ : 21–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೆರೆಗಳ ಅಭಿವೃದ್ಧಿಗೆ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>38]. ವಿಷಯದ ಸಂಖ್ಯೆ :–ತೆಆಸ್ಥಾಸ/212/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)39/11–12, ದಿನಾಂಕ : 24–07–2011ರಲ್ಲಿ ವಿವರಿಸಿರುವಂತೆ, ಶ್ರೀ ಶಿವಕುಮಾರ ಹೊಸಮನಿ, ಪ್ರಧಾನ ಕಾರ್ಯದರ್ಶಿ, ಸಮರ್ಪಣ, ಸಮಾಜ ಸ್ಪಂದನಾ ಸಂಘ, ನಂ. 7–ಬಿ, 19ನೇ ಸಿ ಮುಖ್ಯ

ರಸ್ತೆ, 1ನೇ ವಿಭಾಗ, ರಾಜಾಜಿನಗರ, ಬೆಂಗಳೂರು ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ, ತಮ್ಮ ಸಂಸ್ಥೆಯು ಸಮಾಜ ಸ್ಪಂದನೆಯಲ್ಲಿ ತೊಡಗಿದ್ದು, ವಿನೂತನ ಪ್ರಯತ್ನಗಳನ್ನು ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ. ಬೆಂಗಳೂರಿಗೆ ಸಂಚಾರಿ ಕಸದ ಗಾಡಿ ಯೋಜನೆಯನ್ನು ಪರಿಚಯಿಸಿದ ಹೆಗ್ಗಳಿಕೆ ತಮ್ಮದಾಗಿದ್ದು, ಪ್ರತಿ ವರ್ಷ ನಗರದಾದ್ಯಂತ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಸುಮಾರು 2 ಕೋಟಿ ನೋಟ್ ಪುಸ್ತಕದ ಖಾಲಿ ಹಾಳೆಗಳನ್ನು ಸಂಗ್ರಹಿಸಿ; ಬೈಂಡ್ ಮಾಡಿಸಿ ಅರ್ಹ ವಿದ್ಯಾರ್ಥಿಗಳಿಗೆ ಉಚಿತವಾಗಿ ವಿತರಿಸುವ ಪುನರ್ಬಳಕೆ ಯೋಜನೆ ಆರಂಭಿಸಿ ನಿರಂತರವಾಗಿ ನಡೆಸಿಕೊಂಡು ಬರಲಾಗುತ್ತಿದೆಯೆಂದು, ಈ ಎಲ್ಲಾ ಯೋಜನೆಗಳ ಹಿನ್ನೆಲೆಯಲ್ಲಿ ನಾಗರೀಕರನ್ನು ಹೆಚ್ಚು ಪರಿಣಾಮಕಾರಿಯಾಗಿ ಹೇಗೆ ಜಾಗೃತಿಗೊಳಿಸಬೇಕೆಂದು ನಮ್ಮ ಅನುಭವಕ್ಕೆ ಬಂದಿರುತ್ತದೆಂದು ತಿಳಿಸಿರುತ್ತಾರೆ.

ಪ್ಲಾಸ್ಟಿಕ್ ಬಳಕೆ ನಿಯಂತ್ರಣ ಕುರಿತಂತೆ ಪಾಲಿಕೆಯೊಂದಿಗೆ ಕೈಜೋಡಿಸಲು ತಮ್ಮ ಸಂಘವು ಉತ್ಸುಕವಾಗಿದ್ದು, ತಾವು ಗಮನಿಸಿರುವಂತೆ.. ಪ್ಲಾಸ್ಟಿಕ್ ಬಳಕೆಯು ಪುನ: ಎಲ್ಲಾ ಅಂಗಡಿಗಳಲ್ಲಿ ಕಂಡು ಬರುತ್ತಿದ್ದು, ಪ್ಲಾಸ್ಟಿಕ್ ಬಳಕೆಯನ್ನು ಹೇಗೆ ನಿಯಂತ್ರಿಸಬಹುದು ಎಂಬುದನ್ನು ಜನಸಾಮಾನ್ಯರಿಗೆ ತಿಳಿಸುವ ಬಗ್ಗೆ ಕಾರ್ಯಕ್ರಮ ರೂಪಿಸಿದ್ದು, ಬೀದಿ ನಾಟಕಗಳ ಪ್ರದರ್ಶನ, ಹೋಟೆಲ್, ಉದ್ಯಾನವನ, ದೇವಸ್ಥಾನಗಳಿಗೆ ಹೋಗಿ ಅಲ್ಲಿಯೂ ಪ್ರಚಾರ ನಡೆಸುವುದು. ಕಾಗದ, ಬಟ್ಟೆಗಳ ಚೀಲಗಳನ್ನು ಸಿದ್ಧಪಡಿಸಿ ಜನರಿಗೆ ತಲುಪಿಸುವುದು (ಒಂದು ತಿಂಗಳ ಮಟ್ಟಿಗೆ ಉಚಿತವಾಗಿ ತಲುಪಿಸುವುದು–ರಾಜಾಜಿನಗರ 1ನೇ ವಿಭಾಗ ಹಾಗೂ ಸುತ್ತಮುತ್ತಲಿನ ಎಲ್ಲಾ ಮನೆ–ಅಂಗಡಿಗಳಿಗೆ) ಚಲನಚಿತ್ರ ತಾರೆಯರು ಮತ್ತು ಕ್ರಿಕೆಟ್ ಕಲಿಗಳಿಂದ ಸಂದೇಶಗಳನ್ನು ಪಡೆದು; ಅದನ್ನು ಬ್ಯಾನರ್ ಕರಪತ್ರಗಳಲ್ಲಿ ಪ್ರಕಟಿಸುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ಜನಜಾಗೃತಿ ಅಭಿಯಾನಕ್ಕೆ ತಗುಲುವ ವೆಚ್ಚದಲ್ಲಿ ಸ್ವಲ್ಪ ಪಾಲನ್ನು ಪಾಲಿಕೆಯು ಭರಿಸಿದರೆ ಇನ್ನೂ ಹೆಚ್ಚಿನ ಯಶಸ್ಸಿನೊಂದಿಗೆ ಕಾರ್ಯಕ್ರಮವನ್ನು ನಡೆಸಲು ಸಾಧ್ಯವಾಗುತ್ತದೆಂದು ಕೋರಿರುತ್ತಾರೆ.

ಮಾನ್ಯ ಉಪ ಮಹಾಪೌರರು, ಟಿಪ್ಪಣಿ ಬರೆದು ಸಮರ್ಪಣ, ಸಮಾಜ ಸ್ಪಂದನಾ ಸಂಘ ರವರಿಗೆ ಪ್ಲಾಸ್ಟಿಕ್ ಬಳಕೆ ನಿಯಂತ್ರಣದ ಬಗ್ಗೆ ಜನಜಾಗೃತಿಯ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಪಾಲಿಕೆ ವತಿಯಿಂದ ರೂ. 1,15,000/– ಗಳನ್ನು ಮಂಜೂರು ಮಾಡುವ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳಲು ಕೋರಿರುತ್ತಾರೆ.

ಆದರೆ, ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** **ದಿನಾಂಕ 24–07–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಸಂಘಕ್ಕೆ 2011–12ನೇ ಸಾಲಿನ ಆಯವ್ಯಯದಲ್ಲಿ ಸಹಾಯಧನ/ಕೊಡುಗೆಗಳು ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ರೂ.1,00,000/– (ರೂ.ಒಂದು ಲಕ್ಷ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *391. ವಿಷಯದ ಸಂಖ್ಯೆ :–ತೆಆಸ್ಥಾಸ/213/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಅಆ(ಕ/ಆ/ಆ)ಪಿಎಸ್‌ಆರ್(4)27/11–12, ದಿನಾಂಕ : 18–07–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಉದಯ್ ಕುಮಾರ್, ಮಾನ್ಯ ಸದಸ್ಯರು, ವಾರ್ಡ್ ನಂ. 149 (ವರ್ತೂರ್) ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ ದಿನಾಂಕ 29–05–2011 ರಂದು ಆಸ್ಟ್ರೇಲಿಯಾನಲ್ಲಿ ನಡೆಯುತ್ತಿರುವ ಏಷ್ಯಾ ಫೆಸಿಫಿಕ್ ಬಾಡಿ ಬಿಲ್ಡಿಂಗ್ ಚಾಂಪಿಯನ್ ಶಿಫ್ ಸ್ಪರ್ಧೆಗೆ ಭಾರತದ ಪರವಾಗಿ ಶ್ರೀ ಪಿ. ಮುರಳಿ ರವರು ಸ್ಪರ್ಧಿಸುತ್ತಿದ್ದು, ಸದರಿಯವರು ಈ ಹಿಂದೆ ಮುಂಬೈನಲ್ಲಿ ನಡೆದ ರಾಷ್ಟ್ರ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ಭಾರತಕ್ಕೆ ಪ್ರಥಮ ಸ್ಥಾನವನ್ನು ತಂದು ಕೊಟ್ಟಿರುತ್ತಾರೆಂದು ಸದರಿಯವರು ಆಸ್ಟ್ರೇಲಿಯಾಗೆ ಹೋಗಬೇಕಾಗಿರುವುದರಿಂದ ವೆಚ್ಚದ ಬಾಬ್ತು ರೂ. 1,50,000/– ಗಳು ಎಂದು ಅಂದಾಜಿಸಲಾಗಿದ್ದು, ಸದರಿ ಕ್ರೀಡಾಪಟು ಅಧಿಕ ವೆಚ್ಚವನ್ನು ಭರಿಸಲು ಸಾಧ್ಯವಿಲ್ಲದಿರುವುದರಿಂದ ಸದರಿ ಮೊತ್ತವನ್ನು ಮಹಾಪೌರರ ನಿಧಿಯಿಂದ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಮುಂದುವರೆದಂತೆ, ಶ್ರೀ ಮುರುಳಿ ಪಿ, ಕ್ರೀಡಾಪಟು ಮತ್ತೊಮ್ಮೆ ಮನವಿ ಸಲ್ಲಿಸಿ, ಮಾನ್ಯ ಸದಸ್ಯರು ನೀಡಿರುವ ಪತ್ರದಲ್ಲಿ ಆಸ್ಟ್ರೇಲಿಯಾ ಎಂದು ತಪ್ಪಾಗಿ ನಮೂದಿಸಿರುವುದಾಗಿ ತಿಳಿಸಿ, ತಾವು ದೇಹದಾಡ್ಯ ಸ್ಪರ್ಧೆಗೆ ಫಿಲಿಫೆನ್ಸ್‌ಗೆ ತೆರಳಿದ್ದು ಅಗ್ರಸ್ಥಾನದಲ್ಲಿ ವಿಜೇತರಾಗಿರುವುದಾಗಿ ತಿಳಿಸಿರುತ್ತಾರೆ.

ಪಾಲಿಕೆಯಿಂದ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗಸೂಚಿಗಳನ್ವಯ ಸಂಘ ಸಂಸ್ಥೆಗಳಿಗೆ ಮಾತ್ರ ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ.10,000/– ದಿಂದ ಗರಿಷ್ಠ ರೂ.1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಆದರೆ, ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ. ಮತ್ತು ಸದರಿ ಕ್ರೀಡಾ ಸ್ಪರ್ಧೆಯೂ ಈಗಾಗಲೇ ಮುಕ್ತಾಯಗೊಂಡಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 18–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕ್ರೀಡಾಪಟುವಿಗೆ 2011–12 ನೇ ಸಾಲಿನ ಆಯವ್ಯಯದಲ್ಲಿ ಸಹಾಯಧನ/ಕೊಡುಗೆಗಳು ಲೆಕ್ಕಶೀರ್ಷಿಕೆಯಲ್ಲಿ ಒದಗಿಸಿರುವ ಅನದಾನದಲ್ಲಿ ರೂ.25,000/– ಗಳನ್ನು (ಇಪ್ಪತ್ತೈದು ಸಾವಿರ ರೂ.ಗಳನ್ನು) ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***401]. ವಿಷಯದ ಸಂಖ್ಯೆ :–ತೆಆಸ್ಥಾಸ/214/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)40/11–12, ದಿನಾಂಕ : 27–07–2011ರಲ್ಲಿ ವಿವರಿಸಿರುವಂತೆ, ಶ್ರೀ ಹೆಚ್. ಕೋದಂಡ ರಾಮಯ್ಯ, ಉಪಾಧ್ಯಕ್ಷರು, ಮೈಸೂರು ಉದ್ಯಾನ ಕಲಾ ಸಂಘ, ಡಾ|| ಎಂ. ಹೆಚ್. ಮರಿಗೌಡ ಸ್ಮಾರಕ ಭವನ, ಲಾಲ್ ಬಾಗ್, ಬೆಂಗಳೂರು – 560 004. ರವರು ಮನವಿ ಸಲ್ಲಿಸಿ ತಮ್ಮ ಸಂಘವು 1912 ರಿಂದ ಜಗತ್ ಪ್ರಸಿದ್ಧವಾದ ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಆಕರ್ಷಕ ಫಲಪುಷ್ಪ ಪ್ರದರ್ಶನಗಳನ್ನು ಜನವರಿ ಮತ್ತು ಆಗಸ್ಟ್ ಮಾಹೆಗಳಲ್ಲಿ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ ಎಂದು ತಿಳಿಸುತ್ತಾ, ಒಂದು ದಶಕದಿಂದೀಚೆಗೆ ಪ್ರಸಿದ್ಧವಾದ ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಹಲವಾರು ಪ್ರಮುಖ ಐತಿಹಾಸಿಕ ಸ್ಮಾರಕಗಳ ಪ್ರತಿ ರೂಪಗಳನ್ನು ಸಹಸ್ರಾರು ಹೂಗಳಿಂದ ಆಕರ್ಷಕವಾಗಿ ಅಲಂಕರಿಸಿ ಪ್ರವಾಸಿಗರು ಮತ್ತು ಬೆಂಗಳೂರು ನಾಗರೀಕರಿಗೆ ಪ್ರದರ್ಶಿಸಲಾಗಿದ್ದು, ಈಗಾಗಲೇ ತಾಜಮಹಲ್, ಎಸ್.ಎಲ್.ವಿ. ಉಪಗ್ರಹ, ಕಾವೇರಿ ಪ್ರತಿಮೆ, ಕುತುಬ್ ಮಿನಾರ್, ಹಂಪಿ ರಥ, ಮೈಸೂರಿನ ಆನೆ ಅಂಬಾರಿ, ಆನೆಗಳ ಹಿಂಡು, ಜಲಕನ್ಯೆ, ಡೈನಾಸಾರ್‌ಸ್, ನಾಡ ಹಬ್ಬಗಳನ್ನು ಬಿಂಬಿಸುವ ಪ್ರದರ್ಶನ ಮೆಟ್ರೋ ರೈಲು, ಇಂಡಿಯಾ ಗೇಟ್ ಗಳ ಪ್ರತಿ ರೂಪಗಳನ್ನು ಪ್ರದರ್ಶಿಸಿ ಬೆಂಗಳೂರು ಉದ್ಯಾನ ನಗರಿ ಎಂಬುವ ಹೆಸರಿಗೆ ಈ ಲಾಲ್‌ಬಾಗ್ ಸಸ್ಯ ತೋಟದಲ್ಲಿ ಚಾರಿತ್ರಿಕವಾಗಿ ಫಲಪುಷ್ಪ ಪ್ರದರ್ಶನಗಳನ್ನು ನಡೆಸುತ್ತಾ ಲಕ್ಷಾಂತರ ಪ್ರೇಕ್ಷಕರಿಗೆ ಸಂತೋಷವನ್ನುಂಟು ಮಾಡಿರುತ್ತದೆಂದು ತಿಳಿಸಿ, ದಿನಾಂಕ 19–01–2011 ರಿಂದ 26–01–2011 ರ ವರೆಗೆ ನಡೆದ ಗಣರಾಜ್ಯೋತ್ಸವ ಫಲಪುಷ್ಪ ಪ್ರದರ್ಶನದ ಸಮಯದಲ್ಲಿ ಲಾಲ್‌ಬಾಗಿನ ಸುಪ್ರಸಿದ್ಧ ಗಾಜಿನ ಮನೆಯಲ್ಲಿ ಕೆಂಪೇಗೌಡ ಗೋಪುರ ಹಾಗೂ ಮೆಟ್ರೋ ರೈಲು ಮಾದರಿಗಳ ಪ್ರತಿರೂಪವನ್ನು ಆಕರ್ಷಕ ಹೂಗಳಿಂದ 16.00 ಲಕ್ಷ ರೂ.ಗಳ ವೆಚ್ಚದಲ್ಲಿ ಅಲಂಕರಿಸಿ ಮೈಸೂರು ಉದ್ಯಾನ ಕಲಾ ಸಂಘದ ವತಿಯಿಂದ ಸಾರ್ವಜನಿಕರು ಮತ್ತು ವೀಕ್ಷಕರಿಗಾಗಿ ಈ ವಿಶೇಷ ಪ್ರದರ್ಶನವನ್ನು ಹಮ್ಮಿ ಕೊಳ್ಳಲಾಗಿತ್ತೆಂದು ತಿಳಿಸಿರುತ್ತಾರೆ.

ಪ್ರಸ್ತುತ ಸಾಲಿನಲ್ಲಿ ದಿನಾಂಕ 05–08–2011 ರಿಂದ 15–08–2011ರ ವರೆಗೆ ನಡೆಯಲಿರುವ ಸ್ವಾತಂತ್ರೋತ್ಸವ ಫಲಪುಷ್ಪ ಪ್ರದರ್ಶನವನ್ನು ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಏರ್ಪಡಿಸಲಾಗಿದ್ದು, ಇದಕ್ಕೆ ಸಂಬಂಧ ಪಟ್ಟಂತೆ ರಾಷ್ಟ್ರ ಹಾಗೂ ರಾಜ್ಯದ ಪ್ರಸಿದ್ಧವಾಗಿರುವ ನವದೆಹಲಿಯ ಲೋಟಸ್ ಟೆಂಪಲ್‌ನ, ಪ್ರತಿರೂಪ ಇಲ್ಲವೇ ಅಶೋಕ ಪಿಲ್ಲರ್ ಇವುಗಳಲ್ಲಿ ಯಾವುದಾದರೂ ಒಂದು ಪ್ರಮುಖ ಐತಿಹಾಸಿಕ ಸ್ಮಾರಕದ ಪ್ರತಿರೂಪವನ್ನು ಸಹಾಸ್ರಾರು ಹೂಗಳಿಂದ ಅಲಂಕರಿಸಿ ಪ್ರದರ್ಶಿಸಲು ಉದ್ದೇಶಿಸಲಾಗಿದ್ದು, ಈ ಪ್ರದರ್ಶನಕ್ಕೆ ಸುಮಾರು 25.00 ಲಕ್ಷ ರೂ.ಗಳ ವೆಚ್ಚ ತಗಲುವ ಅಂದಾಜಿದೆ. ಈ ಹಿನ್ನೆಲೆಯಲ್ಲಿ ತಮ್ಮ ವತಿಯಿಂದ ಇಂತಹ ಪ್ರತಿ ರೂಪವನ್ನು ವಿಶೇಷ ಪುಷ್ಪಗಳಿಂದ ಅಲಂಕರಿಸಲು ಅನುವಾಗುವಂತೆ ತಗಲುವ ವೆಚ್ಚವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಪ್ರಾಯೋಜನೆ ನೀಡಿ ಪ್ರದರ್ಶನದ ಯಶಸ್ವಿಗೆ ಸಹಕರಿಸಲು ಹಾಗೂ ಲಕ್ಷಾಂತರ ವೀಕ್ಷಕರಿಗೆ ಪ್ರದರ್ಶನದ ವೀಕ್ಷಣೆಗೆ ಅನುವು ಮಾಡಿ ಕೊಡಲು ಕೋರುತ್ತಾ, ಇನ್ನು ಮುಂದೆಯೂ ಸಹ ಪ್ರತಿ ಜನವರಿ ಮತ್ತು

ಆಗಸ್ಟ್ ಮಾಹೆಗಳಲ್ಲಿ ಜರುಗುವ ಫಲಪುಷ್ಪ ಪ್ರದರ್ಶನಗಳಿಗೆ ನಿರಂತರವಾಗಿ ಧನ ಸಹಾಯ ನೀಡುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾರ್ಯಕಾರಿ ಸಮಿತಿಗೆ ಶಿಫಾರಸ್ಸು ಮಾಡುವಂತೆ ಕೋರಿರುತ್ತಾರೆ.

ಸದರಿ ಸಂಸ್ಥೆಗೆ 2007–08 ನೇ ಸಾಲಿಗೆ ರೂ. 1.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗಿರುತ್ತದೆ.. ಪಾಲಿಕೆಯ ಕೊಡುಗೆ ಮತ್ತು ಸಹಾಯಧನ ಮಂಜೂರು ಮಾಡುವ ಮಾರ್ಗ ಸೂಚಿಗಳನ್ವಯ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನವಿರುತ್ತದೆ.

ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಐದು ವರ್ಷಗಳಿಗೊಮ್ಮೆ ಅನುದಾನವನ್ನು ಮಂಜೂರು ಮಾಡುವ ಮಾರ್ಗಸೂಚಿ ನಿಯಮವನ್ನು ಸಡಿಲಗೊಳಿಸಿ ರೂ. 5.00 ಲಕ್ಷಗಳ ಸಹಾಯ ಧನವನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 27–07–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## ***41]. ವಿಷಯದ ಸಂಖ್ಯೆ :–ತೆಆಸ್ಥಾಸ/215/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)38/11–12, ದಿನಾಂಕ : 27–07–2011ರಲ್ಲಿ ವಿವರಿಸಿರುವಂತೆ, ಮ್ಯಾನೇಜಿಂಗ್ ಟ್ರಸ್ಟೀ, ಬಿ.ಕೆ. ಮರಿಯಪ್ಪ ಧರ್ಮಸಂಸ್ಥೆ, 3ನೇ ಮುಖ್ಯ ರಸ್ತೆ, ಚಾಮರಾಜಪೇಟೆ, (ಶ್ರೀ ರಾಮೇಶ್ವರ ಸ್ವಾಮಿ ದೇವಸ್ಥಾನ ಎದುರು) ಬೆಂಗಳೂರು – 560 018. ರವರು ಮನವಿ ಸಲ್ಲಿಸಿ, ತಮ್ಮ ಧರ್ಮ ಸಂಸ್ಥೆಯ ಆಡಳಿತದಲ್ಲಿರುವ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಎರಡೂ ವಿದ್ಯಾರ್ಥಿ ನಿಲಯಗಳಲ್ಲಿ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಸುಮಾರು ನೂರಕ್ಕಿಂತಲೂ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳು ಪ್ರತಿ ವರ್ಷವೂ ಉಚಿತ ವಸತಿ ಮತ್ತು ಭೋಜನದ ಸೌಕರ್ಯವನ್ನು ಪಡೆಯುತ್ತಿದ್ದಾರೆ. ಪ್ರತಿ ವರ್ಷವೂ ಜೂನ್ 16ನೇ ತಾರೀಖಿನಿಂದ ಜೂನ್ 30 ರವರೆಗೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಅರ್ಜಿಗಳನ್ನು ವಿತರಿಸಲಾಗುವುದು. ಅನಂತರ ಕೆಲವೇ ವಾರಗಳಲ್ಲಿ ವಿದ್ಯಾರ್ಥಿಗಳ ಸಂದರ್ಶನವು ಅವರ ತಂದೆ/ತಾಯಿ/ಪೋಷಕರೊಡನೆ ನಡೆದು ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾರ್ಜನೆ ಮಾಡಲು ಅವಕಾಶ ದೊರಕಿಸಿಕೊಡುತ್ತಿದ್ದು, ದಿನನಿತ್ಯ ಎರಡು ವೇಳೆ ಊಟವನ್ನು ಕೊಡಲಾಗುತ್ತದೆ. ಬೆಳಿಗ್ಗೆ 6 ಗಂಟೆಯ ಪ್ರಾರ್ಥನೆಯ ನಂತರ 7.00 ಗಂಟೆಯಿಂದ 8.00 ಗಂಟೆಯವರೆಗೆ ಮೊದಲನೇ ತಂಡದ ವಿದ್ಯಾರ್ಥಿಗಳಿಗೆ ಮತ್ತು 8.00 ಗಂಟೆಯಿಂದ 8.30 ರವರೆಗೆ ದ್ವಿತೀಯ ತಂಡದ ವಿದ್ಯಾರ್ಥಿಗಳಿಗೆ ಭೋಜನವನ್ನು ವ್ಯವಸ್ಥೆ ಮಾಡಲಾಗಿದೆ. ಸಂಜೆ 8.30 ಘಂಟೆಗೆ ಪ್ರಾರ್ಥನೆಯ ನಂತರ ಎಲ್ಲರೂ ಒಟ್ಟಿಗೇ ಕುಳಿತು ಭೋಜನ ಮಾಡುವರು. ರಾತ್ರಿ ಊಟದಲ್ಲಿ ಅನ್ನ, ಹುಳಿ ಜೊತೆಯಲ್ಲಿ ಒಂದು ದಿನ ಚಪಾತಿ ಪಲ್ಯ ಮತ್ತೊಂದು ದಿನ ರಾಗಿ ಮುದ್ದೆಯನ್ನು ಕೊಡಲಾಗುತ್ತಿದೆ. ರಜಾ ದಿನಗಳಂದು ಬೆಳಿಗ್ಗೆ ಉಪಹಾರ ಕೊಡಲಾಗುವುದು. ಹಬ್ಬ, ಹರಿದಿನಗಳು, ರಾಷ್ಟ್ರೀಯ ದಿನಗಳು ಹಾಗೂ ಇತರೇ ವಿಶೇಷ ಸಂದರ್ಭಗಳಲ್ಲಿ ವಿಶೇಷ ರೀತಿಯ ಭೋಜನವಿರುತ್ತದೆ. ಬಿಸಿ ನೀರಿನ ಸ್ನಾನದ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಉಚಿತ ರೋಗ ತಪಾಸಣೆ ಮತ್ತು ಔಷದೋಪಚಾರಗಳ ವ್ಯವಸ್ಥೆಯನ್ನು ಮಾಡಲಾಗಿದೆ. ನಮ್ಮ ವಿದ್ಯಾರ್ಥಿ ನಿಲಯದಲ್ಲಿ ಉತ್ತಮವಾದ ಪುಸ್ತಕ ಭಂಡಾರವಿದ್ದು, ವಿದ್ಯಾರ್ಥಿಗಳ ಅವಶ್ಯಕತೆಗಳ ರೀತ್ಯ ಹೊಸ ಪುಸ್ತಕಗಳನ್ನು ಖರೀದಿಸಿ ಪುಸ್ತಕ ಭಂಡಾರಕ್ಕೆ ಸೇರ್ಪಡಿಸಲಾಗುತ್ತದೆ. ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಸಹ ವಿತರಿಸಲಾಗುತ್ತಿದ್ದು, ತಮ್ಮ ನಿಲಯದ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವು ಉತ್ತಮ ಮಟ್ಟದ್ದಾಗಿರುತ್ತದೆ. ಅನೇಕ ತಾಂತ್ರಿಕ ವಿದ್ಯಾರ್ಥಿಗಳು ಕ್ಯಾಂಪಸ್ ಸೆಲೆಕ್ಷನ್‌ನಲ್ಲಿಯೇ ಅದರಲ್ಲೂ ವಿದ್ಯಾರ್ಥಿ ದಿಸೆಯಲ್ಲಿಯೇ ಆಯ್ಕೆಯಾಗಿ ಮುಂದಿನ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುತ್ತಿದ್ದಾರೆಂದು ಹೇಳಲು ಸಂತೋಷವಾಗುತ್ತಿದೆ. ನಮ್ಮ ನಿಲಯದ ವಿದ್ಯಾರ್ಥಿಗಳ ಸಂಘವಾದ "ಅಶೋಕ ಸಂಘದ ವತಿಯಿಂದ ಪ್ರತಿ ಸಾಲಿನಲ್ಲಿ ಉದ್ಘಾಟನಾ ಸಮಾರಂಭ, ಸ್ವಾತಂತ್ರೋತ್ಸವ, ಗಾಂಧಿ ಜಯಂತಿ, ಕನ್ನಡ ರಾಜ್ಯೋತ್ಸವ, ಅಂತರ ವಿದ್ಯಾರ್ಥಿಗಳ ಚರ್ಚಾ ಸ್ಪರ್ಧೆ ಸಂಗೀತದ ಸ್ಪರ್ಧೆ, ರಸಪ್ರಶ್ನೆ ಸ್ಪರ್ಧೆ, ಗಣ್ಯರಿಂದ ವ್ಯಕ್ತಿತ್ವ ವಿಕಸನಾ ಭಾಷಣಗಳು, ಗಣರಾಜ್ಯೋತ್ಸವ, ನಿಲಯದ ವಾರ್ಷಿಕೋತ್ಸವ, ಮಹಾದಾನಿ ಮರಿಯಪ್ಪನವರ ಜಯಂತ್ಯುತ್ಸವ" ಇತ್ಯಾದಿಗಳನ್ನು ಪ್ರತಿ ವರ್ಷವೂ ತಪ್ಪದೇ ಏರ್ಪಡಿಸಲಾಗುತ್ತದೆಂದು ತಿಳಿಸಿರುತ್ತಾರೆ.

ವಿದ್ಯಾರ್ಥಿಗಳು ಹೆಚ್ಚಿನ ಮುತುವರ್ಜಿಯಿಂದ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅಭಿವೃದ್ಧಿ ಹೊಂದುತ್ತಿದ್ದಾರೆ. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಮತ್ತಷ್ಟು ಉತ್ತೇಜನ ನೀಡಲು ಬಹುಮಾನಗಳನ್ನು ವಿತರಿಸಲಾಗುವುದು.

ನಂತರ ವಿದ್ಯಾರ್ಥಿ ನಿಲಯಗಳ ವಿವಿಧ ಸಾಹಿತ್ಯಕ ಹಾಗೂ ಕ್ರೀಡಾ ಸ್ಪರ್ಧೆಗಳನ್ನು ಹಮ್ಮಿಕೊಂಡು ಭವ್ಯವಾದ ಪರ್ಯಾಯ ಪಾರಿತೋಷಕಗಳನ್ನು ವಿತರಿಸಲಾಗುತ್ತಿದೆ. ನಮ್ಮ ಚಟುವಟಿಕೆಗಳಲ್ಲಿ ನಮ್ಮ ನಿಲಯದ ಕಿರಿಯ ವಿದ್ಯಾರ್ಥಿಗಳ ಸಂಘದ ಪಾತ್ರವು ಬಹಳ ಮುಖ್ಯವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದೆಂದು ದಿನಸಿ ಧಾನ್ಯಗಳ ಈಗಿನ ಬೆಲೆಗಳನ್ನು ಕಡ್ಡಾಯ ಕಂದಾಯ ವಿದ್ಯುತ್ ಮತ್ತು ನೀರಿನ ಬಿಲ್ಸ್ ಇತ್ಯಾದಿಗಳನ್ನು ಗಣನೆಗೆ ತೆಗೆದುಕೊಂಡು ಹೇಳುವುದಾದರೆ ಒಬ್ಬ ವಿದ್ಯಾರ್ಥಿಗೆ ಪ್ರತಿ ತಿಂಗಳು ಸುಮಾರು 1500/– ರೂ.ಗಳವರೆಗೆ ಖರ್ಚಾಗುವುದು. ಪ್ರಸ್ತುತ ಸೆಮಿಸ್ಟರ್ ಸಿಸ್ಟಂ ಪದ್ಧತಿಯ ಪರೀಕ್ಷೆಗಳಿರುವುದರಿಂದ ಹಾಸ್ಟೆಲ್‌ಗಳನ್ನು ವಿರಾಮವಿಲ್ಲದೆ ವರ್ಷವೆಲ್ಲಾ ನಡೆಸಲಾಗುವುದು. ನಮ್ಮ ಧರ್ಮಸಂಸ್ಥೆಗಿರುವ ಅಲ್ಪ ಆದಾಯವನ್ನು ಗಮನಿಸಿದಾಗ ನಾವು ಸುಮಾರು 100 ವಿದ್ಯಾರ್ಥಿಗಳನ್ನು ಸುಧಾರಿಸುವುದೂ ಸಹ ಕಷ್ಟದ ಸಂಗತಿಯೆಂದು ತಮ್ಮ ಕಾರ್ಯ ಚಟುವಟಿಕೆಗಳನ್ನು ಗಮನಿಸಿ ನಮ್ಮ ಧರ್ಮಸಂಸ್ಥೆಗೆ 10/04/2011 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿಷ್ಠಿತ ಕೆಂಪೇಗೌಡ ಪ್ರಶಸ್ತಿಯನ್ನು ನೀಡಿದೆಯೆಂದು ತಿಳಿಸಲು ಸಂತೋಷವಾಗುತ್ತೆ ತನ್ನಿಮಿತ್ತ ನಮ್ಮ ಧರ್ಮಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಎರಡೂ ವಿದ್ಯಾರ್ಥಿ ನಿಲಯಗಳನ್ನು ವ್ಯವಸ್ಥಿತ ರೀತಿಯಲ್ಲಿ ನಡೆಸಲು ಅನುಕೂಲವಾಗುವಂತೆ ಈ ಸಾಲಿನಿಂದ ಪ್ರತಿವರ್ಷವೂ 10 ಲಕ್ಷ ರೂ.ಗಳ ಅನುದಾನವನ್ನು ಕೊಡಬೇಕೆಂದು ಕೋರಿರುತ್ತಾರೆ.

ಸದರಿ ಸಂಸ್ಥೆಗೆ 2010–11 ನೇ ಸಾಲಿನಲ್ಲಿ ಪಾಲಿಕೆಯಿಂದ ರೂ. 1.00 ಲಕ್ಷ ರೂಪಾಯಿಗಳ ಅನುದಾನದ ಮಂಜೂರಾಗಿರುತ್ತದೆ. ಪಾಲಿಕೆಯ ಕೊಡುಗೆ ಮತ್ತು ಸಹಾಯಧನ ಮಂಜೂರು ಮಾಡುವ ಮಾರ್ಗ ಸೂಚಿಗಳನ್ವಯ ಐದು ವರ್ಷಗಳಿಗೊಮ್ಮೆ ಮಾತ್ರ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನವಿರುತ್ತದೆ.

ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 27–07–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸಂಸ್ಥೆಗೆ 2011–12ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***42]. ವಿಷಯದ ಸಂಖ್ಯೆ :–ತೆಆಸ್ಥಾಸ/216/2011–12***

ಆಯುಕ್ತರ ಟಿಪ್ಪಣಿ ದಿನಾಂಕ ಃ 27–07–2011ರಲ್ಲಿ ವಿವರಿಸಿರುವಂತೆ, 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಲು ಪೂಜ್ಯ ಮಹಾಪೌರರು, ಮಾನ್ಯ ಆಡಳಿತ ಪಕ್ಷದ ನಾಯಕರು, ಮಾನ್ಯ ವಿರೋದ ಪಕ್ಷದ ಉಪ ನಾಯಕರು, ಹಾಗೂ ಮಾನ್ಯ ಸದಸ್ಯರು ಕೋರಿರುತ್ತಾರೆ, ವಿವರ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಅನುದಾನ ಒದಗಿಸಲು ಕೋರಿ ಪತ್ರ ನೀಡಿರುವವರು | ಅನುದಾನ ಒದಗಿಸಲು ಕೋರಿರುವ ಉದ್ದೇಶ | ಮೊತ್ತ ರೂ. (ಲಕ್ಷಗಳಲ್ಲಿ) |
|---|---|---|---|
| 1. | ಶ್ರೀಮತಿ. ಶಾರದಮ್ಮ, ಪೂಜ್ಯ ಮಹಾಪೌರರು. | ನಗರಪಾಲಿಕೆ ಪೂರ್ವ ವಲಯದಲ್ಲಿ ನಗರ ಕೇಂದ್ರ ಗ್ರಂಥಾಲಯ ಕಟ್ಟಡ ನಿರ್ಮಿಸಲು ರೂ.333.00 ಲಕ್ಷಗಳ ಅಂದಾಜು ತಯಾರಿಸಿದ್ದು, ಆಯವ್ಯಯದಲ್ಲಿ ಅನುದಾನ ಒದಗಿಸುವ ಬಗ್ಗೆ | 333.00 |
| 2. | ಶ್ರೀ. ಬಿ.ಆರ್. ನಂಜುಂಡಪ್ಪ, ಡಿ.ಎಂ.ಇ, ಮಾನ್ಯ ಆಡಳಿತ ಪಕ್ಷದ ನಾಯಕರು. | ಜೆ.ಪಿ. ಪಾರ್ಕ ವಾರ್ಡ್ ಸಂಖ್ಯೆ 17ರ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡುವ ಬಗ್ಗೆ. ಒಟ್ಟು 10 ಕಾಮಗರಿಗಳು | 199.85 |
| 3. | ಶ್ರೀಮಹಮದ್ ರಿಜ್ವಾನ್ ನವಾಬ್, ಮಾನ್ಯ ವಿರೋದ ಪಕ್ಷದ ಉಪನಾಯಕರು. | ವಾರ್ಡ್ ಅಭಿವೃದ್ಧಿಗಾಗಿ 57 ಕಾಮಗಾರಿಗಳನ್ನು ಕೈಗೊಳ್ಳಲು 1000–00 ಲಕ್ಷಗಳ ವಿಶೇಷ ಅನುದಾನ ನೀಡುವ ಬಗ್ಗೆ | 1000.00 |
| 4. | ಶ್ರೀಮಹಮದ್ ರಿಜ್ವಾನ್ ನವಾಬ್, | ಜಯದೇವ ಆಸ್ಪತ್ರೆ ಹತ್ತಿರದ ಮೇಲು ಸೇತುವೆ ವರೆಗಿನ | 180.00 |

| | | | |
|---|---|---|---|
| | ಮಾನ್ಯ ವಿರೋದ ಪಕ್ಷದ ಉಪನಾಯಕರು. | ಪಾದಚಾರಿ ರಸ್ತೆ & ರಸ್ತೆ ಬದಿ ಮಳೆ ನೀರಿನ ಚರಂಡಿ ನಿರ್ಮಿಸಲು/ ಅಭಿವೃದ್ಧಿ ಪಡಿಸಲು ವಿಶೇಷ ಅನುದಾನ ಒದಗಿಸುವ ಬಗ್ಗೆ | |
| 5. | ಶ್ರೀ ಮೊಹಮದ್ ರಿಜ್ವಾನ್ ನವಾಬ್, ಮಾನ್ಯ ವಿರೋದ ಪಕ್ಷದ ಉಪನಾಯಕರು. | ವಾರ್ಡ್ ನಂ. 171 ರ ವ್ಯಾಪ್ತಿಯ ಪ್ರದೇಶದ ಸಾರ್ವಜನಿಕ ಅಭಿವೃದ್ಧಿ ಕಾರ್ಯ ಕೈಗೊಳ್ಳಲು 2011-12 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸುವ ಬಗ್ಗೆ 4 ಕಾಮಗಾರಿಗಳು. | 800.00 |
| 6. | ಶ್ರೀ ಮೊಹಮದ್ ರಿಜ್ವಾನ್ ನವಾಬ್, ಮಾನ್ಯ ವಿರೋದ ಪಕ್ಷದ ಉಪನಾಯಕರು. | ಜಯದೇವ ಆಸ್ಪತ್ರೆ ಹತ್ತಿರದ ಮೇಲು ಸೇತುವೆಯಿಂದ Sagar Automobiles ವರೆಗಿನ ಪಾದಚಾರಿ ರಸ್ತೆ/ ರಸ್ತೆ ಬದಿ ಮಳೆ ನೀರಿನ ಚರಂಡಿಗಳನ್ನು ನಿರ್ಮಿಸುವುದು ಅಭಿವೃದ್ಧಿ ಪಡಿಸುವುದು. | 200.00 |
| 7. | ಶ್ರೀಮತಿ ಇಂದಿರಾ, ಮಾನ್ಯ ಸದಸ್ಯರು ವಾರ್ಡ್ ನಂ.7. | ವಾರ್ಡ್ ನಂ.7 ಈ ಹಿಂದೆ CMC ಮತ್ತು ಗ್ರಾಮ ಪಂಚಾಯಿತಿ ಪ್ರದೇಶವಾಗಿದ್ದು ಸದರಿ ವಾರ್ಡ್ ಅನ್ನು ಹಿಂದುಳಿದ ವಾರ್ಡ್ ಎಂದು ಪರಿಗಣಿಸಿ ವಿಶೇಷ ಅನುದಾನ ಒದಗಿಸುವ ಬಗ್ಗೆ. | ಮೊತ್ತ ನಮೂದಿಸಿಲ್ಲ |
| 8. | ಶ್ರೀ ಎನ್. ಗೋವಿಂದರಾಜು, ಮಾನ್ಯ ಸದಸ್ಯರು ವಾರ್ಡ್ ನಂ.46. | ಜೆ.ಸಿ.ನಗರ ವಾರ್ಡ್ 46ರ ವ್ಯಾಪ್ತಿಯಲ್ಲಿ ಹೆಬ್ಬಾಳ ವ್ಯಾಲಿ ಅಭಿವೃದ್ಧಿ ಪಡಿಸಲು ಅನುದಾನ ಒಗದಿಸುವ ಬಗ್ಗೆ | ಮೊತ್ತ ನಮೂದಿಸಿಲ್ಲ |
| 9. | ಶ್ರೀಮತಿ. ವೀಣಾ ನಾಗರಾಜ್, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ನಂ.198. | ವಾರ್ಡ್ ನಂ.198 ಹೆಮ್ಮಿಗೆಪುರ ಪ್ರದೇಶದಲ್ಲಿರುವ ಉದ್ಯಾನವನಗಳ ಅಭಿವೃದ್ಧಿಗೆ ಅನುದಾನ ಒದಗಿಸುವ ಬಗ್ಗೆ, ಒಟ್ಟು 8 ಉದ್ಯಾನವನಗಳು | ಮೊತ್ತ ನಮೂದಿಸಿಲ್ಲ |
| 10. | ಶ್ರೀ ಎನ್. ಗೋವಿಂದರಾಜು, ಮಾನ್ಯ ಸದಸ್ಯರು ವಾರ್ಡ್ ನಂ.46 ಸದಸ್ಯರು, ಮಾರುಕಟ್ಟೆ ಸ್ಥಾಯಿ ಸಮಿತಿ. | ಜೆ.ಸಿ.ನಗರ ವಾರ್ಡ್ ನಂ.46ರ ಪ್ರದೇಶದ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸುವ ಬಗ್ಗೆ | 500.00 |
| 11. | ಶ್ರೀಮತಿ ದೇವಿಕಾ ರಾಣಿ, ಮಾನ್ಯ ಸದಸ್ಯರು ವಾರ್ಡ್ ನಂ. 61. | ವಾರ್ಡ್ ನಂ. 61ರ ಪ್ರದೇಶದ ಪ್ಯಾಟರಿ ಟೌನ್ ಆಟದ ಮೈದಾನ ಅಭಿವೃದ್ಧಿ ಕಾರ್ಯ ಕೈಗೊಳ್ಳಲು 2011-12 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿಡುವ ಬಗ್ಗೆ | ಮೊತ್ತ ನಮೂದಿಸಿಲ್ಲ |

ಮೇಲ್ಕಂಡ ಕೊರಿಕೆಗಳ ಬಗ್ಗೆ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :- ದಿನಾಂಕ : 27-07-2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಸಿರುವ ಕಾಮಗಾರಿಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ವಾರ್ಡುಗಳಿಗೆ ಒದಗಿಸಿರುವ ಅನುದಾನದ ಮಿತಿಯೊಳಗೆ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

***431. ವಿಷಯದ ಸಂಖ್ಯೆ :-ತೆಆಸ್ಥಾಸ/217/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 29-07-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ ರವರು ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ರೂ.194.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಪ್ರಧಾನ ಅಭಿಯಂತರರ ಮೂಲಕ ಸಲ್ಲಿಸಿರುತ್ತಾರೆ.

| Sl.No. | Name of Works | Amount (Rs.in.lakhs) |
|---|---|---|
| 1 | Remodelling SWD from Malleshwarm 5$^{th}$ Cross to link road by | 98.00 |

| | | |
|---|---|---|
| | Providing bed treatment and Jacketting in V.Valley V.100 (Ch.1100 to 1480m) | |
| 2 | Remodelling SWD from Malleshwarm 8th Cross to 5th Cross by Providing bed treatment and Jacketting in V.Valley V.100 (Ch.800 to 1135m) | 96.00 |
| | Total Rs. | 194.00 |

ಸದರಿ ಕಾಮಗಾರಿಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ, ಲೆಕ್ಕ ಶೀರ್ಷಿಕೆ 21 – ಮಳೆ ನೀರಿನ ಚರಂಡಿಗಳ ಕಾಮಗಾರಿಗಳು – ಪಿ.1579 – ಮಳೆ ನೀರಿನ ಚರಂಡಿಗಳ ಹೊದಿಕೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನ ಒದಗಿಸಿಕೊಳ್ಳಬೇಕಾಗಿರುತ್ತದೆ.

ಆದ್ದರಿಂದ 2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 29–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಮಳೆ ನೀರಿನ ಚರಂಡಿ ಕಾಮಗಾರಿಗಳ ಲೆಕ್ಕಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.***

## ***441]. ವಿಷಯದ ಸಂಖ್ಯೆ :–ತೆಆಸ್ಥಾಸ/218/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 27–07–2011ರಲ್ಲಿ ವಿವರಿಸಿರುವಂತೆ, ದಿನಾಂಕ : 22.06.2011 ರಂದು ವಾರ್ಡ್ ಸಂಖ್ಯೆ : 160ರ ಸದಸ್ಯರು ಹಾಗೂ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀ. ಜಿ. ಹೆಚ್. ರಾಮಚಂದ್ರ ರವರು ಪತ್ರ ನೀಡಿ, ಮೈಸೂರು ರಸ್ತೆಯಿಂದ ಹೊರವರ್ತುಲ ರಸ್ತೆಗೆ ಪಂತರಪಾಳ್ಯ ಮುಖಾಂತರ ಸಂಪರ್ಕ ರಸ್ತೆ ನಿರ್ಮಿಸುವ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿರಿಸುವಂತೆ ಕೋರಿರುತ್ತಾರೆ.

ಸದರಿ ಕಾಮಗಾರಿಯ ಅನುಷ್ಠಾನದ ಕುರಿತು ಸಂಬಂಧಪಟ್ಟ ಅಭಿಯಂತರರುಗಳು ಸ್ಥಳ ಪರಿಶೀಲಿಸಿ ಕೆಳಕಂಡಂತೆ ವರದಿ ಸಲ್ಲಿಸಿರುತ್ತಾರೆ.

- ಸದರಿ ರಸ್ತೆಯು ತುಂಬಾ ಕಿರಿದಾಗಿದ್ದು, ಮೈಸೂರು ರಸ್ತೆ ಹಾಗೂ ನೈಸ್ ರಸ್ತೆ/ರಿಂಗ್ ರಸ್ತೆಯನ್ನು ಸಂಪರ್ಕಿಸುವ ಪ್ರಮುಖ ರಸ್ತೆಯಾಗಿರುತ್ತದೆ.
- ಮೈಸೂರು ರಸ್ತೆಯಲ್ಲಿ ಬೆಂಗಳೂರು ನಗರದ ಕಡೆ ಸಂಚರಿಸುವ ವಾಹನಗಳು ಬಲಬಾಗಕ್ಕೆ ತಿರುಗಿ ರಿಂಗ್ ರಸ್ತೆ ಮುಖಾಂತರ ಬೆಂಗಳೂರು ದಕ್ಷಿಣ ಭಾಗಕ್ಕೆ ಹೋಗುವ ವಾಹನಗಳು, ಇದರ ಬದಲಿಗೆ ಸದರಿ ರಸ್ತೆಯಲ್ಲಿ ಸಂಚರಿಸಬಹುದಾಗಿದ್ದು, ಮೈಸೂರು ರಸ್ತೆ ಹಾಗೂ ರಿಂಗ್ ರಸ್ತೆಗೆ ವಾಹನಗಳ ಒತ್ತಡವನ್ನು ಕಡಿಮೆಗೊಳಿಸಬಹುದಾಗಿರುತ್ತದೆ.
- ಸದರಿ ರಸ್ತೆಯು ತುಂಬಾ ಕಿರಿದಾಗಿದ್ದು ಹಾಲಿ 6 ರಿಂದ 7ಮೀ ನಷ್ಟು (ROW) ಅಗಲವಿರುತ್ತದೆ.
- ಸದರಿ ರಸ್ತೆಯು ಪರಿಷ್ಕೃತ ಮಹಾನಕ್ಷೆ 2015 ರಲ್ಲಿ 18.00 ಮೀ ಅಗಲೀಕರಣಗೊಳಿಸಬೇಕಾದ ಬಗ್ಗೆ ಪ್ರಸ್ತಾಪವಿರುತ್ತದೆ.
- ಸದರಿ ರಸ್ತೆಯನ್ನು ಮೈಸೂರು ರಸ್ತೆಯಿಂದ ದೊಡ್ಡಮೋರಿವರೆಗೆ ಅಗಲೀಕರಣಗೊಳಿಸಲು ಉದ್ದೇಶಿಸಿರುವ 900.00 ಮೀ ಉದ್ದದ ಭಾಗವು ತುಂಬಾ ಕಿರಿದಾಗಿದ್ದು ತದನಂತರ ನೈಸ್ ರಸ್ತೆಗೆ ಸಂಪರ್ಕ ಕಲ್ಪಿಸುವ ವರೆಗೂ ಸಾಕಷ್ಟು ಅಗಲವಿರುತ್ತದೆ.
- ಪ್ರಸ್ತಾಪಿತ 900.00 ಮೀ ಉದ್ದದ ರಸ್ತೆಯನ್ನು ಈಗಾಲೇ ಅಗಲೀಕರಣಗೊಳಿಸುವುದು ಸೂಕ್ತವಾಗಿರುತ್ತದೆ. ಈ ರಸ್ತೆಯ ಇಕ್ಕೆಲ ಭಾಗದಲ್ಲಿ ಬಹಳಷ್ಟು ತಾತ್ಕಾಲಿಕ ಶೆಡ್‌ಗಳಿದ್ದು ಖಾಲಿ ನಿವೇಶನವಿರುವುದರಿಂದ ಹಾಗೂ ಬಹಳಷ್ಟು ಸ್ವತ್ತಿನ ಮಾಲೀಕರು ರಸ್ತೆ ಅಗಲೀಕರಣಕ್ಕೆ ತಮ್ಮ ಸಹಮತವನ್ನು ವ್ಯಕ್ತಪಡಿಸಿರುವ ಹಿನ್ನೆಲೆಯಲ್ಲಿ ಹಾಗೂ ಈ ಸದರಿ

ರಸ್ತೆಯಲ್ಲಿ ಭವಿಷ್ಯದಲ್ಲಿ ಶಾಶ್ವತ ಕಟ್ಟಡಗಳು ನಿರ್ಮಾಣವಾಗಬಹುದಾದ ಹಿನ್ನೆಲೆಯಲ್ಲಿ, ಈಗಲೇ ಸದರಿ ರಸ್ತೆಯ ಅಗಲೀಕರಣ ಯೋಜನೆಯನ್ನು ಕೈಗೆತ್ತಿಕೊಳ್ಳುವುದು ಸೂಕ್ತವಾಗಿರುತ್ತದೆ.

- Karnataka Town and Country Planning Act 1961 14 (B) ಪ್ರಕಾರ ಸಾರ್ವಜನಿಕ ಪ್ರಕಟಣೆ ಹೊರಡಿಸಿ ಟಿ.ಡಿಆರ್ ನಿಯಮಾವಳಿ ಅನ್ವಯ ಭೂಸ್ವಾಧೀನ ಪ್ರಕ್ರೀಯೆ ಕೈಗೊಳ್ಳುವುದು ಸೂಕ್ತವಾಗಿರುತ್ತದೆ. ಸದರಿ ರಸ್ತೆಯಲ್ಲಿ ಸುಮಾರು 54 ಖಾಸಗಿ ಸ್ವತ್ತುಗಳಿದ್ದು, ಒಟ್ಟು 76206.44 ಚದರ ಅಡಿಗಳಷ್ಟು ಭೂಸ್ವಾಧೀನ ಪಡಿಸಿಕೊಳ್ಳಬೇಕಾಗಿರುತ್ತದೆ.
- ಸದರಿ ರಸ್ತೆಗೆ ಅಡ್ಡಲಾಗಿ ವೃಷಭಾವತಿ ಕಣಿವೆ ಹರಿಯುತ್ತಿದ್ದು ಸುಮಾರು 50.00 ಮೀ ಉದ್ದದ ಹಾಲಿ ಸೇತುವೆ ಇದ್ದು. ಇದರ ಅಗಲವು ತುಂಬಾ ಕಿರಿದಾಗಿರುತ್ತದೆ. ಆದುದರಿಂದ ರಸ್ತೆ ಅಗಲೀಕರಣಕ್ಕೆ ಸಮಾನಾಂತರವಾಗಿ ಹಾಲಿ ಇರುವ ಸೇತುವೆಯನ್ನೂ ಸಹ ಅಗಲೀಕರಣಗೊಳಿಸಬೇಕಾಗಿರುತ್ತದೆ.
- ಸದರಿ ರಸ್ತೆಯಲ್ಲಿನ ಹಾಲಿ ವಾಹನ ದಟ್ಟಣೆಗೆ ಪ್ರಸ್ತುತ ಎರಡು ಪಥದ ರಸ್ತೆಯು ಕಿರಿದಾಗಿದ್ದು, ದ್ವಿಮುಖ ಸಂಚಾರವಿರುವ ಸದರಿ ರಸ್ತೆಯನ್ನು ನಾಲ್ಕು ಪಥದ ರಸ್ತೆಯನ್ನಾಗಿ ವಿಸ್ತರಿಸುವುದು ಜರೂರಾಗಿ ಅವಶ್ಯಕವಿರುತ್ತದೆ.

ಮೇಲಿನ ಎಲ್ಲಾ ಹಿನ್ನೆಲೆಗಳಲ್ಲಿ ಹಾಗೂ ಸದರಿ ರಸ್ತೆಯು ಮೈಸೂರು ರಸ್ತೆ ಮತ್ತು ರಿಂಗ್ ರಸ್ತೆಗೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯಾಗಿದ್ದು, ಹಾಲಿ ರಸ್ತೆಯು ಪರಿಷ್ಕೃತ ಮಹಾನಕ್ಷೆ 2015 ರ ಪ್ರಕಾರ 18.00 ಮೀ ಅಗಲೀಕರಣಗೊಳಿಸುವ ಪ್ರಸ್ತಾವನೆ ಇರುವುದರಿಂದ ಹಾಗೂ ಸದರಿ ರಸ್ತೆಯಲ್ಲಿರುವ ಬಹಳಷ್ಟು ಖಾಸಗಿ ಸ್ವತ್ತಿನ ಮಾಲೀಕರು ರಸ್ತೆ ಅಗಲೀಕರಣಕ್ಕೆ ಒಪ್ಪಿಗೆ ಸೂಚಿಸಿರುವ ಹಿನ್ನೆಲೆಯಲ್ಲಿ ಹಾಗೂ ಹಾಲಿ ಕಿರಿದಾದ ರಸ್ತೆಯು ಸರಾಸರಿ 6.00 ರಿಂದ 7.00 ಮೀ ದಾರಿಹಕ್ಕು ಇದ್ದು (ROW) ದ್ವಿಮುಖ ಸಂಚಾರವಿರುವ ಈ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ ವಿಸ್ತರಿಸುವುದು ಹಾಗೂ ಸದರಿ ರಸ್ತೆಗೆ ಅಡ್ಡಲಾಗಿ ವೃಷಭಾವತಿ ಕಣಿವೆ ಹರಿಯುತ್ತಿದ್ದು ಸುಮಾರು 50.00 ಮೀ ಉದ್ದದ ಹಾಲಿ ಸೇತುವೆ ಇದ್ದು, ಇದರ ಅಗಲವು ತುಂಬಾ

ಕಿರಿದಾಗಿರುತ್ತದೆ. ಆದುದರಿಂದ ರಸ್ತೆ ಅಗಲಿಕರಣಕ್ಕೆ ಸಮಾನಾಂತರವಾಗಿ ಹಾಲಿ ಇರುವ ಸೇತುವೆಯನ್ನೂ ಸಹ ಅಗಲೀಕರಣಗೊಳಿಸಬೇಕಿರುವ ಅನಿವಾರ್ಯತೆ ಇರುವ ಹಿನ್ನೆಲೆಯಲ್ಲಿ, ಈ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಸದರಿ ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರು.1250.00 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ :–** **ದಿನಾಂಕ 27–07–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಲಭ್ಯವಿರುವ ಅನುದಾನವನ್ನು ಸದರಿ ಸಾಲಿಗೆ ಉಪಯೋಗಿಸಿಕೊಳ್ಳಲು ಹಾಗೂ ಉಳಿಕೆ ಮೊತ್ತವನ್ನು ಮುಂದಿನ ಸಾಲುಗಳಲ್ಲಿ ಭರಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *451. ವಿಷಯದ ಸಂಖ್ಯೆ :–ತೆಆಸ್ಥಾಸ/220/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಬಿ12(4)ಪಿಆರ್/26/2011–12, ದಿನಾಂಕ : 12–07–2011ರಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಅಧ್ಯಕ್ಷರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕೇಂದ್ರೀಯ ಸಂಘ(ರಿ.) ರವರ ಮನವಿ ಪತ್ರ ದಿನಾಂಕ : 13–05–2011 ಮತ್ತು ಪ್ರಧಾನ ಕಾರ್ಯದರ್ಶಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವರ್ಕರ್ಸ್ ಫೆಡರೇಷನ್–ದಂಡು ಪ್ರದೇಶ ರವರ ಮನವಿ ಪತ್ರ ದಿನಾಂಕ : 13–05–2011ರಲ್ಲಿ ಪಾಲಿಕೆಯ ವಿವಿಧ ಸಂಘದ ಪದಾಧಿಕಾರಿಗಳು ಸಲ್ಲಿಸಿರುವ ಮನವಿ ಪತ್ರದಲ್ಲಿ, ಸೇವಾವಧಿಯಲ್ಲಿ ಏಕೈಕ ಮುಂಬಡ್ತಿ ಪಡೆದು ಕರ್ತವ್ಯ ನಿರ್ವಹಿಸುತ್ತಿರುವ ಹಿರಿಯ ಆರೋಗ್ಯ ಪರಿವೀಕ್ಷಕರುಗಳನ್ನು ಈ ಕಛೇರಿ ಆದೇಶ ಸಂಖ್ಯೆ: ಬಿ12(4)ಪಿಆರ್/137/2009–10, ದಿನಾಂಕ : 23–07–2009 ರ ಆದೇಶದಂತೆ ಆರೋಗ್ಯ ಇಲಾಖೆಯನ್ನು ಪುನರ್‌ವಿಂಗಡಿಸಿ, ಸಿವಿಲ್ ಕಾರ್ಯಗಳಿಗಾಗಿ ನೇಮಕಾತಿ ಹೊಂದಿದ್ದ ಸಹಾಯಕ ಅಭಿಯಂತರರುಗಳನ್ನು ಪರಿಸರ ಅಭಿಯಂತರರುಗಳನ್ನಾಗಿ

ನೀಡಲಾಗಿರುತ್ತದೆ. ಕೆ.ಎಂ.ಸಿ ಕಾಯ್ದೆ ಪ್ರಕಾರ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ಸ್ವಚ್ಛತಾ ಕಾರ್ಯದ ಮೇಲ್ವಿಚಾರಣೆ, ಉದ್ದಿಮೆಗಳ ತಪಾಸಣೆ, ಸಾಂಕ್ರಾಮಿಕ ರೋಗಗಳ ಬಗ್ಗೆ ಮುನ್ನೆಚ್ಚರಿಕೆ, ಸ್ವಚ್ಚತೆ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಾಂವಿಧಾನಿಕ ಜವಾಬ್ದಾರಿ ಹೊಂದಿರುತ್ತಾರೆ. ಆದರೆ, ಈ ಕಾರ್ಯಕ್ಕೆ ಪರಿಸರ ಅಧಿಕಾರಿಗಳಾಗಿ ಸಹಾಯಕ ಅಭಿಯಂತರರುಗಳನ್ನು ನಿಯೋಜಿಸಲಾಗಿರುತ್ತದೆ.

ಸಾಂವಿಧಾನಿಕ ಜವಾಬ್ದಾರಿ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರುಗಳು ತಮ್ಮ ಸೇವಾವಧಿಯಲ್ಲಿ ಮುಂಬಡ್ತಿ ಇಲ್ಲದೇ ನಿವೃತ್ತಿ ಹೊಂದುತ್ತಿರುವ ಹಿನ್ನೆಲೆಯಲ್ಲಿ ಈ ನೌಕರರುಗಳಿಗೆ ಪತ್ರಾಂಕಿತ ಹುದ್ದೆಗೆ ಮುಂಬಡ್ತಿ ನೀಡಿ, ಉಪ ವಿಭಾಗವಾರು ಒಂದು ಹುದ್ದೆಯನ್ನು ಸೃಜಿಸಿ, ಈ ಇಲಾಖೆಯನ್ನು ಆರ್ಥಿಕವಾಗಿ ಬಲಪಡಿಸುವುದು ಸೂಕ್ತವಾಗಿರುತ್ತದೆಯೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಮುಖ್ಯ ಆರೋಗ್ಯಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಆರೋಗ್ಯಾಧಿಕಾರಿಗಳು ಮುಖ್ಯ ಆರೋಗ್ಯಾಧಿಕಾರಿ ರವರ ವರದಿ ದಿನಾಂಕ : 09–06–2011ರ ರೀತ್ಯಾ ನೀಡಿರುವ ಅಭಿಪ್ರಾಯ ವರದಿಯಲ್ಲಿ ಈ ಕೆಳಕಂಡಂತೆ ತಿಳಿಸಿರುತ್ತಾರೆ.

> "ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದವರಿಂದ ಕಡ್ಡಾಯವಾಗಿ 10 ವರ್ಷಗಳ ಹಿರಿಯ ಆರೋಗ್ಯ ಪರಿವೀಕ್ಷಕರಾಗಿ ಸೇವೆ ಸಲ್ಲಿಸಿದ್ದವರನ್ನು ಮತ್ತು ಸಂಬಂಧಿಸಿದ ಇಲಾಖಾ ಪರೀಕ್ಷೆಗಳನ್ನು ಪಾಸಾಗಿರುವ ಅಭ್ಯರ್ಥಿಗಳನ್ನು ಹೆಲ್ತ್ ಸೂಪರ್‌ವೈಸರ್ ಹುದ್ದೆಗೆ ಆಯ್ಕೆ ಮಾಡಬಹುದಾಗಿರುತ್ತದೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಈ ಹಿಂದೆ 27 ಆರೋಗ್ಯ ವೈದ್ಯಾಧಿಕಾರಿಗಳ ಹುದ್ದೆಯಿದ್ದು, ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವರನ್ನು ಈ ಕಛೇರಿ ಆದೇಶ ಸಂಖ್ಯೆ: ಜಿ12(4)ಪಿಆರ್/26/2011-12 ದಿನಾಂಕ : 16-05-2011 ರ ಆದೇಶದ ರೀತ್ಯಾ ಆಸ್ಪತ್ರೆಯ ಕೆಲಸಕಾರ್ಯಗಳಿಗೆ ನಿಯೋಜಿಸಲಾಗಿರುತ್ತದೆ. ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವಂತೆ, 27 ವಿಧಾನ ಸಭಾ ಕ್ಷೇತ್ರವಾರು ಹೆಲ್ತ್ ಸೂಪರ್‌ವೈಸರ್‌ಗಳನ್ನು ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ನಿಯೋಜಿಸಬಹುದೆಂದು ತಿಳಿಸಿರುತ್ತಾರೆ."

ಪ್ರಸ್ತುತ, ಪಾಲಿಕೆಯಲ್ಲಿ **'ಕಿರಿಯ ಆರೋಗ್ಯ ಪರಿವೀಕ್ಷಕರ'** 282–ಮಂಜೂರಾತಿ ಹುದ್ದೆಯಿದ್ದು, 'ನಾಲ್ಕನೇ ದರ್ಜೆ ನೌಕರರ' ಮತ್ತು 'ಪೌರಕಾರ್ಮಿಕರ' ವೃಂದದಿಂದ **ಈ ಕೆಳಕಂಡಂತೆ ಅರ್ಹತೆಗನುಸಾರವಾಗಿ ಮುಂಬಡ್ತಿ ಹೊಂದಲು ಅವಕಾಶವಿರುತ್ತದೆ.**

| ಕ್ರ. ಸಂ. | ಹುದ್ದೆ ಮತ್ತು ವೇತನ ಶ್ರೇಣಿ | ಮಂಜೂರಾದ ಹುದ್ದೆ | ಮುಂಬಡ್ತಿ ಅರ್ಹತೆ |
|---|---|---|---|
| 1. | ಕಿರಿಯ ಆರೋಗ್ಯ ಪರಿವೀಕ್ಷಕರು<br>**ರೂ.6250–12000** | 282 | • ಎಸ್.ಎಸ್.ಎಲ್.ಸಿ<br>• ಸ್ಯಾನಿಟರಿ ಇನ್ಸ್‌ಪೆಕ್ಟರ್ ಡಿಪ್ಲೋಮೋ ಪರೀಕ್ಷೆ<br>**ಇಲಾಖಾ ಪರೀಕ್ಷೆಗಳು :**<br>1. ಅಕೌಂಟ್ಸ್ ಹೈಯರ್<br>2. ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ |

ಹಾಗೂ **''ಹಿರಿಯ ಆರೋಗ್ಯ ಪರಿವೀಕ್ಷಕರ'** 130–ಮಂಜೂರಾತಿ ಹುದ್ದೆಯಿದ್ದು, **'**ಕಿರಿಯ ಆರೋಗ್ಯ ಪರಿವೀಕ್ಷಕರು' ವೃಂದದಿಂದ **ಈ ಕೆಳಕಂಡಂತೆ ಅರ್ಹತೆಗನುಸಾರವಾಗಿ ಮುಂಬಡ್ತಿ ಹೊಂದಲು ಅವಕಾಶವಿರುತ್ತದೆ.**

| ಕ್ರ. ಸಂ. | ಹುದ್ದೆ ಮತ್ತು ವೇತನ ಶ್ರೇಣಿ | ಮಂಜೂರಾದ ಹುದ್ದೆ | ಮುಂಬಡ್ತಿ ಅರ್ಹತೆ |
|---|---|---|---|
| 1. | ಹಿರಿಯ ಆರೋಗ್ಯ ಪರಿವೀಕ್ಷಕರು<br>**ರೂ.8000–14800** | 130 | • 'ಹಿರಿಯ ಆರೋಗ್ಯ ಪರಿವೀಕ್ಷಕರ' ಹುದ್ದೆಗಳನ್ನು 'ಕಿರಿಯ ಆರೋಗ್ಯ ಪರಿವೀಕ್ಷಕರ' ವೃಂದದಿಂದ ಶೇ.75ರಷ್ಟು ಹುದ್ದೆಯನ್ನು ಮುಂಬಡ್ತಿ ಮೂಲಕ ತುಂಬಲು ಮತ್ತು –<br>ಶೇ.25ರಷ್ಟು ಹುದ್ದೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಎರವಲು ಸೇವೆಯ ಮೇಲೆ ನಿಯೋಜಿಸಿಕೊಳ್ಳಲು |

| | | | |
|---|---|---|---|
| | | | ಅವಕಾಶವಿರುತ್ತದೆ.<br>• **ಇಲಾಖಾ ಪರೀಕ್ಷೆಗಳು :**<br>1. ಅಕೌಂಟ್ಸ್ ಹೈಯರ್<br>2. ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್<br>3. ಜನರಲ್ ಲಾ ಭಾಗ–1 & 2<br>4. ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ವಿನಾಯ್ತಿ ಪಡೆದಿರಬೇಕು |

ಮುಂದುವರೆದು, ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಸೂಚನೆ ಭಾಗ–2ರ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯೂ/6/ಆರ್‌ಸಿಹೆಚ್/85, ದಿ: 29–01–1987ರಲ್ಲಿ ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಲಾಗಿದ್ದು, ಸದರಿ ಹುದ್ದೆಯ ವೇತನ ಶ್ರೇಣಿ ರೂ. 8,825–16,000ಗಳಾಗಿರುತ್ತದೆ.

ಆದರೆ, 1971ರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಾಮವಳಿಯನ್ವಯ ಆರೋಗ್ಯ ಇಲಾಖೆಯಲ್ಲಿ 'ಹಿರಿಯ ಆರೋಗ್ಯ ಪರಿವೀಕ್ಷಕರು' ವೃಂದದಿಂದ ಯಾವುದೇ ಹುದ್ದೆಗೆ ಮುಂಬಡ್ತಿಗಾಗಿ ಅವಕಾಶವಿರುವುದಿಲ್ಲ,

ಹಾಗೂ 'ಹಿರಿಯ ಆರೋಗ್ಯ ಪರಿವೀಕ್ಷಕರು' ಹುದ್ದೆಯಲ್ಲಿಯೇ ಸೇವೆಯು ಸ್ಥಗಿತಗೊಳ್ಳಲಿದ್ದು, 'ಹೆಲ್ತ್ ಸೂಪರ್‌ವೈಸರ್' ಹುದ್ದೆಗೆ ಯಾವುದೇ ಪ್ರಸ್ತಾಪವಿರುವುದಿಲ್ಲ.

ಈ ಹಿನ್ನಲೆಯಲ್ಲಿ, ಈ ಕಛೇರಿ ಆದೇಶ ಸಂಖ್ಯೆ: ಬಿ12(4)ಪಿಆರ್/26/2011–12 ದಿನಾಂಕ : 16–05–2011ರ ಪ್ರಸ್ತಾವನೆಯಂತೆ, ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ಅರ್ಹತೆ ಹೊಂದಿರುವ 'ಹಿರಿಯ ಆರೋಗ್ಯ ಪರಿವೀಕ್ಷಕರ' ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ವಿಧಾನಸಭಾ ಕ್ಷೇತ್ರವಾರು 27–ಹುದ್ದೆಗಳು ಹಾಗೂ 'ಲೀವ್ ರಿಸರ್ವ್'ಗಾಗಿ ಅಧಿಕ 03–ಹುದ್ದೆಗಳು ಸೇರಿದಂತೆ ಒಟ್ಟು 30–ಹುದ್ದೆಗಳನ್ನು 'ಹೆಲ್ತ್ ಸೂಪರ್‌ವೈಸರ್' ಹುದ್ದೆಗಳನ್ನು ಸೃಜಿಸಿ, ಈ ಕೆಳಕಂಡಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಸೇರ್ಪಡಿಸಬೇಕಾಗಿರುತ್ತದೆ.

- Must have passed SSLC examination with 2 years Sanitary Inspector Training Course.
- Must have put in a service not less than 10 years in the cadre of Senior Health Inspector.

ಹಾಗೂ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ 'ಹೆಲ್ತ್ ಸೂಪರ್‌ವೈಸರ್' ಹುದ್ದೆಗಳನ್ನು ಸೃಜಿಸಿದ್ದಲ್ಲಿ ಮಾಹೆಯಾನ ತಗಲುವ ವೇತನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ವಿವರಗಳು | ಮೊತ್ತ (ರೂ.ಗಳಲ್ಲಿ) |
|---|---|---|
| **ವೇತನ ಶ್ರೇಣಿ ರೂ. 8825–16,000** | | |
| 1. | ಮೂಲ ವೇತನ | 8,825–00 |
| 2. | ತುಟ್ಟಿ ಭತ್ಯೆ (62.5%) | 5,516–00 |
| 3. | ಮನೆ ಬಾಡಿಗೆ ಭತ್ಯೆ (25%) | 2,206–00 |
| 4. | ನಗರ ಪರಿಹಾರ ಭತ್ಯೆ | 300–00 |
| 5. | ವೈದ್ಯಕೀಯ ಭತ್ಯೆ | 50–00 |
| | **ಒಟ್ಟು ವೇತನ ರೂ.** | **16,897–00** |

ಒಬ್ಬರಿಗೆ ಮಾಹೆವಾರು ವೇತನ ರೂ. 16,897–00 ಗಳಾಗಿದ್ದಲ್ಲಿ, –

- ಮಾಹೆವಾರು ವೇತನ – ರೂ. 5,06,910–00 (16,897 X 30) ಗಳಾಗುತ್ತದೆ.

- ವಾರ್ಷಿಕ ವೇತನ – ರೂ. 60,82,920–00 (16,897 X 30 X 12) ಗಳಾಗುತ್ತದೆ.

ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ವಿಧಾನ ಸಭಾ ಕ್ಷೇತ್ರವಾರು ಒಟ್ಟು 30 – 'ಹೆಲ್ತ್ ಸೂಪರ್‌ವೈಸರ್' ಹುದ್ದೆಗಳನ್ನು ಸೃಜಿಸಿ, ಅರ್ಹತೆ ಹೊಂದಿರುವ 'ಹಿರಿಯ ಆರೋಗ್ಯ ಪರಿವೀಕ್ಷಕರ' ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ವಿಷಯದ ಬಗ್ಗೆ ದೀರ್ಘವಾದ ಚರ್ಚೆಯ ನಂತರ ದಿನಾಂಕ : 12–07–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸ್ಥಾಯಿ ಸಮಿತಿಯ ದಿನಾಂಕ : 01–08–2011ರ ನಿರ್ಣಯ.

***<u>ನಿರ್ಣಯ :– ದಿನಾಂಕ : 01–08–2011ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.</u>***

## ***<u>46]. ವಿಷಯದ ಸಂಖ್ಯೆ :–ತೆಆಸ್ಥಾಸ/221/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜ.ಆ(ಕ)ಪಿಎಸ್‌ಆರ್(4)22/11–12, ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಮುಖ್ಯ ಲೆಕ್ಕಾಧಿಕಾರಿಗಳಿಗೆ ಟಿಪ್ಪಣಿ ಬರೆದು ಶ್ರೀ ಹೆಚ್. ರವೀಂದ್ರ ಅಧ್ಯಕ್ಷರು, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ, ರವರು ಹೆಚ್. ರವೀಂದ್ರ ಫೌಂಡೇಶನ್ ವತಿಯಿಂದ ಏಪ್ರಿಲ್ –2011 ರ ದಿನಾಂಕ 15, 16, 17 ರಂದು ವಿಜಯನಗರದ ಗಾಂಧಿ ಮೈದಾನದಲ್ಲಿ ವಿಜಯನಗರ ವೈಭವ ಎಂಬ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಈ ಸಮಾರಂಭದಲ್ಲಿ ಸಾಂಸ್ಕೃತಿಕ ಜಾನಪದ ಹಾಗೂ ಹತ್ತು ಹಲವು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಗಣನೀಯಯ ಸಾಧನೆಗೈದಿರುವ 10 ಮಂದಿ ಸಾಧಕರಿಗೆ ವಿಜಯ ರತ್ನ ಎಂಬ ಪ್ರಶಸ್ತಿಯನ್ನು ಪ್ರಧಾನ ಮಾಡಲು ಉದ್ದೇಶಿಸಲಾಗಿದ್ದು, ಸದರಿ ಕಾರ್ಯಕ್ರಮಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಧನಸಹಾಯ ಕೋರಿರುತ್ತಾರೆಂದು ಸದರಿ ಪ್ರಸ್ತಾವನೆಯನ್ನು ಈಗಾಗಲೇ ಆಯುಕ್ತರ ಅವಗಾಹನೆ ಮಂಡಿಸಿರುವುದನ್ನು ಪರಿಗಣಿಸಿ 2010–11 ರ ಪರಿಷ್ಕೃತ ಆಯವ್ಯಯದಲ್ಲಿ ಮರು ಹೊಂದಾಣಿಕೆ ಮಾಡಿರುವ ಸಂಘ ಸಂಸ್ಥೆಗಳ ಅನುದಾನದಲ್ಲಿ ರೂ. 10.00 ಲಕ್ಷಗಳನ್ನು ಹೆಚ್. ರವಿಂದ್ರ ಫೌಂಡೇಶನ್ ರವರ ಹೆಸರಿಗೆ ನೀಡಲು ಕೂಡಲೇ ಸೂಕ್ತ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಹೆಚ್. ರವೀಂದ್ರ, ಅಧ್ಯಕ್ಷರು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ರವರು ಪತ್ರ ಬರೆದು ತನ್ನ ಮತಕ್ಷೇತ್ರ ವ್ಯಾಪ್ತಿಯ ವಿಜಯನಗರದಲ್ಲಿ ಹೆಚ್ ರವೀಂದ್ರ ಫೌಂಡೇಶನ್ ವತಿಯಿಂದ ವಿಜಯನಗರ ವೈಭವ ಎಂಬ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸದರಿಯವರು ಸಲ್ಲಿಸಿರುವ ಮನವಿಯನ್ನು ಪರಿಗಣಿಸಿ, ನಾಲ್ಕು ದಿನಗಳಂದು ನಡೆಯಲಿರುವ ಕಾರ್ಯಕ್ರಮಕ್ಕೆ ಪ್ರೋತ್ಸಾಹದಾಯಕವಾಗಿ ಪಾಲಿಕೆ ವತಿಯಿಂದ ರೂ. 10.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಅದರಂತೆ, ಹೆಚ್. ರವೀಂದ್ರ ಫೌಂಡೇಶನ್ ರವರಿಗೆ "ವಿಜಯನಗರ ವೈಭವ" ಎಂಬ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲು ಘಟನೋತ್ತರ ಅನುಮೋದನೆಗೆ ಕಾಯ್ದಿರಿಸಿ ರೂ. 10.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಘಟನೋತ್ತರ ಅನುಮೋದನೆಗಾಗಿ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :– ದಿನಾಂಕ : 03–08–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.</u>***

## ***<u>47]. ವಿಷಯದ ಸಂಖ್ಯೆ :–ತೆಆಸ್ಥಾಸ/222/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)34/11–12, ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ಜೆ. ಜಾರ್ಜ್, ಮಾನ್ಯ ಶಾಸಕರು ಹಾಗೂ ಮಾಜಿ ಸಚಿವರು. ಸರ್ವಜ್ಞ ನಗರ ಕ್ಷೇತ್ರ ರವರು ಪತ್ರ ಬರೆದು ತನ್ನ ಮತ ಕ್ಷೇತ್ರವಾದ ಸರ್ವಜ್ಞ ನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಿನೀತ್ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಪಿಳ್ಳಣ್ಣ ಗಾರ್ಡನ್, ಬೆಂಗಳೂರು. ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಎನ್. ಆರ್. ಮಲ್ಲಿಕಾರ್ಜುನ ರವರ ಮನವಿ ಮತ್ತು ದಾಖಲೆಗಳನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ಸದರಿಯವರು 32ನೇ ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್ ಶಿಫ್ ಕ್ರೀಡಾಕೂಟ, ಸಿಂಗಾಪುರ್‌ನಲ್ಲಿ

ಭಾಗವಹಿಸಲು ಅವಕಾಶ ಸಿಕ್ಕಿದ್ದು, ಸದರಿ ಕ್ರೀಡಾಕೂಟದಲ್ಲಿ ಭಾಗವಹಿಸಲು ಖರ್ಚು–ವೆಚ್ಚ ಭರಿಸಲು ಅಶಕ್ತರಾಗಿರುವ ಕಾರಣ ಪಾಲಿಕೆಯ ವತಿಯಿಂದ ಸಹಾಯಧನ ಮಂಜೂರು ಮಾಡಿಸಿಕೊಡಬೇಕೆಂದು ಕೋರಿರುತ್ತಾರೆಂದು ತಿಳಿಸುತ್ತಾ, ಸದರಿಯವರಿಗೆ ಪಾಲಿಕೆ ವತಿಯಿಂದ ಧನಸಹಾಯ ಮಂಜೂರು ಮಾಡಲು ಕೋರಿರುತ್ತಾರೆ.

ಪಾಲಿಕೆಯಿಂದ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗಸೂಚಿಗಳನ್ವಯ ಸಂಘ ಸಂಸ್ಥೆಗಳಿಗೆ ಮಾತ್ರ ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ.10,000/– ದಿಂದ ಗರಿಷ್ಠ ರೂ.1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಆದರೆ, ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :– ದಿನಾಂಕ : 03–08–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕ್ರೀಡಾಪಟುವಿಗೆ ರೂ.25000/– (ಇಪ್ಪತ್ತೈದು ಸಾವಿರ) ಅನುದಾನ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿದೆ.***

## 48]. ವಿಷಯದ ಸಂಖ್ಯೆ :–ತೆಆಸ್ಥಾಸ/223/2011–12

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಮಾಗಡಿ ಮುಖ್ಯ ರಸ್ತೆಯಿಂದ ನಾಗರಹೊಳೆ ನಗರದವರೆಗೆ ಇರುವ ರಸ್ತೆಯನ್ನು ಅಭಿವೃದ್ಧಿಗೊಳಿಸುವಂತೆ ಮಾನ್ಯ ನಗರಪಾಲಿಕೆ ಸದಸ್ಯರಾದ ಶ್ರೀಯುತ. ಎ.ಎಂ. ಹನುಮಂತೇಗೌಡ ರವರು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಂಬಂಧಿಸಿದ ಅಭಿಯಂತರರಿಗೆ ಸೂಚಿಸಲಾಗಿ ಸದರಿಯವರು ಅಗತ್ಯ ಅಂಶಗಳನ್ನು ಒಳಗೊಂಡಂತೆ ಕಾಮಗಾರಿಗೆ ರೂ.208.05 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಮುಂದುವರೆದಂತೆ ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಈ ಸಂಬಂಧ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## 49]. ವಿಷಯದ ಸಂಖ್ಯೆ :–ತೆಆಸ್ಥಾಸ/224/2011–12

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಶ್ರೀ. ಹೆಚ್.ನಾರಾಯಣ್, ಪಾಲಿಕೆ ಸದಸ್ಯರು ವಾರ್ಡ್ ನಂ. 161 ರಲ್ಲಿ ಹೊಲಿಗೆ ತರಬೇತಿ ಕೇಂದ್ರವನ್ನು ತೆರೆಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಯಾವುದೇ ಸ್ಥಳವಿಲ್ಲದಿರುವುದರಿಂದ ನನ್ನ ವಾರ್ಡಿಗೆ ಸಂಬಂಧಪಟ್ಟ ಈಶ್ವರನಗರ 2ನೇ ಮೈನ್, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತ, ಬೆಂ–85 ರಲ್ಲಿ ಖಾಸಗಿ ಕಟ್ಟಡದ ವ್ಯವಸ್ಥೆಯನ್ನು ಮಾಡಿದ್ದು, ಬಾಡಿಗೆ ಆಧಾರದಲ್ಲಿ ತೆಗೆದುಕೊಂಡು ಹೊಲಿಗೆ ತರಬೇತಿ ಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕೆಂದು ಕೋರಿರುತ್ತಾರೆ. ಅದರಂತೆ, ಪ್ರಸ್ತಾಪಿಸಿರುವ ಸ್ಥಳಕ್ಕೆ ಮಾಹೆಯಾನ 17,792 ರೂ ಗಳನ್ನು ನೀಡಬಹುದೆಂದು ಮುಖ್ಯ ಅಭಿಯಂತರರು (ದಕ್ಷಿಣ) ರವರು ಶಿಫಾರಸ್ಸು ಮಾಡಿರುವ ಹಿನ್ನಲೆಯಲ್ಲಿ ಯಶೋಧರ (ಮಾಲಿಕರು) # 50/51, 2ನೇ ಮೈನ್, ಹೊಸಕೆರೆಹಳ್ಳಿ, ಬನಶಂಕರಿ 3ನೇ ಹಂತದ, ವಿಳಾಸದ ಕಟ್ಟಡಕ್ಕೆ ಮಾಹೆಯಾನ ರೂ. 17,792 ಗಳನ್ನು ಬಾಡಿಗೆಯಾಗಿ ನಿಗದಿ ಪಡಿಸಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 03–08–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## ***50]. ವಿಷಯದ ಸಂಖ್ಯೆ :–ತೆಆಸ್ಥಾಸ/225/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಶ್ರೀ. ಅನಂತ, ನಾಗರೀಕರು, ಜಯನಗರ ರವರು, ಮಾಗಡಿ ರಸ್ತೆ ಮತ್ತು ಇನ್ನಿತರೆ ರಸ್ತೆಗಳಲ್ಲಿ ಹಾಲಿ ಇರುವ ರಸ್ತೆ ಉಬ್ಬರಗಳಿಗೆ ಈಗಾಗಲೇ ಅಳವಡಿಸಿದ್ದ ಲೇನ್ ಮಾರ್ಕಿಂಗ್ ಹಾಗೂ ಇನ್ನಿತರೆ ರಸ್ತೆ ಉಪಕರಣಗಳು ವಾಹನಗಳ ಅಧಿಕ ಸಂಚಾರದಿಂದ ಹಾಳಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ದಿನಾಂಕ : 20–01–2011 ರಂದು ಇ–ಮೇಲ್ ಮುಖಾಂತರ ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಪ್ರಸ್ತಾವನೆಗೆ ರೂ.4.60 ಲಕ್ಷಗಳನ್ನು ಅಂದಾಜಿಸಲಾಗಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.4.60 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** **ದಿನಾಂಕ 03–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಸಂಚಾರಿ ಶಾಖೆ ರಸ್ತೆ ಸುರಕ್ಷತಾ ಕ್ರಮಗಳು ಲೆಕ್ಕಶೀರ್ಷಿಕೆಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## **ಹೆಚ್ಚುವರಿ ವಿಷಯಗಳು :-**

## ***01]. ವಿಷಯದ ಸಂಖ್ಯೆ :–ತೆಆಸ್ಥಾಸ/259/2011–12***

ಆಯುಕ್ತರ ಟಿಪ್ಪಣಿ ಎ3(2)ಪಿಆರ್/36/11–12, ದಿನಾಂಕ : 20–05–2011ರಲ್ಲಿ ವಿವರಿಸಿರುವಂತೆ, ಮಾನ್ಯ ಆಯುಕ್ತರ ದಿನಾಂಕ: 20–05–2011 ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಸಂತನಗರ ಉಪ–ವಿಭಾಗ, ವಾಡ್–93, ವಸಂತನಗರ, ಕುಮಾರ ಪಾರ್ಕ್(ಪಶ್ಚಿಮ) ಸರ್ಪೆಂಟೈನ್ ರಸ್ತೆಯಲ್ಲಿರುವ ಪಾಲಿಕೆ ಗ್ರಂಥಾಲಯ ಕಟ್ಟಡದ ತಳಭಾಗದ ಕಟ್ಟಡದ ವಿಸ್ತೀರ್ಣ 400 ಚದರ ಅಡಿಗಳ ಜಾಗವನ್ನು ಮೆ॥ ವಿಶಾಖಾ ಎಜುಕೇಷನಲ್ ಸೋಷಿಯಲ್ ಮತ್ತು ಕಲ್ಚರಲ್ ಟ್ರಸ್ಟ್‌ನ ಸಂಸ್ಥೆಯ ಅಧ್ಯಕ್ಷರುರವರು ಮನವಿ ದಿನಾಂಕ:03–06–2009 ರಂದು ನೀಡಿ ಹಾಗೂ ನಂತರದ ಮನವಿಯಲ್ಲಿ ತಮ್ಮ ಸಂಸ್ಥೆಯ ವಿವಿಧ ಚಟುವಟಿಕೆಗಳಿದ್ದು, ಆದಾಗಿ ಸಾಂಸ್ಕೃತಿಕ, ಶೈಕ್ಷಣಿಕ, ಸಾಮಾಜಿಕ, ತಾಂತ್ರಿಕ ಮತ್ತು ಇನ್ನಿತರ ಜನಪರ ಕಾರ್ಯಕ್ರಮ ಇತ್ಯಾದಿಗಳ ಬಗ್ಗೆ ವಿವರಿಸುತ್ತಾ ಮನವಿ ಮಾಡಿದ್ದು, ಹಾಗೂ ಇದನ್ನು ಪರಿಶೀಲನೆಯ ತರುವಾಯ ಪ್ರಶ್ನಿಸಲಾಗಿ ನಂತರ ಸದರಿ ಸಂಸ್ಥೆ ಪರಿಶಿಷ್ಟ ಜಾತಿ ವಗೈರೆ ವರ್ಗದವರ ಕಲ್ಯಾಣಕ್ಕಾಗಿ ಸಂಬಂಧಿಸಿರುವ ಕಾರಣದ ಮೇರೆಗೆ ಮಾನ್ಯ ಆಯುಕ್ತರವರ ಆದೇಶ ದಿನಾಂಕ:16–01–2010 ರಂತೆ ದಿನಾಂಕ: 03–04–2010ರಿಂದ 02–03–2011ರ ವರೆಗೆ 11 ತಿಂಗಳ ಅವಧಿಗೆ ಮಾಸಿಕ ಬಾಡಿಗೆ ರೂ.2475/–ಗಳ ಆಧಾರದ ಮೇರೆಗೆ ಗುತ್ತಿಗೆಗೆ ಸ್ಥಳ ಮಂಜೂರು ನೀಡಲಾಗಿದ್ದು ಹಾಗೂ ಸದರಿ ಗುತ್ತಿಗೆ ಅವಧಿ ಮುಕ್ತಾಯಗೊಂಡಿದ್ದು, ಸದರಿ ಸ್ಥಳದ ಅಳತೆ 400 ಚದರ ಅಡಿಗಳಾಗಿದ್ದು, ಈ ಪ್ರದೇಶದ ಪ್ರಸಕ್ತ ಮಾರುಕಟ್ಟೆ ದರ ನೆಲಮಹಡಿಗೆ ಚ.ಅಡಿ 1ಕ್ಕೆ ರೂ. 530/– ಗಳಿದ್ದು, ಈ ಪ್ರಕಾರ 400x530=212000 ಶೇ 40 ರಷ್ಟು 84800 ಸೇರಿಸಿ, ಒಟ್ಟು=296800 ಗಳಾಗಿದ್ದು, ಇದರಲ್ಲಿ ಶೇ 10 ರಂತೆ ರೂ. 29680/– ವಾರ್ಷಿಕ ಬಾಡಿಗೆ ಪ್ರಕಾರ ಪರಿಗಣಿಸಿ ತಿಂಗಳ ಬಾಡಿಗೆ ರೂ. 2475/– ರೂಗಳಾಗಿರುತ್ತದೆ. ಇದರಂತೆ ಮುಂದಿನ 5 ವರ್ಷಗಳ ಕಾಲಾವಧಿಗೆ ಗುತ್ತಿಗೆಗೆ ಅನುಮೋದನೆ ಪಡೆಯುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ, **ಗುತ್ತಿಗೆ ನೀಡುವ ಮಾನ್ಯ ಆಯುಕ್ತರ ದಿನಾಂಕ: 20–05–2011ರ ಪ್ರಸ್ತಾವನೆಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26–07–2011ರ ನಿರ್ಣಯ.**

***ನಿರ್ಣಯ :–*** ***ದಿನಾಂಕ 26–07–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.***

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/265/2011–12*

ಆಯುಕ್ತರ ಟಿಪ್ಪಣಿ : ಸಂಖ್ಯೆ:ಅಆ(ಕ/ಆ)ಪಿಎಸ್ಆರ್(4)183/2010–11 ದಿನಾಂಕ : 18–08–2011ರಲ್ಲಿ ವಿವರಿಸಿರುವಂತೆ, ಶ್ರೀಮತಿ ಇಂದಿರಾ ಎಸ್.ಎನ್. ಅಧ್ಯಕ್ಷರು ಶ್ರೀ ಧರ್ಮರಾಯಸ್ವಾಮಿ ದೇವಾಲಯ ವ್ಯವಸ್ಥಾಪನಾ ಸಮಿತಿ, ತಿಗಳರಪೇಟೆ ಬೆಂಗಳೂರು–560 002. ರವರು ಮನವಿ ಸಲ್ಲಿಸಿ, ಬೆಂಗಳೂರು ನಗರದ ತಿಗಳರ ಪೇಟೆಯಲ್ಲಿರುವ ಶ್ರೀ ಧರ್ಮರಾಯ ಸ್ವಾಮಿ ದೇವಾಲಯದಲ್ಲಿ ಅನಾಧಿ ಕಾಲದಿಂದಲೂ ಅನೂಚ್ಛಾನವಾಗಿ ನಡೆದುಕೊಂಡು ಬರುತ್ತಿರುವ ವಿಶ್ವ ವಿಖ್ಯಾತ ಕರಗ ಮಹೋತ್ಸವಕ್ಕೆ ಹೆಚ್ಚಿನ ಅನುದಾನ ನೀಡುವ ಬಗ್ಗೆ ದಿನಾಂಕ 11.04.2011 ರ ಸಭೆಯಲ್ಲಿ ಚರ್ಚಿಸಿ ಮಹಾಪೌರರಾದ ಶ್ರೀ ಎಸ್. ಕೆ. ನಟರಾಜು ರವರು 10 ಲಕ್ಷ ರೂಪಾಯಿಗಳ ಅನುದಾನವನ್ನು 2010–11ನೇ ಸಾಲಿನಲ್ಲಿ 20 ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿರುವುದಾಗಿ ಸಭೆಯಲ್ಲಿ ಘೋಷಿಸಿದುದ್ದನ್ನು ಜನಾಂಗದ ಪರವಾಗಿ ಅಭಿನಂದಿಸುತ್ತಾ, ಇದೀಗ ಹಿಂದಿನ ಸಾಲಿನಂತೆ 10.00 ಲಕ್ಷ ರೂಪಾಯಿ ಬಿಡುಗಡೆಯಾಗಿದ್ದು ಖರ್ಚು ವೆಚ್ಚಗಳು ಹೆಚ್ಚಾಗಿರುವುದರಿಂದ ಈಗಾಗಲೇ ಘೋಷಿಸಿರುವಂತೆ ಇನ್ನು 10.00 ಲಕ್ಷ ರೂಪಾಯಿಗಳನ್ನು ಈ ಕೂಡಲೇ ಬಿಡುಗಡೆ ಮಾಡಿಸಿ ಕೊಡಬೇಕೆಂದು ಕೋರಿರುತ್ತಾರೆ.

2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿದ್ದ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (24) ರಲ್ಲಿ "ಕರಗ ಉತ್ಸವ ಹಾಗೂ ಸಮಾರಂಭದ ಇತರ ಕೆಲಸ ಕಾರ್ಯಗಳು, ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನ ರಸ್ತೆ" ಗೆ ಎಂದು ರೂ. 50.00 ಲಕ್ಷಗಳ (ರೂ. ಐವತ್ತು ಲಕ್ಷಗಳು ಮಾತ್ರ) ಅನುದಾನದ ನಿಗಧಿಪಡಿಸಲಾಗಿರುತ್ತದೆ.

ಅದರಂತೆ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 08–07–2011 ರಂದು ನಡೆದ ಸಭೆಯ ನಡವಳಿಗಳು ವಿಷಯದ ಸಂಖ್ಯೆ:– ತೆಆಸ್ಥಾಸ/15/2011–12 ರ ನಿರ್ಣಯದಂತೆ ಸದರಿಯವರಿಗೆ ರೂ. 10.00 ಲಕ್ಷಗಳನ್ನು ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ.

ಮುಂದುವರೆದಂತೆ, ಪ್ರಸಕ್ತ 2011–12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಪ್ರಸ್ತಾವಿತ ದೇವಾಲಯದ ವ್ಯವಸ್ಥಾಪನಾ ಸಮಿತಿಯವರು ಈಗ ಪುನ: 2010–11ನೇ ಸಾಲಿನ ಖರ್ಚು ವೆಚ್ಚಗಳಿಗಾಗಿ ರೂ. 10.00 ಲಕ್ಷಗಳು ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಕೋರಿರುವುದರಿಂದ ಮೇಲ್ಕಂಡ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ ಪಾಲಿಕೆಯ ಆರ್ಥಿಕ ಪರಿಸ್ಥಿತಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ಕುರಿತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 18–08–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವಂತೆ ಕರಗ ಉತ್ಸವ ಹಾಗೂ ಸಮಾರಂಭದ ಇತರೆ ಕೆಲಸ ಕಾರ್ಯಗಳಿಗೆ 2010–11ನೇ ಸಾಲಿನ ಖರ್ಚು ವೆಚ್ಚಗಳಿಗಾಗಿ ರೂ.10=00 ಲಕ್ಷಗಳನ್ನು (ಹತ್ತು ಲಕ್ಷಗಳನ್ನು) ಹೆಚ್ಚುವರಿಯಾಗಿ ಬಿಡುಗಡೆ ಮಾಡಲು ಸಮಿತಿಯು ತೀರ್ಮಾನಿಸಿದೆ.***

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/266/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 12–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು ರಾಜರಾಜೇಶ್ವರಿನಗರ ವಲಯ ವತಿಯಿಂದ construction of RCC drain and CC Road at Ward no 160 Total Rs.299.38 Lakhs ಗೆ 15 ಕಾಮಗಾರಿಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಕಡತದ ಕಂಡಿಕೆ (2)ರಲ್ಲಿ ವಿವರಿಸಿರುವ ಕಾಮಗಾರಿಗಳಿಗೆ ಕಂಡಿಕೆ ಸಂಖ್ಯೆ 10ರಲ್ಲಿ 2011–12ನೇ ಆಯವ್ಯಯದ ಲೆಕ್ಕಶೀರ್ಷಿಕೆ ಪಿ.ಸಂಖ್ಯೆ ಪಿ0541–ತುರ್ತು ಕಾಮಗಾರಿಗಳ ಅಡಿಯಲ್ಲಿ ಸದರಿ ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿಸಿರುವ 15 ಕಾಮಗಾರಿಗಳ ಮೊತ್ತ ರೂ.299.38 ಲಕ್ಷಗಳ ಕಾಮಗಾರಿಗಳಿಗೆ 2011–12ನೇ ಸಾಲಿನ ಆಯವ್ಯಯದ ಲೆಕ್ಕಶುರ್ಷಿಕೆ ಪಿ0541 ಅಡಿಯಲ್ಲಿ ಸೂಕ್ತ ಅನುದಾನ ಒದಗಿಸಿಕೊಳ್ಳಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ :–* **ದಿನಾಂಕ 12–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ0541 – ತುರ್ತು ಕಾಮಗಾರಿಗಳ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.**

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/267/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಬಿ12(1ಬಿ)ಪಿಆರ್/69/2011–12, ದಿನಾಂಕ : 12–08–2011ರಲ್ಲಿ ವಿವರಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯು ಉಲ್ಲೇಖಿತದ ನಡವಳಿಯಲ್ಲಿ, ಬೃಹತ್ ಬೆಂಗಳೂರು ಮಹನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯು 1971ರಲ್ಲಿ ತಯಾರಿಸಿದ್ದು, ಈ ತಹಲ್‌ವರೆವಿಗೂ ಸದರಿ ನಿಯಮಾವಳಿಗಳ ಅನುಸಾರ ಆಡಳಿತಾತ್ಮಕ ಕಾರ್ಯವನ್ನು ನಿರ್ವಹಿಸಿಕೊಂಡು ಬರುತ್ತಿದೆ. ಪ್ರಸ್ತುತ 7 ನಗರ ಸಭೆ ಮತ್ತು 110 ಪಂಚಾಯತಿಗಳನ್ನು ಸೇರ್ಪಡೆ ಮಾಡಿಕೊಂಡಿದ್ದು, ಈ ಸಂಬಂಧ ವೃಂದ ಮತ್ತು ನೇಮಕಾತಿ ನಿಯಮವಳಿಗಳಿಗೆ ಹಲವಾರು ಹುದ್ದೆಗಳನ್ನು ಸೇರ್ಪಡಿಸಿಕೊಂಡು ಪಾಲಿಕೆಯ ಆಡಳಿತಾತ್ಮಕ ಕೆಲಸಕಾರ್ಯಗಳು ಸುಗಮವಾಗಿ ನಿರ್ವಹಿಸಲು ರೂಢಿಸಿಕೊಳ್ಳಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಹೊಸದಾಗಿ ಹುದ್ದೆಗಳನ್ನು ಸೃಜಿಸಿಕೊಳ್ಳುವ ಸಲುವಾಗಿ ದಕ್ಷರಾದಂತಹ ಹಾಗೂ ಸೇವಾ ವಿಷಯಗಳಲ್ಲಿ ಪರಿಣಿತಿ ಹೊಂದಿದ ಅಧಿಕಾರಿಯೊಬ್ಬರು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕಾಗಿರುವುದರಿಂದ ಹಾಗೂ ಹಾಲಿ ವೃಂದ ಮತ್ತು ನೇಮಕಾತಿ ನಿಯಮವಳಿಯನ್ನು ಪುನರ್ ಪರಿಷ್ಕರಿಸಿರುವ / ಪರಿಶೀಲನಾ ಸಮಿತಿ ರಚನೆಯಾಗಿದ್ದು ಸದರಿ ಸಮಿತಿಗೆ ಸದಸ್ಯ ಕಾರ್ಯದರ್ಶಿಯಾಗಿರುವ ಸಹಾಯಕ ಆಯುಕ್ತರು (ಆಡಳಿತ–2) ಆಗಿ ಕಾರ್ಯನಿರ್ವಹಿಸುತ್ತಿರುವ ಶ್ರೀಮತಿ ಹರಿಣಿ ವನಜಕುಮಾರಿ, ಕೆ.ಎ.ಎಸ್. ರವರು ಇದೇ ತಿಂಗಳ 30 ರಂದು ವಯೋಮಿತಿಗನುಗುಣವಾಗಿ ನಿವೃತ್ತಿ ಹೊಂದುತ್ತಿದ್ದು ಸದರಿಯವರು ಸೇವಾ ವಿಷಯಗಳಲ್ಲಿ ಹೆಚ್ಚಿನ ಅನುಭವ ಹೊಂದಿರುವುದರಿಂದ ಬೃಹತ್ ಬೆಂಗಳೂರು ಮಹನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ನು ಮಾರ್ಪಡಿಸಲು ಹಾಗೂ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿವರ್ಗದವರ ಸೇವಾ ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸುವ ಕಾರ್ಯವನ್ನು ನಿರ್ವಹಿಸುವ ಸಲುವಾಗಿ ಒಂದು ವರ್ಷದ ಅವಧಿಗೆ ಮಾಹೆಯಾನ ರೂ. 15,000–00 ಗಳ ಸಂಚಿತ ವೇತನ ಆಧಾರದ ಮೇಲೆ ನೇಮಿಸಿಕೊಳ್ಳಲು ತೀರ್ಮಾನಿಸಲಾಗಿರುತ್ತದೆ..

ಶ್ರೀಮತಿ ಹರಿಣಿ ವನಜಕುಮಾರಿ, ಕೆ.ಎ.ಎಸ್., ರವರು ಸರ್ಕಾರದಿಂದ ಎರವಲು ಸೇವೆಯ ಮೇಲೆ ಪಾಲಿಕೆಯಲ್ಲಿ ಸಹಾಯಕ ಆಯುಕ್ತರು(ಆಡಳಿತ–2) ಹುದ್ದೆಯಲ್ಲಿ ಕಾರ್ಯನಿರ್ವಹಿಸಿ, ವಯೋಮಿತಿಗನುಗುಣವಾಗಿ ದಿ: 30–06–2011 ರಂದು ವಯೋನಿವೃತ್ತಿ ಹೊಂದಿರುತ್ತಾರೆ. ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳಿಗೆ ತಿದ್ದುಪಡಿ / ಪರಿಷ್ಕರಿಸುವ ವಿಷಯದಲ್ಲಿ ಸದರಿ ಅಧಿಕಾರಿಯವರ ಸೇವೆಯು ಅವಶ್ಯಕವಾಗಿರುತ್ತದೆ.

ನಿವೃತ್ತ ಸರ್ಕಾರಿ ಅಧಿಕಾರಿ / ನೌಕರರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳುವ ಸಂಬಬಂಧ 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ನಿಯಮಗಳ ನಿಯಮ–20ರಲ್ಲಿ ಈ ಕೆಳಕಂಡಂತೆ ಅವಕಾಶವಿರುತ್ತದೆ.

**20. Provision for appointment of retired persons and for appointment by contract :-**

Notwithstanding anything contained in rules the Corporation may with prior approval of the Government if it considers necessary for reasons to be recorded in writing that it is in the public interest so to do.

(a) Appointment to any category of post any person who has retired from service of the Government on such terms and conditions and for such period as may be necessary and after consultation of the Commission when such consultation is necessary;
(b) Appoint on contract any person not being a retired person to any category of post, if in the opinion of the Commissioner such person is able to discharge the duties of such post. The period of such contract appointment shall not exceed five years and shall be on such terms and conditions as may be determined by the Commissioner.

ಈ ಹಿನ್ನೆಲೆಯಲ್ಲಿ, ಶ್ರೀಮತಿ ಹರಿಣಿ ವನಜಕುಮಾರಿ, ಕೆ.ಎ.ಎಸ್., ನಿವೃತ್ತ ಅಧಿಕಾರಿಯವರನ್ನು ಪಾಲಿಕೆಯಲ್ಲಿ ಒಂದು ವರ್ಷದ ಅವಧಿಗೆ ಮಾಹೆಯಾನ ರೂ.15,000–00ಗಳ ಸಂಚಿತ ವೇತನದ ಆಧಾರದ ಮೇಲೆ ನೇಮಿಸಿಕೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :– ದಿನಾಂಕ : 12–08–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

**ಜಿ. ಮಂಜುನಾಥ್‌ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 26.09.2011 ರಂದು ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| ಶ್ರೀಯುತರುಗಳಾದ : | |
| ಜಿ. ಮಂಜುನಾಥರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ಜಿ. ಮಂಜುನಾಥ – ಸದಸ್ಯರು | ಅಪರ ಆಯುಕ್ತರು (ಆಸ್ತಿಗಳು) |
| ಲತಾ. ಕೆ – ಸದಸ್ಯರು | ಜಂಟಿ ಆಯುಕ್ತರು (ಆರೋಗ್ಯ ಮತ್ತು ಕಲ್ಯಾಣ), |
| ಎಂ.ಸಿ. ಶ್ರೀನಿವಾಸ್ – ಸದಸ್ಯರು | ಮುಖ್ಯ ಲೆಕ್ಕಾಧಿಕಾರಿ, ಸಹಾಯಕ ನಿಯಂತ್ರಕರು (ಹಣಕಾಸು–ನರ್ಮ್) |
| ವಿ. ವಾಗಿಶ್ – ಸದಸ್ಯರು | ಉಪ ಆಯುಕ್ತರು (ಆಸ್ತಿಗಳು), (ಭೂಸ್ವಾಧೀನ), |
| ಮಂಜುನಾಥ – ಸದಸ್ಯರು | ಸಹಾಯಕ ಆಯುಕ್ತರು (ಜಾಹೀರಾತು) |
| ಎಲ್. ನಾಗರತ್ನ – ಸದಸ್ಯರು | ಶಿಕ್ಷಣಾಧಿಕಾರಿ |
| ವರಲಕ್ಷ್ಮಿ. ಜೆ – ಸದಸ್ಯರು | ಅಧೀಕ್ಷಕ ಅಭಿಯಂತರರು (ರಸ್ತೆ–ಮೂಲಭೂತಸೌಕರ್ಯ) |
| ಆಶಾ ಸುರೇಶ್ – ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| ಎನ್. ಜಯಪಾಲ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಬೃಹತ್ ರಸ್ತೆಗಳು – ದಾಸರಹಳ್ಳಿ), (ವಿದ್ಯುತ್–ಪೂರ್ವ), (ಯೋಜನೆ–ಪೂರ್ವ), (ಚಾಮರಾಜಪೇಟೆ) (ಸಾರಿಗೆ), (ರಾಜರಾಜೇಶ್ವರಿನಗರ), (ಬೊಮ್ಮನಹಳ್ಳಿ ರಸ್ತೆ–ಮೂಲಭೂತಸೌಕರ್ಯ), |
| ಲಾವಣ್ಯಗಣೇಶ್‌ರೆಡ್ಡಿ – ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಾರಿಗೆ), (ಬ್ಯಾಟರಾಯನಪುರ), (ರಸ್ತೆ–ಮೂಲಭೂತಸೌಕರ್ಯ–ಪಶ್ಚಿಮ), (ಡಿ.ಇ.ಓ–ಕೃಷ್ಣರಾಜಪುರ), (ಡಿ.ಇ.ಓ–ಮಹದೇವಪುರ) |

*(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)*

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/172/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 16–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ಯೋಜನೆ ಕೇಂದ್ರ–2 ರವರು, ಮುಖ್ಯ ಅಭಿಯಂತರರು (ಯೋಜನೆ) ರವರ ಮೂಲಕ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ರೂ.220.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

| Sl.No. | Name of Works | Amount (Rs.in.lakhs) |
|---|---|---|
| 1 | Proposed construction of Eight Lane Corridor with loops, Underpass and Road under Bridges between Okalipuram Junction and fountain circle. | 220.00 |
| | Total Rs. | 220.00 |

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಸಂಬಂಧ ಪರಿಶೀಲಿಸಿ ಅಗತ್ಯ ಕ್ರಮವನ್ನು ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : 2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಾಮಗಾರಿ–ಯೋಜನಾ ಶಾಖೆಯಲ್ಲಿನ ಲೆಕ್ಕಶೀರ್ಷಿಕೆಯಲ್ಲಿ ಲಭ್ಯವಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/173/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 16–07–2011ರಲ್ಲಿ ವಿವರಿಸಿರುವಂತೆ, ಬೊಮ್ಮನಹಳ್ಳಿ ವಲಯದ ಹೆಚ್.ಎಸ್.ಆರ್ ಬಡಾವಣೆಯ 14ನೇ ಮುಖ್ಯರಸ್ತೆಯ 17ನೇ ಅಡ್ಡರಸ್ತೆಯಿಂದ 27ನೇ ಅಡ್ಡರಸ್ತೆವರೆಗೆ 775.00ಮೀ ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸುವ ಕಾಮಗಾರಿಗೆ 170.00 ಲಕ್ಷಗಳಿಗೆ 2009–10ರ PWD SR ಸೂಚಿಯಂತೆ ತಯಾರಿಸಿ ಕಾಮಗಾರಿಯ ಸಂಖ್ಯೆ : 000-10N-P-R-E-AS-046 ರಲ್ಲಿ (000-10-N-P-R-E-AS-075) ಕಂಡಿಕೆ (9) ರಲ್ಲಿ ಹಾಗೂ (44) ಆಯುಕ್ತರ ಅನುಮೋದನೆ ಪಡೆಯಲಾಗಿದ್ದು, ಅದರಂತೆ ಗುತ್ತಿಗೆ ಕರೆದು ಗುತ್ತಿಗೆದಾರರಾದ ಶ್ರೀ ಆರ್. ಲೋಕೇಶ್ ರವರಿಗೆ ಕಾಮಗಾರಿಯನ್ನು ಕೈಗೊಳ್ಳಲು ಕಾಯಾದೇಶವನ್ನು ಕಂಡಿಕೆ (51–52) ರಲ್ಲಿ ನೀಡಲಾಗಿತ್ತು.

ಸದರಿ ಕಾಮಗಾರಿಗೆ ನೀಡಲಾದ work code ನವೀಕರಿಸಲು ನಿಗಧಿತ Revalidation ನಮೂನೆಯಲ್ಲಿ ಭರ್ತಿ ಮಾಡಿ ಕಾಮಗಾರಿ ಸಂಖ್ಯೆಯನ್ನು ನವೀಕರಣಗೊಳಿಸಲು ಮುಖ್ಯ ಲೆಕ್ಕಾಧಿಕಾರಿಗಳಿಗೆ ಕಂಡಿಕೆ (93) ರಲ್ಲಿ ಕಡತವನ್ನು ಕಳುಹಿಸಲಾಗಿತ್ತು. ನಮೂನೆಯನ್ನು ಪರಿಶೀಲಿಸಿ job code No: 001802 ನೀಡಿ ಕೈಗೊಳ್ಳುವ ಕಾಮಗಾರಿಗೆ ಟಿವಿಸಿಸಿ ರವರಿಂದ ಕಾಮಗಾರಿಯ ಅಂದಾಜಿಗೆ ಫ್ರೀ ಆಡಿಟ್ ಮಾಡಿಸಿದ ನಂತರ ನವೀಕರಿಸಿದ ಕಾಮಗಾರಿಯ ಸಂಕೇತವನ್ನು ನೀಡಲಾಗುವುದು ಎಂದು ತಿಳಿಸಿ ಕಡತವನ್ನು ಹಿಂದಿರಿಗಿಸಿರುತ್ತಾರೆ. (ಪುಟ ಸಂಖ್ಯೆ : 34)

ದಿನಾಂಕ : 07–05–2011ರ ಮಾನ್ಯ ಬೊಮ್ಮನಹಳ್ಳಿ ಶಾಸಕರ ಪತ್ರ (ಪುಟ ಸಂಖ್ಯೆ 36) ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ ಎಲ್.ರಮೇಶ್ ವಾರ್ಡ್ ಸಂಖ್ಯೆ 187 ಪುಟ್ಟೇನಹಳ್ಳಿ ಪತ್ರದ ಅನುಸಾರವಾಗಿ ಮಾನ್ಯ ಆಯುಕ್ತರು, ಶಾಸಕರು ಹಾಗೂ ಸದಸ್ಯರು ಕೋರಿರುವ ರಸ್ತೆಗೆ ಅಂದಾಜನ್ನು ತಯಾರಿಸಿ, ಮೂಲ ಅಂದಾಜನ್ನು ಸದರಿ ರಸ್ತೆಗೆ ಕಾಮಗಾರಿಯನ್ನು ಸ್ಥಳ ಬದಲಾವಣೆ ಮಾಡಿ ಟೆಂಡರ್ ಕರೆಯಲು ಬರುವುದಿಲ್ಲ.

ಅದರಂತೆ ಈಗ ಜೆ.ಪಿ.ನಗರದ ಪಾಂಡುರಂಗ ಲೇಔಟ್ ರಸ್ತೆಗಳಿಗೆ Side Drain ಅಳವಡಿಸಿ, ವೆಂಕಟಾದ್ರಿ ಲೇಔಟ್ 1ನೇ ಮುಖ್ಯ ಹಾಗೂ ಅಡ್ಡ ರಸ್ತೆಗೆ ಉದ್ದ –90 ಮೀಟರ್‌ಗೆ ಅಭಿವೃದ್ಧಿಪಡಿಸುವ ಕಾಮಗಾರಿಯ ಅಂದಾಜನ್ನು PWD ದರ ಸೂಚಿ 2010–11ರಂತೆ ರೂ.170.00 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ. ಸದರಿ ರಸ್ತೆಯು ಸಬ್–ಆರ್ಟೀರಿಯಲ್ ರಸ್ತೆಯಾಗಿದ್ದು ವಾರ್ಡ್ ವತಿಯಿಂದ ಕೈಗೊಳ್ಳಲು ಬರುವುದಿಲ್ಲ.

ಸದರಿ ಅಂದಾಜನ್ನು ಟಿವಿಸಿಸಿ ರವರಿಂದ ದಿನಾಂಕ : 15–06–2011 ರಂದು ಸ್ಥಳ ಪರಿಶೀಲನೆ ಮಾಡಲಾಗಿದೆ. ಪ್ರಸ್ತುತ ರಸ್ತೆಯು ಬನ್ನೇರುಘಟ್ಟ ರಸ್ತೆಗೆ ಮುಖ್ಯ ಸಂಪರ್ಕ ಕಲ್ಪಿಸುವ ರಸ್ತೆಯಾಗಿದ್ದು, ವಾಹನ ಸಂಚಾರ ದಟ್ಟಣೆಯು ಅತ್ಯಂತ ಹೆಚ್ಚಾಗಿದ್ದು, ಪಾದಚಾರಿಗಳು ಚಲಿಸುವುದು ಬಹಳ ಕಷ್ಟಕರವಾಗಿರುತ್ತದೆ. ಈಗಿರುವ BS slab Drain ಶಿಥಿಲಗೊಂಡು, depleted ಸ್ಥಿತಿಯಲ್ಲಿದ್ದು, ಪೂರ್ಣ ಪ್ರಮಾಣದ ಹೂಳು ತುಂಬಿದ್ದು Drain ಆಳವು ಸುಮಾರು 1.00 ಮೀಟರ್ ನಿಂದ 1.10 ಇರುತ್ತದೆ. ಇದರಿಂದ ಪಾದಚಾರಿಗಳು Drain ನಲ್ಲಿ ಬೀಳುವ ಸಂಭವವಿರುತ್ತದೆ. ಆದ್ದರಿಂದ ಸ್ಥಳೀಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀ.ಎಲ್. ರಮೇಶ್ ರವರು (ವಾರ್ಡ್ 187, ಪುಟ್ಟೇನಹಳ್ಳಿ ವಾರ್ಡ್) ಸ್ಥಳ ಪರಿಶೀಲನೆ ನಡೆಸಿ ರಸ್ತೆ ಮೂಲಭೂತ ಸೌಕರ್ಯ ರವರಿಂದ ಸಮಗ್ರವಾಗಿ ಹೊಸದಾಗಿ RCC drain ನ್ನು ಹಾಗೂ Cover slab ಅಳವಡಿಸಿ ಪಾಡುರಂಗ ಹಾಗೂ ವೆಂಕಟಾದ್ರಿ ಲೇಔಟ್ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಕೋರಿರುವ ಪತ್ರವನ್ನು ಮಾನ್ಯ ಬೊಮ್ಮನಹಳ್ಳಿ ಶಾಸಕರಿಗೆ ಪತ್ರ ಬರೆದಿರುತ್ತಾರೆ. ಮಾನ್ಯ ಶಾಸಕರು ರವರ ಪತ್ರದಲ್ಲಿ ಪಾಂಡುರಂಗ ಲೇಔಟ್ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಮಾನ್ಯ ಆಯುಕ್ತರಿಗೆ ಕೋರಿದ್ದು, ಮಾನ್ಯ ಆಯುಕ್ತರ ಟಿಪ್ಪಣಿ ಅನ್ವಯ ಮೂಲ ಅಂದಾಜನ್ನು ಬದಲಾವಣೆ ಮಾಡಿ ಮರು ಟೆಂಡರ್ ಕರೆಯಲು ಸೂಚಿಸಿದ್ದಾರೆ.

ಸದರಿ ಕಾಮಗಾರಿಯನ್ನು ಕೈಗೊಳ್ಳಲು ಹಾಲಿ ನೀಡಲಾದ work code ಬಳಸಿಕೊಂಡು ಸದರಿ ಕಾಮಗಾರಿಗೆ ಮರು ಟೆಂಡರ್ ಕರೆಯಲು ಪ್ರಸ್ತಾಪಿಸಲಾಗಿದೆ. ಈಗಾಗಲೇ ನೀಡಿರುವ ಗುತ್ತಿಗೆ ಕರಾರನ್ನು ರದ್ದುಪಡಿಸಿ ಮರು ಟೆಂಡರ್‌ನ್ನು ಕರೆಯಲಾಗುವುದು ಆದ್ದರಿಂದ ಈ ಕೆಳಕಂಡ ಅಂಶಗಳಿಗೆ

- ಬದಲಾವಣೆ ಮಾಡಿರುವ ಸ್ಥಳದ ಕಾಮಗಾರಿಯ ಅಂದಾಜು ರೂ.170.00 ಲಕ್ಷಗಳಿಗೆ ಅನುಮೋದನೆ
- ಮರುಟೆಂಡರ್ ಕರೆಯಲು ಅನುಮೋದನೆ ಕೋರಿ ಕಡತವನ್ನು ಮಂಡಿಸಲಾಗಿತ್ತು.

ಮುಂದುವರೆದು ಕಂಡಿಕೆ (134) ಮಾನ್ಯ ಆಯುಕ್ತರವರು ಸದರಿ ಕಾಮಗಾರಿಯ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿರುತ್ತಾರೆ.

ಮಾನ್ಯ ಶಾಸಕರಾದ ಶ್ರೀ.ಎಸ್.ಸತೀಶ್ ರೆಡ್ಡಿ (ಬೊಮ್ಮನಹಳ್ಳಿ ವಿಧಾನ ಸಭಾಕ್ಷೇತ್ರ) ಹಾಗೂ ಶ್ರೀ ಎಲ್.ರಮೇಶ್ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರು (ವಾರ್ಡ್ ಸಂಖ್ಯೆ : 187 ಪುಟ್ಟೇನಹಳ್ಳಿ) ರವರು ಸಹ ಮಾನ್ಯ ಆಯುಕ್ತರಿಗೆ ಸದರಿ ಕಾಮಗಾರಿ ಕೈಗೊಳ್ಳಲು ಮನವಿ ಮಾಡಿರುತ್ತಾರೆ.

ಆದ್ದರಿಂದ ಸದರಿ ಕಾಮಗಾರಿಗೆ 2011–12 ಸಾಲಿನ ಆಯವ್ಯಯದಲ್ಲಿ ರೂ.170.00 ಲಕ್ಷಗಳ ಅಂದಾಜು ಮೊತ್ತಕ್ಕೆ ಅನುದಾನ ಒದಗಿಸಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## *03]. ವಿಷಯದ ಸಂಖ್ಯೆ :–ತೆಆಸ್ಥಾಸ/187/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 01–06–2011ರಲ್ಲಿ ವಿವರಿಸಿರುವಂತೆ, ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯು ಮೈಸೂರು ರಸ್ತೆಯಲ್ಲಿ ಕೆಂಗೇರಿಯಿಂದ ಪ್ರಾರಂಭಗೊಂಡು ಕೆಂಗೇರಿ ಉಪನಗರ ಹೊಯ್ಸಳ ವೃತ್ತ, ನೇತಾಜಿ ನಗರ, ನಾಗದೇವನಹಳ್ಳಿ, ಬೆಂಗಳೂರು ವಿಶ್ವವಿದ್ಯಾಲಯ ಪಶ್ಚಿಮ ದ್ವಾರ, ಮರಿಯಪ್ಪನಪಾಳ್ಯ, ಉಲ್ಲಾಳು ಕ್ರಾಸ್, ಮಲ್ಲತಹಳ್ಳಿ ಕ್ರಾಸ್, ಕೆಂಗುಟ್ಟೆ, ಅಂಬೇಡ್ಕರ್ ಕಾಲೇಜ್, ಪಾಪರೆಡ್ಡಿ ಪಾಳ್ಯ, ಕೆ.ಎಲ್.ಇ ವಿದ್ಯಾಸಂಸ್ಥೆಗಳು, ನಾಗರಭಾವಿ ಬಿ.ಡಿ.ಎ. ಕಾಂಪ್ಲೆಕ್ಸ್, ವಿಶ್ವೇಶ್ವರಯ್ಯ ಕಾನೂನು ಕಾಲೇಜ್, ಶ್ರೀಗಂಧದ ಕಾವಲ್ ಪಿ.ಯು ಕಾಲೇಜು ಮಾರ್ಗ, ಶ್ರೀಗಂಧದ ಕಾವಲ್ ಬಳಿ ಮಾಗಡಿ ಮುಖ್ಯ ರಸ್ತೆಯನ್ನು ಸಂಪರ್ಕಿಸುತ್ತದೆ. ನಂತರ ಮಾಗಡಿ ರಸ್ತೆಯಲ್ಲಿ ಹಾದು ಪುನ: ಸುಮನಹಳ್ಳಿ ಬಳಿಯಿಂದ ರಿಂಗ್ ರಸ್ತೆಯಾಗಿ ಪ್ರಾರಂಭಗೊಂಡು ಚೌಡೇಶ್ವರಿ ನಗರ, ಕೆಂಪೇಗೌಡ ನಗರ, ಲಗ್ಗೆರೆ, ಸ್ವಾತಂತ್ರ್ಯ ಯೋಧರ ನಗರ, ಡಾ॥ ರಾಜ್ ಕುಮಾರ್ ಸಮಾಧಿ ಮಾರ್ಗ ತುಮಕೂರು ರಸ್ತೆಯನ್ನು ಸಂಪರ್ಕಿಸುತ್ತದೆ. ಈ ರಿಂಗ್ ರಸ್ತೆಯು ಮೇಲೆ ವಿವರಿಸಿರುವಂತೆ, ಮೈಸೂರು ರಸ್ತೆಯಿಂದ ಮಾಗಡಿ ರಸ್ತೆಯ ಹಾಗೂ ತುಮಕೂರು ರಸ್ತೆಯನ್ನು ಮತ್ತು ಏಷ್ಯಾದಲ್ಲಿಯೇ ಪ್ರಮುಖ ಕೈಗಾರಿಕಾ ವಸಾಹತುವಾದ ಪೀಣ್ಯ ಕೈಗಾರಿಕಾ ಪ್ರದೇಶವನ್ನು ಸಂಪರ್ಕಿಸುವ ಬಾರಿ ಸಂಚಾರದ ಒತ್ತಡವಿರುವ ಹೊರವರ್ತುಲ ರಸ್ತೆಯಾಗಿದೆ. ರಿಂಗ್ ರಸ್ತೆಯ ಮೈಸೂರು ರಸ್ತೆ, ಮಾಗಡಿ ರಸ್ತೆ ಸಂಪರ್ಕಿಸುವ ರಸ್ತೆ ಭಾಗವು ದ್ವಿಮುಖ ಸಂಚಾರದ ಎರಡು ಪಥದ, ವಿಶೇಷವಾಗಿ ಬಾರಿ ಸರಕು ಸಾಗಣೆ ವಾಹನಗಳು, ಲಾರಿಗಳು, ನೂರಾರು ಬಿ.ಎಂ.ಟಿ.ಸಿ ಬಸ್ಸುಗಳು ಸಂಚರಿಸುತ್ತವೆ. ಈ ರಸ್ತೆ ಭಾಗದಲ್ಲಿ ರಸ್ತೆಯ ಎರಡು ಬದಿಗಳು ಸೇರಿದಲ್ಲಿ ಒಟ್ಟಾರೆ 33 ಬಸ್ ನಿಲುಗಡೆಗಳಿದ್ದು, ಬಸ್‌ಗಳ ಸಂಚಾರ ನಿಲುಗಡೆಗಳಿರುತ್ತವೆ. ರಿಂಗ್ ರಸ್ತೆಯನ್ನು ಹೊಂದಿಕೊಂಡಂತೆ, ನೂರಾರು ಜನ ವಸತಿಗಳು, ಬೆಂಗಳೂರು ವಿಶ್ವವಿದ್ಯಾಲಯ ಒಳಗೊಂಡಂತೆ, ಹಲವಾರು ವಿದ್ಯಾಸಂಸ್ಥೆಗಳು, ಪ್ರೌಢಶಾಲೆಗಳು, ಕಾಲೇಜುಗಳು, ಪಾಲಿಟೆಕ್ನಿಕ್/ಇಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಕಾಲೇಜುಗಳು, ಬಹಳಷ್ಟು ವಾಣಿಜ್ಯ ಮಳಿಗೆ ಹಾಗೂ ಸಂಕೀರ್ಣಗಳು, ಇತ್ಯಾದಿಗಳಿಗೆ ಈ ರಿಂಗ್ ರಸ್ತೆಯ ಸಂಪರ್ಕ ನಾಡಿಯಾಗಿರುತ್ತದೆ. ಮುಂದುವರೆದ ಭಾಗವಾಗಿ ವಾಣಿಜ್ಯ ಮಳಿಗೆಗಳು, ದರ್ಶಿನಿಗಳು, ಹೋಟೆಲ್‌ಗಳು, ಪೆಟ್ರೋಲ್ ಪಂಪ್‌ಗಳು, ಮಾರುಕಟ್ಟೆಗಳು, ಸಿನಿಮಾ ಮಂದಿರಗಳು ಸಹ ತಳವೂರುತ್ತಿರುತ್ತವೆ.

ಮೇಲೆ ವಿವರಿಸಿರುವಂತೆ, ಇತ್ತೀಚಿನ ದಿನಗಳಲ್ಲಿ ಈ ರಸ್ತೆಯಲ್ಲಿ ಭಾರಿ ವಾಹನಗಳ ಹಾಗೂ ಬಹಳಷ್ಟು ವಾಹನಗಳ ಸಂಚಾರದಟ್ಟಣೆ ಹೆಚ್ಚುತ್ತಿದ್ದು, ವೇಗ ಸಂಚಾರವು ಹೆಚ್ಚಾಗಿರುವುದರಿಂದ ಸಾರ್ವಜನಿಕರು, ಅದರಲ್ಲೂ ಶಾಲಾ ಮಕ್ಕಳು, ಮಹಿಳೆಯರು ಮತ್ತು ಹಿರಿಯನಾಗರಿಕರು ಪಾದಚಾರಿ ಮಾರ್ಗವನ್ನು ಬಳಸುವುದು ಅನಿವಾರ್ಯವಾಗಿದೆ. ಆದರೆ ಹಾಲಿ ಇರುವ ಪಾದಚಾರಿ ಮಾರ್ಗ ಸಮತಟ್ಟಾಗಿರದೆ, ಏರಿಳಿತಗಳಿಂದ, ಬಹಳೆಡೆ ಗುಂಡಿಗಳಿಂದ, ಕಟ್ಟಡ ಸಾಮಾಗ್ರಿಗಳು/ಭಗ್ನಾವಶೇಷಗಳಿಂದ, ಫುಟ್‌ಪಾತ್ ವ್ಯಾಪಾರದಿಂದ, ಶಿಥಿಲ ತೋಳು ಚರಂಡಿಗಳಿಂದ, ಮುರಿದ ಕರ್ಬುಗಳಿಂದ ಇದ್ದು, ಇದರಿಂದಾಗಿ ಪಾದಚಾರಿಗಳಿಗೆ ನಡೆಯುವುದು ಕಷ್ಟ ಸಾಧ್ಯವಾಗಿದೆ. ಸ್ವಲ್ಪ ಮಟ್ಟಿಗೆ ಉತ್ತಮ ಸ್ಥಿತಿಯಲ್ಲಿದೆ ಎನ್ನಬಹುದಾದ ಪಾದಚಾರಿ ಮಾರ್ಗದಲ್ಲಿಯೂ ವಿದ್ಯುತ್ ಕಂಬಗಳು, ಟ್ರಾನ್ಸಫಾರ್ಮರ್‌ಗಳು ಮತ್ತಿತರ ಅಡೆತಡೆಗಳು ಕಾಲ್ನಡಿಗೆಯ ಆಸೆಗೆ ತಣ್ಣೀರು ಎರಚುವಂತಿವೆ. ಸದಾ ಅಪಾಯಕ್ಕೆ ಆಹ್ವಾನ ನೀಡುವಂತಿವೆ.

ನಾಗರಿಕರ ಆರೋಗ್ಯದ ದೃಷ್ಟಿಯಿಂದಲೂ ಕಾಲ್ನಡಿಗೆ ಅಭ್ಯಾಸ ಬೆಳೆಸಿಕೊಂಡರೆ, ಅದಕ್ಕೆ ಪೂರಕವಾಗಿ ಪಾದಚಾರಿ ಮಾರ್ಗಗಳು ಅಭಿವೃದ್ಧಿಯಾದರೆ ಅದರಿಂದ ಸಮಾಜದ ಆರೋಗ್ಯ ಸುಧಾರಿಸಲಿದೆ. ಇದರ ಜೊತೆಯಲ್ಲಿಯೇ ಸೈಕಲ್ ತುಳಿಯುವಿಕೆ ಪ್ರೇರೇಪಿಸಲು ಸೈಕಲ್ ಪಥವನ್ನು ಪಾದಚಾರಿ ಮಾರ್ಗದಲ್ಲಿ ಮಿಳಿತಗೊಳಿಸುವುದು ಇಂದಿನ ಪ್ರಸ್ತುತತೆಯಾಗಿದೆ. ಅಷ್ಟರಮಟ್ಟಿಗೆ ವಾಹನಗಳ ಓಡಾಟ ಕಡಿಮೆಯಾದರೆ ಪರಿಸರ ಮಾಲಿನ್ಯ ಕೂಡ ಕಡಿಮೆಯಾಗಲಿದೆ.

ಈ ಪಾದಚಾರಿ ಮಾರ್ಗದ ಆಧುನೀಕರಿಸಿ ಪಾದಚಾರಿಗಳಿಗೆ ನಡಿಗೆಸ್ನೇಹಿಯಾಗಿ ಪರಿವರ್ತಿಸಲು ಸ್ಥಳೀಯ ಬಿ.ಬಿ.ಎಂ.ಪಿ ಸದಸ್ಯರುಗಳಾದ ಶ್ರೀ. ಅಂಜಿನಪ್ಪ ಕೆಂಗೇರಿ ವಾರ್ಡ್, ಶ್ರೀ. ರಾಜನ್ ಉಲ್ಲಾಳು ವಾರ್ಡ್, ಶ್ರೀ. ಎಸ್.ವೆಂಕಟೇಶ್ ಬಾಬು ಕೊಟ್ಟಿಗೆಪಾಳ್ಯ ವಾರ್ಡ್ ರವರುಗಳೂ ತಮ್ಮ ಪತ್ರ ದಿನಾಂಕ:03–04–2011, 20–04–2011 ಗಳಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಲ್ಲಿ ಕೋರಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯ ಆದ್ಯತೆಯ ಮತ್ತು ಹೆಮ್ಮೆಯ ಯೋಜನೆಯಾದ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆಯನ್ನು ಪಾದಚಾರಿ ಮಾರ್ಗದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಎಲ್ಲಾ, ಅಂದರೆ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥ ಒಳಗೊಂಡಂತೆ ನಡಿಗೆಯ ಸ್ನೇಹಿ ಪಾದಚಾರಿ ಮಾರ್ಗದ ಉನ್ನತೀಕರಣಗೊಳಿಸಲು 2010–11 ನೇ ಸಾಲಿನ ಲೋಕೋಪಯೋಗಿ, ಬೆಂಗಳೂರು ವೃತ್ತದ ದರಪಟ್ಟಿಯ ಅನುಸಾರ ಕೆಳಕಂಡಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

1. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 0.00 ಕಿ.ಮೀ. ಯಿಂದ 2.00 ಕಿ.ಮಿ ವರೆಗೆ, ಕೆಂಗೇರಿ ವಾರ್ಡ್) – ಅಂದಾಜು ರೂ.298.00 ಲಕ್ಷಗಳು
2. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 2.00 ಕಿ.ಮೀ. ಯಿಂದ 4.50 ಕಿ.ಮಿ ವರೆಗೆ, ಉಲ್ಲಾಳು ವಾರ್ಡ್) – ಅಂದಾಜು ರೂ.290.00 ಲಕ್ಷಗಳು
3. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 4.50 ಕಿ.ಮೀ. ಯಿಂದ 7.00 ಕಿ.ಮಿ ವರೆಗೆ, ಕೊಟ್ಟಿಗೆ ಪಾಳ್ಯ ವಾರ್ಡ್) – ಅಂದಾಜು ರೂ.288.00 ಲಕ್ಷಗಳು
4. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆಯಲ್ಲಿ ಮಳೆ ನೀರು ಅಂತರ್ಜಲ ಮರು ಪೂರಣ ವ್ಯವಸ್ಥೆ, ಸೈಕಲ್ ಪಥದೊಂದಿಗೆ ನಡಿಗೆ ಸ್ನೇಹಿ ಪಾದಚಾರಿ ಮಾರ್ಗ ಆಧುನೀಕರಣ (ಸರಪಳಿ 7.00 ಕಿ.ಮೀ. ಯಿಂದ 9.80 ಕಿ.ಮಿ ವರೆಗೆ, ಕೊಟ್ಟಿಗೆ ಪಾಳ್ಯ ವಾರ್ಡ್) – ಅಂದಾಜು ರೂ.360.00 ಲಕ್ಷಗಳು

ಸದರಿ ಕಾಮಗಾರಿಗಳಿಗೆ 2011–12 ನೇ ಸಾಲಿನ ಪಾದಚಾರಿ ಮಾರ್ಗ ಅಭಿವೃದ್ಧಿಯ ಲೆಕ್ಕ ಶೀರ್ಷಿಕೆ P–2193 ಅಡಿಯಲ್ಲಿ ಭರಿಸಿ ಈ ನಾಲ್ಕು ಅಂದಾಜುಗಳ ಯೋಜನೆಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಬೇಕಾದ ಹಿನ್ನಲೆಯಲ್ಲಿ, ಈ ನಾಲ್ಕು ಕಾಮಗಾರಿಗಳಿಗೆ ಪ್ರತ್ಯೇಕವಾಗಿ ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01–06–2011 ರ ಟಿಪ್ಪಣಿ ಹಾಗೂ ಸದರಿ ಟಿಪ್ಪಣಿಯನ್ನು ಒಪ್ಪಿರುವ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:16–06–2011 ರ ನಿರ್ಣಯವನ್ನು, "ಆರ್ಥಿಕ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗೆ ಕಡತವನ್ನು ಕಳುಹಿಸುವುದೆಂದು ತೀರ್ಮಾನಿಸಿರುವ ಪಾಲಿಕೆ ಸಭೆಯ ನಿರ್ಣಯದ ಬಗ್ಗೆ."

***<u>ನಿರ್ಣಯ :– 2011–12 ರ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>***

### ***<u>04]. ವಿಷಯದ ಸಂಖ್ಯೆ :–ತೆಆಸ್ಥಾಸ/190/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/99/11–12, ದಿನಾಂಕ : 04–07–2011ರಲ್ಲಿ ವಿವರಿಸಿರುವಂತೆ, ಕರ್ನಾಟಕ ನಾಯಕ ಜನಾಂಗದ ಕ್ಷೇಮಾಭಿವೃದ್ಧಿ ಸಂಘ (ರಿ), ಬೆಂಗಳೂರು ರವರು ತಮ್ಮ ಸಂಘದ ಕಾರ್ಯಚಟುವಟಿಕೆಗಳಿಗಾಗಿ ಭವನ ನಿರ್ಮಾಣ ಮಾಡುವ ಉದ್ದೇಶಕ್ಕೆ ವಾರ್ಡ್ ನಂ.141ರ ಅಜಾದ್‌ನಗರದಲ್ಲಿ ಇರುವ ನಗರ ಪಾಲಿಕೆಗೆ ಸೇರಿದ 30X43 ಅಡಿಗಳ ವಿಸ್ತೀರ್ಣವುಳ್ಳ ಖಾಲಿ ಜಾಗವನ್ನು ಗುರ್ತಿಸಿದ್ದು, ಈ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬೇಕೆಂದು ಕೋರಿರುತ್ತಾರೆ.

ಮೇಲೆ ತಿಳಿಸಿರುವ ಸಂಘವು ಗುರ್ತಿಸಿರುವ ಖಾಲಿ ಜಾಗವು ನಗರ ಪಾಲಿಕೆಗೆ ಸೇರಿದ್ದು, ಇದರಲ್ಲಿ ಯಾವುದೇ ಕಾಮಗಾರಿಯನ್ನು ಪ್ರಸ್ತಾಪಿಸಿರುವುದಿಲ್ಲವೆಂದು ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದು, ಸದರಿ ಸಂಘಕ್ಕೆ ಅವರು ಕೋರಿರುವಂತೆ 30x43 ಅಡಿ ವಿಸ್ತೀರ್ಣವುಳ್ಳ ಖಾಲಿ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ನೀಡಬಹುದೆಂದು ಜಂಟಿ ಆಯುಕ್ತರು (ಪಶ್ಚಿಮ) ರವರು ಪ್ರಸ್ತುತ ಜಾಗದ ನಕ್ಷೆ ಸಮೇತ ವರದಿ ಮಾಡಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ ಅನ್ವಯ 1976 ಕಲಂ 176ರ (6) ಹಾಗು (ಬಿ) 2 ಪ್ರಕಾರ 1 ವರ್ಷಕ್ಕೆ ಗುತ್ತಿಗೆ ನೀಡುವ ಅಧಿಕಾರ ಆಯುಕ್ತರಿಗೆ ಇರುತ್ತದೆ. ನಗರ ಯೋಜನೆ ಮತ್ತು ಅಭಿವೃದ್ಧಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆಯೊಡನೆ 3 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಈ ಸ್ಥಾಯಿ ಸಮಿತಿಗಳು ಮತ್ತು ಮಹಾನಗರ ಪಾಲಿಕೆಯ ಸಭೆಯ ಅನುಮೋದನೆಯೊಡನೆ 5 ವರ್ಷಗಳ ಅವಧಿಗೆ ಮೀರದಂತೆ ಗುತ್ತಿಗೆ ನೀಡಲು ಅವಕಾಶವಿರುತ್ತದೆ. ಗುತ್ತಿಗೆ ಅವಧಿಯು 5 ವರ್ಷಗಳಿಗಿಂತ ಹೆಚ್ಚಿಗೆ ಇದ್ದಲ್ಲಿ ಸರ್ಕಾರದ ಅನುಮೋದನೆ ಅವಶ್ಯವಿರುತ್ತದೆ.

ಸದರಿ ಸಂಘಕ್ಕೆ ಗುತ್ತಿಗೆ ನೀಡಲು ಪ್ರಸ್ತಾಪಿಸಿರುವ ಒಟ್ಟು ವಿಸ್ತೀರ್ಣ 30X43=1290 ಚದರ ಅಡಿಗಳು ಆಗುತ್ತದೆ. ಸರ್ಕಾರವು ಪ್ರಕಟಗೊಳಿಸಿರುವ 2007ರ ಮಾರ್ಗ ಸೂಚಿ ದರದಂತೆ ಈ ಪ್ರದೇಶದಲ್ಲಿ ಪ್ರಸ್ತುತ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ1000/–ಇರುತ್ತದೆ. ಇದರಂತೆ ಲೆಕ್ಕಚಾರ ಮಾಡಲಾಗಿ 12,90,000/– ಆಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ದರ ರೂ.1,29,000/– ಆಗುತ್ತದೆ ಹಾಗೂ ಮಾಸಿಕವಾಗಿ ರೂ.10,750/–/– ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ 129 ಟಿಎಂಡಿ 2002, ದಿನಾಂಕ:02–06–2003. ಸುತ್ತೋಲೆ ಪ್ರಕಾರ ಇನ್ನುಳಿದ ಎಲ್ಲಾ ಪ್ರಕರಣಗಳಲ್ಲೂ, ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 04–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19–07–2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 19–07–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಗುತ್ತಿಗೆ ಮೊತ್ತ ವಾರ್ಷಿಕ ರೂ.9600/–(ಒಂಬತ್ತು ಸಾವಿರದ ಆರುನೂರುಗಳು ಮಾತ್ರ)ಗಳನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***051. ವಿಷಯದ ಸಂಖ್ಯೆ :–ತೆಆಸ್ಥಾಸ/191/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/78/11–12, ದಿನಾಂಕ : 01–07–2011ರಲ್ಲಿ ವಿವರಿಸಿರುವಂತೆ, ಅಧ್ಯಕ್ಷರು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್ ರವರು ಪತ್ರ ಬರೆದು, ಕರ್ನಾಟಕ ರಾಜ್ಯದಲ್ಲಿ ಹಿಂದುಳಿದವರೆಂದು ಗುರುತಿಸಲ್ಪಟ್ಟಿರುವ ತಿಗಳರು ತಮ್ಮ ಜೀವನೋಪಾಯಕ್ಕಾಗಿ ಉಳಿಸಿಕೊಂಡಿದ್ದ ತೋಟದ ಜಮೀನುಗಳನ್ನು ಬೆಂಗಳೂರು ಅಭಿವೃದ್ಧಿಗಾಗಿ ಬಿಟ್ಟುಕೊಟ್ಟು ಸರ್ಕಾರದೊಂದಿಗೆ ಸಹಕರಿಸುತ್ತಿರುವ ತಿಗಳ ಜನಾಂಗದ ಸಂಪರ್ಕ ಕೇಂದ್ರವಾಗಿ ಕರಗಭವನ ಕಟ್ಟಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್‌ಸಂಖ್ಯೆ:119, ಪೈಲ್ವಾನ್ ಕೃಷ್ಣಪ್ಪ ರಸ್ತೆಯಲ್ಲಿರುವ ನಗರ ಪಾಲಿಕೆಯ 5300 ಚದರ ಅಡಿಗಳ ಖಾಲಿ ಜಾಗವನ್ನು ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್ ರವರಿಗೆ ಕರಗ ಭವನ ನಿರ್ಮಾಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ದಿನಾಂಕ:02–02–2010ರ ಮಾನ್ಯ ಆಡಳಿತಗಾರರ ನಡವಳಿಯಲ್ಲಿ ಆದಿಶಕ್ತಿ ವಿದ್ಯಾ ಸಂಸ್ಥೆ ಟ್ರಸ್ಟ್‌ರವರಿಗೆ ಕರಗ ಭವನ ನಿರ್ಮಾನಕ್ಕಾಗಿ ಮಾರುಕಟ್ಟೆ ದರದಲ್ಲಿ ನೀಡುವ ಪ್ರಸ್ತಾವನೆ ಒಪ್ಪಿ, ಸರ್ಕಾರದ ಅನುಮೋದನೆಗೆ ಪತ್ರ ಬರೆಯಲು ನಿರ್ಣಯಿಸಿದ್ದು, ಅದರಂತೆ, ಸರ್ಕಾರಕ್ಕೆ ಪತ್ರ ಬರೆಯಲಾಗಿ, ಸಲಹಾ ಸಮಿತಿ ಅಭಿಪ್ರಾಯ ಪಡೆದು ಸಲ್ಲಿಸುವಂತೆ ಸೂಚಿಸಿರುತ್ತದೆ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ:26–10–2010ರ ಸಲಹಾ ಸಮಿತಿ ಸಭೆಯಲ್ಲಿ ಈ ಪ್ರದೇಶ ಪಾಲಿಕೆ ಉಪಯೋಗಕ್ಕೆ ಅವಶ್ಯವಿರುವುದರಿಂದ ಅಭಿವೃದ್ಧಿಪಡಿಸಿ ಪಾಲಿಕೆ ಉದ್ದೇಶಗಳಿಗೆ ಉಪಯೋಗಕ್ಕೆ ಬಳಸಲು ಸೂಚಿಸಿರುತ್ತದೆ.

ಸದರಿ ಸಂಸ್ಥೆಯವರು ಮತ್ತೊಮ್ಮೆ ಮನವಿ ಸಲ್ಲಿಸಿ, ಶ್ರೀ ಧರ್ಮರಾಯ ಸ್ವಾಮಿ ದೇವಸ್ಥಾನದ ಉತ್ಸವಾದಿ ಕಾರ್ಯಕ್ರಮಗಳಿಗೆ ತಿಗಳ ಸಮುದಾಯದ ಉಪಯೋಗಕ್ಕೆ ಕರಗಭವನ ನಿರ್ಮಾಣಕ್ಕೆ ಈ ನಿವೇಶನವನ್ನು ಆದಿಶಕ್ತಿ ವಿದ್ಯಾಸಂಸ್ಥೆ ಟ್ರಸ್ಟ್‌ರವರಿಗೆ ಮಂಜೂರು ಮಾಡಲು ಕೋರಿರುತ್ತಾರೆ. ಈ ಬಗ್ಗೆ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.3300/–ಗಳಿದ್ದು, ಅರ್ಜಿದಾರರು ಕೋರಿರುವ ಜಾಗವು 5300 ಚ.ಅಡಿಗಳಾಗಿದ್ದು, ಇದರಂತೆ 5300x3300 = 1,74,90,000 ರೂಗಳಾಗುತ್ತದೆ. ಸರ್ಕಾರಿ ಮಾರ್ಗಸೂಚಿಯಂತೆ ವಾಣಿಜ್ಯ ಉದ್ದೇಶಕ್ಕೆ ಶೇಕಡ 40ರಷ್ಟು + ಮೂಲೆ ನಿವೇಶನಕ್ಕೆ ಶೇಕಡ 10ರಷ್ಟು ಹೆಚ್ಚಿಸಿ ಲೆಕ್ಕಾಚಾರ ಮಾಡಿದಾಗ ರೂ.2,62,35,000/– ಗಳಷ್ಟು ಮೊತ್ತ ಆಗುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ನಅಇ/129/ಟಿಎಂಡಿ/2002, ಬೆಂಗಳೂರು, ದಿ:02–06–2003ರ ಮಾರ್ಗಸೂಚಿಯಲ್ಲಿ ಪಾಲಿಕೆ ಸ್ವತ್ತುಗಳನ್ನು ಕ್ರಯದ ಆಧಾರದ ಮೇಲೆ ನೀಡಿದಲ್ಲಿ, ಸಾರ್ವಜನಿಕ ಹರಾಜು ಮೂಲಕವೇ ನೀಡುವುದು ಎಂದು ಇರುತ್ತದೆ.

ಮೇಲಿನ ಅಂಶಗಳೊಂದಿಗೆ ಪ್ರಸ್ತಾಪಿತ ನಿವೇಶನವನ್ನು ಆದಿಶಕ್ತಿ ವಿದ್ಯಾಸಂಸ್ಥೆ ಟ್ರಸ್ಟ್‌ರವರಿಗೆ ಕರಗ ಭವನ ನಿರ್ಮಾಣಕ್ಕೆ ನೀಡುವಲ್ಲಿ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 01–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19–07–2011ರ ನಿರ್ಣಯ.

*ನಿರ್ಣಯ :– ದಿನಾಂಕ : 19–07–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಮಾರ್ಪಡಿಸಿ ತಿಗಳ ಜನಾಂಗದ ಸಂಘದವರಿಂದ ಕೋರಿಕೆ ಬಂದಲ್ಲಿ ಮಾತ್ರ ಪರಿಗಣಿಸಬಹುದೆಂದು ಸಮಿತಿಯು ತೀರ್ಮಾನಿಸಿತು.*

## *061. ವಿಷಯದ ಸಂಖ್ಯೆ :–ತೆಆಸ್ಥಾಸ/195/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 21–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–73 ಮತ್ತು 198 ರ ಉದ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಮಾನ್ಯ ಅಧ್ಯಕ್ಷರು ತೋಟಗಾರಿಕೆ ಸ್ಥಾಯಿ ಸಮಿತಿ ರವರು ಸೂಚಿಸಿರುವಂತೆ 2011–12 ನೇ ಸಾಲಿಗೆ ಒಟ್ಟು 10 ಉಧ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಮೊತ್ತ ಒಟ್ಟು ರೂ.198.25 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿ, ಜಾಬ್ ಕೋಡ್ ಪಡೆದು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ :– ದಿನಾಂಕ : 21–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ರ ಆಯವ್ಯಯದಲ್ಲಿ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ ಲೆಕ್ಕಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯುವುದೆಂದು ಸಮಿತಿಯು ತೀರ್ಮಾನಿಸಿತು.*

## *07]. ವಿಷಯದ ಸಂಖ್ಯೆ :–ತೆಆಸ್ಥಾಸ/208/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 24–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–38, 73, 129, 130 ಮತ್ತು 198 ರ ಉಧ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಮಾನ್ಯ ಅಧ್ಯಕ್ಷರು ತೋಟಗಾರಿಕೆ ಸ್ಥಾಯಿ ಸಮಿತಿ ರವರು ಸೂಚಿಸಿರುವಂತೆ 2011–12 ನೇ ಸಾಲಿಗೆ ಒಟ್ಟು 11 ಉಧ್ಯಾನವನಗಳ ಆಸ್ತಿರಕ್ಷಣೆಗಾಗಿ ತಂತಿಬೇಲಿ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ಮೊತ್ತ ಒಟ್ಟು ರೂ.204.59 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿರಿಸಿ, ಜಾಬ್ ಕೋಡ್ ಪಡೆದು ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :–*** ***ದಿನಾಂಕ : 21–07–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ರ ಆಯವ್ಯಯದಲ್ಲಿ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ ಲೆಕ್ಕಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲು ಸಂಬಂಧಪಟ್ಟ ಸ್ಥಾಯಿ ಸಮಿತಿಯ ಅನುಮೋದನೆ ಪಡೆಯುವುದೆಂದು ಸಮಿತಿಯು ತೀರ್ಮಾನಿಸಿತು.***

## *08]. ವಿಷಯದ ಸಂಖ್ಯೆ :–ತೆಆಸ್ಥಾಸ/223/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಮಾಗಡಿ ಮುಖ್ಯ ರಸ್ತೆಯಿಂದ ನಾಗರಹೊಳೆ ನಗರದವರೆಗೆ ಇರುವ ರಸ್ತೆಯನ್ನು ಅಭಿವೃದ್ಧಿಗೊಳಿಸುವಂತೆ ಮಾನ್ಯ ನಗರಪಾಲಿಕೆ ಸದಸ್ಯರಾದ ಶ್ರೀಯುತ. ಎ.ಎಂ. ಹನುಮಂತೇಗೌಡ ರವರು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಂಬಂಧಿಸಿದ ಅಭಿಯಂತರರಿಗೆ ಸೂಚಿಸಲಾಗಿ ಸದರಿಯವರು ಅಗತ್ಯ ಅಂಶಗಳನ್ನು ಒಳಗೊಂಡಂತೆ ಕಾಮಗಾರಿಗೆ ರೂ.208.05 ಲಕ್ಷಗಳ ಅಂದಾಜು ಪಟ್ಟಿಯನ್ನು ಸಿದ್ದಪಡಿಸಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಮುಂದುವರೆದಂತೆ ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದ್ದು, ಈ ಸಂಬಂಧ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ವಾರ್ಡುಗಳಿಗೆ ಒದಗಿಸಿರುವ ಅನುದಾನದಲ್ಲಿ ದಿನಾಂಕ : 03–08–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## *09]. ವಿಷಯದ ಸಂಖ್ಯೆ :–ತೆಆಸ್ಥಾಸ/226/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ (ಯೋಜನೆ) ರವರು ಕಡತದ ಕಂಡಿಕೆ ಸಂಖ್ಯೆ 19 ರಲ್ಲಿ ನಮೂದಿಸಿರುವ 6 ಕಾಮಗಾರಿಗಳ ಒಟ್ಟು ಮೊತ್ತ ರೂ.599.41 ಲಕ್ಷಗಳಿಗೆ ಕಾಮಗಾರಿ ಸಂಖ್ಯೆ ನೀಡುವ ಸಲುವಾಗಿ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಲು ಮುಖ್ಯ ಅಭಿಯಂತರರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಕಂಡಿಕೆ ಸಂಖ್ಯೆ 24 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ, ಲೆಕ್ಕ ಶೀರ್ಷಿಕೆ ಮೂಲ ಭೂತ ಸೌಕರ್ಯಗಳು ಮುಖ್ಯ ರಸ್ತೆ/ಆರ್ಟೆರಿಯಲ್/ಉಪ ಆರ್ಟೆರಿಯಲ್ ರಸ್ತೆಗಳು ಪಿ.ಸಂಖ್ಯೆ 2019 ರಲ್ಲಿ ಒಟ್ಟು 6 ಕಾಮಗಾರಿಗಳ ಮೊತ್ತ ರೂ.599.41 ಲಕ್ಷಗಳ ಅನುದಾನವನ್ನು ಒದಗಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## 10]. ವಿಷಯದ ಸಂಖ್ಯೆ :–ತೆಆಸ್ಥಾಸ/227/2011–12

ಆಯುಕ್ತರ ಟಿಪ್ಪಣಿ ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, 2011–12 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಲು ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು, ಪೂಜ್ಯ ಮಹಾಪೌರರು, ಮಾನ್ಯ ವಿರೋದ ಪಕ್ಷದ ನಾಯಕರು, ಹಾಗೂ ಮಾನ್ಯ ಪಾಲಿಕೆ ಸದಸ್ಯರು ಕೋರಿರುತ್ತಾರೆ, ವಿವರ ಕೆಳಕಂಡಂತಿರುತ್ತದೆ.

| ಕ್ರಮ. ಸಂಖ್ಯೆ | ಅನುದಾನ ಒದಗಿಸಲು ಕೋರಿ ಪತ್ರ ನೀಡಿರುವವರು | ಅನುದಾನ ಒದಗಿಸಲು ಕೋರಿರುವ ಉದ್ದೇಶ | ಮೊತ್ತ ರೂ. (ಲಕ್ಷಗಳಲ್ಲಿ) |
|---|---|---|---|
| 1 | ಶ್ರೀ.ಆರ್.ಅಶೋಕ, ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಕರ್ನಾಟಕ ಸರ್ಕಾರ | ಶ್ರೀ.ಎನ್.ಆರ್ ನಂಜುಂಡೇ ಗೌಡ ಅಧ್ಯಕ್ಷರು Childrens India Forum for childrens film's Educational & other allied activities ರವರು ಪ್ರಸ್ತುತ ಪಡಿಸುವ "ಮನೆ ಮುಂದೆ ಮಕ್ಕಳ ಸಿನಿಮಾ" ಕಾರ್ಯಕ್ರಮಕ್ಕೆ ಅನುದಾನ ಒದಗಿಸುವ ಬಗ್ಗೆ. | 25.00 |
| 2 | ಶ್ರೀಮತಿ. ಶಾರದಮ್ಮ, ಪೂಜ್ಯ ಮಹಾಪೌರರು. | ಮೈಸೂರು ಉದ್ಯಾನಕಲಾ ಸಂಘದವರಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಕಾದಿರಿಸುವ ಕುರಿತು. | 5.00 |
| 3 | ಶ್ರೀ. ಎಂ. ಉದಯಶಂಕರ್, ವಿರೋದ ಪಕ್ಷದ ನಾಯಕರು. | ವಾರ್ಡ್ 33ರ ವ್ಯಾಪ್ತಿಯ ಮನೋರಾಯನಪಾಳ್ಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸೌಲಭ್ಯ ನೀಡಲು ವಿಶೇಷ ಅನುದಾನ ಮೀಸಲಿಡುವ ಕುರಿತು. | 200.00 |
| 4 | ಶ್ರೀ. ಎಂ. ಉದಯಶಂಕರ್, ವಿರೋದ ಪಕ್ಷದ ನಾಯಕರು. | ವಾರ್ಡ್ 33ರ ವ್ಯಾಪ್ತಿಯ ಮನೋರಾಯನಪಾಳ್ಯ ವ್ಯಾಪ್ತಿಯಲ್ಲಿ ತಗ್ಗು ಪ್ರದೇಶ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 2011–12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನ ಮೀಸಲಿಡುವ ಕುರಿತು. | 250.00 |
| 5 | ಶ್ರೀ. ಎಂ. ಉದಯಶಂಕರ್, ವಿರೋದ ಪಕ್ಷದ ನಾಯಕರು. | ವಾರ್ಡ್ 33ರ ವ್ಯಾಪ್ತಿಯ ಮನೋರಾಯನಪಾಳ್ಯ ವ್ಯಾಪ್ತಿಯ ರಸ್ತೆಗಳಲ್ಲಿ ಸರ್ವಿಸ್ ಡ್ರೈನ್ ಹಾರ್ವೆಸ್ಟಿಂಗ್ ಪದರಗಳನ್ನು ನಿರ್ಮಿಸಲು ವಿಶೇಷ ಅನುದಾನ ಮೀಸಲಿಡುವ ಕುರಿತು. | 200.00 |
| 6 | ಶ್ರೀ. ಎಂ. ಉದಯಶಂಕರ್, ವಿರೋದ ಪಕ್ಷದ ನಾಯಕರು. | ವಾರ್ಡ್ 33ರ ವ್ಯಾಪ್ತಿಯ ಮನೋರಾಯನಪಾಳ್ಯ ವ್ಯಾಪ್ತಿಯ ಸೀತಪ್ಪ ಬಡಾವಣೆಯಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡುವ ಬಗ್ಗೆ | 200.00 |
| 7 | ಶ್ರೀ.ಅಶ್ವತ್ಥನಾರಾಯಣ ಗೌಡ ಸದಸ್ಯರು ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ಕೆಳಸೇತುವೆ ನಿರ್ಮಾಣದ ಬಾಬ್ತು ಪೂರ್ಣ ಹಣವನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿಡುವ ಬಗ್ಗೆ. | ಮೊತ್ತ ನಮೂದಿಸಿಲ್ಲ |
| 8 | ಶ್ರೀ.ಅಶ್ವತ್ಥನಾರಾಯಣ ಗೌಡ ಸದಸ್ಯರು ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ವ್ಯಾಪ್ತಿಯ ವಾರ್ಡ್ 8ರಲ್ಲಿ ಅಂತರರಾಷ್ಟ್ರೀಯ ಮಟ್ಟದ ಈಜು ಕೊಳ ಮತ್ತು ಕ್ರೀಡಾ ಸಂಕೀರ್ಣ ಒದಗಿಸುವ ಬಗ್ಗೆ. | 500.00 |
| 9 | ಶ್ರೀ.ಅಶ್ವತ್ಥನಾರಾಯಣ ಗೌಡ ಸದಸ್ಯರು ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ವ್ಯಾಪ್ತಿಯ ವಾರ್ಡ್ 8ರಲ್ಲಿ ವಿಶೇಷ ಅಭಿವೃದ್ಧಿ ಕಾಮಗಾರಿ ಅಡಿಯಲ್ಲಿ ಒದಗಿಸುವ ಬಗ್ಗೆ. | 300.00 |
| 10 | ಶ್ರೀ.ಅಶ್ವತ್ಥನಾರಾಯಣ ಗೌಡ ಸದಸ್ಯರು ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ವ್ಯಾಪ್ತಿಯ ವಾರ್ಡ್ 8ರಲ್ಲಿ ವಿದ್ಯುತ್ ಕಂಬಗಳ ಸ್ಥಳಾಂತರ, ತಂತಿ ಮಾರ್ಗ ಮತ್ತು ಬೀದಿ ದೀಪಕ್ಕೆ ಅವಶ್ಯಕ ಇರುವ ಕಂಬಗಳನ್ನು ಅಳವಡಿಸುವ ಬಗ್ಗೆ. | 50.00 |

| | | | |
|---|---|---|---|
| 11 | ಶ್ರೀ.ಅಶ್ವತ್ಥನಾರಾಯಣ ಗೌಡ ಸದಸ್ಯರು ಬಿ.ಬಿ.ಎಂ.ಪಿ | ಕೊಡಿಗೇಹಳ್ಳಿ ವ್ಯಾಪ್ತಿಯ ವಾರ್ಡ್ 8ರಲ್ಲಿ ಸರ್ಕಾರಿ ಶಾಲಾ ಕಟ್ಟಡ ನಿರ್ಮಿಸುವ ಬಗ್ಗೆ | 200.00 |

ಮೇಲ್ಕಂಡ ಕೋರಿಕೆಗಳ ಬಗ್ಗೆ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : 2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *11]. ವಿಷಯದ ಸಂಖ್ಯೆ :–ತೆಆಸ್ಥಾಸ/228/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 105ರ ಸದಸ್ಯರು ಹಾಗೂ ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀಮತಿ ರೂಪದೇವಿ ರವರು ಪತ್ರ ನೀಡಿ 9ನೇ ಕ್ರಾಸ್, ಅಗ್ರಹಾರ ದಾಸರಹಳ್ಳಿ ಜೈಮುನಿರಾವ್ ವೃತ್ತದಿಂದ ಹಾವನೂರು ವೃತ್ತದ ವರೆಗೆ ಡಾಂಬರೀಕರಣ ಮತ್ತು ಒಳಚರಂಡಿ ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಕಾಮಗಾರಿಗೆ ರೂ.237.00 ಲಕ್ಷಗಳನ್ನು ಅಂದಾಜಿಸಲಾಗಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.237.00 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *12]. ವಿಷಯದ ಸಂಖ್ಯೆ :–ತೆಆಸ್ಥಾಸ/229/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 105ರ ಸದಸ್ಯರು ಹಾಗೂ ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀಮತಿ ರೂಪದೇವಿ ರವರು ಪತ್ರ ನೀಡಿ ಎಂ.ಸಿ.ಲೇಔಟ್ 1ನೇ ಮುಖ್ಯರಸ್ತೆ ಮತ್ತು 8ನೇ ಮುಖ್ಯರಸ್ತೆಗಳಿಗೆ ಡಾಂಬರೀಕರಣ ಮತ್ತು ಒಳಚರಂಡಿ ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಕಾಮಗಾರಿಗೆ ರೂ.217.00 ಲಕ್ಷಗಳನ್ನು ಅಂದಾಜಿಸಲಾಗಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.217.00 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *13]. ವಿಷಯದ ಸಂಖ್ಯೆ :–ತೆಆಸ್ಥಾಸ/230/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ : 61ರ ಸದಸ್ಯರಾದ ಶ್ರೀಮತಿ. ದೇವಿಕಾರಾಣಿ ಶ್ರೀಧರ್ ರವರು ದಿನಾಂಕ : 19–03–2011 ರಂದು ಪತ್ರ ನೀಡಿ, ಪುಲಿಕೇಶಿನಗರ

ವಿಧಾನಸಭಾ ಕ್ಷೇತ್ರದ ಎಸ್.ಕೆ.ಗಾರ್ಡನ್ ರಸ್ತೆಯು ತೀವ್ರ ಹಾಳಾಗಿದ್ದು ಹಾಗೂ ಸದರಿ ರಸ್ತೆಯಲ್ಲಿ ಅತೀವ ವಾಹನ ಸಂಚಾರವಿರುವುದರಿಂದ, ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ರಸ್ತೆಗಳ ಅಭಿವೃದ್ಧಿಗೆ ರೂ.112.00 ಲಕ್ಷಗಳನ್ನು ಅಂದಾಜಿಸಲಾಗಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಮೇಲಿನ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.112.00 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***14]. ವಿಷಯದ ಸಂಖ್ಯೆ :–ತೆಆಸ್ಥಾಸ/231/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಶ್ರೀ ಎ.ಎಂ. ಹನುಮಂತೇಗೌಡ, ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 72 ಇವರು ತಮ್ಮ ಪತ್ರದಲ್ಲಿ ವಾರ್ಡ್ ಸಂಖ್ಯೆ 72ರ ಹೇರೋಹಳ್ಳಿ ವ್ಯಾಪ್ತಿಯ ಕೆ.ಎಸ್.ಆರ್.ಟಿ.ಸಿ ಬಡಾವಣೆಯಲ್ಲಿ (UGD) ಒಳಚರಂಡಿ ನಿರ್ಮಾಣದ ಕಾಮಗಾರಿಯ ಅಂದಾಜು ಮೊತ್ತ ರೂ.49.90 ಲಕ್ಷಗಳನ್ನು ತುರ್ತು ಕಾಮಗಾರಿಗಳ ಅಡಿಯಲ್ಲಿ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮೇಲ್ಕಂಡ ಕಾಮಗಾರಿಗಳನ್ನು 2010–11ನೇ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಅನುದಾನ ಲಭ್ಯವಿರುವುದಿಲ್ಲ. ಆದ್ದರಿಂದ ಸದರಿ ಕಾಮಗಾರಿಯ ಮೊತ್ತ ರೂ.49.90 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಲೆಕ್ಕಶೀರ್ಷಿಕೆ ''ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541'' ಅಡಿ ಸೂಕ್ತ ಅನುದಾನ ಒದಗಿಸಿಕೊಳ್ಳಲು ಹಾಗೂ ಅನುಷ್ಠಾನಗೊಳಿಸುವುದರ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ 03–08–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ತುರ್ತು ಕಾಮಗಾರಿಗಳಿಗಾಗಿ ಮೀಸಲಿರಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## ***15]. ವಿಷಯದ ಸಂಖ್ಯೆ :–ತೆಆಸ್ಥಾಸ/233/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ–42ರ ಲಕ್ಷ್ಮಿದೇವಿನಗರ ವ್ಯಾಪ್ತಿಯಲ್ಲಿ ಒಟ್ಟು ಆರು ಕಾಮಗಾರಿಗಳಿಗೆ 2011–12ನೇ ಸಾಲಿನಲ್ಲಿ ರೂ.1600.00 ಲಕ್ಷಗಳ ಅನುದಾನವನ್ನು ಮೀಸಲಿಡುವಂತೆ ಸ್ಥಳೀಯ ಬಿ.ಬಿ.ಎಂ.ಪಿ ಸದಸ್ಯರು ರವರು ಮಾಡಿರುವ ಮನವಿಯ ಮೇರೆಗೆ ವಾರ್ಡ್ ನಂ.42ರ ಲಕ್ಷ್ಮಿದೇವಿನಗರದಲ್ಲಿ ಒಟ್ಟು ಆರು ಕಾಮಗಾರಿಗಳನ್ನು ಕೈಗೊಳ್ಳಲು ರೂ.1600.00 ಲಕ್ಷಗಳ ಅಂದಾಜನ್ನು ತಯಾರಿಸಲಾಗಿರುತ್ತದೆ. 2011–12ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಟ್ಟು ಜಾಬ್ ಕೋಡ್ ನೀಡಲು ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *16]. ವಿಷಯದ ಸಂಖ್ಯೆ :–ತೆಆಸ್ಥಾಸ/235/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ನರಸೀಪುರ ಕೆರೆಯು ಬಿ.ಬಿ.ಎಂ.ಪಿಗೆ ಒಳಪಟ್ಟ ಕೆರೆಯಾಗಿದ್ದು, ನರಸೀಪುರ ಸ.ನಂ26 ರ (ತಿಂಡ್ಲು) ಕೆರೆಯನ್ನು ಅಭಿವೃದ್ಧಿಗೊಳಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಕೋರಿರುತ್ತಾರೆ. ಹಾಗೂ ಸದರಿ ಕೆರೆಯು ಬಿಡಿಎ ಗೆ ಹಸ್ತಾಂತರಿಸಲು ಪ್ರಸ್ತಾಪಿಸಿರುವ ಕೆರೆಗಳ ಪಟ್ಟಿಯಲ್ಲಿ ಸೇರಿಲ್ಲದ ಕಾರಣ ಮಾನ್ಯ ಆಡಳಿತ ಪಕ್ಷದ ನಾಯಕರು ಸದರಿ ಕೆರೆಯನ್ನು ಅಭಿವೃದ್ಧಿ ಪಡಿಸಲು ತುರ್ತು ಕ್ರಮ ವಹಿಸಲು ಸೂಚಿಸಿರುತ್ತಾರೆ.

ಅದರಂತೆ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

- ಕೆರೆಯ ಏರಿಯ ಜಂಗಲ್ ತೆಗೆಯುವ ಕೆಲಸ.
- ಕೆರೆಯ ಅಂಗಳದಲ್ಲಿರುವ ದೊಡ್ಡ ಜೊಂಡನ್ನು ತೆಗೆದು, ಅದರ ಬೇರನ್ನು ತೆಗೆಯಲು 15ಸೆಂ.ಮೀ ಆಳಕ್ಕೆ ಹೂಳನ್ನು ತೆಗೆಯುವ ಕೆಲಸ.
- ಹಾಲಿ ಇರುವ ಏರಿಯನ್ನು ಬಲ ಪಡಿಸುವುದು.
- ಏರಿಯ ಸುತ್ತಲೂ ನೆಡೆದಾಡುವ ಎರಡು ಬದಿ ದಾರಿಗೆ ಕರ್ಬ್ ಅಳವಡಿಸುವುದು.
- ಕೆರೆಯ ಕೋಡಿಯ ಹತ್ತಿರ ಕಾಲುಸೇತುವೆ ನಿರ್ಮಾಣ.
- ದ್ವೀಪದಲ್ಲಿರುವ ಗಝೆಬೋ ಹಾಳಾಗಿದ್ದು, ಅದಕ್ಕೆ ದರಸ್ಥಿ ಕೆಲಸಮಾಡುವುದು.
- ಕೆರೆಯಲ್ಲಿ ವಿದ್ಯುಧೀಕರಣ ಹಾಗೂ ಅರಣ್ಯೀಕರಣ ಕಾಮಗಾರಿ.

ನರಸೀಪುರ ಸ.ನಂ26 ರ (ತಿಂಡ್ಲು) ಕೆರೆಯನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ ತಗುಲುವ ವೆಚ್ಚ ರೂ. 60.00 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗೆ **2011–12 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸುವ ಷರತ್ತಿಗೆ ಒಳಪಟ್ಟು, ಜಾಬ್ ನಂಬರ್ ನೀಡಲು ಕೋರಿ** ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ :* **ದಿನಾಂಕ:05–08–2011ರ ಆಯುಕ್ತರ ಟಿಪ್ಪಣೆಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಕೆರೆಗಳ ಅಭಿವೃದ್ಧಿಗಾಗಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *17]. ವಿಷಯದ ಸಂಖ್ಯೆ :–ತೆಆಸ್ಥಾಸ/236/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ಶ್ರೀ ಎಂ ಹನುಮಂತೇಗೌಡ, ಮಾನ್ಯ ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ 72 ಇವರು ಮುದ್ದಯ್ಯನ ಪಾಳ್ಯ ರಿಂಗ್ ರಸ್ತೆಗೆ ಹಾದು ಹೋಗುವ ರಸ್ತೆಯಲ್ಲಿ ಪ್ರತಿ ನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ಕೂಡಲೇ ಸೇತುವೆ ನಿರ್ಮಾಣ ಮಾಡುವ ಕಾಮಗಾರಿಯ ಅಂದಾಜು ಮೊತ್ತ ರೂ.89.00 ಲಕ್ಷಗಳಿಗೆ ಅನುಮೋದನೆ ನೀಡಲು ಕೋರಿದ್ದು, ಕಾರ್ಯಪಾಲಕ ಅಭಿಯಂತರರು – ರಸ್ತೆ ಮೂಲಭೂತ ಸೌಕರ್ಯ ಇವರು ತುರ್ತು ಕಾಮಗಾರಿಗಳ ಅನುದಾನದಲ್ಲಿ ಜಾಬ್ ಸಂಖ್ಯೆ ನೀಡಲು ಪ್ರಸ್ಥಾವನೆ ಸಲ್ಲಿಸಿರುತ್ತಾರೆ.

ಸಾರ್ವಜನಿಕರ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸುವ ಅವಶ್ಯವಿದ್ದು, 2010–11ನೇ ಸಾಲಿನ ಆಯವ್ಯಯದಲ್ಲಿ ಮೇಲ್ಕಂಡ ಕಾಮಗಾರಿಗೆ ''ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541'' ಅಡಿ ಸೂಕ್ತ ಅನುದಾನ ಒದಗಿಸಿಕೊಂಡು ಅನುಷ್ಟಾನಗೊಳಿಸುವುದರ ಬಗ್ಗೆ ಹಾಗೂ ಜಾಬ್ ಸಂಖ್ಯೆ ನೀಡುವುದರ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *18]. ವಿಷಯದ ಸಂಖ್ಯೆ :–ತೆಆಸ್ಥಾಸ/237/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೃಷ್ಣರಾಜಪುರ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಎನ್. ಎಸ್. ನಂದೀಶರೆಡ್ಡಿ ರವರು ಹೆಚ್.ಎ.ಎಲ್. ಏರ್‌ಪೋರ್ಟ್ ವಾರ್ಡ್ 87ರ ಅನ್ನಸಂದ್ರಪಾಳ್ಯ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ಸಾರ್ವಜನಿಕರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ರೂ.300.00 ಲಕ್ಷಗಳ ಅನುದಾನವನ್ನು ಮತ್ತು ವಾರ್ಡ್ 87ರ ನೆಲ್ಲೂರುಪುರದಿಂದ ರೆಡ್ಡಿಪಾಳ್ಯ ಎಲ್.ಬಿ.ಶಾಸ್ತ್ರಿನಗರ ಮೂಲಕ ವಿಭೂತಿಪುರ ಕೆರೆವರೆಗೆ ರಾಜಕಾಲುವೆ ಕಾಮಗಾರಿಗಳನ್ನು ಕೈಗೊಳ್ಳಲು ರೂ.400.00 ಲಕ್ಷ ಒಟ್ಟು ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕೆಂದು ಕೋರಿ ಪತ್ರವನ್ನು ಸಲ್ಲಿಸಿರುತ್ತಾರೆ. ಪತ್ರವನ್ನು ಲಗತ್ತಿಸಿದೆ.

2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಪ್ರಕ್ರಿಯೆ ನಡೆಯುತ್ತಿರುವ ಹಿನ್ನೆಲೆಯಲ್ಲಿ ಸದರಿ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂದಿಸಿದಂತೆ ಅನುದಾನದ ಮೊತ್ತ ರೂ.700.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಲ್ಪಿಸುವ ಸಲುವಾಗಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## *19]. ವಿಷಯದ ಸಂಖ್ಯೆ :–ತೆಆಸ್ಥಾಸ/239/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/52/11–12, ದಿನಾಂಕ : 22–07–2011ರಲ್ಲಿ ವಿವರಿಸಿರುವಂತೆ, ಶ್ರೀ.ಕುಪ್ಪಯ್ಯ ಬಿನ್ ತಂಗಪ್ಪ ರವರಿಗೆ ನಗರ ಪಾಲಿಕೆ ವತಿಯಿಂದ ವಾರ್ಡ್ ನಂ.04ರ ಹೆಚ್.ಎಂ.ಟಿ ಮುಖ್ಯರಸ್ತೆ, 1ನೇ ಕ್ರಾಸ್, ಎಂ.ಎಸ್.ರಾಮಯ್ಯ ಕಾಲೇಜ್ (ಕಾರ್ನರ್) ಚರ್ಮ ಕುಟೀರ ನಡೆಸುವ ಸಲುವಾಗಿ 6x6 ಅಡಿಗಳ ವಿಸ್ತೀರ್ಣವುಳ್ಳ ಜಾಗವನ್ನು 01–02–2004ರಲ್ಲಿ ಗುತ್ತಿಗೆ ಮೊತ್ತ ಮಾಸಿಕ ರೂ.300/– ರಂತೆ 3 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿತ್ತು. ಸದರಿ ಅವಧಿಯು 2007ಕ್ಕೆ ಮುಕ್ತಾಯವಾಗಿದ್ದು, ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸುವಂತೆ ಅರ್ಜಿದಾರರು ದಿ:09–11–2009 ರಂದು ಮನವಿ ಸಲ್ಲಿಸಿರುತ್ತಾರೆ.

ವಲಯಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುವಂತೆ ದಿನಾಂಕ:01–02–2007 ರಂದು ಗುತ್ತಿಗೆ ಅವಧಿ ಮುಗಿದಿರುವ ಮೇರೆಗೆ ದಿನಾಂಕ:02–02–2007 ರಿಂದ 01–02–2010ರ ವರೆಗೆ 3 ವರ್ಷಗಳ ಅವಧಿಗೆ (ಹಿಂದಿನ ಮಾಸಿಕ ಮೊತ್ತ ರೂ.300/– ಗಳಿಗೆ) ಶೇ 10% ರಷ್ಟು ಹೆಚ್ಚಿಸಿ ರೂ.330/– ಎಂದು ನಿಗಧಿಪಡಿಸಿ ಒಟ್ಟು ಮೊತ್ತ 11,880/–ಗಳಾಗಿದ್ದು, ಇದರಂತೆ ಗುತ್ತಿಗೆ ಮೊತ್ತವನ್ನು ಪಾವತಿಸಲು ಗುತ್ತಿಗೆದಾರರಿಗೆ ದಿನಾಂಕ: 30–08–2010 ರಂದು ಹಿಂಬರಹವನ್ನು ಜಾರಿ ಮಾಡಿರುತ್ತಾರೆ.

ಸದರಿ ಅರ್ಜಿದಾರರು ದಿನಾಂಕ:30–04–2011 ರಂದು ರೂ.12,000/–ಗಳ ಗುತ್ತಿಗೆ ಮೊತ್ತವನ್ನು ಪಾವತಿಸಿರುತ್ತಾರೆ ಈಗ ದಿನಾಂಕ:01–02–2010 ರಿಂದ 5 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು ವಿಸ್ತರಿಸಬಹುದೆಂದು ವಲಯಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.

ಪ್ರಸ್ತುತ ಸ್ವತ್ತಿನ ಗುತ್ತಿಗೆ ಅವಧಿಯು 2007ಕ್ಕೆ ಮುಕ್ತಾಯವಾಗಿದ್ದು, ಸರ್ಕಾರದ 2007ರ ಮಾರ್ಗಸೂಚಿ ದರದಂತೆ ಪ್ರಸ್ತುತ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ 2200/–ರೂ.ಗಳಿದ್ದು, ಇದಕ್ಕೆ ವಾಣಿಜ್ಯ ಉದ್ದೇಶಕ್ಕೆ ಶೇ:40%ರಷ್ಟು ಹೆಚ್ಚಿಸಿದಾಗ, ರೂ.3080/–ಗಳಾಗುತ್ತದೆ. ಇದರಂತೆ, 66 ಚದರ ಅಡಿ ಜಾಗಕ್ಕೆ 3080X66=1,10,880/– ರೂ ಆಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ದರ ರೂ. 11,080/– ಗಳಾಗುತ್ತದೆ. ಹಾಗೂ ಮಾಸಿಕ ಗುತ್ತಿಗೆ ದರವು ರೂ.930/– ಆಗುತ್ತದೆ ಎಂದು ತಿಳಿಸಿ, ಗುತ್ತಿಗೆ ಅವಧಿ ನವೀಕರಣಕ್ಕೆ ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ಶ್ರೀ ಕುಪ್ಪಯ್ಯ ರವರಿಗೆ ನೀಡಿರುವ ಗುತ್ತಿಗೆ ಅವಧಿಯನ್ನು ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ನೀಡುವ ಬಗ್ಗೆ, ಸದರಿ ಚರ್ಮ ಕುಟೀರವು ದೇವಸ್ಥಾನಕ್ಕೆ ನೇರವಾಗಿರದಂತೆ ಪಕ್ಕಕ್ಕೆ ಸ್ಥಳಾಂತರಿಸಿ ಪಾದಚಾರಿಗಳಿಗೆ ತೊಂದರೆ ಆಗದಂತೆ ನಿರ್ವಹಿಸುವ ಷರತ್ತಿನೊಂದಿಗೆ ಆಯುಕ್ತರ ದಿ:22–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 02–08–2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 02–08–2011ರ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.500/– (ಐದುನೂರು) ಗಳ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## 20]. ವಿಷಯದ ಸಂಖ್ಯೆ :–ತೆಆಸ್ಥಾಸ/240/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(2)ಪಿಆರ್/45/06–07, ದಿನಾಂಕ ಃ 24–07–2011ರಲ್ಲಿ ವಿವರಿಸಿರುವಂತೆ, ಶ್ರೀ.ಧರ್ಮಲಿಂಗಂ, ನಿವೃತ್ತ ಸೈನಿಕರು, ದಿನಾಂಕ:04–06–2011 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ ವಾರ್ಡ್ 82ರ ಜೈರಾಜ್‌ನಗರ ಹರಿಜನ ಸೇವಕ ಸಂಸ್ಥೆ ಪಕ್ಕದಲ್ಲಿರುವ 131.25 ಚದರ ಅಡಿಗಳ ನಿವೇಶನವನ್ನು ವಾಸದ ಉದ್ದೇಶಕ್ಕೆ ಹಕ್ಕುಪತ್ರ ಅಥವಾ ಗುತ್ತಿಗೆಗೆ ನೀಡುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ ಬಿಬಿಎಂಪಿ ವಾರ್ಡ್ ನಂ.82ರ ಜೈರಾಜ್‌ನಗರ, ಹರಿಜನ ಸೇವಕ ಸಂಸ್ಥೆ ಪಕ್ಕದಲ್ಲಿರುವ 20+15/2, 8+7/2=131.25 ಚದರ ಅಡಿಗಳ ಜಾಗವನ್ನು ಶ್ರೀ.ಎಂ.ಧರ್ಮಲಿಂಗಂ ಮಾಜಿ ಸೈನಿಕರಿಗೆ ಅಂದಿನ ಮಾರುಕಟ್ಟೆ ದರದಂತೆ ಚದರ ಅಡಿ 1ಕ್ಕೆ ರೂ. 350/– ಗಳಂತೆ ಒಟ್ಟು ಮೌಲ್ಯ ರೂ. 45,955/– ಗಳನ್ನು ನಿಗಧಿಪಡಿಸಿ ಪಾಲಿಕೆ ವಿಷಯದ ಸಂಖ್ಯೆ:14 (156) ದಿನಾಂಕ;18–02–2006 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ನಿರ್ಣಯಿಸಿ, ದಿನಾಂಕ:03–05–2006 ರಂದು ಸರ್ಕಾರದ ಅನುಮೋದನೆ ಕೋರಲಾಗಿತ್ತು.

ಸರ್ಕಾರದ ಅದೇಶ ಸಂಖ್ಯೆ:ನಅಇ 222 ಎಂಎನ್‌ಜಿ 2008, ಬೆಂಗಳೂರು ದಿ:03–09–2009 ರಂದು ನೀಡಿರುವ ಆದೇಶದಲ್ಲಿ ಬಿಬಿಎಂಪಿಗೆ ಸಂಬಂಧಿಸಿದ ಸ್ವತ್ತುಗಳ ಬಗ್ಗೆ ಕ್ರಯಕ್ಕೆ ನೀಡಲು ಹಾಗೂ ಗುತ್ತಿಗೆ ಅವಧಿಯನ್ನು ನವೀಕರಿಸುವ ಪ್ರಸ್ತಾವನೆಗಳನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಸಲಹಾ ಸಮಿತಿಯ ಮುಂದೆ ಮಂಡಿಸಿ ಸಲಹಾ ಸಮಿತಿಯ ತೀರ್ಮಾನದಂತೆ ಅಗತ್ಯವಾದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ತಿಳಿಸಲಾಗಿತ್ತು.

ದಿನಾಂಕ:26–10–2010 ರಂದು ನಡೆದ ಸಲಹಾ ಸಮಿತಿ ಸಭೆಯಲ್ಲಿ ಶ್ರೀ.ಧರ್ಮಲಿಂಗಂ ರವರು ಕೋರಿರುವ ಜಾಗ ರಸ್ತೆ ಅಗಲೀಕರಣಕ್ಕಾಗಿ ಅವಶ್ಯವಿರುವುದರಿಂದ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಬೇಕೆಂದು ಸೂಚಿಸಲಾದ ಮೇರೆಗೆ ದಿನಾಂಕ:31–05–2011 ರಂದು ಅರ್ಜಿದಾರರಿಗೆ ಹಿಂಬರಹ ನೀಡಲಾಗಿದೆ.

ಆದರೆ ಕ್ರಯಕ್ಕೆ ನೀಡಲು ಕೋರಿರುವ ಜಾಗವನ್ನು ಪುನ: ಹಕ್ಕು ಪತ್ರದ ಮೂಲಕ ಅಥವಾ ಗುತ್ತಿಗೆಗೆ ನೀಡುವಂತೆ ಕೋರಿದ್ದು, ಪ್ರಸಕ್ತ ಮಾರುಕಟ್ಟೆ ದರದಂತೆ ಪ್ರತಿ ಚದರ ಅಡಿ 1ಕ್ಕೆ ರೂ.–1000/– ಗಳಂತೆ 131.25 ಚದರ ಅಡಿಗಳಿಗೆ ಒಟ್ಟು ನಿವೇಶನದ ಮೌಲ್ಯ ರೂ. 1,31,250/– ಗಳಾಗುತ್ತದೆ. ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಮೌಲ್ಯ ರೂ, 13125/– ಗಳಾಗುತ್ತದೆ ಮಾಸಿಕ ರೂ. 1094/– ಗಳಾಗುತ್ತದೆ.

ಆದರೆ ಸರ್ಕಾರದ ಆದೇಶ ಸಂ. ನಅಇ 129 ಟಿಎಂಡಿ 2002 ಬೆಂಗಳೂರು ದಿ:02–06–2003 ಮಾರ್ಗಸೂಚಿ ಕ್ರಮಸಂಖ್ಯೆ VI ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು. ಮೇಲ್ಕಾಣಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದ್ದಲ್ಲ ಎಂದಿದೆ.

ಆದರೆ ಅರ್ಜಿದಾರರು ಗುತ್ತಿಗೆಗೆ ನೀಡಲು ಕೋರಿರುವ ಜಾಗವು ರಸ್ತೆ ಅಗಲೀಕರಣಕ್ಕಾಗಿ ಅವಶ್ಯವಿರುವುದಾಗಿ ಕಡತದಲ್ಲಿ ವರದಿಯಾಗಿರುವುದರಿಂದ ಗುತ್ತಿಗೆಗೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 24–07–2011 ಟಿಪ್ಪಣಿಯನ್ನು ಮಾರ್ಪಡಿಸಿ ಸದರಿ ರಸ್ತೆ ಅಗಲೀಕರಣ ಕಾರ್ಯ ಪ್ರಾರಂಭಿಸಿದಲ್ಲಿ ಸ್ವತ್ತನ್ನು ಪಾಲಿಕೆಗೆ ಹಸ್ತಾಂತರಿಸುವ ಷರತ್ತಿಗೊಳಪಟ್ಟು ಸ್ವತ್ತನ್ನು 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ ಃ 02–08–2011ರ ನಿರ್ಣಯ.

**–ಮುಂದೂಡಿದೆ–**

## 21]. ವಿಷಯದ ಸಂಖ್ಯೆ :–ತೆಆಸ್ಥಾಸ/241/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(2)ಪಿಆರ್/31/06–07, ದಿನಾಂಕ ಃ 24–07–2011ರಲ್ಲಿ ವಿವರಿಸಿರುವಂತೆ, ಹಳೇ ವಾರ್ಡ್ ಸಂಖ್ಯೆ:70, ಜಲಕಂಠೇಶ್ವರ ಮುಖ್ಯರಸ್ತೆ, ಆಸ್ತಿ ಸಂಖ್ಯೆ:348 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 3420 ಚ.ಅಡಿಗಳ ನಿವೇಶನ ಹಾಗೂ 805 ಚ.ಅಡಿ ಕಟ್ಟಡವನ್ನು ಮೆ॥ಶಾಂತ ಜೀವ ಜ್ಯೋತಿ ಲೆಪ್ರಸಿ ಕ್ಲಿನಿಕ್ ರವರಿಗೆ ಸರ್ಕಾರದ ಆದೇಶ ಸಂಖ್ಯೆ:ನಅಇ/22/ಎಂಎನ್‌ಜಿ/96, ದಿನಾಂಕ:28–08–2000ರ ಆದೇಶದಲ್ಲಿ ದಿನಾಂಕ:17–05–1994 ರಿಂದ 17–05–2004 ರವರೆಗೆ ವಾರ್ಷಿಕವಾಗಿ 1176.26/– ರೂ.ಗಳ

ಗುತ್ತಿಗೆ ಮೊತ್ತ ನಿಗದಿಪಡಿಸಿ, ಪ್ರತಿ ವರ್ಷ ಶೇ:10%ರಷ್ಟು ಹೆಚ್ಚಿಸುವ ಷರತ್ತಿನೊಂದಿಗೆ ಅನುಮೋದನೆ ನೀಡಿದ್ದು, ಗುತ್ತಿಗೆ ನೀಡಿರುವ ಅವದಿಗೆ ಸಂಪೂರ್ಣ ಗುತ್ತಿಗೆ ಮೊತ್ತವು ಪಾವತಿಯಾಗಿರುತ್ತದೆ.

ಗುತ್ತಿಗೆ ಅವಧಿ ದಿ:17-05-2004 ರಂದು ಮುಕ್ತಾಯವಾದ ಕಾರಣ, ಪುನಃ 30-ವರ್ಷಗಳ ಅವಧಿಗೆ ನವೀಕರಿಸಲು ಕೋರಿ ಅರ್ಜಿ ಸಲ್ಲಿಸಿದ್ದು, ಗುತ್ತಿಗೆ ಅವಧಿ ನವೀಕರಿಸಲು ಕೋರಿರುವ ನಿವೇಶನದ ಪ್ರಸಕ್ತ ಮಾರುಕಟ್ಟೆ ದರವು ಚದರ ಅಡಿ **1ಕ್ಕೆ 2000/-ರೂ**ಗಳಿದ್ದು, ನಿವೇಶನದ ಮೌಲ್ಯ **68,40,000/-ಗಳು** ಮತ್ತು ಕಟ್ಟಡ ಮೌಲ್ಯ **3,70,300/-ರೂ.ಗಳು** (ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ಶಾಂತಿನಗರ) ಉಪವಿಭಾಗ ರವರ ವರದಿಯಂತೆ) ಒಟ್ಟು ಮೌಲ್ಯ **72,10,300/-ರೂ**.ಗಳಾಗುತ್ತದೆ. ಶೇ:10%ರಂತೆ ಪರಿಗಣಿಸಿದಲ್ಲಿ, ವಾರ್ಷಿಕ **7,21,030/-ರೂ.**ಗಳಾಗುತ್ತದೆ. ಮಾಸಿಕ **60,086/-ರೂ.**ಗಳಾಗುತ್ತದೆ.

ಆದರೆ, ದಿನಾಂಕ:01-03-2002ರ ಸುತ್ತೋಲೆ ಕ್ರಮ ಸಂಖ್ಯೆ:5 ರ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಹಾಗೂ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಅವಕಾಶ ಕಲ್ಪಿಸಲಾಗಿದೆ.

ಸದರಿ ಕಟ್ಟಡವು ಜಲಕಂಠೇಶ್ವರನಗರ ಕೊಳಚೆ ಪ್ರದೇಶದಲ್ಲಿದ್ದು, ಸದರಿ ಕಟ್ಟಡದಲ್ಲಿ ಲೆಪ್ರಸಿ ಖಾಯಿಲೆಗೆ ಒಳಪಟ್ಟಿರುವ ರೋಗಿಗಳ ಚಿಕಿತ್ಸೆ, ಗಣತಿ ಮತ್ತು ಪುನರ್ವಸತಿ ಚಟುವಟಿಕೆಗಳು ನಡೆಯುತ್ತಿರುವುದರಿಂದ, ರಿಯಾಯಿತಿ ದರವನ್ನು ಪರಿಗಣಿಸಬಹುದಾಗಿದೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶಾಂತ ಜೀವ ಜ್ಯೋತಿ ಲೆಪ್ರಸಿ ಕ್ಲಿನಿಕ್ ರವರಿಗೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಗುತ್ತಿಗೆ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಈ ಹಿಂದೆ ಸರ್ಕಾರವು ನಿಗಧಿಪಡಿಸಿದ ದರದಂತೆ ಹಾಗೂ ಕರಾರು ನೊಂದಾಯಿಸುವ ದಿನಾಂಕದಿಂದ 5-ವರ್ಷಗಳ ಅವಧಿಗೆ ಗುತ್ತಿಗೆ ಮೊತ್ತ ನಿಗಧಿಪಡಿಸಿ, ನವೀಕರಿಸಲು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 24-07-2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 02-08-2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 02-08-2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಸಂಸ್ಥೆಯು ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ವಾರ್ಷಿಕ ರೂ.3600/- (ಮೂರು ಸಾವಿರದ ಆರು ನೂರು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *221. ವಿಷಯದ ಸಂಖ್ಯೆ :-ತೆಆಸ್ಥಾಸ/242/2011-12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/15/11-12, ದಿನಾಂಕ : 24-07-2011ರಲ್ಲಿ ವಿವರಿಸಿರುವಂತೆ, ಶ್ರೀ.ಎಂ.ನರಸಿಂಹ ಮೂರ್ತಿ S/o ಎಸ್.ಸಿ.ಮುನಿಯಪ್ಪ ರವರು ಮನವಿ ಸಲ್ಲಿಸಿ, ಅದರಲ್ಲಿ 2ನೇ ಕ್ರಾಸ್, ಶ್ರೀರಾಮಪುರಂ, ಎ.ಡಿ.ಬ್ಲಾಕ್ ನಲ್ಲಿರುವ 10+20/2 X 66=990 ಚದರ ಅಡಿ ಅಳತೆಯ ಮಾರ್ಜಿನ್ ಜಾಗವನ್ನು ನಗರ ಸಭೆಯ ನಡವಳಿ ದಿನಾಂಕ:14-12-1962 ಹಾಗೂ ಸರ್ಕಾರದ ಆದೇಶ ಸಂಖ್ಯೆ:ಎಲ್ಎಂಎ/198/ಎಂಎನ್ಜಿ/65, ದಿನಾಂಕ:02-12-1966ರಂತೆ ನಮ್ಮ ತಂದೆ ಶ್ರೀ.ಎಸ್.ಸಿ.ಮುನಿಯಪ್ಪ ರವರಿಗೆ ಮಂಜೂರಾಗಿದ್ದು, ಇದಕ್ಕೆ ಕಟ್ಟಬೇಕಾದ ಹಣವನ್ನು ತಾವು ಡಿ.ಡಿ ಮುಖಾಂತರ ದಿ:11-10-1972 ರಲ್ಲಿ ಪಾವತಿ ಮಾಡಿದ್ದು, ತಮಗೆ ಇದುವರೆವಿಗೂ ಮಂಜೂರು ಮಾಡಿರುವ ಜಾಗವನ್ನು ಕ್ರಯ ಪತ್ರ ನೊಂದಾಣಿ ಮಾಡಿಕೊಟ್ಟಿಲ್ಲವೆಂದು ತಿಳಿಸಿರುತ್ತಾರೆ.

ದಿನಾಂಕ:22-06-2011 ರಂದು ಭೂಮಾಪಕರೊಂದಿಗೆ ಸ್ಥಳ ಪರಿಶೀಲಿಸಲಾಯಿತು. ಪ್ರಸ್ತುತ ಜಾಗವು ಕಡತದಲ್ಲಿರುವ ನಕ್ಷೆಯಲ್ಲಿ ತೋರಿಸಿರುವಂತೆ (ಕನ್ಸರ್‌ವೆನ್ಸಿ) ಮತ್ತು ದೊಡ್ಡ ಮೋರಿಯ ಮೇಲೆ ನಿರ್ಮಿಸಲಾಗಿರುವ ರಸ್ತೆಗೆ ಮತ್ತು ಅರ್ಜಿದಾರರ ಮನೆಯ ಮಧ್ಯಭಾಗದಲ್ಲಿ ಇರುತ್ತದೆ. ಈ ಪ್ರದೇಶವು ವಾಸಿಸುವ ಮನೆಗಳ ಮಧ್ಯೆಭಾಗದಲ್ಲಿದ್ದು, ಸಾರ್ವಜನಿಕರ ಹಾಗೂ ಪಾಲಿಕೆಯ ಉದ್ದೇಶಗಳಿಗೆ ಉಪಯೋಗಿಸಲು ಯೋಗ್ಯವಾದ ಜಾಗವೆಂಬುದಾಗಿ ಕಂಡು ಬಂದಿರುವುದಿಲ್ಲ.

ಅರ್ಜಿದಾರರಿಗೆ ಈ ಪ್ರದೇಶವು ಮಂಜೂರಾತಿ ನೀಡಬೇಕೆಂದು ದಿನಾಂಕ:14-02-1962 ರಲ್ಲಿ ನಗರ ಪಾಲಿಕೆಯ ಸಭೆಯ ಠರಾವು ಆಗಿದ್ದು, 02-12-1966 ರಲ್ಲಿ ಮಂಜೂರಾತಿ ನೀಡಲು ಸರ್ಕಾರದ ಆದೇಶವಾಗಿರುತ್ತದೆ. ಈ ಪ್ರದೇಶಕ್ಕೆ ಜಮೀನಿನ ಖಿಮ್ಮತ್ತು

ರೂ.1650/–ಸಂದಾಯ ಮಾಡಲು ಅರ್ಜಿದಾರರಿಗೆ ತಿಳಿಸಲಾಗಿದ್ದು, ಅರ್ಜಿದಾರರು ಡಿ.ಡಿ.ಸಂಖ್ಯೆ:(722490) ದಿ:11–10–1972 ರಲ್ಲಿ ಕೆನರಾ ಬ್ಯಾಂಕ್ ಶಾಖೆಯಲ್ಲಿ ಪಾಲಿಕೆಯ ಖಾತೆಗೆ ಜಮಾ ಮಾಡಿರುತ್ತದೆ ಎಂದು ತಿಳಿಸಿರುತ್ತಾರೆ.

ಮಂಜೂರಾತಿಗೆ ಸಂಬಂಧಿಸಿದ ಮೂಲ ಕಡತವು ಲಭ್ಯವಿರುವುದಿಲ್ಲ ದಿನಾಂಕ:02–09–1993 ರಲ್ಲಿ ಪಾಲಿಕೆಯ ಮುಖ್ಯ ಲೆಕ್ಕಾಧಿಕಾರಿಯವರು ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕರಿಗೆ ಪತ್ರ ಬರೆದಿದ್ದು, ಅರ್ಜಿದಾರರು ಹೇಳಿರುವ ಹಾಗೆ ಹಣ ಸಂದಾಯ ಆಗಿರುವ ಬಗ್ಗೆ ಪುಷ್ಟೀಕರಿಸಲು ಕೋರಿರುತ್ತಾರೆ. ಇದಕ್ಕೆ ನೀಡಲಾಗಿರುವ ಉತ್ತರದ ಬಗ್ಗೆ ಯಾವುದೇ ದಾಖಲೆಗಳು ಕಡತದಲ್ಲಿ ಲಭ್ಯವಿರುವುದಿಲ್ಲ ಅರ್ಜಿದಾರನನ್ನು ವಿಚಾರಿಸಲಾಗಿ ಬ್ಯಾಂಕ್‌ನಲ್ಲಿರುವ 10 ವರ್ಷಗಳ ಹಿಂದಿನ ದಾಖಲೆಗಳನ್ನು ಲಭ್ಯವಿರುವುದಿಲ್ಲ ಎಂಬುದಾಗಿ ಬ್ಯಾಂಕ್ ವ್ಯವಸ್ಥಾಪಕರು ತಿಳಿಸಿರುತ್ತಾರೆಂದು ಸ್ಥಳ ಪರಿಶೀಲನೆಯ ಸಮಯದಲ್ಲಿ ತಿಳಿಸಿರುತ್ತಾರೆ.

ಪ್ರಸ್ತುತ ಜಾಗವು ಅರ್ಜಿದಾರರ ಮನೆಗೆ ಲಗತ್ತಾಗಿದ್ದು, ಸಾರ್ವಜನಿಕರ ಉದ್ದೇಶಕ್ಕೆ ಬಳಸಲು ಸಹ ಯೋಗ್ಯವಾದ ಜಾಗವಲ್ಲ. ಈ ಹಿಂದೆ ಬೆಂಗಳೂರು ನಗರ ಪಾಲಿಕೆಯ ನಿರ್ಣಯದ ನಂತರ ಸರ್ಕಾರವು ಸಹ ಆದೇಶಿಸಿದ್ದು, ಮೂಲ ಕಡತ ಹಾಗೂ ಹಣ ಸಂದಾಯ ಮಾಡಿರುವ ದಾಖಲೆಗಳು ಲಭ್ಯವಿಲ್ಲದೇ ಇರುವ ಸನ್ನಿವೇಶವಾಗಿರುತ್ತದೆ.

ದಕ್ಷಿಣ ವಲಯದಲ್ಲಿ ಪತ್ರಕರ್ತರ ಬಡಾವಣೆಯಲ್ಲಿ ಇಂತಹ ಪ್ರಕರಣದಲ್ಲಿ ಈಗಿನ ಮಾರುಕಟ್ಟೆ ದರದ ಅನ್ವಯ ಪಾಲಿಕೆಯ ಠರಾವು ಮಾಡಲಾಗಿರುತ್ತದೆ.

2007ರ ಮಾರ್ಗಸೂಚಿ ದರಗಳಂತೆ ಚದರ ಅಡಿಗೆ ರೂ.1600/– ರಂತೆ ಇದ್ದು, ಇದಕ್ಕೆ 10% ಹೆಚ್ಚಿಸಿದಾಗ ಅಂದರೆ ರೂ1,760/– ಆಗುತ್ತದೆ. ಇದರಂತೆ ಲೆಕ್ಕಚಾರ ಮಾಡಲಾಗಿ ರೂ.1760*990 =17,42,400/– ಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಅರ್ಜಿದಾರರಾದ ಶ್ರೀ.ಎನ್.ನರಸಿಂಹಮೂರ್ತಿ ರವರಿಗೆ ಸದರಿ ಜಾಗಕ್ಕೆ ಕ್ರಯ ಪತ್ರ ಮಾಡಿಕೊಡುವ ಬಗ್ಗೆ, ಸದರಿ ಜಾಗಕ್ಕೆ ಪ್ರಸಕ್ತ ಮಾರುಕಟ್ಟೆ ದರವನ್ನು ನಿಗಧಿಪಡಿಸಿ ಕ್ರಯಕ್ಕೆ ನೀಡುವಂತೆ ದಿನಾಂಕ : 24–07–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 02–08–2011ರ ನಿರ್ಣಯ. .

***<u>ನಿರ್ಣಯ :</u>*** ***<u>ಪ್ರಸ್ತಾಪಿತ ಸ್ಥಳದಲ್ಲಿನ ಮುಂಭಾಗದಲ್ಲಿ (ದೊಡ್ಡ ಮೋರಿ ಕಡೆ) 5 (ಐದು) ಅಡಿ ಜಾಗ ಬಿಟ್ಟು ಉಳಿಕೆ ಜಾಗವನ್ನು ಕ್ರಯಕ್ಕೆ ನೀಡುವ ಮಾರ್ಪಾಡಿನೊಂದಿಗೆ ದಿನಾಂಕ : 02–08–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.</u>***

## ***<u>23]. ವಿಷಯದ ಸಂಖ್ಯೆ :–ತೆಆಸ್ಥಾಸ/243/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)/ಪಿಆರ್/53/11–12, ದಿನಾಂಕ : 24–7–2011ರಲ್ಲಿ ವಿವರಿಸಿರುವಂತೆ, ಪ್ಯಾಲೇಸ್ ಗುಟ್ಟಹಳ್ಳಿ ವೃತ್ತದ ಬಳಿ ವಾರ್ಡ್ ನಂ.64ಕ್ಕೆ ಸೇರಿದ ನಗರ ಪಾಲಿಕೆಯ ಆಸ್ಪತ್ರೆಯ ಆವರಣದಲ್ಲಿ ಮೊದಲನೆ ಅಂತಸ್ತಿನಲ್ಲಿ 2475 ಚದರ ಅಡಿಗಳ ಕಟ್ಟಡವನ್ನು ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ಆಫ್ ಇಂಡಿಯಾ ಬೆಂಗಳೂರು ವಲಯ ಇವರಿಗೆ ಗುತ್ತಿಗೆಯ ಮೊತ್ತದಲ್ಲಿ ಶೇಕಡ 50% ರಷ್ಟು ರಿಯಾಯಿತಿ ನೀಡಿ ಗುತ್ತಿಗೆ ಹಣ ಮಾಸಿಕ ರೂ.6,912/–ಗಳಿಗೆ ನಿಗದಿಪಡಿಸಿ 5 ವರ್ಷಗಳ ಅವಧಿಗೆ 22–12–2001 ರಂದು ನೀಡಿದ್ದು, ಇದರ ಗುತ್ತಿಗೆ ಅವಧಿಯು 21–12–2005ಕ್ಕೆ ಮುಗಿದಿದ್ದು, ಇದರ ನಂತರ ಸದರಿ ಸಂಸ್ಥೆಯವರು ಮನವಿ ನೀಡಿ ಸದರಿ ಸಂಸ್ಥೆಯ ತರಬೇತಿ ಕೇಂದ್ರ ಮತ್ತು ಇನ್ನಿತರ ಚಟುವಟಿಕೆಗಳನ್ನು ಮುಂದುವರೆಸಿದ್ದು ಸಾರ್ವಜನಿಕರಿಗೆ ಹೆಚ್ಚಿನ ಉಪಯೋಗವಾಗುವುದರಿಂದ ಸದರಿ ಗುತ್ತಿಗೆಯ ಅವಧಿಯನ್ನು 35 ವರ್ಷಗಳವರೆಗೆ ಮುಂದುವರೆಸಲು ಕೋರಿರುತ್ತಾರೆ.

ಸದರಿ ಕಟ್ಟಡವು ಈಗಾಗಲೇ ಫ್ಯಾಮಿಲಿ ಪ್ಲಾನಿಂಗ್ ಅಸೋಷಿಯೇಷನ್ ರವರ ಉಪಯೋಗದಲ್ಲಿದ್ದು, ನೆಲ ಮಹಡಿಯು ಸಹ ಕುಟುಂಬ ಕಲ್ಯಾಣ ಚಟುವಟಿಕಗಳಿಗಾಗಿ ಉಪಯೋಗಿಸಲು ನೀಡುವುದು ಸೂಕ್ತವಾಗಿರುತ್ತದೆ ಹಾಗೂ ಈಗಾಗಲೇ ಸಂಸ್ಥೆಯು ತಿಂಗಳಿಗೆ ರೂ.6,912/– ಗಳನ್ನು ತಹಲ್‌ವರೆಗೆ ಪಾವತಿ ಮಾಡಿರುವುದೆಂದು ಸ್ಥಳೀಯ ಅಧಿಕಾರಿಗಳು ವರದಿ ನೀಡಿರುತ್ತಾರೆ.

ಸದರಿ ಕಟ್ಟಡಕ್ಕೆ ಈಗಿನ ದರದಲ್ಲಿ ತಿಂಗಳ ಬಾಡಿಗೆಯನ್ನು ಈ ಕೆಳಕಂಡಂತೆ ನಿಗಧಿಪಸಿಸಲಾಗಿದೆ. ಸ್ಥಿರಾಸ್ತಿಗಳಿಗೆ ಮಾರುಕಟ್ಟೆ ಬೆಲೆಯ ಮಾರ್ಗಸೂಚಿ ದರಗಳಂತೆ ಚದರ ಅಡಿಗೆ ರೂ.3,000/– ರಂತೆ + 40% ವಸತಿಯೇತರ ಅಂದರೆ ರೂ.3,400/– ಆಗುತ್ತದೆ. ಇದರಂತೆ, ಒಟ್ಟು ಚದರ ಅಡಿ 2475ಕ್ಕೆ ರೂ.84,15,000/– ಇದಕ್ಕೆ ಶೇಕಡ 10% ರಂತೆ ವಾರ್ಷಿಕ ಬಾಡಿಗೆ ರೂ.8,41,500/– ಹಾಗೂ ಮಾಸಿಕ 70,125/–ರೂ.ಗಳಾಗುತ್ತದೆ.

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು, ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಸದರಿ ಸಂಸ್ಥೆಯು ಮೇಲೆ ತಿಳಿಸಿದ ಕಟ್ಟಡವನ್ನು ಉಚಿತವಾಗಿ ಗುತ್ತಿಗೆ ಆಧಾರದ ಮೇಲೆ ನೀಡಲು ಕೋರಿರುತ್ತಾರೆ. ಈ ಹಿಂದೆ ಮೋದಲನೆ ಅಂತಸ್ತಿನ ಮಾಸಿಕ ಗುತ್ತಿಗೆ ಮೊತ್ತ ರೂ.6,912/– ರಂತೆ ನಿಗಧಿಪಡಿಸಿರುವುದರಿಂದ ಇದೇ ರೀತಿ ನೆಲ ಅಂತಸ್ತಿನ ಕಟ್ಟಡಕ್ಕೂ ಸಹಾ ಮಾಸಿಕ ಗುತ್ತಿಗೆ ರೂ.6,912/– ನಿಗಧಿಪಡಿಸಬಹುದಾಗಿದೆ. ನೆಲ ಅಂತಸ್ತು ಹಾಗೂ ಮೊದಲನೆ ಅಂತಸ್ತು ಇವೆರಡರ ಮಾಸಿಕ ಬಾಡಿಗೆಯು ಒಟ್ಟು ರೂ.13,824/–ಗಳಾಗುತ್ತದೆ.

ಈ ಮೇಲ್ಕಂಡ ಅಂಶಗಳನ್ನು ಪರಿಗಣಿಸಿ ಸದರಿ ಸಂಸ್ಥೆಗೆ ಮಾಸಿಕ ರೂ.13,824/– ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಿ ಕರಾರು ನೋಂದಾಯಿಸಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ: 24–07–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 02–08–2011ರ ನಿರ್ಣಯ.

*ನಿರ್ಣಯ :* **ದಿನಾಂಕ:02–08–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.**

## *24]. ವಿಷಯದ ಸಂಖ್ಯೆ :–ತೆಆಸ್ಥಾಸ/244/2011–12*

ಆಯುಕ್ತರ ಟಿಪ್ಪಣಿ ದಿನಾಂಕ ಃ 08–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ದೈನಂದಿನ ಕೆಲಸ ಕಾರ್ಯಗಳಿಗೆ ವಾಹನಗಳ ಅವಶ್ಯಕತೆ ಇದ್ದು, ಪಾಲಿಕೆಯಲ್ಲಿ ಹೆಚ್ಚಿನ ಸಂಖ್ಯೆಯ ವಾಹನಗಳು ಲಭ್ಯವಿಲ್ಲದ ಪ್ರಯುಕ್ತ, ಕೇಂದ್ರ/ಪೂರ್ವ/ಪಶ್ಚಿಮ/ದಕ್ಷಿಣ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ಯಾಕೇಜ್–1 ಟೆಂಡರ್‌ನಲ್ಲಿ ಪ್ರತಿ ತಿಂಗಳಿಗೆ 2000 ಕಿ.ಮೀ ಅಥವಾ 300 ಗಂಟೆಗಳ ಅವಧಿಗೆ ವಾಣಿಜ್ಯ ಬಳಕೆಯ ಲಘು ವಾಹನಗಳನ್ನು ಒದಗಿಸಲು ಜಿಲ್ಲಾ ಟೆಂಡರ್ ಬುಲೆಟಿನ್ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಂದ ಅನುಮತಿ ಪಡೆದು ಬೃ.ಬೆಂ.ಮ.ಪಾಲಿಕೆಯ ಕಾರ್ಯಪಾಲಕ ಅಭಿಯಂತರರು (ಉಗ್ರಾಣ, ಕಾರ್ಯಗಾರ & ಸಾರಿಗೆ) ರವರು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿರುತ್ತಾರೆ.

ಸದರಿ ಟೆಂಡರ್‌ನಲ್ಲಿ ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ಮತ್ತು ಮೆ॥ ಚೇತನ್ ಟ್ರಾವಲ್ಸ್ ರವರು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುತ್ತಾರೆ ಹಾಗೂ ಆರ್ಥಿಕ ಬಿಡ್‌ನ್ನು ತೆರೆದಾಗ ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರು ಕನಿಷ್ಠ ಬಿಡ್‌ದಾರರಾಗಿ ಹೊರಹೊಮ್ಮಿರುತ್ತಾರೆ.

ಕನಿಷ್ಠ ಬಿಡ್‌ದಾರರಾದ ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರು ಸರಬರಾಜು ಮಾಡುವ ಒಟ್ಟು 223 ಗುತ್ತಿಗೆ ವಾಹನಗಳಿಗೆ ಮಾಸಿಕ ವೆಚ್ಚ ರೂ. 35,52,578/–ಗಳು ಮತ್ತು ವಾರ್ಷಿಕ ವೆಚ್ಚ ರೂ. 4,26,30,936/–ಗಳನ್ನು ನಮೂದಿಸಿ ಕನಿಷ್ಠ ಟೆಂಡರ್‌ದಾರರಾಗಿದ್ದು ಟೆಂಡರ್ ಆರ್ಥಿಕ ಮೌಲ್ಯಮಾಪನ ಸಮಿತಿಯ ಅನುಮೋದನೆ ಪಡೆಯಲಾಗಿರುತ್ತದೆ.

ಮುಂದುವರೆದಂತೆ, ಕಾರ್ಯಪಾಲಕ ಅಭಿಯಂತರರು ಮತ್ತು ಮೇಲ್ಪಟ್ಟ ಇತರೆ ಅಧಿಕಾರಿಗಳು 78 ಗುತ್ತಿಗೆ ವಾಹನಗಳನ್ನು ಈಗಾಗಲೇ ಉಪಯೋಗಿಸುತ್ತಿರುತ್ತಾರೆ. 35 ಅಧಿಕಾರಿಗಳಿಗೆ ಮಾಸಿಕ ರೂ. 12,000/–ಗಳಂತೆ ವಾಹನ ಭತ್ಯೆ ನೀಡುತ್ತಿದ್ದು ಸದರಿ ಅಧಿಕಾರಿಗಳಿಗೆ ವಾಹನ ಭತ್ಯೆ ಹಿಂಪಡೆದು ಗುತ್ತಿಗೆ ವಾಹನವನ್ನು ನೀಡಬೇಕಾಗಿರುತ್ತದೆ. ಯೋಜನಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರುಗಳಿಗೆ ಪ್ರತಿ ವಲಯಕ್ಕೆ ಒಂದು ವಾಹನದಂತೆ 8 ವಾಹನಗಳು, ವಲಯ ಉಪ ಆರೋಗ್ಯಾಧಿಕಾರಿಗಳಿಗೆ (DHO) 5 ವಾಹನಗಳು ಹಾಗೂ ವಲಯ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು / ಸಹಾಯಕ ಕಂದಾಯ ಅಧಿಕಾರಿಗಳಿಗೆ ಪ್ರತಿ ವಲಯಕ್ಕೆ ಒಂದು ವಾಹನದಂತೆ 9 ವಾಹನಗಳನ್ನು ನೀಡಲು ಉದ್ದೇಶಿಸಲಾಗಿದ್ದು ಒಟ್ಟು 135 ಗುತ್ತಿಗೆ ವಾಹನಗಳಲ್ಲಿ ಪ್ಯಾಕೇಜ್–1 ಟೆಂಡರ್‌ನಲ್ಲಿ 106 ವಾಹನಗಳು ಮತ್ತು ಪ್ಯಾಕೇಜ್–2 ಟೆಂಡರ್‌ನಲ್ಲಿ 29 ವಾಹನಗಳ ಅವಶ್ಯಕತೆಯು ಇರುತ್ತದೆ.

ಈ ಹಿನ್ನೆಲೆಯಲ್ಲಿ ಪ್ಯಾಕೇಜ್–1 ಟೆಂಡರ್ ಅಡಿಯಲ್ಲಿ 106 ಗುತ್ತಿಗೆ ವಾಹನಗಳನ್ನು ಪಡೆಯಲು ಉದ್ದೇಶಿಸಲಾಗಿದೆ. ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅರ್ಹ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನು ಮುಂದೆ ಕಲ್ಪಿಸಿದಲ್ಲಿ ಸದರಿ ಏಜೆನ್ಸಿದಾರರಿಂದ ವಾಹನಗಳನ್ನು ಪಡೆಯಬಹುದಾಗಿರುತ್ತದೆ.

ಆದುದರಿಂದ, ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಯಶಸ್ವಿಯಾದ ಮೆ॥ ಜಾನಕಿ ಟ್ರಾವಲ್ ಏಜೆನ್ಸಿ ರವರಿಗೆ ಗುತ್ತಿಗೆ ಕರಾರಿಗೆ ಅನ್ವಯವಾಗುವಂತೆ ನಿಗಧಿಪಡಿಸಿದ ಭದ್ರತಾ ಠೇವಣಿಯನ್ನು ಆಯುಕ್ತರು, ಬೃಬೆಂ.ಮ.ಪಾಲಿಕೆ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಪಡೆದು ಗುತ್ತಿಗೆ ವಾಹನಗಳನ್ನು ಒದಗಿಸಲು ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ಇ–ಪ್ರೊಕೊರ್‌ಮೆಂಟ್ ಟೆಂಡರ್‌ನ ಪ್ಯಾಕೇಜ್–1 ಅಡಿಯಲ್ಲಿ ಪಡೆಯಲು ಉದ್ದೇಶಿಸಲಾಗಿರುವ 106 ಗುತ್ತಿಗೆ ವಾಹನಗಳ ವಾರ್ಷಿಕ ನಿರ್ವಹಣ ವೆಚ್ಚವಾದ ರೂ. 2,17,66,800/–ಗಳಿಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 08–08–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಪ್ಯಾಕೇಜ್–1 ರ ಅಡಿಯಲ್ಲಿ ಪ್ರಸ್ತಾಪಿಸಿರುವ 106 ವಾಹನಗಳನ್ನು ಮಾತ್ರ ಗುತ್ತಿಗೆಗೆ ಪಡೆಯಲು ಹಾಗೂ ಇತರೇ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನೂ ಮುಂದೆ ಕಲ್ಪಿಸಿದಲ್ಲಿ ಸಮಿತಿಯ ಮುಂದೆ ಪ್ರಸ್ತಾವನೆ ಮಂಡಿಸಿ ಅನುಮೊದನೆ ಪಡೆಯುವುದೆಂದು ಸಮಿತಿಯು ತೀರ್ಮಾನಿಸಿತು..***

## ***25]. ವಿಷಯದ ಸಂಖ್ಯೆ :–ತೆಆಸ್ಥಾಸ/245/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 37, 38, 17, 42 ಮತ್ತು 16 ರ 9 ಕಾಮಗಾರಿಗಳ ಒಟ್ಟು ಅಂದಾಜು ಮೊತ್ತ ರೂ.334.80 ಲಕ್ಷಗಳಿಗೆ **ಕಾಮಗಾರಿಗಳ ಮರು ನವೀಕರಣ** ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅಪರ ಆಯುಕ್ತರು (ರಾಜರಾಜೇಶ್ವರಿನಗರ) ವಲಯ ರವರು ಸದರಿ ಕಾಮಗಾರಿಗಳು ಸಾರ್ವಜನಿಕರ ಹಿತದೃಷ್ಟಿಯಿಂದ ಅತೀ ಅವಶ್ಯಕವೆಂದು ಹಾಗು 2011–12ನೇ ಸಾಲಿನ ಆಯವ್ಯಯದಲ್ಲಿ ಆದ್ಯತೆ ಮೇರೆಗೆ ಸೇರಿಸಿ ಅನುಮೋದನೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗಳಿಗೆ 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ **"ಪಿ1771 ವಲಯ ಕಾಮಗಾರಿಗಳು"** ಅಡಿ ಕಾಮಗಾರಿ ಸಂಕೇತ ನೀಡಲಾಗಿದ್ದು, ಕಾಮಗಾರಿಗಳನ್ನು 2010–11ನೇ ಸಾಲಿನ ಮೇಲ್ಕಂಡ ಲೆಕ್ಕಶೀರ್ಷಿಕೆಯಡಿ ಬರುವ "ಮುಂದುವರೆದ ಕಾಮಗಾರಿಗಳು" ಅಡಿ ಅಳವಡಿಸಿಕೊಳ್ಳಲಾಗಿದೆ. ಸದರಿ ಕಾಮಗಾರಿಗಳನ್ನು ಹೊಸ ಕಾಮಗಾರಿಗಳೆಂದು ಪರಿಗಣಿಸಿ 2011–12ನೇ ಸಾಲಿನ ಆಯವ್ಯಯದಲ್ಲಿ ಅಳವಡಿಸಿಕೊಳ್ಳಬೇಕಾಗಿದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡ ವಾರ್ಡ್ ಸಂಖ್ಯೆ 37, 38, 17, 42 ಮತ್ತು 16ರ 9 ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ, ಈಗಾಗಲೇ ನಿಡಿರುವ ಕಾಮಗಾರಿ ಸಂಕೇತಗಳನ್ನು ರದ್ದುಪಡಿಸಿ,

ಲೆಕ್ಕಶೀರ್ಷಿಕೆ ಪಿ1771 ಅಡಿ ಸೂಕ್ತ ಅನುದಾನ ಒದಗಿಸಿಕೊಂಡು ಅನುಷ್ಠಾನಗೊಳಿಸುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

| Sl. No | Ward No | Name of Work | Est. Amount |
|---|---|---|---|
| 01 | 37 | Improvement to Drain & Providing Covering slabs along 15th cross, BK Narara in W.No.37 | 25.00 |
| 02 | 38 | Asphalting to 3rd phase peenya in W.N.38 | 49.80 |
| 03 | 37 | Improvement to Drain & Providing barricade along bazaar Street and cross road in W.No.37 | 25.00 |
| 04 | 37 | Construction of SSM drain and Providing covering slabs along 12th and 13th main Gokula 1st stage 3rd phase in W.No.37 | 35.00 |
| 05 | 17 | Providing FP at JP Park in W.No.17 | 25.00 |
| 06 | 42 | Improvement to roads and Drain to cross roads of lakshimidevi nagara in W.No.42 | 20.00 |
| 07 | 42 | Improvement to roads and Drain to cross roads of Sanjay Gandhi nagara in W.No.42 | 40.00 |
| 08 | 42 | Improvement to roads and Drain to cross roads of Kaveri nagara in W.No.42 | 45.00 |
| 09 | 16 | Constrution of Drain and Fomation at Ramachandra pura circle to Ganagamma circle in W.No.16 | 70.00 |
| | | **Total** | **334.80** |

***ನಿರ್ಣಯ :*** ***ದಿನಾಂಕ : 05–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ1771 ರಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## 26]. ವಿಷಯದ ಸಂಖ್ಯೆ :–ತೆಆಸ್ಥಾಸ/246/2011–12

ಆಯುಕ್ತರ ಟಿಪ್ಪಣಿ ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು, ವಿವಿದ್ದೋದ್ದೇಶ ಕಾಮಗಾರಿ ವಿಭಾಗ ರವರು ಈ ಕೆಳಕಂಡ 8 ಕಾಮಗಾರಿಗಳನ್ನು ಕೈಗೊಳ್ಳಲು ರೂ.499.00 ಲಕ್ಷಗಳಿಗೆ ಕಾಮಗಾರಿ ಸಂಖ್ಯೆಗಾಗಿ ಪ್ರಸ್ತಾವನೆಯನ್ನು ಪ್ರಧಾನ ಅಭಿಯಂತರರ ಮೂಲಕ ಸಲ್ಲಿಸಿರುತ್ತಾರೆ.

| Sl. No | Name of Work | Est. Amount |
|---|---|---|
| 01 | Providing basic infrastructure to exisiting BBMP MS building premises and allied works at Vasanathnagar in Ward No.93 | 80.00 |
| 02 | Renovation to existing Ground floor of BBMP MS building at Vasanathnagar in Ward No.93 | 53.20 |
| 03 | Renovation to existing First floor of BBMP MS building at Vasanathnagar in Ward No.93 | 60.00 |
| 04 | Renovation to existing Second floor of BBMP MS building at Vasanathnagar in Ward No.93 | 60.50 |
| 05 | Renovation to existing Third floor of BBMP MS building at Vasanathnagar in Ward No.93 | 60.80 |
| 06 | Renovation to existing Fourth floor of BBMP MS building at Vasanathnagar in Ward No.93 | 61.00 |
| 07 | Renovation to existing Fifth floor of BBMP MS building at Vasanathnagar in Ward No.93 | 61.50 |
| 08 | Renovation to existing Sixth floor of BBMP MS building at Vasanathnagar in Ward No.93 | 62.00 |
| | **Total** | **499.00** |

ಕಡತದ ಕಂಡಿಕೆ 12 ಮತ್ತು 13 ರಲ್ಲಿ ತಿಳಿಸಿರುವಂತೆ ಕಾಲೇಜಿಯೇಟ್ ಎಜುಕೇಷನ್‌ಗೆ ಇತ್ತೀಚೆಗೆ ಬಿ.ಬಿ.ಎಂ.ಪಿ. ವಶಪಡಿಸಿಕೊಂಡಿರುವ ವಸಂತನಗರ ಮಿಲ್ಲರ್ ಟ್ಯಾಂಕ್‌ನಲ್ಲಿರುವ ಏಳು ಅಂತಸ್ತಿನ ಕಟ್ಟಡವನ್ನು ಹಸ್ತಾಂತರಿಸಲು ತೀರ್ಮಾನಿಸಲಾಗಿದ್ದು, ಸದರಿ ಕಟ್ಟಡದ ದುರಸ್ತಿ ಆಗಬೇಕಾಗಿರುತ್ತದೆ. ಕಡತದ ಕಂಡಿಕೆ 26 ರಲ್ಲಿ ಕೂಡಲೇ ಕಾಮಗಾರಿ ಪ್ರಾರಂಭ ಮಾಡಲು ತಿಳಿಸಲಾಗಿದೆ.

ಸದರಿ ಕಾಮಗಾರಿಗಳಿಗೆ 2011–12ನೇ ಸಾಲಿನ ಕರಡು ಆಯವ್ಯಯದಲ್ಲಿ ಅನುದಾನವನ್ನು ಮೀಸಲಿರಿಸಿರುವುದಿಲ್ಲ. ಆದ್ದರಿಂದ ಆಯವ್ಯಯ ಲೆಕ್ಕ ಶೀರ್ಷಿಕೆ 18 – ವಿವಿದೋದ್ದೇಶ ಶಾಖಾವಾರು ಕಾಮಗಾರಿಗಳು – ಕಾಮಗಾರಿ ಶಾಖೆಯ ಕಾಮಗಾರಿಗಳು – ಆಡಳಿತ ಕಟ್ಟಡಗಳು – **ವಿಭಾಗದಲ್ಲಿ ಹೊಸದಾಗಿ ಲೆಕ್ಕ ಶೀರ್ಷಿಕೆಯನ್ನು** ಸೃಜಿಸಿ ಅನುದಾನ ರೂ.499.00 ಲಕ್ಷಗಳನ್ನು ಒದಗಿಸಬೇಕಾಗಿರುತ್ತದೆ.

ಆದ್ದರಿಂದ 2011–12ನೇ ಸಾಲಿನ ಆಯವ್ಯಯ ತಯಾರಿಕೆಯ ಹಂತದಲ್ಲಿರುವುದರಿಂದ ಸದರಿ ಲೆಕ್ಕ ಶೀರ್ಷಿಕೆ ಅಡಿಯಲ್ಲಿ ಸೂಕ್ತ ಅನುದಾನವನ್ನು ಒದಗಿಸಿಕೊಳ್ಳುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :</u>*** ***<u>2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>27]. ವಿಷಯದ ಸಂಖ್ಯೆ :–ತೆಆಸ್ಥಾಸ/247/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)12/11–12, ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ಸಿ. ಜಗನ್ನಾಥರೆಡ್ಡಿ, ಅಧ್ಯಕ್ಷರು, "ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟ (ರಿ)" ರವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯ ಸಾರ್ವಜನಿಕ ಕಾರ್ಯ ಚಟುವಟಿಕೆಗಳಿಗೆ 2010–11ನೇ ಸಾಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಕಾಯ್ದಿರಿಸಿರುವ ರೂ. 5.00 ಲಕ್ಷ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಶ್ರೀ ಪಿ. ಎನ್. ಸದಾಶಿವ, ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರು ಪತ್ರ ಬರೆದು ಪತ್ರ ಬರೆದು ದಂಡು ಪ್ರದೇಶ ಕನ್ನಡ ಸಂಘಟನೆಗಳ ಒಕ್ಕೂಟ (ರಿ) ರವರಿಗೆ 2010–11 ನೇ ಸಾಲಿನ ಆಯವ್ಯಯದಲ್ಲಿ ಕಾಯ್ದಿರಿಸಲಾಗಿರುವ ರೂ. 5.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುತ್ತದೆ. ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ, 2010–11 ನೇ ಸಾಲಿನ ಆಯವ್ಯಯದ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ಮೀಸಲಿರಿಸಲಾಗಿರುವ ರೂ. 10.00 ಕೋಟಿಗಳ ಪೈಕಿ, ದಿನಾಂಕ 09–09–2010 ರಂದು ಪಾಲಿಕೆಯ ಆಯವ್ಯಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯದ ವಿಷಯದ ಸಂಖ್ಯೆ 91/2010–11 ರಂತೆ 76 ಸಂಘ ಸಂಸ್ಥೆಗಳಿಗೆ ರೂ. 823.50 ಲಕ್ಷಗಳನ್ನು ಅನುದಾನವನ್ನಾಗಿ ನಿಗಧಿಪಡಿಸಿ ಅನುಮೋದನೆ ನೀಡಲಾಗಿರುತ್ತದೆ. ಈ ಪೈಕಿ ಕ್ರ.ಸಂ. (44) ರಲ್ಲಿ "ಕರ್ನಾಟಕ ದಂಡು ಪ್ರದೇಶ ಸಂಘ ಸಂಸ್ಥೆಗಳ ಒಕ್ಕೂಟ" ರವರಿಗೆ ನಿಗಧಿ ಪಡಿಸಲಾಗಿರುವ ರೂ. 5.00 (ರೂ. ಐದು ಲಕ್ಷಗಳು ಮಾತ್ರ) ಗಳನ್ನು ಮಂಜೂರು ಮಾಡುವ ಸಂಬಂಧ, 2010–11ನೇ ಸಾಲಿನ ಆರ್ಥಿಕ ಸಾಲು ಮುಕ್ತಾಯವಾಗಿರುವುದರಿಂದ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :</u>*** ***<u>ದಿನಾಂಕ : 02–08–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ರೂ.5.00 (ಐದು) ಲಕ್ಷಗಳನ್ನು 2011–12ನೇ ಸಾಲಿನಲ್ಲಿ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>28]. ವಿಷಯದ ಸಂಖ್ಯೆ :–ತೆಆಸ್ಥಾಸ/248/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ದಿನಾಂಕ : 11–06–2011 ರಂದು ಮಾನ್ಯ ಶಿವಾಜಿನಗರ ಶಾಸಕರೊಂದಿಗೆ ಮುನಿವೆಂಕಟಪ್ಪ ಗಾರ್ಡನ್ ಧೋಬಿಘಾಟ್ ಸ್ಥಳವನ್ನು ಪರಿಶೀಲಿಸಲಾಗಿ, ಮುನಿವೆಂಕಟಪ್ಪ ಗಾರ್ಡನ್ ಧೋಬಿಘಾಟ್ ಪ್ರದೇಶವು ಸುಮಾರು 2.75 ಎಕರೆ ಪ್ರದೇಶವಾಗಿದ್ದು, ಅಲ್ಲಿ ಧೋಬಿ ಜನಾಂಗದ ಕುಟುಂಬಗಳು ಕಾರ್ಯನಿರ್ವಹಿಸುತ್ತಿದ್ದು ಯಾವುದೇ ಮೂಲಭೂತ ಸೌಕರ್ಯಗಳು ಇಲ್ಲದಿರುವುದು ಕಂಡುಬಂದಿರುತ್ತದೆ. ಸದರಿ ಧೋಬಿಘಾಟ್ ಆಧುನಿಕರಣಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.

ಸದರಿ ಧೋಬಿಘಾಟ್‌ನಲ್ಲಿ ನೆಲಸಿರುವ ಅಗಸರಿಗೆ ವಸತಿ ಸೌಕರ್ಯವನ್ನು ಒದಗಿಸಿಕೊಡಲು 96 ಕುಟುಂಬಗಳಿಗೆ ವಸತಿ ಕಲ್ಪಿಸಲು ಬಹು ಅಂತಸ್ತಿನ ಕಟ್ಟಡ ನಿರ್ಮಾಣ, ಉಳಿದ ಸುಮಾರು 0.75 ಎಕರೆ ಪ್ರದೇಶದಲ್ಲಿ ಟ್ರೀ–ಪಾರ್ಕ್‌ನ್ನು ಅಭಿವೃದ್ಧಿಪಡಿಸುವ ಕಾಮಗಾರಿ, ಮಳೆ ನೀರು ಕೋಯ್ಲು, ಮಕ್ಕಳ ಆಟದ ಮೈದಾನದ ಅಭಿವೃದ್ಧಿ, ಮಳೆ ನೀರು ಚರಂಡಿ ಅಭಿವೃದ್ಧಿ ಒಳರಸ್ತೆ ನಿರ್ಮಾಣ ಕಾಮಗಾರಿ, ಇತ್ಯಾದಿ ಕಾಮಗಾರಿಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ.

***ವಿವರ ಕೆಳಕಂಡಂತೆ ಇರುತ್ತದೆ.***

| | | |
|---|---|---|
| 1. | ಬಹು ಅಂತಸ್ತಿನ ವಾಸದ ಕಟ್ಟಡದ ನಿರ್ಮಾಣ (96 ಕುಟುಂಬಗಳಿಗೆ) | ರೂ. 350.00 ಲಕ್ಷ |
| 2. | ಟ್ರೀ–ಪಾರ್ಕ್‌ನ ಅಭಿವೃದ್ಧಿ ಕಾಮಗಾರಿ | ರೂ. 30.00 ಲಕ್ಷ |
| 3. | ಮಳೆ ನೀರು ಕೋಯ್ಲಿನ ಕಾಮಗಾರಿ | ರೂ. 20.00 ಲಕ್ಷ |
| 4. | ಮಕ್ಕಳ ಆಟದ ಮೈದಾನ ಅಭಿವೃದ್ಧಿ | ರೂ. 10.00 ಲಕ್ಷ |
| 5. | ಧೋಬಿಘಾಟ್ ನಲ್ಲಿ ಹಾದು ಹೋಗುವ ಮಳೆ ನೀರು ಚರಂಡಿ ಅಭಿವೃದ್ಧಿ ಕಾಮಗಾರಿ | ರೂ. 70.00 ಲಕ್ಷ |
| 6. | ಒಳ ರಸ್ತೆಗಳ ನಿರ್ಮಾಣ | ರೂ. 20.00 ಲಕ್ಷ |
| | **ಒಟ್ಟು ಮೊತ್ತ** | **ರೂ. 500.00 ಲಕ್ಷ** |

ಈ ಮೇರೆಗೆ ಮೇಲೆ ತಿಳಿಸಿದ ಕಾಮಗಾರಿಯನ್ನು 2011–12ನೇ ಆಯವ್ಯಯದಲ್ಲಿ ಕೈಗೊಳ್ಳಲು ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : 2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಆಯವ್ಯಯದಲ್ಲಿ ಲಭ್ಯವಿರುವ ಅನುದಾನದಲ್ಲಿ ದಿನಾಂಕ : 05–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## ***29]. ವಿಷಯದ ಸಂಖ್ಯೆ :–ತೆಆಸ್ಥಾಸ/249/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಅ.ಆ(ರಾ.ರಾ.ನಗರ)/ಪಿಆರ್/1366/11–12, ದಿನಾಂಕ ಃ 05–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ : 16ರಲ್ಲಿ ಮಳೆ ನೀರು ಚರಂಡಿಗಳನ್ನು ಅಭಿವೃದ್ಧಿಪಡಿಸುವ 12 ಕಾಮಗಾರಿಗಳ ಅಂದಾಜು ಮೊತ್ತ ರೂ.239.54 ಲಕ್ಷಗಳಿಗೆ 2010–11ನೇ ಸಾಲಿನ ಆಯವ್ಯಯದ **ಯಶವಂತಪುರ ಮಳೆ ನೀರಿನ ಚರಂಡಿ ಕಾಮಗಾರಿಗಳು ಪಿ2309** ಲೆಕ್ಕಶೀರ್ಷಿಕೆಯಡಿ ಅನುದಾನ ಬಿಡುಗಡೆ ಮಾಡಲು ಶ್ರೀ ಆರ್.ನಾರಾಯಣಸ್ವಾಮಿ, ಮಾಜಿ ಮಹಾಪೌರರು ಹಾಗೂ ವಾರ್ಡ್ ಸಂಖ್ಯೆ 16ರ ಪಾಲಿಕೆ ಸದಸ್ಯರು ಪತ್ರದ ಮುಖಾಂತರ ಕೋರಿರುತ್ತಾರೆ.

2011–12ನೇ ಸಾಲಿನ ಆಯವ್ಯಯದ ಕ್ರಿಯಾ ಯೋಜನೆಯಲ್ಲಿ ಅಂದಾಜು ಮೊತ್ತ ರೂ. 239.54 ಲಕ್ಷ ವೆಚ್ಚದಲ್ಲಿ ಸದರಿ ಕಾಮಗಾರಿಗಳನ್ನು ಸೇರಿಸಿಕೊಳ್ಳುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : 2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***30]. ವಿಷಯದ ಸಂಖ್ಯೆ :–ತೆಆಸ್ಥಾಸ/250/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(4)ಪಿಆರ್/93/11–12, ದಿನಾಂಕ ಃ 12–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಸ್ವತ್ತಿನ ಸಂಖ್ಯೆ:06, 2ನೇ ಹಂತ, ಮಾರೇನಹಳ್ಳಿ, ಜಯನಗರ ವಾರ್ಡ್ ನಂ:168, ಪಟ್ಟಾಭಿರಾಮನಗರ, 13051 ಚ.ಅಡಿ ಸ್ವತ್ತನ್ನು ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಗೆ ಗುತ್ತಿಗೆಯ ಆಧಾರದ ಮೇಲೆ ನಗರಪಾಲಿಕೆ ವತಿಯಿಂದ ದಿನಾಂಕ:25–02–1994 ರಿಂದ ದಿನಾಂಕ:24–02–1997 ರವರೆಗಿನ 3–ವರ್ಷಗಳ ಗುತ್ತಿಗೆ ಅವಧಿಗೆ ವಾರ್ಷಿಕ ರೂ.1200/– ಗುತ್ತಿಗೆ ಹಣ ನಿಗದಿಪಡಿಸಿ ವಸತಿ ನಿಲಯಕ್ಕಾಗಿ ನೀಡಲಾಗಿರುತ್ತದೆ. ಗುತ್ತಿಗೆದಾರರು ಗುತ್ತಿಗೆ ನವೀಕರಿಸಿ ಕೊಂಡಿರುವುದಿಲ್ಲ.

ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿರವರು ಪತ್ರ ಬರೆದು, ಗುತ್ತಿಗೆ ಅವಧಿ ವಿಸ್ತರಿಸಲು ಹಾಗೂ ಈ ಸ್ವತ್ತಿಗೆ ಜೂನ್–2005ರವರೆವಿಗೆ ಗುತ್ತಿಗೆ ಮೊತ್ತವನ್ನು ಪಾವತಿಸಿದ್ದು, ತದನಂತರದ ಅವಧಿಗೆ ಗುತ್ತಿಗೆ ಮೊತ್ತವನ್ನು ಶೇ:22.75% ರ ಅಡಿಯಲ್ಲಿ ಕಾದಿರಿಸಿದ ಮೊತ್ತದಲ್ಲಿ ಹಣವನ್ನು ಭರಿಸಲು ಕೋರಿರುತ್ತಾರೆ.

ವಲಯಾಧಿಕಾರಿಗಳು ತಮ್ಮ ವರದಿಯಲ್ಲಿ ಗುತ್ತಿಗೆ ಅವಧಿ 24–02–1997ಕ್ಕೆ ಮುಕ್ತಾಯವಾಗಿದ್ದು, ಗುತ್ತಿಗೆದಾರರು ಜೂನ್–2005ರ ವರೆಗೆ ಹಣ ಪಾವತಿಸಿರುತ್ತಾರೆ. ಸ್ಥಳ ಪರಿಶೀಲಿಸಲಾಗಿ, ಪ್ರಸ್ತುತ ಸ್ವತ್ತಿನಲ್ಲಿ ತಳ ಮತ್ತು ನೆಲ ಅಂತಸ್ತಿನಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಸರ್ಕಾರಿ ಕಲಾ ಕಾಲೇಜು ಬಾಲಕರ ವಿದ್ಯಾರ್ಥಿ ನಿಲಯವನ್ನಾಗಿ ನಡೆಸುತ್ತಿದ್ದು, ಇದರಲ್ಲಿ ಎಲ್ಲರೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ವಾಸವಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:24–02–1997 ಕ್ಕೆ ಪೂರ್ಣ ಗೊಂಡಿರುವುದರಿಂದ, ದಿನಾಂಕ:25–02–1997 ರಿಂದ ಗುತ್ತಿಗೆ ಅವಧಿಯನ್ನು ನವೀಕರಿಸಲು ಪ್ರಸ್ತಾಪಿಸಿರುತ್ತಾರೆ. ಸಮಾಜ ಕಲ್ಯಾಣ ಇಲಾಖೆಯು ಸರ್ಕಾರದ ಒಂದು ಭಾಗವಾಗಿದ್ದು, ಗುತ್ತಿಗೆ ಷರತ್ತು ಉಲ್ಲಂಘಿಸಿಲ್ಲವಾದ್ದರಿಂದ, ಮುಂದಿನ 5–ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದೆಂದು ಅಭಿಪ್ರಾಯಿಸಲಾಗಿದೆ.

ದಿನಾಂಕ:01–03–2002ರ ಆಯುಕ್ತರ ಸುತ್ತೋಲೆ ಕಲಂ–7(4) ರಲ್ಲಿ ಗುತ್ತಿಗೆ ಹಣ ಸ್ಥಳದ ಹಾಲಿ ಮಾರುಕಟ್ಟೆ ದರಕ್ಕೆ 10%ರಷ್ಟು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಲು ಆದೇಶವಿರುತ್ತದೆ. ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ.2,800/–ಗಳಿದ್ದು, ಅರ್ಜಿದಾರರುಗಳು ಕೋರಿರುವ ಜಾಗವು 13051 ಚ.ಅಡಿಗಳಾಗುತ್ತದೆ. ಇದರಂತೆ 2800x13051 = 3,65,42,800/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 36,54,280/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 3,04,525/– ರೂ. ಗಳಾಗುತ್ತದೆ.

ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಅಧಿಕಾರವಿರುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಗುತ್ತಿಗೆಯನ್ನು ಮುಂದಿನ 05 ವರ್ಷಗಳಿಗೆ ನವೀಕರಿಸುವ ಬಗ್ಗೆ ಹಾಗೂ ನವೀಕರಿಸದೇ ಇರುವ ದಿನಾಂಕದಿಂದ ನಿಗಧಿಪಡಿಸುವ ಗುತ್ತಿಗೆ ಹಣದ ಬಗ್ಗೆ ಮತ್ತು ನವೀಕರಿಸಿದ ಅವಧಿಗೆ ಗುತ್ತಿಗೆ ಹಣ ನಿಗಧಿಪಡಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ12–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 19–07–2011ರ ನಿರ್ಣಯ

***ನಿರ್ಣಯ :*** ***ದಿನಾಂಕ : 19–07–2011ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.27,400/– (ಇಪ್ಪತ್ತೇಳು ಸಾವಿರದ ನಾಲ್ಕು ನೂರು) ಗಳಿಗೆ ಗುತ್ತಿಗೆ ಮೊತ್ತವನ್ನು ನಿಗಧಿಪಡಿಸಲು ಸಮಿತಿಯು ತೀರ್ಮಾನಿಸಿತು.***

## ***31]. ವಿಷಯದ ಸಂಖ್ಯೆ :–ತೆಆಸ್ಥಾಸ/251/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)ಪಿಆರ್/17/11–12, ದಿನಾಂಕ : 01–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್–128, 80 ಅಡಿ ರಸ್ತೆ ಚಂದ್ರಾ ಲೇಔಟ್ ಮುಖ್ಯರಸ್ತೆಯ ಪಾದಚಾರಿ ರಸ್ತೆಯಲ್ಲಿ ಹಾಲಿನ ಬೂತ್ ತೆರೆಯಲು 6.5x6.5 ಅಡಿಗಳ ಸ್ಥಳವನ್ನು ಮಂಜೂರು ಮಾಡುವಂತೆ ನಿರುದ್ಯೋಗಿ ಶ್ರೀ.ಗಿರೀಶ್ ಅಂಗವಿಕಲರವರು ಕೋರಿರುತ್ತಾರೆ.

ಈ ಬಗ್ಗೆ ವಲಯಾಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ, ನಕ್ಷೆ ತಯಾರಿಸಿ, ಈ ಪಾದಚಾರಿ ರಸ್ತೆ ಅಗಲವಿದ್ದು, ಇದರಲ್ಲಿನ 6.5x6.5 ಅಡಿಗಳ ಜಾಗವನ್ನು ನೀಡುವುದರಿಂದ, ಪಾದಚಾರಿಗಳ ಸಂಚಾರಕ್ಕೆ

ತೊಂದರೆಯಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಅರ್ಜಿದಾರರು ಪೊಲೀಸ್ ಇಲಾಖೆಯಿಂದ ಎನ್.ಓ.ಸಿ. ಪಡೆದಿದ್ದು, ಮಹಜರ್ ಜರುಗಿಸಿರುವುದರಿಂದ, ನಿಯಮಾನುಸಾರ ಅವಕಾಶವಿದ್ದಲ್ಲಿ ಹಾಲಿ ಬೂತ್ ತೆರೆಯಲು ಅನುಮತಿ ನೀಡುವ ಬಗ್ಗೆ ಆದೇಶಕ್ಕಾಗಿ ಕಡತ ಸಲ್ಲಿಸಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17–04–2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿಯೇತರ ರೂ.4900/–ಗಳಿದ್ದು, ಅರ್ಜಿದಾರರುಗಳು ಕೋರಿರುವ 6.5X6.5 ಅಡಿಗಳ ಜಾಗವು 42 ಚ.ಅಡಿಗಳಾಗುತ್ತದೆ. ಇದರಂತೆ 4900X42 = 2,05,800/– ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 20,580/– ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 1715/– ರೂ.ಗಳಾಗುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ–176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02–06–2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಗುತ್ತಿಗೆ ಆಧಾರದ ಮೇಲೆ ನೀಡಿದ್ದಲ್ಲಿ, ಇಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಸದರಿ ವಿಷಯದಲ್ಲಿ ದಿನಾಂಕ:01–03–2002ರ ಆಯುಕ್ತರ ಸುತ್ತೋಲೆಯಲ್ಲಿ ಪಾಲಿಕೆ ಸ್ಥಳಗಳನ್ನು ಗುತ್ತಿಗೆಗೆ ನೀಡುವ ಬಗ್ಗೆ ಮಾರ್ಗಸೂಚಿಯಲ್ಲಿ ರಸ್ತೆ ಬದಿಯಲ್ಲಿ, ಪಾದಚಾರಿ ರಸ್ತೆಯಲ್ಲಿ, ಉದ್ಯಾನವನಗಳಲ್ಲಿ ಹಾಗೂ ಆಟದ ಮೈದಾನಗಳಲ್ಲಿ ಗುತ್ತಿಗೆ ನೀಡುವುದು ಸಮಂಜಸವಲ್ಲ ಎಂದಿದೆ.

ದಿನಾಂಕ:18–07–2005ರಲ್ಲಿ ಹೊರಡಿಸಲಾಗಿರುವ ಸುತ್ತೋಲೆಯಲ್ಲಿ ರಾಜ್ಯ ಉಚ್ಛನ್ಯಾಯಾಲಯವು ಪಾದಚಾರಿ ಮಾರ್ಗದಲ್ಲಿ ಪಾದಚಾರಿಗಳ ಚಲನವಲನಕ್ಕೆ ಅಡ್ಡಿ ಮಾಡುವ ಯಾವುದೇ ನಿರ್ಮಾಣಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಪರಿಗಣಿಸಬಾರದೆಂದು ಆದೇಶಿಸಿರುತ್ತದೆ.

ಪ್ರಸ್ತುತ ಜಾಗವು ಉದ್ಯಾನವನದಲ್ಲಿ ಬರುತ್ತಿದ್ದು, ಈ ಪ್ರದೇಶವು ಕರ್ನಾಟಕ ಉದ್ಯಾನವನ, ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ–1985ರನ್ವಯ ಕರಡು ಅಧಿಸೂಚಿಸಲು ಪ್ರಸ್ತಾಪಿಸಲಾಗಿದೆ. ಈ ಪ್ರದೇಶವನ್ನು ಉದ್ಯಾನವನದ ಇತರೇ ಉಪಯೋಗಕ್ಕೆ ಉಪಯೋಗಿಸಲು ಸರ್ಕಾರದ ಅನುಮೋದನೆ ಅವಶ್ಯಕವಾಗಿರುತ್ತದೆ.

ಈ ಮೇಲಿನ ಸರ್ಕಾರಿ ನಿಯಮಗಳ ಹಿನ್ನೆಲೆಯಲ್ಲಿ ಶ್ರೀ.ಗಿರೀಶ್ ರವರಿಗೆ ಗುತ್ತಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:01–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26–07–2011ರ ನಿರ್ಣಯ.

***<u>ನಿರ್ಣಯ :</u>*** ***<u>ದಿನಾಂಕ : 01–07–2011ರ ಆಯುಕ್ತರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ ಸ್ಥಳವು ಉದ್ಯಾನವನದ ಒಳಗೆ ಬರುವುದರಿಂದ ದಿನಾಂಕ : 26–07–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಮರುಪರಿಶೀಲಿಸುವಂತೆ ಸಮಿತಿಯು ತೀರ್ಮಾನಿಸಿತು.</u>***

## ***<u>32]. ವಿಷಯದ ಸಂಖ್ಯೆ :–ತೆಆಸ್ಥಾಸ/252/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)ಪಿಆರ್/91/11–12, ದಿನಾಂಕ : 04–07–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ:60, ಸಗಾಯಿಪುರಂ ರಿಚರ್ಡ್ಸ್ ಟೌನ್, ಪಾಟರಿಟೌನ್ ರಸ್ತೆಯಲ್ಲಿರುವ 4906.5 ಚ.ಅಡಿಗಳ ಮಾರ್ಜಿನಲ್ ಜಾಗವನ್ನು ಶಾಲಾ ಮಕ್ಕಳಿಗೆ ಉಪಯೋಗಕ್ಕಾಗಿ ಮತ್ತು ಆಟದ ಮೈದಾನಕ್ಕಾಗಿ ವಾರ್ಷಿಕ 200/–ರೂ.ಗಳ ಗುತ್ತಿಗೆ ಆಧಾರದ ಮೇಲೆ ದಿನಾಂಕ:22–01–1975 ರಿಂದ 21–01–1978 ರವರೆಗೆ 03–ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಗುತ್ತಿಗೆ ಅವಧಿಯು ದಿನಾಂಕ:21–

01–1978ಕ್ಕೆ ಮುಕ್ತಾಯವಾಗಿರುತ್ತದೆ. ಗುತ್ತಿಗೆ ನೀಡಿರುವ ಅವಧಿಯನ್ನೊಳಗೊಂಡಂತೆ ಈವರೆವಿಗೂ ಗುತ್ತಿಗೆ ಮೊತ್ತ ಪಾವತಿಸದ ಕಾರಣ, ವಸೂಲಿ ಮಾಡಿ ಪಾಲನಾ ವರಧಿ ಸಲ್ಲಿಸುವಂತೆ ಸೂಚಿಸಲಾಗಿದ್ದರ ಮೇರೆಗೆ 1977 ರಿಂದ 2010ನೇ ಸಾಲಿನವರೆವಿಗೂ ಶೇ:5%ರ ಬಡ್ಡಿಯೊಂದಿಗೆ ಗುತ್ತಿಗೆ ಮೊತ್ತವನ್ನು ಪಾವತಿಸಿ, ಹಾಗೂ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿರುತ್ತಾರೆ.

ಈ ಬಗ್ಗೆ ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಶಾಸಕರು ಗುತ್ತಿಗೆ ಅವಧಿಯನ್ನು ನವೀಕರಿಸದೇ ಗುತ್ತಿಗೆಯನ್ನು ರದ್ದುಪಡಿಸಿ ಪಾಲಿಕೆ ವಶಕ್ಕೆ ತೆಗೆದುಕೊಳ್ಳಲು ಕೋರಿರುತ್ತಾರೆ.

ಸಹಾಯಕ ಆಯುಕ್ತರು(ಆಸ್ತಿಗಳು)ರವರು ಪೂರ್ವ ವಲಯದ ಭೂಮಾಪಕರು ಹಾಗೂ ಕಾಡುಗೊಂಡನಹಳ್ಳಿ ಉಪವಲಯದ ಮೌಲ್ಯಮಾಪಕರೊಂದಿಗೆ ಸ್ಥಳ ಪರಿಶೀಲನೆ ನಡೆಸಲಾಗಿದ್ದು, ಗುತ್ತಿಗೆ ಅವಧಿ ನವೀಕರಿಸಲು ಕೋರಿರುವ ಆಸ್ತಿಯು ಕರ್ನ್ಸವೆನ್ಸಿ ರಸ್ತೆಯಾಗಿದ್ದು, ಇದರ ಅಳತೆ ಪೂರ್ವ–ಪಶ್ಚಿಮ 360 ಅಡಿಗಳು ಹಾಗೂ ಉತ್ತರ–ದಕ್ಷಿಣದ ಅಳತೆ ಸರಾಸರಿಯಲ್ಲಿ 13.5 ಅಡಿಗಳಾಗಿದ್ದು, ಒಟ್ಟು ವಿಸ್ತೀರ್ಣ 4860 ಅಡಿಗಳ ಪ್ರದೇಶವಾಗಿರುವುದಾಗಿ, ಈ ಪ್ರದೇಶದಲ್ಲಿ ಕ್ಲಾರೆನ್ಸ್ ಶಾಲೆಯ ಮಕ್ಕಳು ಆಟವಾಡಲು ಆಟದ ಸಾಮಗ್ರಿಗಳನ್ನು ಜೋಡಿಸಿ ಮಕ್ಕಳ ಉಪಯೋಗಕ್ಕಾಗಿ ಉಪಯೋಗಿಸುತ್ತಿರುವುದಾಗಿ ವರದಿ ಮಾಡಿರುತ್ತಾರೆ. ಈ ಬಗ್ಗೆ ನಗರಮಾಪನ ಇಲಾಖೆಯಲ್ಲಿ ಲಭ್ಯವಿರುವ ಮಾಹಿತಿಯೊಂದಿಗೆ ವರಧಿ ಕೋರಲಾಗಿ, ಇವರು ನೀಡಿರುವ ವರಧಿಯಂತೆ ಈ ಪ್ರದೇಶವು ಸ್ಥಳೀಯ ಕ್ಷೇತ್ರ 71 ಆಗಿದ್ದು, ಸಗಾಯಿಪುರಂ ವ್ಯಾಪ್ತಿಯ ಸಿ.ಟಿ.ಎಸ್.ನಂ:975ರ ಉತ್ತರ ಭಾಗದ ಕರ್ನ್ಸವೆನ್ಸಿ ಲೀಜ್ ಪ್ರದೇಶವಾಗಿದ್ದು, ಇದು ಪಾಲಿಕೆಯ ಆಸ್ತಿಯಾಗಿದ್ದು, ಇದರ ಅಳತೆ 13.5ಥ360 ಅಡಿಗಳಾಗಿದ್ದು, ಇದರ ಒಟ್ಟು ವಿಸ್ತೀರ್ಣದ 4860 ಚದರ ಅಡಿ ಪ್ರದೇಶವಾಗಿರುತ್ತದೆಂದು ವರಧಿ ಮಾಡಿರುತ್ತಾರೆ.

ಗುತ್ತಿಗೆ ಅವಧಿ ನವೀಕರಿಸಲು ಕೋರಿರುವ ರಸ್ತೆಯು (ಮಾರ್ಜಿನಲ್ ಜಾಗ) ಸಾರ್ವಜನಿಕ ಓಡಾಟಕ್ಕೆ ಕಿರಿದಾದ ಪ್ರದೇಶವಾಗಿದ್ದು, ಪಾಲಿಕೆಯ ಯಾವುದೇ ವಾಣಿಜ್ಯ ಉದ್ದೇಶಕ್ಕೆ ಉಪಯೋಗವಿಲ್ಲವೆಂದು ಶಾಲೆಯ ಮಕ್ಕಳಿಗೆ ಸದುಪಯೋಗವಾಗುವುದರಿಂದ, ನಿಯಮಾನುಸಾರ ಗರಿಷ್ಟ ಮೊತ್ತಕ್ಕೆ ಗುತ್ತಿಗೆಗೆ ನೀಡಬಹುದೆಂದು ಸಹಾಯಕ ಆಯುಕ್ತರು(ಆಸ್ತಿಗಳು) ಅಭಿಪ್ರಾಯಿಸಿರುತ್ತಾರೆ.

ಪ್ರಸ್ತುತ ನವೀಕರಿಸಲು ಕೋರಿರುವ ಸ್ವತ್ತಿನ ಮಾರುಕಟ್ಟೆ ದರವು ದಿನಾಂಕ:19–04–2007ರ ಸರ್ಕಾರದ ಮಾರ್ಗಸೂಚಿ ದರಗಳನ್ವಯ ಚದರ ಅಡಿ 1ಕ್ಕೆ 2000/–ರೂ.ಗಳಿದ್ದು, 4860 ಚದರ ಅಡಿಗಳಿಗೆ 97,20,000/–ರೂ.ಗಳಾಗುತ್ತದೆ. ಶೇ:10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ ಗುತ್ತಿಗೆ ಮೊತ್ತ 9,72,000/–ರೂ.ಗಳಾಗುತ್ತದೆ. ಮಾಸಿಕ 81,000/–ರೂ.ಗಳಾಗುತ್ತದೆ. ದಿನಾಂಕ:01–03–2002ರ ಸುತ್ತೋಲೆ ಕ್ರಮ ಸಂಖ್ಯೆ:5ರ ಪ್ರಕಾರ ಅಂಗವಿಕಲರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂದಿದೆ.

ಈ ಹಿನ್ನೆಲೆಯಲ್ಲಿ ಕ್ಲಾರೆನ್ಸ್ ಹೈಸ್ಕೂಲ್ ರವರಿಗೆ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ಹಿಂದಿನ ದಿನಾಂಕದವರೆಗೆ ಹಳೆಯ ಗುತ್ತಿಗೆ ದರದಂತೆಯೂ, ಹೊಸದಾಗಿ ಕರಾರು ನೊಂದಾಯಿಸುವ ದಿನಾಂಕದಿಂದ ಐದು–(05) ವರ್ಷಗಳ ಅವಧಿಗೆ ವಾರ್ಷಿಕ/ಮಾಸಿಕ ಸೂಕ್ತ ಗುತ್ತಿಗೆ ಮೊತ್ತ ನಿಗಧಿಪಡಿಸಿ ನವೀಕರಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:04–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 02–08–2011ರ ನಿರ್ಣಯ.

***ನಿರ್ಣಯ : ದಿನಾಂಕ : 02–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ವಾರ್ಷಿಕ ರೂ.25,000/– (ಇಪ್ಪತ್ತೈದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***33]. ವಿಷಯದ ಸಂಖ್ಯೆ :–ತೆಆಸ್ಥಾಸ/253/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(1)ಪಿಆರ್/07/11–12, ದಿನಾಂಕ : 21–06–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ.64 (4), ಮಲ್ಲೇಶ್ವರಂ ರಲ್ಲಿನ ಕಾಡುಮಲ್ಲೇಶ್ವರ 7ನೇ ಮುಖ್ಯರಸ್ತೆಯಲ್ಲಿ 30X65 ಅಡಿ ಅಳತೆಯ ಪಾಲಿಕೆಯ ಖಾಲಿ ನಿವೇಶನವನ್ನು ಶ್ರೀ.ಅಯ್ಯಪ್ಪ ದೇವಸ್ಥಾನ ನಿರ್ಮಿಸಲು ಮೊದಲಿಗೆ ಗುತ್ತಿಗೆಗೆ ನೀಡಿದ್ದು, ಅನಂತರದಲ್ಲಿ 9000 ಚ.ಅಡಿಗಳ ನಿವೇಶನವನ್ನು ವಾರ್ಷಿಕ ಗುತ್ತಿಗೆ ಮೊತ್ತ ರೂ.500/– ಗಳಂತೆ ದಿನಾಂಕ:02–08–1978 ರಿಂದ 01–08–2008ರ ವರೆಗೆ 30 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿಲಾಗಿದ್ದು, ಇದರ ಅವಧಿಯು ಸಹಾ 01–08–2008ಕ್ಕೆ

ಮುಕ್ತಾಯವಾಗಿದ್ದು, ಈಗ ಸದರಿ ಶ್ರೀ.ಅಯ್ಯಪ್ಪ ಸ್ವಾಮಿ ಟ್ರಸ್ಟ್ ರವರು 99 ವರ್ಷಗಳ ಅವಧಿಗೆ ಗುತ್ತಿಗೆ ವಿಸ್ತರಿಸಬೇಕೆಂದು ಕೋರಿರುತ್ತಾರೆ.

ಪ್ರಸ್ತುತ ಸ್ಥಳವು ರಸ್ತೆ ಅಗಲೀಕರಣಕ್ಕೆ ಅವಶ್ಯವಿದೆಯೆಂದು ಕಂಡು ಬಂದಿದ್ದು, ನಂತರದಲ್ಲಿ ಸದ್ಯಕ್ಕೆ ಅದರ ಅವಶ್ಯಕತೆ ಇರುವುದಿಲ್ಲವೆಂದು ತಿಳಿಸಿ ಒಂದು ವೇಳೆ ಸದರಿ ಸ್ಥಳ ರಸ್ತೆ ಅಗಲೀಕರಣಕ್ಕೆ ಬೇಕಾದಲ್ಲಿ ಇದರಂತೆ ಷರತ್ತು ವಿಧಿಸಿ ಗುತ್ತಿಗೆ ಮುಂದುವರೆಸಲು ಕ್ರಮ ತೆಗೆದುಕೊಳ್ಳಬಹುದೆಂದು ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಕಂಡಿಕೆ 79 ರಲ್ಲಿ ವರದಿ ನೀಡಿರುತ್ತಾರೆ.

ಪ್ರಸ್ತುತ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲಿಸಲಾಗಿ ಇದು ಒಟ್ಟು 9000 ಚ.ಅಡಿ ಜಾಗವಿದ್ದು, ಸುಮಾರು. 3800.94 ಚದರ ಅಡಿಯಲ್ಲಿ ದೇವಸ್ಥಾನ ನಿರ್ಮಾಣ ಮಾಡಿದ್ದು, 1817.78 ಚ.ಅಡಿ ಜಾಗದಲ್ಲಿ ಕಟ್ಟಡ ನಿರ್ಮಾಣ ಕಾರ್ಯ ನಡೆದಿದ್ದು, ಈಗ ಸ್ಥಗಿತಗೊಂಡಿದ್ದು ಇನ್ನು 359.25 ಚದರ ಅಡಿ ಜಾಗದಲ್ಲಿ ದೇವಸ್ಥಾನದ ಕಛೇರಿ ಕಟ್ಟಡವಿರುವುದಾಗಿ ತಿಳಿದು ಬರುತ್ತದೆ.

ಪ್ರಸ್ತುತ ಸ್ವತ್ತಿನ ಗುತ್ತಿಗೆ ಅವಧಿಯು ದಿನಾಂಕ:01–08–2008ಕ್ಕೆ ಮುಕ್ತಾಯವಾಗಿದ್ದು, ಸರ್ಕಾರದ 2007ರ ಮಾರ್ಗಸೂಚಿ ದರದಂತೆ ಪ್ರಸ್ತುತ ಮಾರುಕಟ್ಟೆ ದರ ಚದರ ಅಡಿ ಒಂದಕ್ಕೆ ರೂ.3500/–ಗಳಾಗಿದ್ದು ಇದರಂತೆ 9000 ಚದರ ಅಡಿ ಜಾಗಕ್ಕೆ 3500X9000=3,15,00,000 ರೂ ಆಗುತ್ತದೆ. ಶೇ 10% ರಷ್ಟು ವಾರ್ಷಿಕ ಗುತ್ತಿಗೆ ದರ ರೂ. 31,50,000/– ಗಳಾಗುತ್ತದೆ. ಹಾಗೂ ಮಾಸಿಕ ಗುತ್ತಿಗೆ ದರವು ರೂ.2,62,500/– ಆಗುತ್ತದೆ ಎಂದು ತಿಳಿಸಿ ಗುತ್ತಿಗೆ ಅವಧಿ ನವೀಕರಣಕ್ಕೆ ವಲಯಾಧಿಕಾರಿಗಳು ಶಿಫಾರಸ್ಸು ಮಾಡಿರುತ್ತಾರೆ

ದಿನಾಂಕ:01–03–2002ರ ಪಾಲಿಕೆಯ ಸುತ್ತೋಲೆಯ ಪ್ರಕಾರ ಅಂಗವಿಕಲರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅರ್ಜಿದಾರರಿಗೆ ಹಾಗೂ ಶೇ 100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದತ್ತಿ ಸಂಸ್ಥೆಗಳಿಗೆ ಮೇಲ್ಕಂಡ ಗುತ್ತಿಗೆ ಮತ್ತು ಕ್ರಯಕ್ಕೆ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿ ಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಆಯುಕ್ತರು ನಿರ್ಧರಿಸುವರು ಎಂಬುದಾಗಿ ಇರುತ್ತದೆ.

ಮೇಲಿನ ವಿವರಗಳ ಹಿನ್ನೆಲೆಯಲ್ಲಿ ಶ್ರೀ.ಅಯ್ಯಪ್ಪ ಸ್ವಾಮಿ ಟ್ರಸ್ಟ್ ರವರಿಗೆ ಕರಾರು ನೊಂದಾಯಿಸಿದ ದಿನಾಂಕದಿಂದ 5 ವರ್ಷದ ಅವಧಿಗೆ ನೀಡುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 21–06–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 26–07–2011ರ ನಿರ್ಣಯ.

**–ಮುಂದೂಡಿದೆ–**

## ***34]. ವಿಷಯದ ಸಂಖ್ಯೆ :–ತೆಆಸ್ಥಾಸ/254/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್ಎಕ್ಯೂ/ಸಿಆರ್/49/2011–12, ದಿನಾಂಕ : 24–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆಡುಗೋಡಿ ಭಾಗದಲ್ಲಿನ ಹೊಸೂರು–ಲಸ್ಕರ್ ರಸ್ತೆಯ ಅಗಲೀಕರಣ ಸಂಬಂಧ ಲಕ್ಕಸಂದ್ರ ವಾರ್ಡ್ ನಂ–146 (ಹಳೆ ವಾರ್ಡ್ ನಂ–63) ಮತ್ತು ಆಡುಗೋಡಿ ವಾರ್ಡ್ ನಂ–147 (ಹಳೆ ವಾರ್ಡ್ ನಂ–67) ರಲ್ಲಿನ ಸ್ವತ್ತುಗಳನ್ನು ಅಧಿಸೂಚನೆ ಸಂಖ್ಯೆ: JDTP/RW/Phase-1/Sector-1/C-2/PR-1/2004-05, date: 02–03–2005 ರನ್ವಯ ಟಿ.ಡಿ.ಆರ್ ಯೋಜನೆಯಡಿ ವಶಪಡಿಸಿಕೊಳ್ಳಲು ಅಧಿಸೂಚನೆ ಹೊರಡಿಸಲಾಗಿದ್ದು, 4.30 ಕಿ.ಮೀ ಉದ್ದದ ರಸ್ತೆಯನ್ನು 30 ಮೀಟರ್‌ಗೆ ಅಗಲೀಕರಣಗೊಳಿಸುವ ಕಾಮಗಾರಿಯು ಆಡುಗೋಡಿ ಭಾಗದಲ್ಲಿ ಪ್ರಗತಿಯಲ್ಲಿರುತ್ತದೆ. ಆದರೆ, ಈ ಕಾಮಗಾರಿಗಾಗಿ ಸ್ವಾಧೀನಪಡಿಸಿಕೊಳ್ಳಲು ಗುರುತಿಸಿರುವ ಸ್ವತ್ತುಗಳ ಪೈಕಿ 47 ಸ್ವತ್ತುಗಳ ಮಾಲೀಕರು ಟಿ.ಡಿ.ಆರ್ ಪಡೆಯಲು ಒಪ್ಪದೇ ಇದ್ದುದರಿಂದಲೂ, ದಿನಾಂಕ: 06–11–2010ರಂದು ಮಾನ್ಯ ಆಯುಕ್ತರು ಈ ರಸ್ತೆ ಅಗಲೀಕರಣ ಕಾಮಗಾರಿಯ ಪ್ರಗತಿ ಪರಿಶೀಲನೆಯನ್ನು ನಡೆಸಿದ್ದು, ಅವಶ್ಯವಿರುವ ಸ್ವತ್ತುಗಳಿಗೆ ಭೂಸ್ವಾಧೀನ ಪ್ರಸ್ತಾವನೆ ಸಲ್ಲಿಸಲು ಸೂಚಿಸಿರುವುದರಿಂದಲೂ, ಸದರಿ ರಸ್ತೆಗೆ ಹೊಂದಿಕೊಂಡಿರುವ ಪ್ರಸ್ತಾಪಿತ 47 ಖಾಸಗಿ ಸ್ವತ್ತುಗಳ ಭಾಗಶಃ ಜಾಗವನ್ನು ಭೂಸ್ವಾಧೀನಪಡಿಸಿಕೊಳ್ಳುವ ಸಂಬಂಧ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಸ್ತೆ ಅಗಲೀಕರಣ–3 ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಾರ್ಯಪಾಲಕ ಅಭಿಯಂತರರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಉಪ ಆಯುಕ್ತರು (ಭೂಸ್ವಾಧೀನ) ರವರು ದಿನಾಂಕ: 24–06–2011ರಂದು ರಸ್ತೆ ಅಗಲೀಕರಣ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಸಹಾಯಕ ಅಭಿಯಂತರರು ಹಾಗೂ ಭೂಮಾಪಕರೊಂದಿಗೆ ರಸ್ತೆ ಅಗಲೀಕರಣಕ್ಕೆ ಗುರುತಿಸಲಾಗಿರುವ ಎಲ್ಲಾ ಸ್ವತ್ತುಗಳನ್ನು ಸ್ಥಳ ತನಿಖೆ ಮಾಡಿರುತ್ತಾರೆ. ಸಿ.ಟಿ.ಎಸ್.ನಂ–522, 253, 524, 434 ಮತ್ತು 435ರ

ಸ್ವತ್ತುಗಳ ಮಾಲೀಕರುಗಳು ಟಿ.ಡಿ.ಆರ್ ಪಡೆಯಲು ಒಪ್ಪದಿದ್ದಲ್ಲಿ, ಭೂಸ್ವಾಧೀನ ಪ್ರಸ್ತಾವನೆಗೆ ಸೇರಿಸಲು ಹಾಗೂ ಸಿ.ಟಿ.ಎಸ್.ನಂ–12 (ದೇವಸ್ಥಾನ), 13 (ಅಂಚೆಕಛೇರಿ) ಮತ್ತು 163 (ಬಿ.ಬಿ.ಎಂ.ಪಿ ಹಾಸ್ಪಿಟಲ್) ಸ್ವತ್ತುಗಳು ಸರ್ಕಾರಿ/ಗುತ್ತಿಗೆ ಕರಾರು ಸ್ವತ್ತುಗಳಾದ್ದರಿಂದ, ಇವುಗಳ ಮೌಲ್ಯವನ್ನು ಕೈಬಿಟ್ಟು ವಿಸ್ತೀರ್ಣವನ್ನು ಮಾತ್ರ ಭೂಸ್ವಾಧೀನ ಪ್ರಸ್ತಾವನೆಗೆ ಸೇರಿಸಲು ಸೂಚಿಸಿ, ಈ ಎಲ್ಲಾ ಸ್ವತ್ತುಗಳು ರಸ್ತೆ ಅಗಲೀಕರಣಕ್ಕೆ ಅವಶ್ಯವಿರುತ್ತದೆಂದು ಅಭಿಪ್ರಾಯಪಟ್ಟಿರುತ್ತಾರೆ.

ಸಿ.ಟಿ.ಎಸ್ ನಂ–163, ಬಿ.ಬಿ.ಎಂ.ಪಿ ಆಡುಗೋಡಿ ಹಾಸ್ಪಿಟಲ್‌ನ ಸ್ವತ್ತು ಪಾಲಿಕೆಯದಾಗಿದ್ದು, ಸಿ.ಟಿ.ಎಸ್ ನಂ–12, ವೇಣುಗೋಪಾಲಸ್ವಾಮಿ ದೇವಸ್ಥಾನ ಸ್ವತ್ತಿನ ಮತ್ತು ಸಿ.ಟಿ.ಎಸ್ ನಂ–13, ಅಂಚೆ ಕಛೇರಿ ಸ್ವತ್ತುಗಳಲ್ಲಿನ ಭಾಗಶಃ ವಿಸ್ತೀರ್ಣ ರಸ್ತೆ ಅಗಲೀಕರಣಕ್ಕೆ ಒಳಪಟ್ಟಿದ್ದು, ಈ ಸ್ವತ್ತುಗಳು ಸರ್ಕಾರ/ಬೆಂ.ಅ.ಪ್ರಾಧಿಕಾರದಿಂದ ಗುತ್ತಿಗೆ/ಕರಾರು ಮೂಲಕ ನೀಡಿರಬಹುದಾದ ಸ್ವತ್ತುಗಳಾಗಿರುವುದರಿಂದ, ಇವುಗಳ ಮೌಲ್ಯವನ್ನು ನಿಗದಿಪಡಿಸಿರುವುದಿಲ್ಲ. ಇವುಗಳನ್ನು ಉಚಿತವಾಗಿ ಹಸ್ತಾಂತರಿಸಿಕೊಳ್ಳಲು ಕ್ರಮ ಕೈಗೊಳ್ಳಬಹುದಾಗಿರುತ್ತದೆ.

ಪಾಲಿಕೆಯ ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ಮೇಲ್ಕಂಡ ಪ್ರಸ್ತಾವನೆಯಂತೆ ಕ್ರಮವಹಿಸಲು ಅಗತ್ಯ ದಾಖಲೆಗಳೊಂದಿಗೆ ಶಿಫಾರಸ್ಸು ಮಾಡಿರುತ್ತಾರೆ. ಈ ಪ್ರಕರಣದಲ್ಲಿ ಭೂಸ್ವಾಧೀನಪಡಿಸಿಕೊಳ್ಳುತ್ತಿರುವ ಸ್ವತ್ತುಗಳ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ಸಿ.ಟಿ.ಎಸ್. ಸಂಖ್ಯೆ | ಪಿ.ಐ.ಡಿ ಸಂಖ್ಯೆ | ಖಾತೆದಾರರ/ ಅನುಭವದಾರರ ಹೆಸರು | ವಿಸ್ತೀರ್ಣ (ಚ.ಅ.ಗಳಲ್ಲಿ) | ಭೂಸ್ವಾಧೀನ ಪ್ರಸ್ತಾಪಿತ ವಿಸ್ತೀರ್ಣ(ಚ.ಅ.ಗಳಲ್ಲಿ) | | ಷರಾ |
|---|---|---|---|---|---|---|---|
| | | | | | ನಿವೇಶನ | ಕಟ್ಟಡ | |
| 1 | 2 | 3 | 4 | 5 | 6 | 7 | 8 |
| ಲಕ್ಕಸಂದ್ರ ವಾರ್ಡ್ ನಂ–146 | | | | | | | |
| 1 | 609 | 63–40–63 | ಲಕ್ಷ್ಮೀನರಸಮ್ಮ | 4160.75 | 360.30 | 360.30 | ಆರ್.ಸಿ.ಸಿ. ಕಟ್ಟಡ |
| 2 | 608 | 63–40–62/1–1 | ಎ.ಎನ್.ಹುಸೇನ್ | 154.4 | 80.0 | 80.00 | ಎ.ಸಿ.ಶೀಟ್ ಕಟ್ಟಡ |
| 3 | 608 | 63–40–62/1 | ಪ್ರಭಾಕರನ್ | 154.4 | 110.70 | 110.70 | ಎ.ಸಿ.ಶೀಟ್ ಕಟ್ಟಡ |
| 4 | 607 | 63–40–61/1 | ಎ.ಬಿ.ಮಂಜುಳ ರಾಧಾಕೃಷ್ಣ | 2250.0 | 180.9 | 166.32 | ಎ.ಸಿ.ಶೀಟ್ ಕಟ್ಟಡ |
| 5 | 607 | 63–40–61 | ನಾರಾಯಣಮ್ಮ | 414.33 | 240.4 | 240.4 | ಎ.ಸಿ.ಶೀಟ್ ಕಟ್ಟಡ |
| 6 | 606 | 63–40–60 | ಎಲ್.ಸುರೇಶ್ &ಎಸ್.ಪ್ರಭ | 6076.0 | 870.3 | 718.2 | ಎ.ಸಿ.ಶೀಟ್ ಕಟ್ಟಡ |
| 7 | 605 | 63–40–59/2 | ಸಂತೋಷ್‌ಕುಮಾರ್ ಮಿತ್ತಲ್ | 5306.12 | 810.2 | – | – |
| 8 | 604 | 63–40–58 | ಒ/ ಶ್ರೀವೆಂಕಟೇಶ್ವರ ಪ್ರಾಪರ್ಟೀಸ್ | 5863.0 | 920.9 | – | – |
| 9 | 603 | 63–40–57 | ವಿ.ಗಣೇಶನ್ | 2730.0 | 564.0 | 689.01 | ಆರ್.ಸಿ.ಸಿ. ಕಟ್ಟಡ |
| 10 | 603 | 63–40–57/1 | ವಿ.ಶರವಣನ್ | 2100.0 | 330.90 | 295.00 | ಆರ್.ಸಿ.ಸಿ. ಕಟ್ಟಡ |
| 11 | 601 | 63–40–55 | ವಿ.ಪದ್ಮನಾಭನಾಯ್ಡು | 3480.0 | 387.00 | – | – |
| 12 | 602 | 63–40–56 | ಲಕ್ಷ್ಮೀನರಸಮ್ಮ | 2328.25 | 387.00 | – | – |
| 13 | 600 | 63–40–54 | ಎನ್.ಸರೋಜಮ್ಮ | 6480.00 | 618.00 | – | – |
| 14 | 599 | 63–40–53/1 | ಆರ್.ಲೋಕೇಶ್ | 1000.0 | 260.0 | 163.55 | ಎ.ಸಿ.ಶೀಟ್ ಕಟ್ಟಡ |
| 15 | 598 | 63–40–53 | ನಂಜಮ್ಮ | 1950.0 | 380.2 | 853.64 | ಆರ್.ಸಿ.ಸಿ. |

| | | | | | | | |
|---|---|---|---|---|---|---|---|
| | | | | | | | ಕಟ್ಟಡ |
| 16 | 528 | 63–40–48–49 | ಆರ್.ವೆಂಕಟಸ್ವಾಮಿ ರೆಡ್ಡಿ | 3600.0 | 410.00 | – | – |
| 17 | 527 | 63–40–47 | ಡಾ.ಹೆಚ್.ಪಿ.ಪ್ರಕಾಶ್ | 1800.0 | 223.5 | 199.00 | ಆರ್.ಸಿ.ಸಿ. ಕಟ್ಟಡ |
| | | | | | **ನಿವೇಶನ** | **ಕಟ್ಟಡ** | |
| 18 | 526 | 63–40–46 | ಹೆಚ್.ಚಿಕ್ಕಣ್ಣ | 1800.0 | 270.0 | 806.19 | ಆರ್.ಸಿ.ಸಿ.ಕಟ್ಟಡ |
| 19 | 525 | 63–40–44–45 | ಟಿ.ಚಂದ್ರಶೇಖರಗೌಡ | 1350 | 230.25 | 455.5 | ಆರ್.ಸಿ.ಸಿ.ಕಟ್ಟಡ |
| 20 | 525 | 63–40–45/01 | ನರಸೇಗೌಡ | 1200.00 | 230.3 | 691.47 | ಆರ್.ಸಿ.ಸಿ.ಕಟ್ಟಡ |
| 21 | 522 | 63–40–39 | ಎ. ನಾಗಮಣಿ | 2400.00 | 344.00 | – | – |
| 22 | 523 | 63–40–41 | ಪಿ.ವೆಂಕಟಲಕ್ಷ್ಮಿ | – | 348.3 | – | – |
| 23 | 524 | 63–40–42 | ಗೋಪಾಲ್ ರೆಡ್ಡಿ | 1800.00 | 167.00 | – | – |
| 24 | 434 | 63–40–35 | ಬಿ.ಎನ್.ಯೋಗ ನರಸಿಂಹ ಮೂರ್ತಿ ಮತ್ತು ಸುಮನ್ ವಿಜಯ | 1200.00 | 183.00 | – | – |
| 25 | 435 | 63–40–61/4 | ಕೆ.ಜಯರಾಂ | 837.5 | 227.6 | – | – |
| | | | | ಒಟ್ಟು | 9134.75 | 5829.28 | |
| | | | **ಆಡುಗೋಡಿ ವಾರ್ಡ್ ನಂ–147** | | | | |
| 26 | 164 | 67–23–18/1–2 | ಹೆಚ್.ಜಯರಾಂ | 500.0 | 8.07 | 8.00 | ಎ.ಸಿ. ಶೀಟ್ ಕಟ್ಟಡ |
| 27 | 164 | 67–23–18/1 | ಕೆ.ನಾಗರಾಜ ಶೆಟ್ಟಿ | 500.0 | 20.4 | 20.4 | ಎ.ಸಿ. ಶೀಟ್ ಕಟ್ಟಡ |
| 28 | 164 | 67–23–18/1–1 | ಜಯಮ್ಮ | 294.5 | 40.1 | 40.00 | ಎ.ಸಿ. ಶೀಟ್ ಕಟ್ಟಡ |
| 29 | 167 | 67–23–19 | ಎಸ್.ಎಂ.ಅಬಿಬುಲ್ಲಾ | 1829.0 | 140.0 | 240.00 | ಆರ್.ಸಿ.ಸಿ.ಕಟ್ಟಡ |
| 30 | 168 | 67–23–20 | ಎ.ಎಂ.ಶ್ರೀಧರ್ | 2445.0 | 230.7 | 120.72 | ಎ.ಸಿ. ಶೀಟ್ ಕಟ್ಟಡ |
| 31 | 187 | 67–23–21 | ಸಿ.ಸತ್ಯನಾರಾಯಣ | 2619.0 | 350.5 | 350.5 | ಆರ್.ಸಿ.ಸಿ.ಕಟ್ಟಡ |
| 32 | 188 | 67–23–22 | ತೋಟಮ್ಮ | 8000.0 | 2300.00 | 1820.59 | ಎ.ಸಿ. ಶೀಟ್ ಕಟ್ಟಡ |
| 33 | 189 | 67–23–23/3 | ವಿ.ಪಾಪಣ್ಣ | 1050.0 | 360.4 | 592.25 | ಆರ್.ಸಿ.ಸಿ.ಕಟ್ಟಡ |
| | | | | | **ನಿವೇಶನ** | **ಕಟ್ಟಡ** | |
| 34 | 189 | 67–23–23 | ಲೀಲಾಬಾಯಿ | 1000.0 | 360.9 | 619.99 | ಆರ್.ಸಿ.ಸಿ.ಕಟ್ಟಡ |
| 35 | 190 | 67–23–23/1 | ಯು.ನಾರಾಯಣ ಫಣೀಕರ್ | 2400.0 | 670.7 | 1241.97 | ಆರ್.ಸಿ.ಸಿ.ಕಟ್ಟಡ |
| 36 | 191 | 67–23–24 | ಚಿನ್ನಸ್ವಾಮಿ | 1440.0 | 320.8 | – | – |
| 37 | 192 | 67–23–25 | ಎ.ಚಂದ್ರಶೇಖರ ರೆಡ್ಡಿ & ಬಿಜ್ಜುರಮಣ ರೆಡ್ಡಿ | 2052.0 | 190.4 | – | – |
| 38 | 193 | 67–23–26/1 | ಎ.ಜಿ.ಗೋವರ್ಧನ್ | 1647.0 | 220.5 | 220.5 | ಆರ್.ಸಿ.ಸಿ.ಕಟ್ಟಡ |
| 39 | 193 | 67–23–26 | ಎ.ಜಿ.ಮುಕುಂದ | 1593.0 | 320.2 | 141.6 | ಆರ್.ಸಿ.ಸಿ.ಕಟ್ಟಡ |
| 40 | 194 | 67–23–27/1 | ಕೆ.ವಿ.ಶ್ರೀನಿವಾಸಶೆಟ್ಟಿ | 600.0 | 480.0 | – | – |
| 41 | 194 | 67–23–27/2 | ಜಯಮ್ಮ | 1008.0 | 290.5 | 200.00 | ಆರ್.ಸಿ.ಸಿ.ಕಟ್ಟಡ |
| 42 | 194 | 67–23–27 | ಖೈನೇರಿಸಾ | 1647.0 | 320.0 | 220.6 | ಆರ್.ಸಿ.ಸಿ.ಕಟ್ಟಡ |
| 43 | 195 | 67–30–18/1 | ಜಿ.ನಾರಾಯಣಸ್ವಾಮಿ | 1031.0 | 140.0 | 990 | ಆರ್.ಸಿ.ಸಿ.ಕಟ್ಟಡ |
| 44 | 198 | 67–23–29/1 | M/s ಸಮರ್ಥ ಎಂಟರ್‌ಪ್ರೈಸಸ್ (ಗುತ್ತಿಗೆದಾರರು) | 8000.0 | 3024.0 | – | – |
| | | | | **ಒಟ್ಟು** | **9788.17** | **6827.12** | |

| ಆಡುಗೋಡಿ ವಾರ್ಡ್ ನಂ–148 ರಲ್ಲಿನ ಸರ್ಕಾರಿ/ಗುತ್ತಿಗೆ ಕರಾರು ಸ್ವತ್ತುಗಳು | | | | | | | |
|---|---|---|---|---|---|---|---|
| 45 | 163 | 67–23 | ಬಿ.ಬಿ.ಎಂ.ಪಿ ಹಾಸ್ಪಿಟಲ್ (ಆಡುಗೋಡಿ) | 3762.00 | 240.00 | – | – |
| 46 | 12 | 67–23–14, 67–23–15 | The President of Gokulastamic Yadava Sangha & The President of Grama Abhyudaya Sangha (ವೇಣುಗೋಪಾಲ ಸ್ವಾಮಿ ದೇವಸ್ಥಾನ) | 1872.00 11,000.00 | 292.00 | – | – |
| 47 | 13 | 67–23–15 | The President of Grama Abhyudaya Sangha (ಅಂಚೆ ಕಛೇರಿ) | 11,000.00 | 62.00 | – | – |
| | | | | **ಒಟ್ಟು** | **594.00** | – | |

ಘೋಷ್ವಾರೆ

| ವಾರ್ಡ್ ಹೆಸರು ಮತ್ತು ನಂಬರ್ | ಖಾಸಗಿ ಸ್ವತ್ತುಗಳ ವಿಸ್ತೀರ್ಣ ಚ.ಅಡಿಗಳಲ್ಲಿ | | ಸರ್ಕಾರಿ/ಗುತ್ತಿಗೆ ಕರಾರು ಸ್ವತ್ತುಗಳ ವಿಸ್ತೀರ್ಣ ಚ.ಅಡಿ | | ಒಟ್ಟು ಚ.ಅಡಿ | |
|---|---|---|---|---|---|---|
| | **ನಿವೇಶನ** | **ಕಟ್ಟಡ** | **ನಿವೇಶನ** | **ಕಟ್ಟಡ** | **ನಿವೇಶನ** | **ಕಟ್ಟಡ** |
| ಲಕ್ಕಸಂದ್ರ–146 | 9134.75 | 5829.28 | – | – | 9134.75 | 5829.28 |
| ಆಡುಗೋಡಿ–147 | 9788.17 | 6827.12 | 594.00 | – | 10382.17 | 6827.12 |
| **ಒಟ್ಟು** | **18922.92** | **12656.4** | **594.00** | **–** | **19516.92** | **12656.4** |

ಮೇಲ್ಕಂಡಂತೆ 1894ರ ಭೂಸ್ವಾಧೀನ ಕಾಯ್ದೆಯನ್ವಯ ಸ್ವಾಧೀನಪಡಿಸಿಕೊಳ್ಳಲಾಗುತ್ತಿರುವ ಸ್ವತ್ತುಗಳು ಬಿ.ಬಿ.ಎಂ.ಪಿ ವ್ಯಾಪ್ತಿಯ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿರುವುದರಿಂದ, ಇವುಗಳಿಗೆ ದಿನಾಂಕ: 19–04–2007ರ ಸರ್ಕಾರದ ಮಾರ್ಗಸೂಚಿ ಬೆಲೆಯನ್ವಯ ಚ.ಅಡಿಗೆ ರೂ.3000/– ಗಳಂತೆ ನಿಗದಿಪಡಿಸಿ, ಪಾವತಿಸಬೇಕಾದ ಪರಿಹಾರ ಹಾಗೂ ಇತರೆ ವೆಚ್ಚಗಳನ್ನು ಈ ಕೆಳಗಿನಂತೆ ಲೆಕ್ಕಾಚಾರ ಮಾಡಲಾಗಿದೆ.

## "ಅ"–ಭೂ ಪರಿಹಾರ ವೆಚ್ಚ

| ಕ್ರ ಸಂ | ವಿವರಣೆ | ಮೊಬಲಗು (ರೂ.ಗಳಲ್ಲಿ) |
|---|---|---|
| 1 | ಎ). ಚ.ಅಡಿ ಒಂದಕ್ಕೆ ರೂ.3000/– ರಂತೆ **18922.92** ಚ.ಅಡಿ ನಿವೇಶನಗಳಿಗೆ ಮೌಲ್ಯ | 5,67,68,760/– |
| | ಬಿ). ಅಭಿಯಂತರರ ವರದಿಯಂತೆ ಸ್ವಾಧೀನಪಡಿಸಿಕೊಳ್ಳಲಾಗುವ ಕಟ್ಟಡದ ಮೌಲ್ಯ (ವಿಸ್ತೀರ್ಣ 12656.4 ಚ.ಅಡಿ) | 47,64,163/– |
| | ಒಟ್ಟು | 6,15,32,923/– |
| 2 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 73,83,951/– |
| 3 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ23(2) ರ ಅನ್ವಯ ಶೇಕಡಾ 30 ರಂತೆ ಶಾಸನ ಬದ್ಧ ಭತ್ಯೆ | 1,84,59,876/– |
| | ಒಟ್ಟು (1+2+3) | 8,73,76,750/– |

**"ಆ"– ಇತರೆ ವೆಚ್ಚ**

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | – |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | – |
| 6 | ಪ್ರಕಟಣಾ ವೆಚ್ಚ (ಅಂದಾಜು) | **3,00,000** |
| | **(ಅ+ಆ) ಒಟ್ಟು** | **8,76,76,750/–** |

ಷರಾ: ದಿನಾಂಕ: 5–9–1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಎಂಟು ಕೋಟಿ ಎಪ್ಪತ್ತಾರು ಲಕ್ಷದ ಎಪ್ಪತ್ತಾರು ಸಾವಿರದ ಏಳು ನೂರ ಐವತ್ತು ರೂ.ಗಳು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. **8,76,76,750/– (ಎಂಟು ಕೋಟಿ ಎಪ್ಪತ್ತಾರು ಲಕ್ಷದ ಎಪ್ಪತ್ತಾರು ಸಾವಿರದ ಏಳು ನೂರ ಐವತ್ತು ರೂ.ಗಳು ಮಾತ್ರ)** ಗಳನ್ನು ಪಾಲಿಕೆಯ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ 24–07–2011ರ ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ : 02–08–2011ರ ನಿರ್ಣಯ.

***ನಿರ್ಣಯ : ದಿನಾಂಕ : 02–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.***

## ***35]. ವಿಷಯದ ಸಂಖ್ಯೆ :–ತೆಆಸ್ಥಾಸ/255/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 23–06–2011ರಲ್ಲಿ ವಿವರಿಸಿರುವಂತೆ, ಮೆ॥ಫ್ರೆಂಡ್ಸ್ ಅಡ್ವರ್‌ಟೈಸಿಂಗ್ ಸಂಸ್ಥೆಯವರು ದಿನಾಂಕ:18.03.2011ರಂದು ಮಾನ್ಯ ಆಯುಕ್ತರಿಗೆ ಪತ್ರದ ಮುಖೇನ ಮನವಿಯನ್ನು ಸಲ್ಲಿಸಿದ್ದು, ಬೆಂಗಳೂರು ನಗರ ಪೊಲೀಸ್ ಆಯುಕ್ತರವರ ಸಭೆಯ ನಡವಳಿಯ ಆದೇಶದ ಸಂಖ್ಯೆ:24/ACP/TRAFFIC/2011 Date:06.02.2011ರಂದು ಈ ಕೆಳಕಂಡ ಷರತ್ತುಗಳನ್ವಯ ನಗರದ 13 ರಸ್ತೆಗಳಲ್ಲಿ 4X15 ಅಡಿ ಅಳತೆಯ ಗ್ಲೋಸೈನ್ ಬಾಕ್ಸ್‌ಗಳನ್ನು ಅಳವಡಿಸಿ ಎರಡು ಕಡೆ ವಾಣಿಜ್ಯ ಜಾಹೀರಾತು ಪ್ರದರ್ಶಿಸಲು ಐದು ವರ್ಷಗಳ ಕಾಲಾವಧಿಗೆ ಅನುಮತಿ ನೀಡಿರುವುದಾಗಿ, ಪೋಲೀಸ್ ಇಲಾಖೆಯಿಂದ ಅನುಮತಿ ನೀಡಿರುವ ಪತ್ರವನ್ನು ಲಗತ್ತಿಸಿ ಪತ್ರ ಮುಖೇನ ತಿಳಿಸಿರುತ್ತಾರೆ

1. The road barricades will be of good quality steel and will have a Commercial Display of 4 Ft. X 15 ft. (Glow sign lit with both side display)

2. The distance between each display will be 60 ft.

3. M/s. Friends Advertising should obtain permission and pay the necessary fees as per the relevant rules and orders issued by the BBMP from time to time in full.

4. They should erect good quality high raised steel barricades on the permitted road-dividers.

5. They should abide by such directions as may be necessary and issued by the police Inspector of the concerned Traffic Police Station from time to time in the interest of the safety of the passengers and smooth flow of the traffic.

6. This permission will be valid up to 31st December 2015 and is liable to be cancelled in case of violation of the conditions imposed in this proceding.

7. For any untoward incident, person permitted to erect the barricade would be solely responsible.

ಅದರಂತೆ, ದಿನಾಂಕ:25.05.2011ರಂದು ಪತ್ರ ಮುಖೇನ ಮೆ॥ಫ್ರೆಂಡ್ಸ್ ಅಡ್ವರ್‌ಟೈಸಿಂಗ್ ಸಂಸ್ಥೆಯವರಿಗೆ ನಗರದ ಕೆಲವು ಮುಖ್ಯರಸ್ತೆಗಳಿಗೆ ಬ್ಯಾರಿಕ್ಯಾಡ್ಸ್‌ಗಳನ್ನು ಅಳವಡಿಸಲು ಬೆಂಗಳೂರು ನಗರ ಪೊಲೀಸ್ ಆಯುಕ್ತರು ಅನುಮತಿ ನೀಡಿರುತ್ತಾರೆ. ಆ ರಸ್ತೆ ವಿಭಜಕಗಳ ನಡುವೆ ಗ್ಲೋಸೈನ್ ಬಾಕ್ಸ್ ಪ್ರಚಾರ ಫಲಕಗಳನ್ನು ಅಳವಡಿಸಲು ಪೊಲೀಸ್ ಇಲಾಖೆಯವರು ಅನುಮತಿ ನೀಡಿದ್ದು, ತೆರಿಗೆಯನ್ನು ನಿಗದಿಪಡಿಸಲು ಕಡತವನ್ನು ಮಂಡಿಸಲು ಮಾನ್ಯ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿರವರು ಸೂಚಿಸಿರುತ್ತಾರೆ.

ಆದರೆ ಜಾಹೀರಾತು ವಿಭಾಗದಲ್ಲಿ ಇದಕ್ಕೆ ಸಂಬಂಧವಾಗಿ ಯಾವುದೇ ಕಡತವನ್ನು ನಿರ್ವಹಿಸಿರುವುದಿಲ್ಲ. ಆದುದರಿಂದ, ಸದರಿ ಸಂಸ್ಥೆಯವರು ಸಲ್ಲಿಸಿದ ಬೆಂಗಳೂರು ನಗರ ಪೋಲೀಸ್ ಇಲಾಖೆಯ ಆಯುಕ್ತರವರ ಸಭೆಯ ನಡವಳಿಗಳ ಪ್ರತಿ, ಮೆ॥ ಫ್ರೆಂಡ್ಸ್ ಆಡ್ಸ್ ಸಂಸ್ಥೆಯವರ ಮನವಿ ಪತ್ರವನ್ನು ಇದರೊಂದಿಗೆ ಲಗತ್ತಿಸುತ್ತಾ, ತಮ್ಮ ಅವಗಾಹನೆಗಾಗಿ ಹಾಗೂ ಸೂಕ್ತ ಜಾಹೀರಾತು ತೆರಿಗೆ ನಿಗದಿಪಡಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ : 23–06–2011ರ ಟಿಪ್ಪಣಿ ಒಪ್ಪುತ್ತಾ, ಪೋಲಿಸ್ ಆಯುಕ್ತರು, ಬೆಂಗಳೂರು ರವರ ಆದೇಶ ಸಂಖ್ಯೆ : 24/ಎ.ಸಿ.ಪಿ/ಟ್ರಾಫಿಕ್/2011 ದಿನಾಂಕ : 06–02–2011ರಲ್ಲಿ ವಿಧಿಸಲಾಗಿರುವ ಷರತ್ತುಗಳಿಗೆ ಒಳಪಟ್ಟು ಸದರಿ ಆದೇಶದಲ್ಲಿ ನಮೂದಿಸಿರುವ ರಸ್ತೆಗಳಲ್ಲಿ ಜಾಹೀರಾತು ಪ್ರದರ್ಶಿಸಲು ಐದು ವರ್ಷಗಳ ಅವಧಿಗೆ ಅನುಮತಿ ನೀಡಲು ತೀರ್ಮಾನಿಸಲಾಯಿತು.

***ನಿರ್ಣಯ : ಹೊಸ ಜಾಹೀರಾತು ನೀತಿಯನ್ನು ಅಳವಡಿಸಿಕೊಳ್ಳಲು ಉದ್ದೇಶಿಸಿರುವುದರಿಂದ, ಆಯುಕ್ತರ ದಿನಾಂಕ : 23–06–2011ರ ಪ್ರಸ್ತಾವನೆಯನ್ನು ಕೈ ಬಿಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***361. ವಿಷಯದ ಸಂಖ್ಯೆ :–ತೆಆಸ್ಥಾಸ/256/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 08–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 105ರ ಸದಸ್ಯರು ಹಾಗೂ ಶಿಕ್ಷಣ ಮತ್ತು ಕ್ರೀಡಾ ಸ್ಥಾಯಿ ಸಮಿತಿ ಸದಸ್ಯರಾದ ಶ್ರೀಮತಿ ರೂಪದೇವಿ ರವರು ಪತ್ರ ನೀಡಿ ಮಾಗಡಿ ಮುಖ್ಯ ರಸ್ತೆ ಟೋಲ್‌ಗೇಟ್ ವೃತ್ತದಿಂದ ಹೌಸಿಂಗ್ ಬೋರ್ಡ್ ಸಿಗ್ನಲ್ ವರೆಗಿನ ರಸ್ತೆಯನ್ನು ಡಾಂಬರೀಕರಣ ಮತ್ತು ಒಳಚರಂಡಿ ಹಾಗೂ ಪಾದಚಾರಿ ಮಾರ್ಗಗಳನ್ನು ಅಭಿವೃದ್ಧಿಪಡಿಸಲು ಕೋರಿರುತ್ತಾರೆ.

ಮುಂದುವರೆದಂತೆ, ಸದರಿ ಕಾಮಗಾರಿಗೆ ರೂ.378.00 ಲಕ್ಷಗಳನ್ನು ಅಂದಾಜಿಸಲಾಗಿದ್ದು, 2011–12ನೇ ಸಾಲಿನ ಆಯವ್ಯಯದಲ್ಲಿ ಕೈಗೊಳ್ಳಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.378.00 ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಡುವಂತೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ***37]. ವಿಷಯದ ಸಂಖ್ಯೆ :–ತೆಆಸ್ಥಾಸ/257/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 07–06–2011ರಲ್ಲಿ ವಿವರಿಸಿರುವಂತೆ, 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸಲು ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು, ನಗರಾಭಿವೃದ್ಧಿ ಪೌರಾಡಳಿತ ಕಾನೂನು ಮತ್ತು ಸಂಸಧೀಯ ವ್ಯವಹಾರ ಸಚಿವರು, ಇಂಧನ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು, ಮಾನ್ಯ ಉಪಾಧ್ಯಕ್ಷರು, ರಾಜ್ಯ ಯೋಜನಾ ಮಂಡಳಿ, ಮಾನ್ಯ ಲೋಕಸಭಾ ಸದಸ್ಯರು, ಮಾನ್ಯ ಶಾಸಕರು ಹಾಗೂ ಮಾನ್ಯ ನಗರಪಾಲಿಕೆ ಸದಸ್ಯರು ಕೋರಿರುತ್ತಾರೆ, ವಿವರ ಕಳಕಂಡಂತಿರುತ್ತದೆ.

| ಕ್ರ.ಸಂ | ಧನಾದೇಶ ಕೋರುವವರು | ಪತ್ರ ಸಂಖ್ಯೆ | ಧನಾದೇಶ ಕೋರಿರುವ ಉದ್ದೇಶ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|---|
| 1. | ಶ್ರೀ.ಆರ್. ಆಶೋಕ್, ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು. | ಸಾಸ/ಗೃಕ/ಜಾ940/ 19–7–2011 | ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಹೊಸಕೆರೆ ವಾರ್ಡ್ ನಂ.161ರಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಒದಗಿಸುವ ಬಗ್ಗೆ. 25 ಕಾಮಗಾರಿಗಳು | 800–00 |
| 2. | ಶ್ರೀ.ಆರ್. ಆಶೋಕ್, ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು. | ಸಾಸ/ಗೃಕ/ಜಾ942/ 19–7–2011 | ಪದ್ಮನಾಭನಗರ ವಿಧಾನ ಸಭಾ ಕ್ಷೇತ್ರದ ಚಿಕ್ಕಲ್ಲಕಂದ್ರ ವಾರ್ಡ್ ನಂ.183ರಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಒದಗಿಸುವ ಬಗ್ಗೆ. 8 ಕಾಮಗಾರಿಗಳು | 580–00 |
| 3. | ಶ್ರೀ.ಎಸ್.ಸುರೇಶ ಕುಮಾರ್, ಮಾನ್ಯ ನಗರಾಭಿವೃದ್ಧಿ ಪೌರಾಡಳಿತ ಕಾನೂನು ಮತ್ತು ಸಂಸಧೀಯ ವ್ಯವಹಾರ ಸಚಿವರು. | ಗೃಕ/337/11–12/ 1–7–2011 | ರಾಜಾಜಿನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಟ್ಟಡಗಳ ದುರಸ್ತಿಗೆ ಅನುದಾನ ಒದಗಿಸುವ ಬಗ್ಗೆ | 300–00 |
| 4. | ಶ್ರೀ.ಎಸ್.ಸುರೇಶ್ ಕುಮಾರ್, ಮಾನ್ಯ ನಗರಾಭಿವೃದ್ಧಿ, ಪೌರಾಡಳಿತ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಹಾಗೂ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶ್ರೀ.ಎಸ್.ಹೆಚ್.ಪದ್ಮರಾಜ್, ಮಾಜಿ ಅಧ್ಯಕ್ಷರು ಮಾರುಕಟ್ಟೆ ಸ್ಥಾಯಿ ಸಮಿತಿ. | ನಕಾಸಂ/ಗೃಕ/284/ 11–12 ದಿ:17–6–2011 | ಸಾಣೆಗುರುವನಹಳ್ಳಿಯಲ್ಲಿ ಕೆರೆ ಪ್ರದೇಶದಲ್ಲಿ ನೇತಾಜಿ ಸುಭಾಷ್ ಚಂದ್ರಬೋಸ್ ಕ್ರೀಡಾಂಗಣ ಹಾಗೂ ಕಿರು ಅರಣ್ಯ ಅಭಿವೃದ್ದಿ ಪಡಿಸುವ ಬಗ್ಗೆ. | 3000–00 |
| 5. | ಕು.ಶೋಭಾಕರಂದ್ಲಾಜೆ, ಮಾನ್ಯ ಮಂತ್ರಿಗಳು ಇಂಧನ, ಅಹಾರ ಮತ್ತು ನಾಗರಿಕ ಸರಬರಾಜು ಹಾಗೂ ಶ್ರೀಮತಿ.ವೀಣಾ ನಾಗರಾಜ್, ಮಾನ್ಯ ಸದಸ್ಯರು ಹೆಮ್ಮಿಗೆಪುರ ವಾರ್ಡ್ ನಂ.198 | ದಿ:16–6–2011 | ವಾರ್ಡ್ ನಂ.198 ಹೆಮ್ಮಿಗೆ ಪುರ ವ್ಯಾಪ್ತಿಯಲ್ಲಿ ಬರುವ ಹಲವಾರು ಸರ್ಕಾರಿ ಶಾಲೆಗಳ ಅಭಿವೃದ್ದಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನ ಕೋರಿರುವ ಬಗ್ಗೆ | ಮೊತ್ತ ನಮೊದಿಸಿಲ್ಲ. |

| | | | | |
|---|---|---|---|---|
| 6. | ಕು.ಶೋಭಾಕರಂದ್ಲಾಜೆ, ಮಾನ್ಯ ಮಂತ್ರಿಗಳು ಇಂಧನ, ಅಹಾರ ಮತ್ತು ನಾಗರಿಕ ಸರಬರಾಜು ಹಾಗೂ ಶ್ರೀಮತಿ.ವೀಣಾ ನಾಗರಾಜ್, ಮಾನ್ಯ ಸದಸ್ಯರು ಹೆಮ್ಮಿಗೆಪುರ ವಾರ್ಡ್ ನಂ.198 | ದಿ:16–6–2011 | ವಾರ್ಡ್ ನಂ.198 ಹೆಮ್ಮಿಗೆಪುರ ಪ್ರದೇಶದಲ್ಲಿ ಬೃಹತ್ ನೀರುಗಾಲುವೆ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ. 4 ಕಾಮಗಾರಿಗಳು | 750–00 |
| 7. | ಕು.ಶೋಭಾಕರಂದ್ಲಾಜೆ, ಮಾನ್ಯ ಮಂತ್ರಿಗಳು ಇಂಧನ, ಅಹಾರ ಮತ್ತು ನಾಗರಿಕ ಸರಬರಾಜು ಹಾಗೂ ಶ್ರೀಮತಿ.ವೀಣಾ ನಾಗರಾಜ್, ಮಾನ್ಯ ಸದಸ್ಯರು ಹೆಮ್ಮಿಗೆಪುರ ವಾರ್ಡ್ ನಂ.198 | ದಿ:16–6–2011 | ವಾರ್ಡ್ ನಂ.198 ಹೆಮ್ಮಿಗೆ ಪುರ ಪ್ರದೇಶದಲ್ಲಿ ಮುಖ್ಯ ರಸ್ತೆಗಳ ಅಭಿವೃದ್ಧಿಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಕೋರಿ. 10 ಕಾಮಗಾರಿಗಳು | 2800–00 |
| 8. | ಶ್ರೀ ರಾಮಚಂದ್ರ ಗೌಡ, ಮಾನ್ಯ ಉಪಾಧ್ಯಕ್ಷರು ರಾಜ್ಯ ಯೋಜನಾಮಂಡಳಿ. | ರಾಯೋಮಂ/ಉ.ಅಗ್ಯಕ/632/2011/ 13–7–2011 | ಅಟ್ಟೂರು ವಾರ್ಡ್ ಸಂಖ್ಯೆ.03ರಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ಒದಗಿಸುವ ಬಗ್ಗೆ | 10–00 |
| 9. | ಶ್ರೀ.ಹೆಚ್.ಡಿ.ಕುಮಾರಸ್ವಾಮಿ, ಮಾನ್ಯ ಲೋಕಸಭಾ ಸದಸ್ಯರು ಬೆಂಗಳೂರು ಗ್ರಾಮಾಂತರ. | ದಿ:21–6–2011 | ವಾರ್ಡ್ ನಂ.72 ಹೇರೋಹಳ್ಳಿಯ ರಸ್ತೆ, ಚರಂಡಿ, ಒಳಚರಂಡಿ ಅಭಿವೃದ್ಧಿ ಪಡಿಸಲು ಆಯವ್ಯಯದಲ್ಲಿ ಅನುದಾನ ಮೀಸಲಿಡುವ ಬಗ್ಗೆ. | 1000–00 |
| 10. | ಶ್ರೀ.ಹೆಚ್.ಡಿ ಕುಮಾರಸ್ವಾಮಿ, ಮಾನ್ಯ ಲೋಕಸಭಾ ಸದಸ್ಯರು ಬೆಂಗಳೂರು ಗ್ರಾಮಾಂತರ. | ದಿ:21–6–2011 | ವಾರ್ಡ್ ನಂ.40 ದೊಡ್ಡಬಿದರಕಲ್ಲು ರಸ್ತೆ, ಚರಂಡಿ, ಒಳಚರಂಡಿ ಹಾಗೂ ಕುಡಿಯುವ ನೀರಿನ ಅಭಿವೃದ್ಧಿ ಪಡಿಸಲು ಆಯವ್ಯಯದಲ್ಲಿ ಅನುದಾನ ಮೀಸಲಿಡುವ ಬಗ್ಗೆ. | 1000–00 |
| 11. | ಶ್ರೀ.ಎಸ್.ಎಸ್. ನಂದೀಶ್ ರೆಡ್ಡಿ, ಮಾನ್ಯ ಶಾಸಕರು ಕೆ.ಆರ್.ಪುರಂ ವಿಧಾನ ಸಭಾ ಕ್ಷೇತ್ರ | ಕೆ.ಆರ್.ಪುರ/ಶಾಸಕರು:2011/666/ 15–7–11 | ಎ.ನಾರಾಯಣ ಪುರ ವಾರ್ಡ್–56ರಲ್ಲಿ ಪೈಲೆಟ್ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳವ ಬಗ್ಗೆ | ಮೊತ್ತ ನಮೂದಿಸಿಲ್ಲ. |
| 12. | ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್, ಮಾನ್ಯ ಶಾಸಕರು ಚಾಮರಾಜಪೇಟೆ. | ಶಾಸಕರು/181/11–12 16–7–2011 | ವಾರ್ಡ್ ನಂ.137ರ ರಾಯಪುರಂ ವಾರ್ಡ್‌ನಲ್ಲಿ ಇರುವ ಪೋಲೀಸ್ ವಸತಿಗೃಹದ ಪೂರ್ವ ಭಾಗದ ಕಾಂಪೌಡ್ ಗೋಡೆಯನ್ನು ಎತ್ತರಿಸಲು ಅನುದಾನ ಒದಗಿಸುವ ಬಗ್ಗೆ | 35–00 |
| 13. | ಶ್ರೀ ಬಿ.ಜೆಡ್.ಜಮೀರ್ ಅಹಮದ್ ಖಾನ್, ಮಾನ್ಯ ಶಾಸಕರು ಚಾಮರಾಜಪೇಟೆ. | ಶಾಸಕರು/ಚಾ ಪೇಟೆ/180/2011–12 ದಿ:16–7–2011 | ವಾರ್ಡ್ ನಂ.137ರ ರಾಯಪುರಂನಲ್ಲಿರುವ ರೆಫರಲ್ ಆಸ್ಪತ್ರೆಯನ್ನು ಮೇಲ್ದರ್ಜೆಗೆರಿಸುವುದು. | 760–00 |
| 14. | ಶ್ರೀ.ಎಸ್.ಆರ್ ವಿಶ್ವನಾಥ್, ಮಾನ್ಯ ಶಾಸಕರು ಯಲಹಂಕ ವಿಧಾನಸಭಾ | ದಿ:9–7–2011 | ವಾರ್ಡ್ ಸಂಖ್ಯೆ:1,2,3 ಮತ್ತು4ರ ವಿವಿಧ ಕಾಮಗಾರಿಗಳಿಗೆ ಹೆಚ್ಚಿನ | 3250–00 |

| | | | | |
|---|---|---|---|---|
| | ಕ್ಷೇತ್ರ. | | ಅನುದಾನ ನೀಡುವ ಬಗ್ಗೆ.<br>5 ಕಾಮಗಾರಿಗಳು | |
| 15. | ಶ್ರೀ.ಎಸ್.ರಾಧಾಕೃಷ್ಣ, ಮಾನ್ಯ ಸದಸ್ಯರು ವಾರ್ಡ್ ನಂ.137. | ಸಂಖ್ಯೆ:38–39/11–12 ದಿ:7–6–2011 | ವಾರ್ಡ್ ನಂ.137ರಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು<br>7 ಕಾಮಗಾರಿಗಳು | 999–00 |
| 16. | ಶ್ರೀ.ಮಂಜುನಾಥರೆಡ್ಡಿ, ಮಾನ್ಯ ಅಧ್ಯಕ್ಷರು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ. | ಸಾ.ಅಸ್ಥಾ.ಸ ಪಿ.ಆರ್51/10–11 ದಿನಾಂಕ:14–1–11 | ವಾರ್ಡ್ ನಂ.137ರಲ್ಲಿ ರಾಯಪುರಂ. ವ್ಯಾಪ್ತಿಯಲ್ಲಿ ಪಾಲಿಕೆಯ ರೆಫರಲ್ ಆಸ್ಪತ್ರೆಯ ಆವರಣದಲ್ಲಿ 50 ಹಾಸಿಗೆಗಳ ಸಾರ್ವಜನಿಕ ಆಸ್ಪತ್ರೆ ಹೊಸ ಕಟ್ಟಡ ನಿರ್ಮಾಣ | ಮೊತ್ತ ನಮೂದಿಸಿಲ್ಲ. |
| 17. | ಶ್ರೀ ಕೆ.ಎ.ಮುನೀಂದ್ರ ಕುಮಾರ್, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ನಂ.5. | 159/11–12 ದಿ:28–6–11 | ವಾರ್ಡ್ ನಂ.5 (ಜಕ್ಕೂರು) ವ್ಯಾಪ್ತಿಯಲ್ಲಿ ಮುಖ್ಯ ಸಂಪರ್ಕ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು.<br>3 ಕಾಮಗಾರಿಗಳು | 700–00 |
| 18. | ಶ್ರೀ ಕೆ.ಎ.ಮುನೀಂದ್ರ ಕುಮಾರ್, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ನಂ.5. | 160/11–12<br>ದಿ:28–6–11 | ವಾರ್ಡ್ ನಂ.5ರ (ಜಕ್ಕೂರು) ವ್ಯಾಪ್ತಿಯಲ್ಲಿ ಕೆರೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು.<br>8 ಕಾಮಗಾರಿಗಳು | 1525–00 |
| 19. | ಶ್ರೀ ಕೆ.ಎ.ಮುನೀಂದ್ರ ಕುಮಾರ್, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ನಂ.5. | 161/11–12<br>ದಿ:28–6–11 | ವಾರ್ಡ್ ನಂ.5ರ (ಜಕ್ಕೂರು) ಕಾರ್ಯ ವ್ಯಾಪ್ತಿಯಲ್ಲಿ ಹಿಂದಿನ ಗ್ರಾಮ ಪಂಚಾಯಿತಿಯಿಂದ ಸೇರ್ಪಡೆಗೊಂಡಿರುವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು. | 1000–00 |
| 20. | ಶ್ರೀ.ಮುನಿ ಸ್ವಾಮಿಗೌಡ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ನಂ.36. | ದಿ:12–7–2011 | ವಾರ್ಡ್ ನಂ.36ರ ಮತ್ತೀಕೆರೆ 3ನೇ ಮುಖ್ಯರಸ್ತೆಯಲ್ಲಿ ವಾಹನ ನಿಲುಗಡೆ ಸಂಕೀರ್ಣ ನಿರ್ಮಿಸಲು ಖಾಸಗಿಯವರಿಂದ (ಜಾಗ ಖರೀದಿಗಾಗಿ) | 150–00 |
| 21. | ಶ್ರೀ.ಮುನಿ ಸ್ವಾಮಿಗೌಡ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ನಂ.36. | ದಿ:12–7–2011 | ವಾರ್ಡ್ ನಂ.36 ಮತ್ತೀಕೆರೆಯ ಸಂಜೀವಪ್ಪ ಗಾರ್ಡನ್‌ನಿಂದ ಬಿ.ಇ.ಎಲ್. ರಸ್ತೆಯವರೆಗೆ ಮೇಲ್ಸೇತುವೆ ನಿರ್ಮಾಣ ಮಾಡಲು ಭೂಸ್ವಾಧೀನ ಪ್ರಾಥಮಿಕ ಸರ್ವೆ Feasibility report ಹಾಗೂ DPR ತಯಾರಿಕೆಗಾಗಿ. | 100–00 |

| | | | | |
|---|---|---|---|---|
| 22. | ಶ್ರೀ. ಎಂ. ಶ್ರೀನಿವಾಸ್, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್–192. | ದಿ:11–7–2011 | ವಾರ್ಡ್–192 ಬೇಗೂರು ವ್ಯಾಪ್ತಿಯಲ್ಲಿ ಬರುವ ವಿವಿಧ ಬಡಾವಣೆಗಳಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವುದು. 12 ಕಾಮಗಾರಿಗಳು | 400–00 |
| 23. | ಶ್ರೀ. ಅಶ್ವಥ್ ನಾರಾಯಣಗೌಡ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್–8 ಕೊಡಿಗೇಹಳ್ಳಿ. | :ಆಎ/25/2011–12 ದಿನಾಂಕ:13–7–2011 | ವಾರ್ಡ್–8 ಕೊಡಿಗೇಹಳ್ಳಿ ಬೀದಿಬದಿಯ ಸಣ್ಣ ವ್ಯಾಪಾರಿಗಳಿಗೆ ಮಾರುಕಟ್ಟೆ ಸಂಕೀರ್ಣ ನಿರ್ಮಿಸುವ ಬಗ್ಗೆ. | 40–00 |
| 24. | ಶ್ರೀ. ಅಶ್ವಥ್ ನಾರಾಯಣಗೌಡ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್–8 ಕೊಡಿಗೇಹಳ್ಳಿ. | :ಆಎ/28/2011–12 ದಿನಾಂಕ:13–7–2011 | ವಾರ್ಡ್–8 ಕೊಡಿಗೇಹಳ್ಳಿ ವ್ಯಾಪ್ತಿಯಲ್ಲಿ ಹೊಲಿಗೆ ತರಬೇತಿ ಕೇಂದ್ರದ ಕಟ್ಟಡ ನಿರ್ಮಾಣ ಮಾಡುವ ಬಗ್ಗೆ. | ಮೊತ್ತ ನಮೊದಿಸಿಲ್ಲ |
| 25. | ಶ್ರೀ. ಅಶ್ವಥ್ ನಾರಾಯಣಗೌಡ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್–8 ಕೊಡಿಗೇಹಳ್ಳಿ. | :ಆಎ/29/2011–12 ದಿನಾಂಕ:13–7–2011 | ವಾರ್ಡ್–8 ಕೊಡಿಗೇಹಳ್ಳಿ ವಾರ್ಡ್‌ನಲ್ಲಿ ನಗರವ್ಯಾಪ್ತಿ ಅರಣ್ಯಕರಣ ಮತ್ತು ಪರಿಸರ ನಿರ್ವಹಣೆ ಹಾಗೂ ಸರ್ಕಾರಿ ಕಟ್ಟಡಗಳ ಆವರಣದಲ್ಲಿ ಹಾಗೂ ರಸ್ತೆ ಬದಿಯ ಮರಗಳ ಬುಡದಲ್ಲಿ ನೀರುನಿಲ್ಲುವ ಪಾತಿಗಳನ್ನು ಮತ್ತು ಹೊಸದಾಗಿ ಗುಂಡಿಗಳನ್ನು ನಿರ್ಮಾಣ ಮಾಡುವುದು. | 60–00 |
| 26. | ಶ್ರೀ. ಅಶ್ವಥ್ ನಾರಾಯಣಗೌಡ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್–8 ಕೊಡಿಗೇಹಳ್ಳಿ. | :ಆಎ/33/2011–12 ದಿನಾಂಕ:15–7–2011 | ಬಳ್ಳಾರಿ ರಸ್ತೆ NH-7 ಇಂದ ಕೊಡಿಗೇಹಳ್ಳಿ ಮುಖ್ಯರಸ್ತೆಯ 2 ಕಿ.ಮಿ. ರಸ್ತೆಯು ಅಗಲೀಕರಣವಾಗುತ್ತಿದ್ದು ರಸ್ತೆಯ 2 ಬದಿಗಳಲ್ಲಿ ಪಾದಚಾರಿ ಮಾರ್ಗ ನಿರ್ಮಾಣ, ರಸ್ತೆಯ ಮಧ್ಯೆ ಮತ್ತು ಪಕ್ಕದಲ್ಲಿ ಬಿಳಿಯಪಟ್ಟಿಯೊಂದಿಗೆ ರಸ್ತೆಯನ್ನು ಉನ್ನತ ಮಟ್ಟಕ್ಕೆ ಅಭಿವೃದ್ದಿ ಪಡಿಸುವುದು. | ಮೊತ್ತ ನಮೊದಿಸಿಲ್ಲ |
| 27. | ಶ್ರೀ. ಗೋವಿಂದೇಗೌಡ ಎಂ.ಬಿ. ,ಮಾನ್ಯ ಪಾಲಿಕೆ ಸದಸ್ಯರು ವಾರ್ಡ ನಂ–71 ಹೆಗ್ಗನಹಳ್ಳಿ. | ದಿನಾಂಕ:11–7–2011 | ಹೆಗ್ಗನಹಳ್ಳಿ ಉಪ ವಿಭಾಗದ ವ್ಯಾಪ್ತಿಯ ವಾರ್ಡ್ ನಂ–71 ಹೆಗ್ಗನಹಳ್ಳಿ ರಸ್ತೆಗಳ ಪಾದಚಾರಿ ಮಾರ್ಗಗಳನ್ನು ಅಭಿವೃದ್ದಿ ಪಡಿಸುವ ಬಗ್ಗೆ. 4 ಕಾಮಗಾರಿಗಳು | 355–00 |
| 28. | ಶ್ರೀ. ಗೋವಿಂದೇಗೌಡ ಎಂ.ಬಿ. ,ಮಾನ್ಯ ಪಾಲಿಕೆ ಸದಸ್ಯರು ವಾರ್ಡ ನಂ–71 ಹೆಗ್ಗನಹಳ್ಳಿ. | ದಿನಾಂಕ:11–7–2011 | ಹೆಗ್ಗನಹಳ್ಳಿ ಉಪ ವಿಭಾಗದ ವ್ಯಾಪ್ತಿಯ ವಾರ್ಡ್ ನಂ–71ರಲ್ಲಿನ ಪರಿಶಿಷ್ಟ ಜಾತಿ ಮತ್ತು | 560–00 |

| | | | | |
|---|---|---|---|---|
| | | | ಜನಾಂಗದವರು ವಾಸಿಸುತ್ತಿರುವ ಬಡಾವಣೆಯನ್ನು ಅಭಿವೃದ್ದಿ ಪಡಿಸುವ ಬಗ್ಗೆ.<br>4 ಕಾಮಗಾರಿಗಳು | |
| 29. | ಶ್ರೀ. ಗೋವಿಂದೇಗೌಡ ಎಂ.ಬಿ. ,ಮಾನ್ಯ ಪಾಲಿಕೆ ಸದಸ್ಯರು ವಾರ್ಡ ನಂ–71 ಹೆಗ್ಗನಹಳ್ಳಿ. | ದಿನಾಂಕ:11–7–2011 | ಹೆಗ್ಗನಹಳ್ಳಿ ಉಪ ವಿಭಾಗದ ವ್ಯಾಪ್ತಿಯ ವಾರ್ಡ್ ನಂ–71 ಸರ್ವತೋಮುಖ ಅಭಿವೃದ್ದಿ ಪಡಿಸುವ ಬಗ್ಗೆ.<br>5 ಕಾಮಗಾರಿಗಳು | 800–00 |
| 30. | ಶ್ರೀ. ಗೋವಿಂದೇಗೌಡ ಎಂ.ಬಿ. ,ಮಾನ್ಯ ಪಾಲಿಕೆ ಸದಸ್ಯರು ವಾರ್ಡ ನಂ–71 ಹೆಗ್ಗನಹಳ್ಳಿ. | ದಿನಾಂಕ:11–7–2011 | ಹೆಗ್ಗನಹಳ್ಳಿ ಉಪ ವಿಭಾಗದ ವ್ಯಾಪ್ತಿಯ ವಾರ್ಡ್ ನಂ–71ರ ಶಿವಾನಂದನಗರ ಹಿಂದೂ ರುದ್ರಭೂಮಿಯನ್ನು ಅಭಿವೃದ್ದಿ ಪಡಿಸುವ ಬಗ್ಗೆ.<br>1 ಕಾಮಗಾರಿಗಳು | 100–00 |
| 31. | ಶ್ರೀ.ರಾಜಣ್ಣ, ಮಾನ್ಯ ಸದಸ್ಯರು, ವಾರ್ಡ್ ಕಾಮಗಾರಿ ಸ್ಥಾಯಿ ಸಮಿತಿ ಸದಸ್ಯರು, ವಾರ್ಡ್ ನಂ–130, ಉಲ್ಲಾಳು. | ದಿನಾಂಕ:11–7–2011 | ವಾರ್ಡ್ ನಂ–130ರ ಉಳ್ಳಾಲ ವಾರ್ಡಿನಲ್ಲಿ ಕೊಳವೆ ಬಾವಿಗಳನ್ನು ತೆಗೆಯಲು ಅನುದಾನ ನೀಡುವ ಬಗ್ಗೆ.<br>7 ಕಾಮಗಾರಿಗಳು | 28–00 |
| 32. | ಶ್ರೀ.ಎಂ.ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು | ಬಿಬಿಎಂಪಿ/ವಿಪನಾ/114/10–11<br>ದಿ:11–7–2011 | ವಾರ್ಡ್ ನಂ–130ರ ವ್ಯಾಪ್ತಿಯ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸೌಲಭ್ಯ ನೀಡಲು ಕೊಳವೆ ಬಾವಿಗಳನ್ನು ತೆಗೆಯಲು ಅನುದಾನ ನೀಡುವ ಬಗ್ಗೆ. | ಮೊತ್ತ ನಮೊದಿಸಿಲ್ಲ |
| 33. | ಶ್ರೀಮತಿ.ಎಲ್. ನಾಗರತ್ನ ಲೋಕೇಶ್, ಮಾನ್ಯ ಸದಸ್ಯರು ವೃಷಭಾವತಿನಗರ ವಾರ್ಡ್ ನಂ.102. | ದಿ:23–7–2011 | 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ನಂ.102ರಲ್ಲಿ ವೃಷಭಾವತಿನಗರ ಪ್ರದೇಶದ ಸಣ್ಣಕ್ಕಿ ಬಯಲಿನಲ್ಲಿ ಮಳೆ ನೀರು ಕಾಲುವೆ ಅಭಿವೃದ್ದಿ ಕಾಮಗಾರಿ. | 200–00 |
| 34. | ಶ್ರೀಮತಿ.ಎಲ್. ನಾಗರತ್ನ ಲೋಕೇಶ್, ಮಾನ್ಯ ಸದಸ್ಯರು ವೃಷಭಾವತಿನಗರ ವಾರ್ಡ್ ನಂ.102. | ದಿ:23–7–2011 | 2011–12ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ನಂ.102ರಲ್ಲಿ ವೃಷಭಾವತಿನಗರ ಪ್ರದೇಶದಲ್ಲಿ ರಸ್ತೆ ಅಭಿವೃದ್ದಿ ಕಾಮಗಾರಿಯನ್ನು ಕೈಗೊಳ್ಳುವುದು. | 200–00 |
| 35. | ಶ್ರೀ.ರಾಜಣ್ಣ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ 130. ಸದಸ್ಯರು ವಾರ್ಡ್ ಕಾಮಗಾರಿ ಸ್ಥಾಯಿ ಸಮಿತಿ ಸದಸ್ಯರು. | ದಿ:16–5–2011 | ವಾರ್ಡ್ 130ರ ವ್ಯಾಪ್ತಿಯ ಪ್ರದೇಶದ ಸಾರ್ವಜನಿಕ ಅಭಿವೃದ್ದಿ ಕಾರ್ಯಕೈಗೊಳ್ಳಲು ಅನುದಾನ ಮೀಸಲಿಡುವ ಬಗ್ಗೆ.<br>7 ಕಾಮಗಾರಿಗಳು | 550–00 |
| 36. | ಶ್ರೀ.ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ | ಬಿಬಿಎಂಪಿ/ವಿಪನಾ/81/ 10–11<br>ದಿ:20–6–2011 | ವಾರ್ಡ್ 96ರ ವ್ಯಾಪ್ತಿಯ ಪ್ರದೇಶದ ಸಾರ್ವಜನಿಕ ಅಭಿವೃದ್ದಿ | 300–00 |

| | | | | |
|---|---|---|---|---|
| | Smt.Queen Elizabeth, Councilor Ward no.96 | 12-5-2011 | ಕಾರ್ಯಕೈಗೊಳ್ಳಲು 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿಡುವ ಬಗ್ಗೆ. 9 ಕಾಮಗಾರಿಗಳು | |
| 37. | ಶ್ರೀ.ಆರ್. ಉದಯ ಕುಮಾರ್, ಮಾನ್ಯ ನಗರ ಸಭಾ ಸದಸ್ಯರು, ಅಲಸೂರು ವಾರ್ಡ್ 90, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸದಸ್ಯರು. | | ವಾರ್ಡ್ ನಂ. 90 ಹಲಸೂರಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಕಾದಿರಿಸುವ ಬಗ್ಗೆ. 5 ಕಾಮಗಾರಿಗಳು | 340-00 |
| 38. | ಶ್ರೀ.ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ.ಫೌಜಿಯ ವಾಜಿದ್, ಮಾನ್ಯ ಸದಸ್ಯರು ವಾರ್ಡ್ ನಂ.33 ಮನೋರಾಯನಪಾಳ್ಯ. ಸದಸ್ಯರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಸ್ಥಾಯಿ ಸಮಿತಿ. | ಬಿಬಿಎಂಪಿ/ವಿಪನಾ/81/ 10-11 ದಿ:20-6-2011<br>ದಿ:27-6-2011 | ವಾರ್ಡ್ 33ರ ಮನೋರಾಯನಪಾಳ್ಯ ವ್ಯಾಪ್ತಿಯಲ್ಲಿನ ಮಳೆ ನೀರು ಚರಂಡಿಗಳನ್ನು ಅಭಿವೃದ್ಧಿ ಪಡಿಸಲು ಆಯವ್ಯಯದಲ್ಲಿ ವಿಶೇಷ ಅನುದಾನ ಮೀಸಲಿಡುವ ಬಗ್ಗೆ. | 180-00 |
| 39. | ಶ್ರೀ.ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀವಿದ್ಯಾ ಶಶಿಕುಮಾರ್, ಪಾಲಿಕೆ ಸದಸ್ಯರು 121ನೇ ವಾರ್ಡ್ ಬಿನ್ನಿಪೇಟೆ ಸದಸ್ಯರು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ. | ಬಿಬಿಎಂಪಿ/ವಿಪನಾ/86/ 10-11 ದಿ:21-6-2011<br>ದಿ:17-6-2011 | ವಾರ್ಡ್ 121ರ ವ್ಯಾಪ್ತಿಯ ಬೃಹತ್ ಮಳೆ ನೀರಿನ ಚರಂಡಿ ಅಭಿವೃದ್ಧಿ ಕಾರ್ಯಕೈಗೊಳ್ಳಲು 2011-12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನ ಮೀಸಲಿಡುವ ಬಗ್ಗೆ. 4 ಕಾಮಗಾರಿಗಳು | 369-00 |
| 40. | ಶ್ರೀ.ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ. ವಿಜಯನ್.ಎಸ್. ಮಾನ್ಯ ಪಾಲಿಕೆ ಸದ್ಯಸರು ವಾರ್ಡ್ 115. | ಬಿಬಿಎಂಪಿ/ವಿಪನಾ/93/ 10-11 ದಿ:29-6-2011<br>27-6-2011 | ವನ್ನಾರ್‌ಪೇಟೆ ವಾರ್ಡ್ 115ರ ವ್ಯಾಪ್ತಿಯಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಶೇ.22.75 ಅನುದಾನದಲ್ಲಿ 1+1 ಮಾದರಿಯಲ್ಲಿ 200 ಮನೆಗಳನ್ನು ನಿರ್ಮಿಸುವ ಬಗ್ಗೆ. | 200-00 |
| 41. | ಶ್ರೀ.ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು. | ಬಿಬಿಎಂಪಿ/ವಿಪನಾ/83/ 10-11 ದಿ:20-6-2011 | ಸಿದ್ದಾಪುರ ವಾರ್ಡ್ 144ರ ವ್ಯಾಪ್ತಿಯಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ (Indoor stadium at T. Mariyappa road infront of lalbagh gate) 2011-12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನ ಮೀಸಲಿಡುವ ಬಗ್ಗೆ. | 500-00 |
| 42. | ಶ್ರೀ.ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು. | ಬಿಬಿಎಂಪಿ/ವಿಪನಾ/82/ 10-11 ದಿ:20-6-2011 | ಸಿದ್ದಾಪುರ ವಾರ್ಡ್ 144ರ ಸಾರ್ವಜನಿಕ ಅಭಿವೃದ್ಧಿ | 500-00 |

| | | | | |
|---|---|---|---|---|
| | | | ಕಾರ್ಯಕೈಗೊಳ್ಳಲು 2011-12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನ ಮೀಸಲಿಡುವ ಬಗ್ಗೆ. | |
| 43. | ಶ್ರೀ.ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು. | ಬಿಬಿಎಂಪಿ/ವಿಪಸಾ/84/ 10-11 ದಿ:20-6-2011 | ಸಿದ್ದಾಪುರ ವಾರ್ಡ್ 144ರ ಸಾರ್ವಜನಿಕ ಅಭಿವೃದ್ದಿ ಕಾರ್ಯಕೈಗೊಳ್ಳಲು 2011-12ನೇ ಸಾಲಿನ ಆಯವ್ಯಯದಲ್ಲಿ ವಿಶೇಷ ಅನುದಾನ ಮೀಸಲಿಡುವ ಬಗ್ಗೆ. 6 ಕಾಮಗಾರಿಗಳು | 240-00 |
| 44. | ಶ್ರೀ.ಎಂ. ಗೋಪಿ, ಬಿಬಿಎಂಪಿ ಸದಸ್ಯರು, ಸಂಪಂಗಿರಾಮನಗರ ವಾರ್ಡ್ 110. | | ವಾರ್ಡ್-110 ಸಂಪಂಗಿರಾಮನಗರ ಪ್ರದೇಶದಲ್ಲಿ ಅಭಿವೃದ್ದಿ ಕಾರ್ಯ ಕೈಗೊಳ್ಳಲು 2011-12ನೇ ಸಾಲಿನಲ್ಲಿ ಅನುದಾನ ಮೀಸಲಿಡುವ ಬಗ್ಗೆ. 4 ಕಾಮಗಾರಿಗಳು | 550-00 |
| 45. | ಶ್ರೀಮತಿ.ಶಕೀಲ ಮುನಿರಾಜು, ಬಿಬಿಎಂಪಿ ಸದಸ್ಯರು 97ನೇ ವಾರ್ಡ್ ದಯಾನಂದನಗರ. | ದಿ:24-6-2011 | 2011-12ನೇ ಸಾಲಿನ ಆಯವ್ಯಯದಲ್ಲಿ ಶೇ.22.75 ಅನುದಾನದಡಿಯಲ್ಲಿ ಮೀಸಲಿಡುವ ನಿಧಿ ಬಳಕೆ ಕುರಿತು. 9 ಕಾಮಗಾರಿಗಳು | 700-00 |
| 46. | ಶ್ರೀ.ಜಿ.ಹೆಚ್ ರಾಮಚಂದ್ರ, ಅಧ್ಯಕ್ಷಕರು ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ. | | ವಾರ್ಡ್ ನಂ.160 ಅಭಿವೃದ್ದಿ ಕಾಮಗಾರಿಗಳಿಗೆ ಪಾಲಿಕೆಯ 2011-12ನೇ ಸಾಲಿನಲ್ಲಿ ಅನುದಾನ ಮೀಸಲಿಡುವ ಬಗ್ಗೆ. 1 ಕಾಮಗಾರಿ | 800-00 |
| 47. | ಶ್ರೀ.ಎನ್.ಗೋವಿಂದರಾಜು, ಮಾನ್ಯ ಸದಸ್ಯರು ಜಯಚಾಮರಾಜೇಂದ್ರ ನಗರ, ವಾರ್ಡ್ ನಂ.46. ಸದಸ್ಯರು ಮಾರುಕಟ್ಟೆ ಸ್ಥಾಯಿ ಸಮಿತಿ. | ದಿ:17-6-2011 | ಶೇ.22.75ರ ಅನುದಾನದಲ್ಲಿ 1+1 ಮಾದರಿಯಲ್ಲಿ 200 ಮನೆಗಳನ್ನು ನಿರ್ಮಿಸಲು 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಮೀಸಲಿಡುವ ಬಗ್ಗೆ. | 200-00 |
| 48. | ಶ್ರೀ.ಆರ್.ಪ್ರಕಾಶ್, ಬಿಬಿಎಂಪಿ ಸದಸ್ಯರು ಕಾವೇರಿಪುರ ವಾರ್ಡ್ 103. | ದಿ:28-6-11 | 2011-12ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಕೋರಿ. 4 ಕಾಮಗಾರಿಗಳು | 1800-00 |
| 49. | ಶ್ರೀ.ಆರ್. ಉದಯಕುಮಾರ್, ಮಾನ್ಯ ನಗರ ಸಭಾ ಸದಸ್ಯರು ಅಲಸೂರು ವಾರ್ಡ್ 90 ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸದಸ್ಯರು ಬಿಬಿಎಂಪಿ. | | 2011-12ನೇ ಆಯವ್ಯಯದಲ್ಲಿ ಅನುದಾನ ಕಾದಿರಿಸುವ ಬಗ್ಗೆ. 2 ಕಾಮಗಾರಿಗಳು | 300-00 |
| 50. | ಶ್ರೀಮತಿ.ಗೀತಾ ವಿವೇಕಾನಂದ, ಬಿಬಿಎಂಪಿ ಸದಸ್ಯರು ವಾರ್ಡ್ 81 ವಿಜ್ಞಾನನಗರ ಕೆ.ಆರ್ ಪುರ ಕ್ಷೇತ್ರ. | ದಿ: 13-6-11 | ವಾರ್ಡ 81 ವಿಜ್ಞಾನನಗರ ಪ್ರದೇಶದ ಎಂ.ಜಿ.ಇ ಬಡಾವಣೆಯಲ್ಲಿ ವಾರ್ಡ್ ಕಛೇರಿ, Library, Family fitness club, shuttle court & | 55-00 |

| | | | | |
|---|---|---|---|---|
| | | | multipurpose hall ಅನ್ನು ನಿರ್ಮಾಣ ಮಾಡಲು ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ. | |
| 51. | ಶ್ರೀಮತಿ ಟಿ.ಎ.ಗಾಯತ್ರಿ, ಮಾನ್ಯ ಸದಸ್ಯರು ವಾರ್ಡ್.40 ದೊಡ್ಡಬಿದರಕಲ್ಲು. ಸದಸ್ಯರು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಬಿಬಿಎಂಪಿ. | | ವಾರ್ಡ್.40 ದೊಡ್ಡಬಿದರಕಲ್ಲು ಆಚಾರ್ಯ ಶಾಲೆಯ ಹತ್ತಿರ ದೋಬಿ ಘಾಟ್ ನಿರ್ಮಿಸುವ ಬಗ್ಗೆ.<br>1 ಕಾಮಗಾರಿ | 19.99 |
| 52. | ಶ್ರೀಮತಿ ಟಿ.ಎ ಗಾಯತ್ರಿ, ಮಾನ್ಯ ಸದಸ್ಯರು ವಾರ್ಡ್.40 ದೊಡ್ಡಬಿದರಕಲ್ಲು. ಸದಸ್ಯರು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಬಿಬಿಎಂಪಿ. | | ವಾರ್ಡ್.40 ದೊಡ್ಡಬಿದರಕಲ್ಲು ವ್ಯಾಪ್ತಿಯಲ್ಲಿ ವಾಣಿಜ್ಯ ಸಂಕೀರ್ಣ ಹಾಗೂ ವಾರ್ಡ್ ಕಛೇರಿ ನಿರ್ಮಿಸುವ ಬಗ್ಗೆ.<br>2 ಕಾಮಗಾರಿಗಳು | 149.95 |
| 53. | ಶ್ರೀಮತಿ. ಎಸ್. ಶಶಿರೇಖಾ ಜಯರಾಮ್, ಮಾನ್ಯ ಸದಸ್ಯರು ವಾರ್ಡ್.195 ಕೋಣನಕುಂಟೆ. ಸದಸ್ಯರು ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿ. | ದಿ:6–7–11 | ಚುಂಚಘಟ ಮುಖ್ಯರಸ್ತೆಯ ಚರಂಡಿ ದುರಸ್ತಿ ಹಾಗು ಕವರಿಂಗ್ ಸ್ಲಾಬ್ ಅಳವಡಿಸುವ ಬಗ್ಗೆ.<br>2 ಕಾಮಗಾರಿಗಳು | 70–00 |
| 54. | ಶ್ರೀಮತಿ.ವೈ.ಆರ್. ಗೌರಮ್ಮ, ಮಾನ್ಯ ಸದಸ್ಯರು ವಾರ್ಡ್.32 ಕಾವಲ್ ಬೈರಸಂದ್ರ. | ದಿ:21–6–2011 | 2011–12ನೇ ಸಾಲಿನ ಬಿಬಿಎಂಪಿ ಆಯವ್ಯಯದಲ್ಲಿ ಕಾಮಗಾರಿಗಳಿಗೆ ಹಣ ನಿಗಧಿಪಡಿಸಲು ಮನವಿ.<br>6 ಕಾಮಗಾರಿಗಳು | 500–00 |
| 55. | ಶ್ರೀ.ಎಂ. ಉದಯಶಂಕರ್, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಶ್ರೀ. ಮಹಮ್ಮದ್ ರಿಜ್ವಾನ್ ನವಾಬ್ ಮಾನ್ಯ ಸದಸ್ಯರು ವಾರ್ಡ್ ನಂ.171. | ಬಿಬಿಎಂಪಿ/ವಿಪನಾ/146/10–11<br>ದಿ:28–7–2011<br>ದಿ:20–7–2011 | ವಾರ್ಡ್ 171ರ ವ್ಯಾಪ್ತಿಯ ಸಾರ್ವಜನಿಕ ಅಭಿವೃದ್ಧಿ ಕಾರ್ಯಕೈಗೊಳ್ಳಲು ವಿಶೇಷ ಅನುದಾನ ಮೀಸಲಿಡುವ ಬಗ್ಗೆ. | 1000–00 |
| 56. | ಶ್ರೀಮತಿ.ಎನ್. ಶಕುಂತಲ ದೊಡ್ಡಲಕಪ್ಪ, ಬಿ.ಬಿ.ಎಂ.ಪಿ ಸದಸ್ಯರು, ವಾರ್ಡ್.125 ಮಾರೇನಹಳ್ಳಿ. ಸದಸ್ಯರು ತೋಟಗಾರಿಕೆ ಸ್ಥಾಯಿ ಸಮಿತಿ. | | ಕೆ.ಜಿ.ಎಸ್.ಬಡಾವಣೆ 1ನೇ ಮುಖ್ಯರಸ್ತೆ ಹಾಗೂ 2ನೇ ಮುಖ್ಯರಸ್ತೆ ಮಧ್ಯೆಯಿರುವ ಖಾಲಿ ನಿವೇಶನದಲ್ಲಿ ವ್ಯಾಯಾಮ ಶಾಲೆ, ಗ್ರಂಥಾಲಯ ಹಾಗೂ ಯೋಗ ಕೇಂದ್ರ ನಿರ್ಮಿಸುವ ಬಗ್ಗೆ. | 165–00 |
| 57. | ಶ್ರೀ.ಕೆ.ಎಲ್. ತಿಮ್ಮನಂಜಯ್ಯ (ಡಿ.ಸಿ.ಇ), ಮಾನ್ಯ ಸದಸ್ಯರು ವಾರ್ಡ್ 41 ಪೀಣ್ಯ ಕೈಗಾರಿಕಾ ಪ್ರದೇಶ. ಸದಸ್ಯರು ಆರೋಗ್ಯ ಸ್ಥಾಯಿ ಸಮಿತಿ. | | 2011–12ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ ವಾರ್ಡ್ 41ಕ್ಕೆ ಸೇರಿದ ಕಾಮಗಾರಿಗಳನ್ನು ಸೇರ್ಪಡೆಗೊಳಿಸುವ ಬಗ್ಗೆ.<br>23 ಕಾಮಗಾರಿಗಳು | 1520–00 |

ಮೇಲ್ಕಂಡ ಕೋರಿಕೆಗಳ ಬಗ್ಗೆ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :</u>*** ***<u>2011–12ನೇ ಸಾಲಿನ ಆಯವ್ಯಯವಯ ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>38]. ವಿಷಯದ ಸಂಖ್ಯೆ :–ತೆಆಸ್ಥಾಸ/258/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 07–06–2011ರಲ್ಲಿ ವಿವರಿಸಿರುವಂತೆ, ಮಹದೇವಪುರ ವಲಯದ, ದೇವಸಂದ್ರ ಕೆರೆಯು ಬಿ.ಬಿ.ಎಂ.ಪಿಗೆ ಒಳಪಟ್ಟ ಕೆರೆಯಾಗಿದ್ದು, ದೇವಸಂದ್ರ ಕೆರೆಯನ್ನು ಅಭಿವೃದ್ದಿಗೊಳಿಸುವಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸದಸ್ಯರು ಕೋರಿರುತ್ತಾರೆ. ಹಾಗೂ ಸದರಿ ಕೆರೆಯು ಬಿಡಿಎ ಗೆ ಹಸ್ತಾಂತರಿಸಲು ಪ್ರಸ್ತಾಪಿಸಿರುವ ಕೆರೆಗಳ ಪಟ್ಟಿಯಲ್ಲಿ ಸೇರಿಲ್ಲದ ಕಾರಣ ಮಾನ್ಯ ಆಡಳಿತ ಪಕ್ಷದ ನಾಯಕರು ಸದರಿ ಕೆರೆಯನ್ನು ಅಭಿವೃದ್ದಿ ಪಡಿಸಲು ತುರ್ತು ಕ್ರಮ ವಹಿಸಲು ಸೂಚಿಸಿರುತ್ತಾರೆ.

ಅದರಂತೆ ಈ ಕೆಳಕಂಡ ಅಂಶಗಳನ್ನು ಅಳವಡಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ.

- ಕೆರೆಯ ಏರಿಯ ಜಂಗಲ್ ತೆಗೆಯುವ ಕೆಲಸ.
- ಕೆರೆಯ ಅಂಗಳದಲ್ಲಿರುವ ದೊಡ್ಡ ಜೊಂಡನ್ನು ತೆಗೆದು, ಅದರ ಬೇರನ್ನು ತೆಗೆಯಲು 15ಸೆಂ.ಮೀ ಆಳಕ್ಕೆ ಹೂಳನ್ನು ತೆಗೆಯುವ ಕೆಲಸ.
- ಹಾಲಿ ಇರುವ ಏರಿಯನ್ನು ಬಲ ಪಡಿಸುವುದು.
- ಏರಿಯ ಸುತ್ತಲೂ ನಡೆದಾಡುವ ಎರಡು ಬದಿ ದಾರಿಗೆ ಕರ್ಬ್ ಅಳವಡಿಸುವುದು.
- ಕೆರೆಯ ಕೋಡಿಯ ಹತ್ತಿರ ಕಾಲುಸೇತುವೆ ನಿರ್ಮಾಣ.
- ಕೊಳಚೆ ನೀರು ತಿರುವು ಕಾಲುವೆ ಮತ್ತು ಎರಡು ಗೆಝ್ಬೋಗಳು.
- ಕಾವಲುಗಾರರ ಕೊಠಡಿ ಮತ್ತು ಶೌಚಾಲಯ,
- ಕೆರೆಯಲ್ಲಿ ವಿದ್ಯುಧೀಕರಣ ಹಾಗೂ ಅರಣ್ಯೀಕರಣ ಕಾಮಗಾರಿ.

ಮಹದೇವಪುರ ವಲಯದ, ದೇವಸಂದ್ರ ಕೆರೆಯನ್ನು ಅಭಿವೃದ್ದಿಗೊಳಿಸುವ ಕಾಮಗಾರಿಗೆ ತಗುಲುವ ವೆಚ್ಚ ರೂ. 234.25 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗೆ **2011–12 ನೇ ಸಾಲಿನ ಆಯವ್ಯಯದಲ್ಲಿ ಅನುದಾನ ಒದಗಿಸುವ ಷರತ್ತಿಗೆ ಒಳಪಟ್ಟು, ಜಾಬ್ ನಂಬರ್ ನೀಡಲು ಕೋರಿ** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆದಾಯ ಮತ್ತು ತೆರಿಗೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**<u>–ಮುಂದೂಡಿದೆ–</u>**

## ***<u>39]. ವಿಷಯದ ಸಂಖ್ಯೆ :–ತೆಆಸ್ಥಾಸ/260/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ : ಅ.ಆ(ದ)ಪಿಆರ್/548/2011–12, ದಿನಾಂಕ : 09–08–2011ರಲ್ಲಿ ವಿವರಿಸಿರುವಂತೆ, ಶ್ರೀ. ಸುಜಿತ್ ಕುಮಾರ್. ಎನ್ **ಬಿನ್** ಕೆ.ಎಂ.ನಾಗರಾಜು, ನಂ.62/74, 2ನೇ ಮಹಡಿ ಸೋಮೇಶ್ವರ ದೇವಸ್ಥಾನ ಎದುರು ಲಾಲ್‌ಬಾಗ್ ಸಿದ್ದಾಪುರ ಬೆಂಗಳೂರು–11 ರವರ ಮನವಿ ಪತ್ರದಲ್ಲಿ ವಿಜಯ ಕಾಂಪೋಸಿಟ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದು, ವಾರ್ಷಿಕ ಪರೀಕ್ಷೆಯಲ್ಲಿ ಡಿಸ್ಟಿಂಗ್ಸ್‌ನಲ್ಲಿ ಪಾಸಾಗಿದ್ದು, ಶೇಕಡಾ 97.75% ಅಂಕಗಳು ಬಂದಿದ್ದು, ಸಿ.ಇ.ಟಿ. ಎಂಟ್ರೆನ್ಸ್ ಪರೀಕ್ಷೆಯಲ್ಲಿ ರ್‍ಯಾಂಕ್ ಬಂದಿದ್ದು, ಇವರಿಗೆ ಐ.ಐ.ಟಿ. ಪಾಟ್ನದಲ್ಲಿ ಮೆಕಾನಿಕಲ್ ಇಂಜಿನೀಯರಿಂಗ್ ಕೋರ್ಸ್ ಸಿಟು ಲಭ್ಯವಾಗಿರುತ್ತದೆಂದು, ಇವರ ತಂದೆಯು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಮುಂದಿನ ವಿದ್ಯಾಭ್ಯಾಸಕ್ಕೆ ತಗುಲುವ ವೆಚ್ಚವನ್ನು ಭರಿಸಲು ತೊಂದರೆಯಾಗಿರುತ್ತದೆಂದು, ಮುಂದಿನ ವಿದ್ಯಾಭ್ಯಾಸಕ್ಕೆ ತಗಲುವ ಶಿಕ್ಷಣ ಶುಲ್ಕ ಪ್ರತಿ ಸಮಿಸ್ಟಾರ್‌ಗೆ ರೂ.40,000/– x 2 = 80,000/–. ಹಾಸ್ಟಲ್ ಫೀಸ್ ಪ್ರತಿ ವರ್ಷಕ್ಕೆ ರೂ.38,000/– ಒಟ್ಟು ವಾರ್ಷಿಕ ಮೊತ್ತ ರೂ.1,18,000–00 (ಒಂದು ಲಕ್ಷದ ಹದಿನೆಂಟು ಸಾವಿರ ರೂ ಮಾತ್ರ)ಗಳನ್ನು ಪಾವತಿಸಲು ವಿನಂತಿಸಿರುತ್ತಾರೆ.

ಶ್ರೀ.ಬಿ.ಎನ್.ವಿಜಯಕುಮಾರ್ ಮಾನ್ಯ ಶಾಸಕರು, ಜಯನಗರ ವಿಧಾನಸಭಾ ಕ್ಷೇತ್ರ ರವರು ಮತ್ತು ಪೂಜ್ಯ ಮಹಾಪೌರರು, ವಿದ್ಯಾರ್ಥಿಯಾದ ಶ್ರೀ.ಕೆ.ಎಂ.ನಾಗರಾಜು ರವರಿಗೆ ಮುಂದಿನ ವಿದ್ಯಾಭ್ಯಾಸಕ್ಕೆ ಪಾಲಿಕೆಯ ವತಿಯಿಂದ ಧನ ಸಹಾಯ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಪಾಲಿಕೆಯ ಕಲ್ಯಾಣಾಧಿಕಾರಿಗಳು ಸದರಿ ವಿದ್ಯಾರ್ಥಿಯಾದ ಶ್ರೀ.ಸುಜಿತ್ ಕುಮಾರ್ ರವರು ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದು, ಅತ್ಯಂತ ಕಡುಬಡವರಾಗಿದ್ದು ವ್ಯಾಸಂಗ ವೆಚ್ಚವನ್ನು ಭರಿಸಲು ಶಕ್ತರಿರುವುದಿಲ್ಲವೆಂದು, ಪಾಲಿಕೆಯಿಂದ 2 ಸೆಮಿಸ್ಟರ್‌ಗಳ ಒಟ್ಟು ಶಿಕ್ಷಣ ಶುಲ್ಕ ರೂ.40,000/– ಗಳನ್ನು ಪಾವತಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ವಿದ್ಯಾರ್ಥಿಯಾದ ಶ್ರೀ.ಸುಜಿತ್ ಕುಮಾರ್ ರವರು ಪ್ರತಿಭಾನ್ವಿತ ವಿದ್ಯಾರ್ಥಿಯಾಗಿದ್ದು, ಅತ್ಯಂತ ಕಡುಬಡವರಾಗಿದ್ದು ವ್ಯಾಸಂಗ ವೆಚ್ಚವನ್ನು ಭರಿಸಲು ಶಕ್ತರಿರುವುದಿಲ್ಲದ ಕಾರಣ ಇವರ ಮುಂದಿನ ವಿದ್ಯಾಭ್ಯಾಸಕ್ಕೆ ರೂ.40,000–00ಗಳನ್ನು ಪಾಲಿಕೆಯಿಂದ ಭರಿಸಬಹುದಾಗಿರುತ್ತದೆ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿದೆ.

***ನಿರ್ಣಯ : ದಿನಾಂಕ : 09–08–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.***

## ***40]. ವಿಷಯದ ಸಂಖ್ಯೆ :–ತೆಆಸ್ಥಾಸ/261/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 05–08–2011ರಲ್ಲಿ ವಿವರಿಸಿರುವಂತೆ, ಗೌರವಾನ್ವಿತ ನ್ಯಾಯಾಮೂರ್ತಿ ಶ್ರೀ ಎನ್.ಕೆ ಪಾಟೀಲ್‌ರವರು ಚೇರ್‌ಮೆನ್ ಕೆ.ಎಸ್.ಎಲ್.ಎಸ್.ಎ ದಿನಾಂಕ: 3.07.20211 ರಂದು ಮಡಿವಾಳ ಕೆರೆ ಪರಿವೀಕ್ಷಣೆ ಮಾಡಿರುತ್ತಾರೆ. ಪರಿವೀಕ್ಷಣೆ ಸಮಯದಲ್ಲಿ ನ್ಯಾಯಾಮೂರ್ತಿರವರು ಮಡಿವಾಳ ಕೆರೆಗೆ ಹೆಚ್ಚುವರಿ ಕೊಳಚೆ ನೀರು ಸಂರಕ್ಷಣಾ ಘಟಕ ಸ್ಥಾಪಿಸಲು ಸೂಚಿಸಿರುತ್ತಾರೆ. ಬಿ.ಡಬ್ಲೂ.ಎಸ್.ಎಸ್.ಬಿ ರವರು ತಿಳಿಸಿರುವಂತೆ ಈ ಘಟಕದ ಸಾಮರ್ಥ್ಯವು 6 ಎಮ್.ಎಲ್.ಡಿ ಆಗಿರುತ್ತದೆ ಹಾಗೂ ಈ ಕೆಲಸಗಳಿಗೆ ಅವಶ್ಯವಿರುವ 2 ಎಕರೆ ಪ್ರದೇಶವನ್ನು ಅರಣ್ಯ ಇಲಾಖೆಯು ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆಗೆ ಹಸ್ತಾಂತರಿಸಲು ಒಪ್ಪಿರುವುದಾಗಿ ತಿಳಿಸಿರುತ್ತಾರೆ. ಈ ಘಟಕಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಫಂಡ್ ನೀಡಲು ಕೋರಿರುತ್ತಾರೆ ಮತ್ತು ಬಿ.ಡಬ್ಲೂ.ಎಸ್.ಎಸ್.ಬಿ ರವರಿಂದ ಕಾಮಗಾರಿ ನಿರ್ವಹಿಸಲಾಗುವುದೆಂದು ಕೋರಿರುತ್ತಾರೆ.

ಉಲ್ಲೇಖ ಪತ್ರ (2) ರಂತೆ ಬಿ.ಡಬ್ಲೂ.ಎಸ್.ಎಸ್.ಬಿ ರವರು ಅರಣ್ಯ ಇಲಾಖೆಯವರಿಗೆ ಈ ಘಟಕಕ್ಕೆ ಅವಶ್ಯವಿರುವ ಜಮೀನು ನೀಡುವಂತೆ ಕೋರಿರುತ್ತಾರೆ ಹಾಗೂ ಸದರಿ ಘಟಕಕ್ಕೆ ಲೈನ್ ಅಂದಾಜು ಪಟ್ಟಿಯನ್ನು ರೂ. 15.00 ಕೋಟಿಗಳಿಗೆ ತಯಾರಿಸಿರುತ್ತಾರೆ. ಕಾಮಗಾರಿ ಪೂರ್ವ ತಯಾರಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ರೂ. 1.00 ಕೋಟಿ ಆರಂಭಿಕ ಡಿಪಾಸಿಟ್ ನೀಡುವಂತೆ ಕೋರಿರುತ್ತಾರೆ.

ಮಾನ್ಯ ಆಯುಕ್ತರು ಸದರಿ ಪ್ರಸ್ತಾವನೆಗೆ ಅನುಮೋದನೆ ನೀಡಿದ್ದು, ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 05–08–2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## ***41]. ವಿಷಯದ ಸಂಖ್ಯೆ :–ತೆಆಸ್ಥಾಸ/262/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)49/11–12, ದಿನಾಂಕ : 09–08–2011ರಲ್ಲಿ ವಿವರಿಸಿರುವಂತೆ, ಶ್ರೀ ಜಿ. ಜನಾರ್ದನ ರೆಡ್ಡಿ, ಮಾನ್ಯ ಮಾಜಿ ಪ್ರವಾಸೋದ್ಯಮ, ಮೂಲ ಸೌಲಭ್ಯ ಅಭಿವೃದ್ಧಿ ಮತ್ತು ಯುವಜನ ಸೇವೆ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು ಪೂಜ್ಯ ಮಹಾಪೌರರಿಗೆ ಪತ್ರ ಬರೆದು ಶ್ರೀಮತಿ ಎಂ. ನಾಗಮ್ಮ, ಬೆರಳಚ್ಚುಗಾರ್ತಿ, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ಕೊಠಡಿ ಸಂ. 126, ವಿಕಾಸ ಸೌಧ, ಬೆಂಗಳೂರು. ರವರು ಮನವಿ ಸಲ್ಲಿಸಿ ದಿನಾಂಕ 20.08.2011 ರಿಂದ 27.08.2011 ರವರೆಗೆ ಕೆನಡಾ ದೇಶದ Vancouver ನಲ್ಲಿ ನಡೆಯಲಿರುವ 5$^{th}$ Senior World Championship Tournaments ನ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ದೇಶವನ್ನು ಪ್ರತಿನಿಧಿಸುತ್ತಿದ್ದು, ಈ ಕ್ರೀಡೆಯಲ್ಲಿ ಭಾಗವಹಿಸಲು ಸುಮಾರು. ರೂ. 2.60 ಲಕ್ಷ ವೆಚ್ಚ ತಗಲುತ್ತಿದ್ದು, ಇದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಹಾಪೌರರ ನಿಧಿಯಿಂದ ಕಲ್ಪಿಸಿರುವ ಅವಕಾಶದಲ್ಲಿ ಸೂಕ್ತ ಆರ್ಥಿಕ ಸಹಾಯ ನೀಡುವಂತೆ ಕೋರಿರುತ್ತಾರೆಂದು ತಿಳಿಸುತ್ತಾ, ಸದರಿಯವರಿಗೆ ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಿಯಮಾನುಸಾರ ಲಭ್ಯವಾಗುವ ಆರ್ಥಿಕ

ನೆರವನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆಯೆಂದು ಹಾಗೂ ಸದರಿ ಕ್ರೀಡಾಪಟು ವಿದೇಶದಲ್ಲಿ ನಡೆಯುವ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕಾಗಿರುವುದರಿಂದ ಸಹಜವಾಗಿ ಹೆಚ್ಚಿನ ಮೊತ್ತದ ಹಣದ ಅಗತ್ಯವಿದ್ದು, ಈ ಮೊತ್ತವನ್ನು ಭರಿಸಲು ಶಕ್ತರಾಗಿರುವುದಿಲ್ಲವಾದ್ದರಿಂದ ಸದರಿಯವರ ಕೋರಿಕೆಯನ್ನು ಪರಿಗಣಿಸಿ, ರಾಜ್ಯದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ದೃಷ್ಠಿಯಿಂದ ಪೂಜ್ಯ ಮಹಾಪೌರರ ನಿಧಿಯಿಂದ ದೊರೆಯಬಹುದಾದ ಗರಿಷ್ಠ ಮೊತ್ತದ ಧನ ಸಹಾಯ ಮಂಜೂರು ಮಾಡಲು ತುರ್ತಾಗಿ ಕ್ರಮಕೈಗೊಳ್ಳುವಂತೆ ಕೋರಿರುತ್ತಾರೆ.

ಪಾಲಿಕೆಯಿಂದ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗಸೂಚಿಗಳನ್ವಯ ಸಂಘ ಸಂಸ್ಥೆಗಳಿಗೆ ಮಾತ್ರ ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ.10,000/– ದಿಂದ ಗರಿಷ್ಠ ರೂ.1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಮುಂದುವರೆದಂತೆ, ಸದರಿಯವರಿಗೆ 2010–11 ನೇ ಸಾಲಿನಲ್ಲಿ "16ನೇ ಏಷಿಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್ ಷಿಪ್" ನಲ್ಲಿ ಭಾಗವಹಿಸಲು ರೂ. 10,000/– ಗಳ ಸಹಾಯಧನ ಮಂಜೂರು ಮಾಡಲಾಗಿರುತ್ತದೆ. ಪಾಲಿಕೆಯ ಕೊಡುಗೆ ಮತ್ತು ಸಹಾಯಧನ ಮಂಜೂರು ಮಾಡುವ ಮಾರ್ಗ ಸೂಚಿಗಳನ್ವಯ ಐದು ವರ್ಷಗಳಿಗೊಮ್ಮೆ ಒಂದು ಸಂಘ ಸಂಸ್ಥೆಗೆ ಅನುದಾನ ನೀಡುವ ನಿರ್ದೇಶನವಿರುತ್ತದೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ.

ಆದರೆ, ಪ್ರಸಕ್ತ 2011–12 ನೇ ಸಾಲಿನ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ : ದಿನಾಂಕ : 09–08–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ರೂ.20,000/– (ಇಪ್ಪತ್ತು ಸಾವಿರ) ಧನಸಹಾಯವನ್ನು ಸಹಾಯಧನ/ಕೊಡುಗೆಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿನ ಅನುದಾನದಲ್ಲಿ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.</u>***

## *421]. ವಿಷಯದ ಸಂಖ್ಯೆ :–ತೆಆಸ್ಥಾಸ/263/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ: ಜಆ(ಕ)ಪಿಎಸ್‌ಆರ್(4)55/2011–12, ದಿನಾಂಕ : 11–08–2011ರಲ್ಲಿ ವಿವರಿಸಿರುವಂತೆ, ಶ್ರೀ ರವಿ ಕುಮಾರ್, ಸಿ–19/2, ಡಿಆರ್‌ಡಿಓ ಟೌನ್ ಶಿಪ್, ಸಿ.ವಿ. ರಾಮನ್ ನಗರ, ಬೆಂಗಳೂರು – 560 093. ರವರು ಮನವಿ ಸಲ್ಲಿಸಿ, ದಿನಾಂಕ 21.08.2011 ರಿಂದ 27.08.2011 ರವರೆಗೆ ಕೆನಡಾ ದೇಶದ Vancouver ನಲ್ಲಿ ನಡೆಯಲಿರುವ BWF $5^{th}$ Senior World Championship Tournaments ನ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾರತದ ದೇಶವನ್ನು ಪ್ರತಿನಿಧಿಸುತ್ತಿದ್ದು, ಈ ಕ್ರೀಡೆಯಲ್ಲಿ ಭಾಗವಹಿಸಲು ಕೆನಡಾಗೆ ಹೋಗಿ ಬರಲು ಸುಮಾರು. ರೂ. 2.90 ಲಕ್ಷ ವೆಚ್ಚವಾಗುವುದಾಗಿ ತಿಳಿಸಿ, ಇದಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವತಿಯಿಂದ ಸಹಾಯಧನ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ. ಹಾಗೂ ಅನುಮತಿ ನೀಡಿದಲ್ಲಿ ಪಂದ್ಯಾವಳಿಯಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚಿಹ್ನೆಯನ್ನು ಧರಿಸಿ ಪಾಲಿಕೆಗೆ ಗೌರವ ತರುವುದಾಗಿ ತಿಳಿಸಿರುತ್ತಾರೆ. ಹಾಗೂ ಸದರಿಯವರು ಡಿಆರ್‌ಡಿಓ ರವರು ಆಯೋಜಿಸಿರುವ ಪುರುಷರ ಸಿಂಗಲ್ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ 18 ಬಾರಿ ಮತ್ತು 15 ಬಾರಿ ಡಬಲ್ ಪಂದ್ಯಾವಳಿಯಲ್ಲಿ ವಿಜೇತರಾಗಿದ್ದು, ಸಿಜಿಇಡಬ್ಲ್ಯೂಸಿಸಿ ರವರು ಆಯೋಜಿಸಿದ್ದ ಡಬಲ್ ಪಂದ್ಯಾವಳಿಯಲ್ಲಿ 4 ಬಾರಿ ಮತ್ತು ಸಿಂಗಲ್ಸ್‌ನಲ್ಲಿ 2 ಬಾರಿ ಹಾಗೂ 2006 ರಲ್ಲಿ ಪಟ್ನಾದಲ್ಲಿ ನಡೆದ All India Civil Service Badminton Tournament (National) ರ ಡಬಲ್ ಪಂದ್ಯಾವಳಿಯಲ್ಲಿಯೂ ವಿಜೇತರಾಗಿರುವುದಾಗಿ ತಿಳಿಸುತ್ತಾ, ಕೆನಡಾದಲ್ಲಿ ಬ್ಯಾಟ್ಮಿಂಟನ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಕನಿಷ್ಠ ರೂ.1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡಬೇಕೆಂದು ಕೋರಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ–ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ

ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ.10,000/– ದಿಂದ ಗರಿಷ್ಠ ರೂ.1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಮುಂದುವರೆದಂತೆ, ಪ್ರಸಕ್ತ 2011–12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ಮೇಲ್ಕಂಡ ಅಂಶಗಳನ್ನು ತಮ್ಮ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***<u>ನಿರ್ಣಯ :</u>*** ***<u>ದಿನಾಂಕ : 11–08–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ರೂ.20,000/– (ಇಪ್ಪತ್ತು ಸಾವಿರ) ಧನಸಹಾಯವನ್ನು ಸಹಾಯಧನ/ಕೊಡುಗೆಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿನ ಅನುದಾನದಲ್ಲಿ ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>43]. ವಿಷಯದ ಸಂಖ್ಯೆ :–ತೆಆಸ್ಥಾಸ/264/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 12–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 90ರ ಅಲಸೂರು ಕೆರೆ ಒಳಾಂಗಣದಲ್ಲಿ ಹೊಸದಾಗಿ ನಿರ್ಮಿಸಿರುವ ಪಾದಚಾರಿ ಮಾರ್ಗಕ್ಕೆ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿಯ ಅಂದಾಜು ಮೊತ್ತ ರೂ. 24.27 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541 ಅಡಿ ಅನುಮೋದನೆ ನೀಡಲು ಪ್ರಸ್ತಾವನೆ ಸಲ್ಲಿಸಲಾಗಿದೆ.

ಸದರಿ ಕಾಮಗಾರಿಯನ್ನು 2011–12ನೇ ಸಾಲಿನಲ್ಲಿ ಮೇಲ್ಕಂಡ ಲೆಕ್ಕಶೀರ್ಷಿಕೆಯಲ್ಲಿ ಅನುದಾನ ಒದಗಿಸಿಕೊಂಡು ಅನುಷ್ಠಾನಗೊಳಿಸಬೇಕಾಗಿರುತ್ತದೆ. ಆದ್ದರಿಂದ 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟ ಅನುದಾನ ಪಿ0541 ಅಡಿ ಮೇಲ್ಕಂಡ ಮೊತ್ತ ರೂ.24.27 ಲಕ್ಷಗಳ ಅನುದಾನವನ್ನು ಅಳವಡಿಸಿಕೊಳ್ಳಲು ಹಾಗೂ ಜಾಬ್ ಸಂಖ್ಯೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :</u>*** ***<u>ದಿನಾಂಕ : 12–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.</u>***

## ***<u>44]. ವಿಷಯದ ಸಂಖ್ಯೆ :–ತೆಆಸ್ಥಾಸ/268/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 12–08–2011ರಲ್ಲಿ ವಿವರಿಸಿರುವಂತೆ, ಶ್ರೀ ಕೆ.ಎಲ್. ತಿಮ್ಮನಂಜಯ್ಯ, ಮಾನ್ಯ ಪಾಲಿಕೆ ಸದಸ್ಯರು ವಾರ್ಡ್ ಸಂಖ್ಯೆ 41 ರವರು ತಮ್ಮ ಪತ್ರದಲ್ಲಿ 15 ಕಾಮಗಾರಿಗಳ ಹೆಸರನ್ನು ನಮೂದಿಸಿ ರೂ.1130.00 ಲಕ್ಷಗಳಿಗೆ ವಿಶೇಷ ಅನುದಾನ ಒದಗಿಸಲು ಕೋರಿರುತ್ತಾರೆ. ಹಾಗೂ ಸದರಿ ಕಾಮಗಾರಿಗಳನ್ನು ತುರ್ತು ಕಾಮಗಾರಿಗಳ ಅನುದಾನದಡಿ ಪರಿಗಣಿಸಲು ಪ್ರಧಾನ ಅಭಿಯಂತರರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿಕೊಂಡು ಅನುಷ್ಠಾನಗೊಳಿಸಬಹುದಾಗಿರುತ್ತದೆ. ಮೇಲ್ಕಂಡ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಸೇರಿಸಿಕೊಂಡು, ಸೂಕ್ತ ಅನುದಾನ ಒದಗಿಸಿಕೊಳ್ಳಲು ಹಾಗೂ 2011–12ನೇ ಸಾಲಿನಲ್ಲಿ ಅಳವಡಿಸಿಕೊಂಡ ಲೆಕ್ಕಶೀರ್ಷಿಕೆಯಡಿ ಜಾಬ್ ಸಂಖ್ಯೆ ನೀಡುವುದರ ಬಗ್ಗೆ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ :</u>*** ***<u>2011–12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ಕಡತವನ್ನು ಹಿಂದಿರುಗಿಸುವುದೆಂದು ಸಮಿತಿಯು ತೀರ್ಮಾನಿಸಿತು.</u>***

## *45]. ವಿಷಯದ ಸಂಖ್ಯೆ :–ತೆಆಸ್ಥಾಸ/269/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 08–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ : 38 ರ ಹೆಚ್.ಎಮ್.ಟಿ. ವ್ಯಾಪ್ತಿಯಲ್ಲಿ ಮೆಟ್ರೋ ರೈಲು ಯೋಜನೆಗಾಗಿ ತೆರವುಗೊಳಿಸಿರುವ ಸಮುದಾಯ ಭವನ, ಆಸ್ಪತ್ರೆ ಮತ್ತು ಅಶ್ವಥಕಟ್ಟೆಗಳನ್ನು ಮರುನಿರ್ಮಿಸಲು, ಪುನರ್ ನಿರ್ಮಾಣದ ವೆಚ್ಚವನ್ನು ಬಿ.ಎಮ್.ಆರ್.ಸಿ.ಎಲ್. ರವರು ಪಾಲಿಕೆಗೆ ಪಾವತಿಸಿರುವುದರಿಂದ ಈ ಒಟ್ಟು ಮೂರು ಕಾಮಗಾರಿಗಳಿಗೆ 2011–12ನೇ ಸಾಲಿನಲ್ಲಿ ಆಯವ್ಯಯದಲ್ಲಿ ರೂ.95.25 ಲಕ್ಷಗಳ ಅನುದಾನವನ್ನು ಮೀಸಲಿಡುವಂತೆ ಸ್ಥಳೀಯ ಬಿ.ಬಿ.ಎಂ.ಪಿ. ಸದಸ್ಯರು ರವರು ಮಾಡಿರುವ ಮನವಿಯ ಮೇರೆಗೆ ವಾರ್ಡ್ ನಂ.38ರ ಹೆಚ್.ಎಮ್.ಟಿ. ಪ್ರದೇಶದಲ್ಲಿ ಒಟ್ಟು ಮೂರು ಕಾಮಗಾರಿಗಳನ್ನು ಕೈಗೊಳ್ಳಲು ರೂ.95.25 ಲಕ್ಷಗಳ ಅಂದಾಜನ್ನು ತಯಾರಿಸಲಾಗಿದ್ದು 2011–12ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಅನುದಾನವನ್ನು ಮೀಸಲಿಟ್ಟು ಜಾಬ್ ಕೋಡ್ ನೀಡಲು ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 08–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಶೀಕಡ 22.75 ರ ಲೆಕ್ಕಶೀಷಿಕೆಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## *46]. ವಿಷಯದ ಸಂಖ್ಯೆ :–ತೆಆಸ್ಥಾಸ/270/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 19–08–2011ರಲ್ಲಿ ವಿವರಿಸಿರುವಂತೆ, Construction of RCC box culvert in V-100 at ch: 2190 mtrs of Valley Jakka rayanakere in ward No.95. ಕಾಮಗಾರಿಯ ಅಂದಾಜು ಪಟ್ಟಿಯನ್ನು ರೂ.77.00 ಲಕ್ಷಗಳಿಗೆ ಮಾನ್ಯ ಆಯುಕ್ತರವರ ಕಂಡಿಕೆ (21), ಕಮಿಷನರ್ ಆರ್ಡರ್ ನಂ. PSR (G)/4234/10-11, Dt : 11-10-2010 ರಲ್ಲಿ ಮಂಜೂರು ನೀಡಿದ್ದು, ಸದರಿ ಕಾಮಗಾರಿ ಸಂಕೇತ 095-11-N-J-N-D-FO-004 ಅನ್ನು ನೀಡಿರುತ್ತಾರೆ. ಹಾಗೂ ಈ ಕಾಮಗಾರಿಯನ್ನು ಟೆಂಡರ್ ಮುಖಾಂತರ ಗುತ್ತಿಗೆದಾರರಾದ ಶ್ರೀ.ಎಸ್. ಸತಿಶ್ ರವರು ಅಂದಾಜು ಪಟ್ಟಿಗಿಂತ ಶೇ.3.12% ರಷ್ಟು ಕಡಿಮೆ ನಮೂದಿಸಿದ್ದು, ಉಳಿದವಗಿಂತ ಕಡಿಮೆ ಬಿಡ್‌ದಾರರಾಗಿರುತ್ತಾರೆ. ಈ ಕಾಮಗಾರಿಯು ದೊಡ್ಡ ಮಳೆನೀರು ಚರಂಡಿಗೆ ಸಂಬಂದಿಸಿದಂತಿದ್ದು, ಎರಡು ಇಕ್ಕೆಲೆಗಳಲ್ಲೂ ಆಸರೆ ಗೋಡೆಯು ಕಲ್ಲು ಕಟ್ಟಡದಿಂದ ಕೂಡಿರುತ್ತದೆ. ಸದರಿ ಕಟ್ಟಡ ತುಂಬಾ ಹಳೆಯದಾಗಿದ್ದು ಶಿಥಿಲವಾಗಿರುತ್ತದೆ. ಆದುದ್ದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಆರ್.ಸಿ.ಸಿ. ತಡೆಗೋಡೆಯನ್ನು ನಿರ್ಮಿಸಲು ಉದ್ದೇಶಿಲಾಗಿರುತ್ತದೆ.

ಸದರಿ ಕಾಮಗಾರಿಗೆ ಈಗಾಗಲೇ ತಾಂತ್ರಿಕ ಮಂಜೂರಾತಿ ಸಂಖ್ಯೆ : CE/SWD/TS/13/2010-11, Dt : 25-11-2010.
ಹಾಗೂ ಆಡಳಿತಾತ್ಮಕ ಮಂಜೂರಾತಿ ಸಂಖ್ಯೆ : CE/SWD/ADMN/13/2010-11, Dt : 25-11-2010.
ಅನುಮೋದನೆ ದೊರೆತಿರುತ್ತದೆ. ಮುಂದುವರೆದಂತೆ ಸದರಿ ಕಾಮಗಾರಿಗೆ ರೂ.77.00 ಲಕ್ಷಗಳಿಗೆ ಸೂಕ್ತ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 19–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು, ಮಳೆ ನೀರಿನ ಚರಂಡಿ ಕಾಮಗಾರಿಗಳ ಲೆಕ್ಕಶೀರ್ಷಿಕೆಯಲ್ಲಿ ವೃಷಭಾವತಿ ಕಣಿವೆಗೆ 2011–12ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## *47]. ವಿಷಯದ ಸಂಖ್ಯೆ :–ತೆಆಸ್ಥಾಸ/271/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್ಆರ್(4)57/2011–12, ದಿನಾಂಕ : 20–08–2011 ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು, ಟಿಪ್ಪಣಿ ಬರೆದು ಶ್ರೀ ಎಸ್. ಮುನಿರಾಜು, ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ರವರು ಸಿಡೇದಹಳ್ಳಿಯಲ್ಲಿ ವಾಸಿಸುತ್ತಿರುವ ಪಲ್ಲವಿಶ್ರೀ ಮತ್ತು ಶ್ರೀಕಂಠ ಶರ್ಮ ಎಸ್. ಎಂ. ರವರು ಅಡ್ವೆಂಚರ್ ಸ್ಪೋರ್ಟ್ಸ್ ಅಸೋಸಿಯೇಷನ್ ಆಫ್

ಇಂಡಿಯಾ ರವರು ಆಯ್ಕೆ ಮಾಡುವ ಹಿಮಾಲಯ ಪರ್ವತಾರೋಹಣಕ್ಕೆ ರಾಷ್ಟ್ರೀಯ ಸಾಹಸ ಕ್ರೀಡಾ ಸ್ಪರ್ಧೆಗೆ ಆಯ್ಕೆಯಾಗಿದ್ದು, ಇದಕ್ಕೆ ತಗಲುವ ವೆಚ್ಚವನ್ನು ಭರಿಸುವ ಸಂಬಂಧ ಧನ ಸಹಾಯ ಮಾಡುವಂತೆ ಕೋರಿ ನೀಡಿರುವ ಪತ್ರವನ್ನು ತಮ್ಮ ಟಿಪ್ಪಣಿಯೊಂದಿಗೆ ಲಗತ್ತಿಸುತ್ತಾ, ಪಲ್ಲವಿಶ್ರೀ ಮತ್ತು ಶ್ರೀಕಂಠ ಶರ್ಮ ಎಸ್. ಎಂ. ರವರು ಹಿಮಾಲಯದಂತಹ ಪರ್ವತ ಶ್ರೇಣಿಯನ್ನು ಏರಲು ಆಯ್ಕೆಯಾಗಿರುವ ಸಂಗತಿ ಸಂತೋಷ ತರುವಂತಹದ್ದಾಗಿದ್ದು, ಪರ್ವತಾರೋಹಣಕ್ಕೆ ಸೂಕ್ತ ಧನ ಸಹಾಯ ಮಾಡಲು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಲು ನಿರ್ದೇಶಿಸಿರುತ್ತಾರೆ.

ಪೂಜ್ಯ ಮಹಾಪೌರರ ಟಿಪ್ಪಣಿಯೊಂದಿಗೆ ಶ್ರೀ ಎಸ್. ಮುನಿರಾಜು, ಶಾಸಕರು ರವರ ಪತ್ರ, ಪಲ್ಲವಿಶ್ರೀ ರವರಿಗೆ ಅಡ್ವೆಂಚರ್ ಸ್ಪೋರ್ಟ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ರವರಿಂದ ಬಂದಿರುವ ಆಯ್ಕೆ ಪತ್ರ ಲಗತ್ತಾಗಿದ್ದು, ರೂ. 24,000/– ಗಳು ಖರ್ಚಾಗುವುದೆಂದು ತಿಳಿಸಿರುತ್ತಾರೆ.

ಮುಂದುವರೆದಂತೆ, ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಸಂಘ–ಸಂಸ್ಥೆಗಳಿಗೆ ಧನ ಸಹಾಯ/ಅನುದಾನ ಮಂಜೂರು ಮಾಡಲು ನಿರ್ದೇಶನಗಳಿರುತ್ತವೆ. ಆದರೆ ವೈಯ್ಯಕ್ತಿಕ ಮಂಜೂರಾತಿಗಳಿಗೆ ಸಂಬಂಧಿಸಿದಂತೆ ಯಾವುದೇ ನಿರ್ದೇಶನವಿರುವುದಿಲ್ಲ. ಅವುಗಳಂತೆ ಸಂಘ ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10,000/– ಗಳ ಅನುದಾನ ಮಂಜೂರು ಮಾಡಲು ನಿರ್ದೇಶನವಿದ್ದು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಹಾಗೂ ಕೀಡಾ ಸಂಸ್ಥೆಗಳಿಗೆ ಗರಿಷ್ಠ ಅನುದಾನದ ಮಿತಿ ಅನ್ವಯಿಸುವುದಿಲ್ಲ ಎಂಬ ನಿರ್ದೇಶನ ಸಹ ಇರುತ್ತದೆ. ಆದರೆ, ವಿವೇಚನಾತ್ಮಕ ಅಧಿಕಾರದಿಂದ ಕ್ರೀಡಾಪಟುಗಳಿಗೆ ಹಲವು ಪ್ರಕರಣಗಳಲ್ಲಿ ಕನಿಷ್ಠ ರೂ.10,000/– ದಿಂದ ಗರಿಷ್ಠ ರೂ.1.00 ಲಕ್ಷಗಳ ವರೆಗೆ ಧನ ಸಹಾಯವನ್ನು ಮಂಜೂರು ಮಾಡಿರುವ ಉದಾಹರಣೆಗಳಿರುತ್ತವೆ.

ಪ್ರಸಕ್ತ 2011–12ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಅನುಮೋದನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 20–08–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಲೆಕ್ಕಶೀರ್ಷಿಕೆ : ಸಂಸ್ಕೃತಿ ಮತ್ತು ಕ್ರೀಡೆಗಳು – ಕೊಡುಗೆಗಳು ಮತ್ತು ಸಹಾಯಧನದಲ್ಲಿ ಒದಗಿಸಿರುವ ಅನುದಾನದಲ್ಲಿ ರೂ.10,000/– (ಹತ್ತು ಸಾವಿರ)ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *48]. ವಿಷಯದ ಸಂಖ್ಯೆ :–ತೆಆಸ್ಥಾಸ/272/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಜಆ(ಕ)ಪಿಎಸ್‌ಆರ್(4)54/2011–12ದಿನಾಂಕ : 07–06–2011ರಲ್ಲಿ ವಿವರಿಸಿರುವಂತೆ, ಶ್ರೀ ಎಸ್. ಸಿ. ಅಶೋಕ್, ಸಂಸ್ಥಾಪಕ ಅಧ್ಯಕ್ಷರು, ಸ್ನೇಹ ಗಂಗ ಕ್ರಿಯೇಷನ್ಸ್ (ರಿ) ನಂ. 154, 3ನೇ ಮುಖ್ಯ ರಸ್ತೆ, ಆರ್.ಆರ್.ಲೇ ಔಟ್, ನಾಗದೇವನಹಳ್ಳಿ, ಜ್ಞಾನಭಾರತಿ ಅಂಚೆ, ಬೆಂಗಳೂರು–560 056. ಸಂಸ್ಥೆಯವರು ಮನವಿ ಮತ್ತು ದಾಖಲೆಗಳನ್ನು ಸಲ್ಲಿಸಿ, ತಮ್ಮ ಸಂಸ್ಥೆಯು ಕಳೆದ 13 ವರ್ಷಗಳಿಂದ ನಿರಂತರವಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಬಂದಿದ್ದು, ಇದರಲ್ಲಿ ಮಹಿಳೆಯರಿಗಾಗಿ ಅನೇಕ ವಿದಧ ತರಬೇತಿಗಳಾದ ಹೊಲಿಗೆ ತರಬೇತಿ, ನಿಟ್ಟಿಂಗಾಗಿ ತರಬೇತಿ, ಎಂಬ್ರಾಯಿಡರಿ ತರಬೇತಿ, ಮೇಣದ ಬತ್ತಿ ತಯಾರಿಕೆಯ ತರಬೇತಿ, ಸೌಂದರ್ಯವರ್ಧಕರ ತರಬೇತಿ, ಪ್ಯಾಷನ್ ಡಿಸೈನ್, ಗಣಕ ಯಂತ್ರದ (ಕಂಪ್ಯೂಟರ್) ತರಬೇತಿ ಹಾಗೂ ಇನ್ನೂ ಮುಂತಾದ ಸ್ವಯಂ ಉದ್ಯೋಗ ಕಲ್ಪಿಸುವ ತರಬೇತಿಗಳನ್ನು ಉಚಿತವಾಗಿ ನಡೆಸಿಕೊಂಡು ಬಂದಿದ್ದು, ಇದಲ್ಲದೆ ಸಂಸ್ಥೆಯು ಸ್ನೇಹಗಂಗ ಸಂಗೀತ ಶಾಲೆಯನ್ನು ಪ್ರಾರಂಭಿಸಿ ಕಳೆದ 10 ವರ್ಷಗಳಿಂದ ನಡೆಸಿಕೊಂಡು ಬಂದಿದ್ದು, ಸಂಗೀತ ಶಾಲೆಯಲ್ಲಿ ಶಾಸ್ತ್ರೀಯ ಸಂಗೀತ ಭರತನಾಟ್ಯ ಹಾಗೂ ವಾದ್ಯಗಳಾದ ವೀಣೆ, ಪಿಟೀಲು, ತಬಲ, ಹಾರ್ಮೋನಿಯಂ, ಕೀಬೋರ್ಡ್, ಗಿಟಾರ್ ಮತ್ತು ಪಾಶ್ಚಿಮಾತ್ಯ ನೃತ್ಯ ಇನ್ನೂ ಮುಂತಾದ ವಿಭಾಗಗಳಲ್ಲಿ ತರಬೇತಿಯನ್ನು ನೀಡುತ್ತಿದ್ದು, ಈ ಎಲ್ಲಾ ವಿಭಾಗಗಳಲ್ಲಿ ಸುಮಾರು 160 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದು, ಹನ್ನೊಂದು ಜನ ಶಿಕ್ಷಕರುಗಳು ತರಬೇತಿಯನ್ನು ನೀಡುತ್ತಿದ್ದಾರೆ. ಈ ಶಿಕ್ಷಕರುಗಳಿಗೆ ಆಡಳಿತ ಮಂಡಳಿಯೇ ಸಂಭಾವನೆಯನ್ನು ಭರಿಸುತ್ತಿರುವುದಾಗಿ ತಿಳಿಸಿರುತ್ತಾರೆ ಹಾಗೂ ತಮ್ಮ ಸಂಘದ ವತಿಯಿಂದ ಸ್ನೇಹ ಗಂಗ ಕ್ರಿಯೇಷನ್ಸ್ (ರಿ) ಆವರಣದಲ್ಲಿ ಎರಡು ದಿನಗಳ **"ದಲಿತ ಕಲಾ ಮಹೋತ್ಸವ"** ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಸದರಿ ಕಾರ್ಯಕ್ರಮಕ್ಕೆ ತಗಲುವ ಅಂದಾಜು ವೆಚ್ಚ ರೂ. 6,34,500/– (ಆರು ಲಕ್ಷದ ಮೂವತ್ತನಾಲ್ಕು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಗಳಾಗಿದ್ದು, ತಮ್ಮ ಸಂಸ್ಥೆಯು ಒಂದು ಲಕ್ಷವನ್ನು ಮಾತ್ರ ಭರಿಸುತ್ತಿದ್ದು,

ಉಳಿದ ಮೊತ್ತವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹಣಕಾಸಿನ ವಿಭಾಗದ ಅಧಿಕಾರಿಗಳ ವತಿಯಿಂದ ಮಂಜೂರು ಮಾಡಿಸಿಕೊಟ್ಟು ಈ ಕಾರ್ಯಕ್ರಮದ ಯಶಸ್ಸಿಗೆ ಪ್ರೋತ್ಸಾಹಿಸಬೇಕಾಗಿ ಕೋರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ-ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ ಗರಿಷ್ಠ ರೂ. 10 ಸಾವಿರ, **ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ರೂ. 5 ಸಾವಿರಗಳಿಂದ ರೂ. 10 ಸಾವಿರ,** ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ ರೂ. 10 ಸಾವಿರಗಳಿಂದ ರೂ. 25 ಸಾವಿರ, ಅಧ್ಯಯನ ಪೀಠಗಳಿಗೆ ರೂ. 25 ಸಾವಿರಗಳಿಂದ 50 ಸಾವಿರ ರೂಪಾಯಿಗಳ ಅನುದಾನಕ್ಕೆ ಸೀಮಿತಗೊಳಿಸುವ ನಿರ್ದೇಶನವಿರುತ್ತದೆ.

ಮುಂದುವರೆದಂತೆ, ಪ್ರಸಕ್ತ 2011-12ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಮಂಡನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

*ನಿರ್ಣಯ :* **ದಿನಾಂಕ:19-08-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ರೂ.30,000/- (ಮೂವತ್ತು ಸಾವಿರಗಳು ಮಾತ್ರ) ಸಹಾಯಧನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.**

## *491. ವಿಷಯದ ಸಂಖ್ಯೆ :-ತೆಆಸ್ಥಾಸ/273/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 20-08-2011ರಲ್ಲಿ ವಿವರಿಸಿರುವಂತೆ, ಯಲಹಂಕ ವಲಯದ, ಬ್ಯಾಟರಾಯನಪುರ ಉಪವಿಭಾಗದ ವಾಡ್ ನಂ.06ರ ವ್ಯಾಪ್ತಿಯಲ್ಲಿ ಬರುವ ಹೆಗಡಿ ನಗರ, ಶಾಬರಿ ನಗರ ರಸ್ತೆಯಲ್ಲಿ ಚರಂಡಿ ಮತ್ತು ಮೋರಿಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಅನುದಾನ ನೀಡಲು ಜಂಟಿ ಆಯುಕ್ತರು (ಯಲಹಂಕ ವಲಯ) ರವರು ರೂ.60.60 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು 2011-12ನೇ ಸಾಲಿನಲ್ಲಿ ಅನುಮೋದನೆಗೆ ಸಲ್ಲಿಸಿರುತ್ತಾರೆ.

| ಕ್ರ.ಸಂ | ಕಾಮಗಾರಿಯ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| **01** | Reconstruction of Culverts and Solid Block Drains at Hegdenagara, shabarinagra Road in Ward No-06, Bytarayanapura Sub division | 60.60 |
| | **Total** | **60.60** |

ಮೇಲ್ಕಂಡ ಕ್ರಿಯಾ ಯೋಜನೆ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : 2011-12ನೇ ಸಾಲಿನ ಆಯವ್ಯಯವು ಈಗಾಗಲೇ ಮಂಡನೆಯಾಗಿರುವುದರಿಂದ ವಾರ್ಡುಗಳಿಗೆ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.*

## *501. ವಿಷಯದ ಸಂಖ್ಯೆ :-ತೆಆಸ್ಥಾಸ/274/2011-12*

ಆಯುಕ್ತರ ಟಿಪ್ಪಣಿ ದಿನಾಂಕ : 23-08-2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ : 160 ರಾಜರಾಜೇಶ್ವರಿ ನಗರ ವ್ಯಾಪ್ತಿಯಲ್ಲಿ 15-08-2011ರಂದು ಸುರಿದ ಭಾರಿ ಮಳೆಯಿಂದಾಗಿ ಉಂಟಾದ ಹಾನಿಯನ್ನು ಸರಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ 23 ಅಭಿವೃದ್ಧಿ ಕಾಮಗಾರಿಗಳ್ಳು ಅತ್ಯಗತ್ಯವಾಗಿ ಕೈಗೊಳ್ಳುವ ಅವಶ್ಯಕತೆ ಇದ್ದು, ಸದರಿ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಕಾಮಗಾರಿಗಳ ಅಂದಾಜು ಮೊತ್ತ ರೂ. 435.06 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ "ತುರ್ತು ಕಾಮಗಾರಿ ಅನುದಾನ ಪಿ0541" ಅಡಿಯಲ್ಲಿ ಅನುದಾನ

ಒದಗಿಸಲು ಹಾಗೂ ಜಾಬ್ ಸಂಖ್ಯೆಗಳನ್ನು ಹಂಚಿಕೆ ಮಾಡುವ ಸಂಬಂಧ ಅಗತ್ಯ ಅನುಮೋದನೆ ಕೋರಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 23–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ತುರ್ತು ಕಾಮಗಾರಿಗಳಿಗಾಗಿ ಮೀಸಲಿಟ್ಟಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## ***51]. ವಿಷಯದ ಸಂಖ್ಯೆ :–ತೆಆಸ್ಥಾಸ/275/2011–12***

ಆಯುಕ್ತರ ಟಿಪ್ಪಣಿ ದಿನಾಂಕ : 20–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ ದೈನಂದಿನ ಕೆಲಸ ಕಾರ್ಯಗಳಿಗೆ ವಾಹನಗಳ ಅವಶ್ಯಕತೆ ಇದ್ದು, ಪಾಲಿಕೆಯಲ್ಲಿ ಹೆಚ್ಚಿನ ಸಂಖ್ಯೆಯ ವಾಹನಗಳು ಲಭ್ಯವಿಲ್ಲದ ಪ್ರಯುಕ್ತ, ಬೊಮ್ಮನಹಳ್ಳಿ/ದಾಸರಹಳ್ಳಿ/ಮಹದೇವಪುರ/ ಆರ್.ಆರ್.ನಗರ/ಯಲಹಂಕ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ಯಾಕೇಜ್–2 ಟೆಂಡರ್‌ನಲ್ಲಿ ಪ್ರತಿ ತಿಂಗಳಿಗೆ 2500 ಕಿ.ಮೀ ಅಥವಾ 315 ಗಂಟೆಗಳ ಅವಧಿಗೆ ವಾಣಿಜ್ಯ ಬಳಕೆಯ ಲಘು ವಾಹನಗಳನ್ನು ಒದಗಿಸಲು ಜಿಲ್ಲಾ ಟೆಂಡರ್ ಬುಲೆಟಿನ್ ಅಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಂದ ಅನುಮತಿ ಪಡೆದು ಕಾರ್ಯಪಾಲಕ ಅಭಿಯಂತರರು (ಉಗ್ರಾಣ, ಕಾರ್ಯಗಾರ & ಸಾರಿಗೆ) ರವರು ಇ–ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿದಾಗ ಸಿಂಗಲ್ ಟೆಂಡರ್ ಆಗಿದ್ದರಿಂದ ಮರುಟೆಂಡರ್ ಕರೆದಿರುತ್ತಾರೆ.

ಸದರಿ ಟೆಂಡರ್‌ನಲ್ಲಿ ಮೆ॥ ಚೇತನ್ ಟ್ರಾವಲ್ಸ್ ಮತು ಮೆ॥ ಮಾರ್ಷಲ್ ಟೂರ್ಸ್ ಅಂಡ್ ಟ್ರಾವಲ್ಸ್ ರವರು ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿರುತ್ತಾರೆ ಮತ್ತು ಆರ್ಥಿಕ ಬಿಡ್‌ನ್ನು ತೆರೆದಾಗ ಮೆ॥ ಚೇತನ್ ಟ್ರಾವಲ್ಸ್ ರವರು ಕನಿಷ್ಠ ಬಿಡ್‌ದಾರರಾಗಿ ಹೊರಹೊಮ್ಮಿರುತ್ತಾರೆ.

ಕನಿಷ್ಠ ಬಿಡ್‌ದಾರರಾದ ಮೆ॥ ಚೇತನ್ ಟ್ರಾವಲ್ಸ್ ರವರು ಸರಬರಾಜು ಮಾಡುವ ಒಟ್ಟು 121 ಗುತ್ತಿಗೆ ವಾಹನಗಳಿಗೆ ಮಾಸಿಕ ವೆಚ್ಚ ರೂ. 23,59,300/–ಗಳು ಮತ್ತು ವಾರ್ಷಿಕ ವೆಚ್ಚ ರೂ. 2,83,11,600/–ಗಳನ್ನು ನಮೂದಿಸಿ ಕನಿಷ್ಠ ಟೆಂಡರ್‌ದಾರರಾಗಿದ್ದು, ಟೆಂಡರ್ ಆರ್ಥಿಕ ಮೌಲ್ಯಮಾಪನ ಸಮಿತಿಯ ಅನುಮೋದನೆ ಪಡೆಯಲಾಗಿರುತ್ತದೆ.

ಮುಂದುವರೆದಂತೆ, ಕಾರ್ಯಪಾಲಕ ಅಭಿಯಂತರರು ಮತ್ತು ಮೇಲ್ಪಟ್ಟ ಇತರೆ ಅಧಿಕಾರಿಗಳು 78 ಗುತ್ತಿಗೆ ವಾಹನಗಳನ್ನು ಈಗಾಗಲೇ ಉಪಯೋಗಿಸುತ್ತಿರುತ್ತಾರೆ. 35 ಅಧಿಕಾರಿಗಳಿಗೆ ಮಾಸಿಕ ರೂ. 12,000/–ಗಳಂತೆ ವಾಹನ ಭತ್ಯೆ ನೀಡುತ್ತಿದ್ದು ಸದರಿ ಅಧಿಕಾರಿಗಳಿಗೆ ವಾಹನ ಭತ್ಯೆ ಹಿಂಪಡೆದು ಗುತ್ತಿಗೆ ವಾಹನವನ್ನು ನೀಡಬೇಕಾಗಿರುತ್ತದೆ. ಯೋಜನಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರುಗಳಿಗೆ ಪ್ರತಿ ವಲಯಕ್ಕೆ ಒಂದು ವಾಹನದಂತೆ 8 ವಾಹನಗಳು, ವಲಯ ಉಪ ಆರೋಗ್ಯಾಧಿಕಾರಿಗಳಿಗೆ (DHO) 5 ವಾಹನಗಳು ಹಾಗೂ ವಲಯ ಉಪ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು / ಸಹಾಯಕ ಕಂದಾಯ ಅಧಿಕಾರಿಗಳಿಗೆ ಪ್ರತಿ ವಲಯಕ್ಕೆ ಒಂದು ವಾಹನದಂತೆ 9 ವಾಹನಗಳನ್ನು ನೀಡಲು ಉದ್ದೇಶಿಸಲಾಗಿದ್ದು ಒಟ್ಟು 135 ಗುತ್ತಿಗೆ ವಾಹನಗಳಲ್ಲಿ ಪ್ಯಾಕೇಜ್–1 ಟೆಂಡರ್‌ನಲ್ಲಿ 106 ವಾಹನಗಳು ಮತ್ತು ಪ್ಯಾಕೇಜ್–2 ಟೆಂಡರ್‌ನಲ್ಲಿ 29 ವಾಹನಗಳ ಅವಶ್ಯಕತೆಯು ಇರುತ್ತದೆ.

ಈ ಹಿನ್ನೆಲೆಯಲ್ಲಿ ಪ್ಯಾಕೇಜ್–2 ಟೆಂಡರ್ ಅಡಿಯಲ್ಲಿ 29 ಗುತ್ತಿಗೆ ವಾಹನಗಳನ್ನು ಪಡೆಯಲು ಉದ್ದೇಶಿಸಲಾಗಿದೆ. ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಅರ್ಹ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನು ಮುಂದೆ ಕಲ್ಪಿಸಿದಲ್ಲಿ ಸದರಿ ಏಜೆನ್ಸಿದಾರರಿಂದ ವಾಹನಗಳನ್ನು ಪಡೆಯಬಹುದಾಗಿರುತ್ತದೆ.
ಆದುದರಿಂದ, ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿ ಯಶಸ್ವಿಯಾದ ಮೆ॥ ಚೇತನ್ ಟ್ರಾವಲ್ಸ್ ರವರಿಗೆ ಗುತ್ತಿಗೆ ಕರಾರಿಗೆ ಅನ್ವಯವಾಗುವಂತೆ ನಿಗಧಿಪಡಿಸಿದ ಭದ್ರತಾ ಠೇವಣಿಯನ್ನು ಆಯುಕ್ತರು, ಬೃ.ಬೆಂ.ಮ.ಪಾಲಿಕೆ ಹೆಸರಿನಲ್ಲಿ ಡಿಮ್ಯಾಂಡ್ ಡ್ರಾಫ್ಟ್ ಪಡೆದು ಗುತ್ತಿಗೆ ವಾಹನಗಳನ್ನು ಒದಗಿಸಲು ಕರಾರು ಮಾಡಿಕೊಳ್ಳಬೇಕಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ಪರಿಗಣಿಸಿ, ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನ ಪ್ಯಾಕೇಜ್–2 ಅಡಿಯಲ್ಲಿ ಪಡೆಯಲು ಉದ್ದೇಶಿಸಲಾಗಿರುವ 29 ಗುತ್ತಿಗೆ ವಾಹನಗಳ ವಾರ್ಷಿಕ ನಿರ್ವಹಣ ವೆಚ್ಚವಾದ ರೂ. 68,86,800/–ಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅವಗಾಹನೆಗಾಗಿ ತರುತ್ತಾ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 20–08–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಪ್ಯಾಕೇಜ್–2ರ ಅಡಿಯಲ್ಲಿ ಪ್ರಸ್ತಾಪಿಸಿರುವ 29 ವಾಹನಗಳನ್ನು ಮಾತ್ರ ಗುತ್ತಿಗೆಗೆ ಪಡೆಯಲು ಹಾಗೂ ಇತರೇ ಅಧಿಕಾರಿಗಳಿಗೆ ಗುತ್ತಿಗೆ ವಾಹನ ಸೌಲಭ್ಯವನ್ನು ಇನ್ನೂ ಮುಂದೆ ಕಲ್ಪಿಸಿದಲ್ಲಿ ಸಮಿತಿಯ ಮುಂದೆ ಪ್ರಸ್ತಾವನೆ ಮಂಡಿಸಿ ಅನುಮೋದನೆ ಪಡೆಯುವುದೆಂದು ಸಮಿತಿಯು ತೀರ್ಮಾನಿಸಿತು.***

## *521. ವಿಷಯದ ಸಂಖ್ಯೆ :–ತೆಆಸ್ಥಾಸ/276/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 24–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕೆಳಗೆ ನಮೂದಿಸಿರುವ ಉಪಯೋಗಿಸಿದ ಹಾಗೂ ಹಳೆಯ ಅನುಪಯುಕ್ತ ಒಟ್ಟು 74 ವಾಹನಗಳಿದ್ದು, ಸದರಿ ವಾಹನಗಳನ್ನು ವಿಲೇವಾರಿ ಮಾಡಿದ್ದಲ್ಲಿ, ಪಾಲಿಕೆಗೆ ಆರ್ಥಿಕವಾಗಿ ಲಾಭದಾಯಕವಾಗಿರುವುದರಿಂದ, ಸದರಿ ವಾಹನಗಳನ್ನು ತಪಾಸಣೆ ಮಾಡಿ ಅನುಪಯುಕ್ತಗೊಳಿಸುವ ಕುರಿತು ವರದಿಯನ್ನು ಮುಖ್ಯ ಅಭಿಯಂತರರು, ಹೈಡ್ರಾಲಜಿ ಮತ್ತು ಕೇಂದ್ರ ಯಾಂತ್ರಿಕ ಸಂಸ್ಥೆ, ಬೆಂಗಳೂರು ರವರ ಮೂಲಕ ಪಡೆಯಲಾಗಿದೆ ಎಂದು ಕಾರ್ಯಪಾಲಕ ಅಭಿಯಂತರು (ಸಾರಿಗೆ) ರವರು ವರದಿ ನೀಡಿರುತ್ತಾರೆ.

**ವಾಹನಗಳ ವಿವರ**

| Sl. No | Vehicle Reg No | Make | Model |
|---|---|---|---|
| 1. | KA 01 Z 1998 | Contessa Classic | 1998 |
| 2. | MYB 9538 | Ambassador | 1959 |
| 3. | CAT 379 | Ambassador | 1984 |
| 4. | CAH 70 | Ambassador | 1984 |
| 5. | CKS 2790 | Ambassador | 1989 |
| 6. | KA 01 N 4216 | Ambassador | 1998 |
| 7. | KA 01 G 1834 | Ambassador | 1995 |
| 8. | CKR 2971 | Ambassador | 1988 |
| 9. | KA 01 M 4097 | Ambassador | 1991 |
| 10. | CAG 181 | Ambassador (HM Nova) | 1988 |
| 11. | KA 01 G 1781 | Ambassador | 1995 |
| 12. | MER 359 | Ambassador | 1978 |
| 13. | CKS 3429 | Ambassador | 1989 |
| 14. | KA 02 N 4635 | Ambassador (ISUZU) | 1996 |
| 15. | CKP 2525 | Ambassador (HM Nova) | 1988 |
| 16. | KA 01 M 2510 | Maruthi Van | 1991 |
| 17. | KA 01 M 3424 | Maruthi Omni Van | 1991 |
| 18. | CKS 5475 | Mahindra & Mahindra Jeep | 1989 |
| 19. | CKS 3836 | Mahindra & Mahindra Jeep | 1988 |
| 20. | CAT 380 | Mahindra & Mahindra Jeep | 1984 |
| 21. | CKS 6873 | Jeep | 1989 |
| 22. | CKS 6697 | Mahindra & Mahindra Jeep | 1989 |

| | | | |
|---|---|---|---|
| 23. | CKQ 5804 | Mahindra & Mahindra Jeep | 1987 |
| 24. | CKS 6113 | Mahindra & Mahindra Jeep | 1989 |
| 25. | CKR 3839 | Mahindra & Mahindra Jeep | 1988 |
| 26. | CKR 3835 | Mahindra & Mahindra Jeep | 1988 |
| 27. | CKS 6694 | Mahindra & Mahindra Jeep | 1989 |
| 28. | CKQ 4504 | Mahindra & Mahindra Jeep | 1989 |
| 29. | CKS 6871 | Mahindra & Mahindra Jeep | 1989 |
| 30. | CKS 6695 | Mahindra & Mahindra Jeep | 1989 |
| 31. | KA 01 677 | Swaraj mazda | 1990 |
| 32. | CKP 6830 | Swaraj mazda | 1986 |
| 33. | CKR 7295 | Swaraj mazda | 1988 |
| 34. | KA 01 9061 | TATA | 1996 |
| 35. | KA 01 M 4431 | M & M Hearse Van | 1991 |
| 36. | KA 01 N 1140 | M & M Hearse Van | 1994 |
| 37. | KA 01 A 4310 | Bajaj Vikram Auto | 2001 |
| 38. | KA 01 A 3272 | Tata 407 | 2000 |
| 39. | KA 01 A 3273 | Tata 407 | 2000 |
| 40. | KA 01 893 | Metodor Van | 1990 |
| 41. | KA 01 895 | Metodor Van | 1990 |
| 42. | KA 01 3270 | Tata 407 (Light goods vehicle) | 2000 |
| 43. | CAS 764 | Tata Lorry | 1985 |
| 44. | CAS 56 | Tata Lorry | 1984 |
| 45. | KA 01 A 1614 | Tata Lorry | 1994 |
| 46. | CAS 1234 | Tata 1210 SE Tipper | 1984 |
| 47. | CAS 317 | Ashok Leyland truck | 1984 |
| 48. | CAS 276 | Ashok Leyland lorry-HGV | 1984 |
| 49. | CAS 318 | Ashok Leyland tipper | 1984 |
| 50. | KA 01 5171 | Mahindra Allwyn Nissan Dumper placer | 1994 |
| 51. | MEA 7341 | Mahindra & Mahindra Jeep | 1975 |
| 52. | KA 01 580 | Swaraj Mazda (LGV) | 1990 |
| 53. | CAG 780 | M & M Ambulance | 1983 |
| 54. | KA 01 C 4309 | Bajaj Vikram Auto | 2001 |
| 55. | KA 01 894 | Metodor Van | 1990 |
| 56. | KA 01 A 6515 | Tata 407 | 2002 |
| 57. | KA 01 A 3271 | Tata 407 | 2000 |
| 58. | CAS 141 | Tata 1510 SE Tipper | 1984 |
| 59. | KA 01 A 1236 | Tata Tipper | 1997 |
| 60. | MED 1874 | Bed Ford Tipper | 1977 |
| 61. | MED 1873 | Bed Ford Tipper | 1977 |
| 62. | KA 01 5170 | Mahindra Allwyn Nissan Dumper placer | 1994 |
| 63. | KA 01 G 5176 | Mahindra Allwyn Nissan Dumper placer | 1994 |
| 64. | MYB 9544 | Dodge Van | 1959 |
| 65. | CKS 7203 | Swaraj Mazda Ambulance | 1989 |
| 66. | CKR 7294 | Swaraj Mazda Ambulance | 1988 |

| | | | |
|---|---|---|---|
| 67. | CAT 8322 | M & M Hearse Van | 1985 |
| 68. | CAG 868 | M & M Hearse Van | 1984 |
| 69. | CAT 8323 | M & M Hearse Van | 1984 |
| 70. | CAT 5183 | M & M Hearse Van | 1985 |
| 71. | CAT 5195 | M & M Hearse Van | 1984 |
| 72. | CAT 4893 | M & M Hearse Van | 1985 |
| 73. | CAS 709 | Ashok Leyland truck | 1985 |
| 74. | KA 01 A 1271 | Tata 1510 SE Tipper | 1997 |

ಮುಂದುವರೆದಂತೆ, ಸದರಿ ಅನುಪಯುಕ್ತ ವಾಹನಗಳನ್ನು ಇ–ಟೆಂಡರ್ ಯಾ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ ಪಾಲಿಕೆಯ 7 ಅಧಿಕಾರಿಗಳನ್ನು ಒಳಗೊಂಡ ಸಮಿತಿಯನ್ನು ರಚನೆ ಮಾಡಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಪಾಲಿಕೆಯಲ್ಲಿರುವ ಉಪಯೋಗಿಸಿದ ಹಾಗೂ ಹಳೆಯ ಅನುಪಯುಕ್ತ 74 ವಾಹನಗಳನ್ನು ಇ–ಟೆಂಡರ್ ಯಾ ಹರಾಜು ಮೂಲಕ ವಿಲೇವಾರಿ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 24–08–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.***

## ***53]. ವಿಷಯದ ಸಂಖ್ಯೆ :–ತೆಆಸ್ಥಾಸ/277/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಬಿ12(5ಹೆಚ್)ಪಿಆರ್/352/2011–12, ದಿನಾಂಕ : 08–08–2011ರಲ್ಲಿ ವಿವರಿಸಿರುವಂತೆ, ಬೆಂಗಳೂರು ಮಹಾನಗರ ಪಾಲಿಕೆಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ ಪರಿವರ್ತನೆಗೊಂಡ ನಂತರ ಇದರ ಕಾರ್ಯವ್ಯಾಪ್ತಿಯು ವಿಸ್ತಾರವಾಗಿರುತ್ತದೆ. ಸುಮಾರು 225 ಚ.ಕಿಮೀ ನಿಂದ 800 ಚ.ಕಿಮೀ.ಗೆ ಭೌಗೋಳಿಕ ವಿಸ್ತಾರಗೊಂಡು, ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಯವ್ಯಾಪ್ತಿಯೂ ಸಹ ವಿಸ್ತಾರಗೊಂಡಿದ್ದು, ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಲು ಹಾಗೂ ತೊಂದರೆಗೆ ಸಿಲುಕಿಕೊಂಡ ಕೋತಿ, ಹಾವು, ನಾಯಿ ಹಾಗೂ ಇನ್ನಿತರೆ ಪ್ರಾಣಿ ಪಕ್ಷಿಗಳನ್ನು ಸಂರಕ್ಷಿಸಿ ಮತ್ತು ಮನುಷ್ಯರಿಂದಾಗಲಿ ಅಥವಾ ಪ್ರಾಣಿ ಪಕ್ಷಿಗಳಿಂದಾಗಲಿ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳುವಂತಹ ಕಾರ್ಯನಿರ್ವಹಿಸಲು ಪರಿಸರ ಸಲಹೆಗಾರರ ತಂಡವಾಗಿ ಶ್ರೀ ಶರತ್ ಬಾಬು, ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡವನ್ನು ಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಆಗಸ್ಟ್ 2007ರಿಂದ ಮಾರ್ಚ್ 2011ರವರೆಗೆ ಪಾಲಿಕೆಯ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ.

ಸದರಿ ವನ್ಯಜೀವಿ ಸಲಹೆಗಾರರು ಏಪ್ರಿಲ್ 2011 ರಿಂದ ಮಾರ್ಚ್ 2012 ರವರೆಗೆ ಗುತ್ತಿಗೆ ಆಧಾರದ ಮೇಲೆ ಮುಂದುವರೆಸಲು ಹಾಗೂ ಮಾಸಿಕ ವೇತನ ಪರಿಷ್ಕರಣೆ ಮಾಡಲು ಕೋರಿರುತ್ತಾರೆ. ಈಗಾಗಲೇ 2009–10ನೇ ಹಾಗೂ 2010–11ನೇ ಸಾಲಿನಲ್ಲಿ ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ಪಾಲಿಕೆ ವತಿಯಿಂದ ನಿಶ್ಚಿತ ಮಾಸಿಕ ಸಂಭಾವನೆಯನ್ನು (ವೈದ್ಯಕೀಯ ವೆಚ್ಚ ಹಾಗೂ ಪೆಟ್ರೋಲ್ ವೆಚ್ಚವನ್ನೊಳಗೊಂಡಂತೆ) ಈ ಕೆಳಕಂಡಂತೆ ನೀಡಲಾಗಿರುತ್ತದೆ. ಸದರಿ ವನ್ಯ ಜೀವಿ ಸಂರಕ್ಷಣಾ ಸಲಹೆಗಾರರು ಏಪ್ರಿಲ್ 2011 ರಿಂದ ಮಾರ್ಚ್ 2012ರವರೆಗೆ ಹೊರಗುತ್ತಿಗೆ ಅವಧಿಯನ್ನು ಮುಂದುವರೆಸಲು ಹಾಗೂ ಈ ಹಿಂದೆ ನೀಡಲಾಗುತ್ತಿದ್ದ ಮಾಸಿಕ ಸಂಭಾವನೆಯಲ್ಲಿ ಪರಿಷ್ಕರಣೆ ಮಾಡಬೇಕೆಂದು ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ ವಲಯ) ರವರು ಸಹ ವನ್ಯಜೀವಿ ಸಂರಕ್ಷಣಾ ಸಲಹೆಗಾರರನ್ನು ಮುಂದುವರೆಸಲು ಹಾಗೂ ಮಾಸಿಕ ಸಂಭಾವನೆಗಳ ಬಗ್ಗೆ ವರದಿ ಸಲ್ಲಿಸಿ ಕೋರಿರುತ್ತಾರೆ.

| ಕ್ರ ಸಂ | ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದ ವಿವರ | 2009–10ನೇ ಸಾಲಿನಲ್ಲಿ (ರೂ.ಗಳಲ್ಲಿ) | 2010–11ನೇ ಸಾಲಿನಲ್ಲಿ (ರೂ.ಗಳಲ್ಲಿ) | 2011–12ನೇ ಸಾಲಿಗೆ ಪರಿಷ್ಕರಣೆಗೊಳಿಸುವಂತೆ ಕೋರಿರುವ ನಿಶ್ಚಿತ ಮಾಸಿಕ ಸಂಭಾವನೆ |
|---|---|---|---|---|
| 1 | ಶ್ರೀ ಶರತ್ ಬಾಬು (ಪರಿಸರ ಸಲಹೆಗಾರರು) | 14000/– | 13000/– | 16000/– |

| | | | | |
|---|---|---|---|---|
| 2 | ಶ್ರೀ ಮಂಜುನಾಥ್ (ಪರಿಸರ ಸಹಾಯಕರು) | 5000/- | 5000/- +1000/- | 9000/- |
| 3 | ಶ್ರೀ ಕುಮಾರ್ (ಪರಿಸರ ಸಹಾಯಕರು) | 5000/- | 5000/- +1000/- | 9000/- |
| 4 | ಶ್ರೀ ಮೋಹನ್, ಹಿರಿಯ ಪರಿಸರ ಸಹಾಯಕರು | 8000/- | 8000/- +1000/- | 8000/- + 1000/- |
| 5 | ಮಹೇಶ್‌ಕುಮಾರ್ ಬಿ.ಆರ್ ಹಿರಿಯ ಪರಿಸರ ಸಹಾಯಕರು | 8000/- | 8000/- + 1000/- | 8000/- + 1000/- |
| 6 | ಶ್ರೀ ಶಿವರಾಜ್, ಹಿರಿಯ ಪರಿಸರ ಸಹಾಯಕರು | 8000/- | 8000/- + 1000/- | 8000/- + 1000/- |

ಏಪ್ರಿಲ್ 2011 ರಿಂದ ಮಾರ್ಚ್-2012 ರವರೆಗೆ ವನ್ಯಜೀವಿ ಸಲಹೆಗಾರರ ತಂಡವನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಶ್ಚಿತ ಮಾಸಿಕ ಸಂಭಾವನೆಯಲ್ಲಿ ಮುಂದುವರೆಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಉತ್ತರ ವಲಯ ರವರು ಕೋರಿರುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಆಯುಕ್ತರ ದಿ:08-08-2011ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ವನ್ಯಜೀವಿ ಸಂರಕ್ಷಣಾ ಸಲಹೆಗಾರರ ತಂಡದ ಗೌರವಧನವನ್ನು ಪ್ರತಿಮಾಹೆ ನೀಡುವುದು ಎಂಬುವುದಾಗಿ ತೀರ್ಮಾನಿಸಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ದಿನಾಂಕ : 30-08-2011 ರ ನಿರ್ಣಯ.

***ನಿರ್ಣಯ : ದಿನಾಂಕ : 30-08-2011 ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.***

## ***54]. ವಿಷಯದ ಸಂಖ್ಯೆ :-ತೆಆಸ್ಥಾಸ/278/2011-12***

ಆಯುಕ್ತರ ಟಿಪ್ಪಣಿ ದಿನಾಂಕ : 27-08-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ 115ರಲ್ಲಿ ಶಾಂತಿನಗರ ಕ್ಷೇತ್ರದ ಶಾಸಕರ ಕಾರ್ಯಾಲಯ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೂರ್ವಕ್ಕೆ ಸಂಬಂಧಿಸಿದ ಕಛೇರಿಗಳಿಗಾಗಿ ಓ.ಆರ್.ಸಿ ರಸ್ತೆಯಲ್ಲಿ ನಿರ್ಮಿಸುವ ಸಲುವಾಗಿ ಸಂಪೂರ್ಣ ಯೋಜನಾ ವರದಿಯನ್ನು ತಯಾರಿಸಲಾಗಿರುತ್ತದೆ. ಈ ಯೋಜನೆಯಲ್ಲಿ ಮೊದಲನೆ ಮಹಡಿ, ಎರಡನೇ ಮಹಡಿ ಮತ್ತು ಮೂರನೆ ಮಹಡಿಯನ್ನು ನಿರ್ಮಿಸುವುದು ಹಾಗೂ ಪಾಲಿಕೆ ವಸತಿ ಗೃಹಗಳನ್ನು ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ.

ಮಹಾನಗರ ಪಾಲಿಕೆಯ ಕಛೇರಿಗಳು ಮತ್ತು ಶಾಸಕರ ಕೊಠಡಿ ನಿರ್ಮಾಣಕ್ಕಾಗಿ ಮೊದಲನೇ ಹಂತದಲ್ಲಿ ರೂ.2360.00 ಲಕ್ಷಗಳು ಹಾಗೂ ವಸತಿ ಗೃಹಗಳಿಗಾಗಿ 181.00 ಲಕ್ಷಗಳು ಒಟ್ಟು ರು.2541.00 ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು (ಯೋಜನೆ-ಪೂರ್ವ) ರವರು ಅಂದಾಜು ಪಟ್ಟಿಯನ್ನು ಸಲ್ಲಿಸಿರುತ್ತಾರೆ.

ಈ ಬೃಹತ್ ಕಟ್ಟಡ ನಿರ್ಮಿಸುವುದರಿಂದ ಶಾಂತಿನಗರ ವಿಧಾನ ಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟ ಎಲ್ಲಾ ಮಹಾನಗರ ಪಾಲಿಕೆಗಳ ಕಛೇರಿಗಳನ್ನು ಮತ್ತು ಶಾಸಕರ ಕೊಠಡಿಗಳನ್ನು ಆ ಕ್ಷೇತ್ರದ ಜನತೆಗೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ.

ಸದರಿ ಉದ್ದೇಶಿತ ಕಟ್ಟಡದಲ್ಲಿ ಕೆಳಕಂಡ ಕಛೇರಿ / ಇತರೆ ಇಲಾಖೆಗೆ ಸಂಬಂಧಪಟ್ಟ ಅವಶ್ಯಕ ಕೊಠಡಿ ಹಾಗೂ ವಸತಿ ಗೃಹಗಳನ್ನು ನಿರ್ಮಿಸಲು ಯೋಜಿಸಲಾಗಿದೆ.

| **ಕ್ರಮ ಸಂಖ್ಯೆ** | **ಮಹಡಿ** |
|---|---|
| 01 | **ತಳ ಮಹಡಿ :** 76 ಕಾರುಗಳಿಗೆ ಪಾರ್ಕಿಂಗ್ ವ್ಯವಸ್ಥೆ, ಎಲೆಕ್ಟ್ರೀಕಲ್ ಕೊಠಡಿ, ಎ.ಹೆಚ್.ಯು ಕೊಠಡಿ ಲಿಫ್ಟ್ ಕೊಠಡಿ. |
| 02 | **ನೆಲ ಮಹಡಿ :** |

| | |
|---|---|
| | ಒಳಾಂಗಣ ಕ್ರೀಡೆಗಳ ಕೊಠಡಿ, ಗ್ರಂಥಾಲಯ, ಉಪಹಾರಗೃಹ ಹಾಗೂ ಪಾಲಿಕೆಯ ಕಛೇರಿಗಳು. |
| 03 | **ಮೊದಲನೇ ಮಹಡಿ :**<br>ಅಧಿಕಾರಿಗಳ ವಸತಿ ಗೃಹ, ತೋಟಗಾರಿಕೆ ಕಛೇರಿ, ಬಿ.ಡಬ್ಲ್ಯೂ.ಎಸ್.ಎಸ್.ಬಿ ಕಛೇರಿ, ಬೆಸ್ಕಾಂ ಕಛೇರಿ, ಬಿ.ಎಸ್.ಎನ್.ಎಲ್ ಹಾಗೂ ಆರೋಗ್ಯ ಇಲಾಖೆ ಕಛೇರಿ ಮತ್ತು ಬ್ಯಾಂಕ್. |
| 04 | **ಎರಡನೇ ಮಹಡಿ :**<br>ಅಧಿಕಾರಿಗಳ ವಸತಿ ಗೃಹ, ಕಾಮಗಾರಿ ಇಲಾಖೆಗೆ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರುಗಳ ಕಛೇರಿಗಳು, ಗಣಕ ಯಂತ್ರ ತರಬೇತಿ ಕೊಠಡಿ ಹೊಲಿಗೆ ತರಬೇತಿ ಕೇಂದ್ರ. |
| 05 | **ಮೂರನೇ ಮಹಡಿ :**<br>ಅಧಿಕಾರಿಗಳ ವಸತಿ ಗೃಹ, ಕಾಮಗಾರಿ ಇಲಾಖೆಗೆ ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಅಭಿಯಂತರರುಗಳ ಕಛೇರಿಗಳು, ಗಣಕ ಯಂತ್ರ ತರಬೇತಿ ಕೊಠಡಿ ಹೊಲಿಗೆ ತರಬೇತಿ ಕೇಂದ್ರ. |

ಆದ್ದರಿಂದ ಮೇಲ್ಕಂಡ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಭರಿಸಲು ಅನುಮೊದನೆ ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ ; 27–08–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ಶಾಖೆಯ ಲೆಕ್ಕಶೀರ್ಷಿಕೆಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## ***55]. ವಿಷಯದ ಸಂಖ್ಯೆ :–ತೆಆಸ್ಥಾಸ/279/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(4)/ಪಿಆರ್/24/11–12 ದಿನಾಂಕ ಃ 27–05–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೆಂಪೇಗೌಡನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:119(47) ಚನ್ನರಾಯಸ್ವಾಮಿ ಟೆಂಪಲ್ ರಸ್ತೆ ಗಾಣಿಗರ ಪೇಟೆಯಲ್ಲಿರುವ ನಗರಪಾಲಿಕೆಯ 1777 ಚ.ಅಡಿ ಜಾಗವನ್ನು ದಿ:01–04–1967 ರಿಂದ 30–ವರ್ಷಗಳ ಅವಧಿಗೆ ಮಾಸಿಕ ಗುತ್ತಿಗೆ ಹಣ ರೂ.5/– ರಂತೆ ಶ್ರೀ ಚೆನ್ನಕೇಶವಸ್ವಾಮಿ ದೇವಸ್ಥಾನದ ಟ್ರಸ್ಟ್ ರವರಿಗೆ ಗುತ್ತಿಗೆ ನೀಡಿದ್ದು, ಸದರಿ ಗುತ್ತಿಗೆ ಅವಧಿ ಮುಗಿದಿರುತ್ತದೆ. ಗುತ್ತಿಗೆದಾರರು ಗುತ್ತಿಗೆಯನ್ನು ನವೀಕರಿಸಿಕೊಂಡಿರುವುದಿಲ್ಲ.

ವಲಯಾಧಿಕಾರಿಗಳು ಸ್ಥಳ ಪರಿಶೀಲಿಸಿ, ವರದಿಯಲ್ಲಿ ಈ ಪ್ರದೇಶದಲ್ಲಿ ಕಲ್ಯಾಣ ಮಂಟಪ ನಿರ್ಮಿಸಿದ್ದು, ಶ್ರೀ.ಚೆನ್ನಕೇಶವಸ್ವಾಮಿ ದೇವಸ್ಥಾನಕ್ಕೆ ಹೊಂದಿಕೊಂಡಿರುತ್ತದೆ. ಇದರಲ್ಲಿ ದೇವರ ಕಾರ್ಯಕ್ಕೆ ಹಾಗೂ ಕಡುಬಡವರಿಗೆ ಮದುವೆ ನಡೆಸಲು ನೀಡುತ್ತಿರುವುದಾಗಿ ತಿಳಿದುಬಂದಿದ್ದು, 1997 ರಿಂದ ಕಳೆದ ವರ್ಷದವರೆಗೆ ಗುತ್ತಿಗೆ ಹಣ ಪಾವತಿ ಮಾಡಿರುತ್ತಾರೆ. ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

ಸದರಿ ಟ್ರಸ್ಟ್‌ರವರು ಈ ಸ್ಥಳದಲ್ಲಿ ಕಲ್ಯಾಣ ಮಂಟಪ ನಿರ್ಮಿಸಿ ಸದಾ ಕಾಲ ಮದುವೆ, ಇತರೇ ಕಾರ್ಯಗಳಿಗೆ ನೀಡದೇ ಧಾರ್ಮಿಕ ಕಾರ್ಯ ಹಾಗೂ ಕಡುಬಡವರಿಗೆ ಮದುವೆ ಕಾರ್ಯಕ್ಕಾಗಿ ನೀಡುತ್ತಿರುವುದರಿಂದ, ಮುಂದಿನ 30–ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಕ್ಕೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ ಪಿ.ಆರ್/115/01–02, ದಿ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ. ಶೇ:100% ರಷ್ಟು ಸಮಾಜ ಸೇವೆ ಸಲ್ಲಿಸುತ್ತಿರುವ ಸಂಘ ಸಂಸ್ಥೆಗಳಿಗೆ ಮತ್ತು ಧರ್ಮದಾಯಿ ಸಂಸ್ಥೆಗಳಿಗೆ ಮೇಲ್ಕಂಡ

ಗುತ್ತಿಗೆ ಹಣದಲ್ಲಿ ಸೂಕ್ತ ರಿಯಾಯಿತಿಯನ್ನು ಪರಿಗಣಿಸಲು ಸ್ಥಾಯಿಸಮಿತಿಗೆ, ಪಾಲಿಕೆಗೆ ಹಾಗೂ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಅಭಿಪ್ರಾಯಿಸಲಾಗಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ರೂ.3,000/-ಗಳಿದ್ದು, ಅರ್ಜಿದಾರರುಗಳು ಕೋರಿರುವ 1777 ಚ.ಅಡಿಗಳಾಗಿದ್ದು, ಇದರಂತೆ 3000X1777= 53,31,000/- ರೂ.ಗಳಾಗುತ್ತದೆ. ಶೇ:10%ರಷ್ಟು ವಾರ್ಷಿಕ ಗುತ್ತಿಗೆ ಹಣ 5,33,100/- ರೂ.ಗಳಾಗುತ್ತದೆ. ಮಾಸಿಕ ಗುತ್ತಿಗೆ ಹಣ 44,430/- ರೂ.ಗಳಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಗುತ್ತಿಗೆಯನ್ನು ಮುಂದಿನ 30 ವರ್ಷಗಳಿಗೆ ನವೀಕರಿಸುವ ಬಗ್ಗೆ ಹಾಗೂ ಗುತ್ತಿಗೆ ಹಣ ನಿಗಧಿಪಡಿಸುವ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 27-05-2011ರ ಟಿಪ್ಪಣಿಯನ್ನು ಒಪ್ಪಿ ಐದು ವರ್ಷದ ಅವಧಿಗೆ ಗುತ್ತಿಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09-08-2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 09-08-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಸದರಿ ಟ್ರಸ್ಟ್‌ನವರು ಧಾರ್ಮಿಕ ಕಾರ್ಯಗಳಿಗೆ ಹಾಗೂ ಕಡುಬಡವರಿಗೆ ಕಲ್ಯಾಣ ಮಂಟಪವನ್ನು ನೀಡುತ್ತಿರುವುದರಿಂದ ಮಾಸಿಕ ರೂ.5000/- (ಐದು ಸಾವಿರ) ಗಳನ್ನು ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## ***56]. ವಿಷಯದ ಸಂಖ್ಯೆ :-ತೆಆಸ್ಥಾಸ/280/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(2)/ಪಿಆರ್/104/11-12 ದಿನಾಂಕ : 18-07-2011ರಲ್ಲಿ ವಿವರಿಸಿರುವಂತೆ, ದಿನಾಂಕ: 18-07-2011ರ ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 117 ರ ಪಾಲಿಕೆ ಸದಸ್ಯರು ಇವರು ದಿನಾಂಕ:15-02-2011 ರಂದು ಮಾನ್ಯ ಆಯುಕ್ತರಿಗೆ ಮನವಿ ಸಲ್ಲಿಸಿ, ವಾರ್ಡ್ 117ರ ಶಾಂತಿನಗರ ಲಾಂಗ್‌ಪೋರ್ಡ್ ರಸ್ತೆ ಆಸ್ತಿ ಸಂಖ್ಯೆ:5 ರಲ್ಲಿ ನಗರ ಪಾಲಿಕೆ ವಾರ್ಡ್ ಕಛೇರಿ ಆವರಣದಲ್ಲಿ ಶಾಶ್ವತವಾಗಿ ಡಾ|| ಬಿ.ಆರ್.ಅಂಬೇಡ್ಕರ್ ಪುತ್ಥಳಿ ಸ್ಥಾಪಿಸಲು ಕೋರಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ಶಾಂತಿನಗರ) ಉಪ ವಿಭಾಗ ರವರ ವರದಿಯಂತೆ ವಾರ್ಡ್-117ರ ನೂತನವಾಗಿ ನಿರ್ಮಾಣವಾಗಿರುವ ಹೆಲ್ಪ್‌ಲೈನ್ ಸೆಂಟರ್ ಪಾಲಿಕೆ ಸದಸ್ಯರ ಕಛೇರಿ, ರೆವಿನ್ಯೂ ಇನ್ಸ್‌ಪೆಕ್ಟರ್ ರವರ ಕಛೇರಿ ಹಾಗೂ ಕಾಮಗಾರಿ ವಿಭಾಗದ ಕಛೇರಿಗಳಿದ್ದು, ಇದರ ಮಧ್ಯದಲ್ಲಿ ಸುಮಾರು 16.00X11.50 ಮೀ ಅಳತೆಯ ಖಾಲಿ ಜಾಗವಿದ್ದು ಇದರಲ್ಲಿ 2.0X1.0 ಮೀ ಅಳತೆಯ ಜಾಗವನ್ನು ಅಂಬೇಡ್ಕರ್ ಪುತ್ಥಳಿ ಪ್ರತಿಷ್ಠಾಪಿಸಲು ಸ್ಥಳದ ನಕ್ಷೆಯೊಂದಿಗೆ ಅನುಮೋದನೆ ಕೋರಿರುತ್ತಾರೆ.

ಡಾ|| ಬಿ.ಆರ್.ಅಂಬೇಡ್ಕರ್ ರವರ ಪುತ್ಥಳಿ ಸ್ಥಾಪಿಸಲು ತಗಲುವ ಅನುಮತಿ ಕೋರಿರುವ ಹಿನ್ನೆಲೆಯಲ್ಲಿ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 18-07-2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09-08-2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 09-08-2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.***

## ***57]. ವಿಷಯದ ಸಂಖ್ಯೆ :-ತೆಆಸ್ಥಾಸ/281/2011-12***

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/211/10-11 ದಿನಾಂಕ : 22-07-2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ:168, ಸ್ವತ್ತಿನ ಸಂಖ್ಯೆ:1, 20ನೇ ಅಡ್ಡರಸ್ತೆ,

ಮಾರೇನಹಳ್ಳಿ ಕೆರೆ ಅಂಗಳದ 16X25 ಅಡಿಗಳ ಸ್ವತ್ತಿನ ಖಾತೆದಾರರಾದ ಶ್ರೀಮತಿ ಕಾಮಾಕ್ಷಿ ರವರು ಈ ಸ್ವತ್ತಿನ ಅಂಚಿನ ಭಾಗದ ಅಳತೆ 14X25 ಅಡಿಗಳನ್ನು ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ.

ಈ ಬಗ್ಗೆ ವಲಯದ ಕಾಮಗಾರಿ ಇಲಾಖೆಯವರು ನಕ್ಷೆ ತಯಾರಿಸಿದ್ದು, ಕಂದಾಯ ಇಲಾಖೆಯವರು ವರದಿಯಲ್ಲಿ ಶ್ರೀಮತಿ ಕಾಮಾಕ್ಷಿಯವರ ಹಕ್ಕಿನಲ್ಲಿರುವ ಸ್ವತ್ತಿಗೆ ಹೊಂದಿಕೊಂಡಂತಿರುವ ಜಾಗ ಕ್ರಯಕ್ಕೆ ನೀಡಲು ಕೋರಿದ್ದು, ಕೋರಿರುವ ಜಾಗ ಹೊರತುಪಡಿಸಿ, ಈ ಸ್ವತ್ತಿನ ಪೂರ್ವ-ದಕ್ಷಿಣಕ್ಕೆ ಪಾಲಿಕೆವತಿಯಿಂದ ತಂತಿ-ಬೇಲಿ ನಿರ್ಮಿಸಲಾಗಿದ್ದು, ಸದರಿ ಅರ್ಜಿದಾರರು ಕೋರಿರುವ ಜಾಗದಲ್ಲಿ ಈಗಾಗಲೇ ಕಟ್ಟಡವನ್ನು ನಿರ್ಮಿಸಿ ವಾಸವಾಗಿರುತ್ತಾರೆ. ಆದುದರಿಂದ, ಸರ್ಕಾರ ಆದೇಶದಂತೆ ಮಾರುಕಟ್ಟೆ ದರಕ್ಕೆ ಶೇ:20%ರಷ್ಟು ಹೆಚ್ಚಿಸಿ ಕ್ರಯಕ್ಕೆ ನೀಡುವ ಬಗ್ಗೆ ಮುಂದಿನ ಆದೇಶ ಕೋರಿ ಕಡತ ಕಳುಹಿಸಿರುತ್ತಾರೆ.

ಮಾರೇನಹಳ್ಳಿ ಕೆರೆ ಅಂಗಳ ರಿಂಗ್ ರಸ್ತೆಗೆ ಲಗತ್ತಾಗಿರುವ ಉದ್ಯಾನವನಕ್ಕೆ ಸೇರಿದ ಜಾಗದಲ್ಲಿ ಈ ಒತ್ತುವರಿಯಿಂದ ನಿರ್ಮಾಣದ ಮನೆಯಾಗಿರುತ್ತದೆ. ಉದ್ಯಾನವನದ ಉಳಿದ ಸಂಪೂರ್ಣ ಜಾಗಕ್ಕೆ ತಂತಿ-ಬೇಲಿ ಹಾಕಿ ಅಭಿವೃದ್ಧಿ ಪಡಿಸಲಾಗಿರುತ್ತದೆ. ಈ ಉದ್ಯಾವನದ ಪ್ರದೇಶ ಸಮಾಜ ಕಲ್ಯಾಣ ಇಲಾಖೆ, ಆಯುಕ್ತರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯ ನಿರ್ಮಾಣ ಮಾಡಲು ಮಂಜೂರಾತಿ ನೀಡಲಾಗಿರುವುದಾಗಿ ತಿಳಿಸಿ, ಸಮಾಜ ಕಲ್ಯಾಣ ಇಲಾಖೆಯ ಜಾಗ ಎಷ್ಟು ಎಂಬುದಾಗಿ ಸ್ಪಷ್ಟವಾಗಿ ವಿವರಿಸದೇ ಉದ್ಯಾನವನದಲ್ಲಿ ಒತ್ತುವರಿಯಾಗಿರುವ ಜಾಗಕ್ಕೆ ಸಹಾಯಕ ಕಂದಾಯ ಅಧಿಕಾರಿ(ಜಯನಗರ) ಮತ್ತು ಕಂದಾಯ ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿರುವುದರಿಂದ, ಅಪರ ಆಯುಕ್ತರು (ದಕ್ಷಿಣ)ರವರು ಪರಿಶೀಲನೆಯಿಂದ ಸ್ಪಷ್ಟ ಅಭಿಪ್ರಾಯಯೊಂದಿಗೆ ವರದಿ ಸಲ್ಲಿಸಲು ಕೋರಲಾಗಿತ್ತು.

ಈ ಬಗ್ಗೆ ಸ್ಥಳೀಯ ವಲಯಾಧಿಕಾರಿಗಳು ಈ ನಗರಪಾಲಿಕೆ ಸ್ವತ್ತನ್ನು ಟ್ರೀಪ್ಲಾಂಟ್ ಮುಖಾಂತರ ಅಭಿವೃದಿ ಪಡಿಸಲಾಗಿದ್ದು, ಸಮಾಜ ಕಲ್ಯಾಣ ಇಲಾಖೆಗೆ ಗುತ್ತಿಗೆ ನೀಡಲಾಗಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ಕಲಂ-176ರ ಪ್ರಕಾರ ಹಾಗೂ ಸರ್ಕಾರಿ ಆದೇಶ ಸಂಖ್ಯೆ:ನಅಇ/129/ಡಿ.ಎಂ.ಡಿ./2002, ದಿನಾಂಕ:02-06-2003ರನ್ವಯ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರವನ್ನು ಉಪಯೋಗಿಸಿ ಸ್ವತ್ತುಗಳನ್ನು ಕ್ರಯಕ್ಕೆ ನೀಡುವುದಾದಲ್ಲಿ ಸಾರ್ವಜನಿಕ ಹರಾಜಿನ ಮೂಲಕವೇ ನೀಡುವುದೆಂದಿದೆ.

ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ದಿನಾಂಕ:17-04-2007ರ ಸರ್ಕಾರದ ಮಾರ್ಗಸೂಚಿಯಂತೆ ನಿವೇಶನದ ಚದರ ಅಡಿ ಒಂದಕ್ಕೆ ವಸತಿ ಉದ್ದೇಶಕ್ಕೆ ರೂ.3000/-ಗಳಿದ್ದು, ಅರ್ಜಿದಾರರು ಕೋರಿರುವ 14X25 ಅಡಿಗಳ ಜಾಗವು 350 ಚ.ಅಡಿಗಳಾಗುತ್ತದೆ. ಇದರಂತೆ 350X3000 = 10,50,000 ರೂಗಳಾಗುತ್ತದೆ. ಸರ್ಕಾರದ ಆದೇಶದ ಮೇರೆಗೆ ಸ್ವತ್ತಿನ ಮಾರುಕಟ್ಟೆ ದರ ಶೇಕಡ 20%ರಷ್ಟು ಹೆಚ್ಚುವರಿ ಮಾಡಿದಾಗ ಒಟ್ಟಾರೆ ಸ್ವತ್ತಿನ ಮೌಲ್ಯವು ರೂ. 12,60,000/-ಗಳಾಗುತ್ತದೆ.

ಅರ್ಜಿದಾರರ ಕೋರಿಕೆಯನ್ನು ಪರಿಗಣಿಸುವಲ್ಲಿ ಅಪೀಲು ಸ್ಥಾಯಿಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಲಾದ ದಿ:05-04-2011 ರ ಟಿಪ್ಪಣಿಯನ್ನು ಅಪೀಲು ಸ್ಥಾಯಿಸಮಿತಿ ಒಪ್ಪುವುದೆಂದು ನಿರ್ಣಯಿಸಿದೆ.

ಪ್ರಸ್ತುತ ಜಾಗವು ಉದ್ಯಾನವನದಲ್ಲಿ ಬರುತ್ತಿದ್ದು, ಈ ಪ್ರದೇಶವು ಕರ್ನಾಟಕ ಉದ್ಯಾನವನ, ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿಸರ್ವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ-1985ರನ್ವಯ ಸರ್ಕಾರವು ಹೊರಡಿಸಿರುವ ಅಧಿಸೂಚನೆ ದಿ:28-04-2011 ರ ಪುಟ ಸಂಖ್ಯೆ-474 ಕ್ರ.ಸಂ-180 ರಲ್ಲಿ ಪ್ರಕಟಗೊಂಡಿರುತ್ತದೆ. ಈ ಕಾಯ್ದೆಯ ಕಲಂ(6)ರ ಅನುಸಾರ ಈ ಅಧಿಸೂಚನೆಯಲ್ಲಿ ಪ್ರಕಟಗೊಂಡಿರುವ ಪ್ರದೇಶವನ್ನು ನಿರ್ದಿಷ್ಟ ಪ್ರದೇಶಕ್ಕೆ ಹೊರತುಪಡಿಸಿ ಇತರೆ ಉಪಯೋಗದ ಉದ್ದೇಶಕ್ಕೆ ಪ್ರತಿಬಂಧಿಸಲಾಗಿದೆ.

ಹಾಗೂ ಕಲಂ–8(2)ರ ಅನುಸಾರ ಈ ಪ್ರದೇಶವನ್ನು ಬೇರೆ ಉದ್ದೇಶಕ್ಕೆ ಪರಬಾರೆ, ಕ್ರಯ, ಗುತ್ತಿಗೆ ಅಥವಾ ಪರವಾನಗಿ ನೀಡುವುದು. ಅನೂರ್ಜಿತ ಮತ್ತು ಪರಿಣಾಮ ಶೂನ್ಯ (NULL AND VOID) ಎಂದು ಸ್ಪಷ್ಟಪಡಿಸಲಾಗಿರುತ್ತದೆ. ಹಾಗೂ ಕಲಂ(11)ರ ಪ್ರಕಾರ ಕಲಂ(6) ಮತ್ತು (8)ನ್ನು ಉಲ್ಲಂಘಿಸಿದವರಿಗೆ 6 ತಿಂಗಳವರೆಗಿನ ಶಿಕ್ಷೆ ಅಥವಾ ದಂಡ ಅಥವಾ ಎರಡೂ ವಿಧಿಸುವ ಅವಕಾಶ ಕಲ್ಪಿಸಲಾಗಿರುತ್ತದೆ.

ಈ ಮೇಲ್ಕಂಡ ಸರ್ಕಾರಿ ನಿಯಮಗಳ ಹಿನ್ನೆಲೆಯಲ್ಲಿ ಶ್ರೀಮತಿ.ಕಾಮಾಕ್ಷಿರವರು ಕೋರಿರುವಂತೆ ಅವರು ವಾಸಿಸುತ್ತಿರುವ ಸ್ವತ್ತಿನ ಪಕ್ಕದ ಜಾಗ ಕ್ರಯಕ್ಕೆ ನೀಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 22–07–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09–08–2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 09–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಸದರಿ ಪ್ರದೇಶದ ಮಾರುಕಟ್ಟೆ ದರವು ಸಕಾರದ ಮಾರ್ಗಸೂಚಿಯಂತೆ ಚದರಡಿ ಒಂದಕ್ಕೆ ರೂ.2000/– ಗಳಿದ್ದು, ನಿಯಮಾನುಸಾರ ಲೆಕ್ಕಾಚಾರ ಮಾಡಿ ಕ್ರಯಕ್ಕೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.***

## ***58]. ವಿಷಯದ ಸಂಖ್ಯೆ :–ತೆಆಸ್ಥಾಸ/282/2011–12***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(2)/ಪಿಆರ್/118/11–12 ದಿನಾಂಕ ಃ 22–07–2011ರಲ್ಲಿ ವಿವರಿಸಿರುವಂತೆ, ವಾರ್ಡ್ 117, ವಿನಾಯಕನಗರದಲ್ಲಿನ ಸ್ವತ್ತಿನ ಸಂಖ್ಯೆ:03, 2ನೇ ಮುಖ್ಯರಸ್ತೆ, 1ನೇ 'ಎ' ಅಡ್ಡರಸ್ತೆ, ವಿಜಯನಗರ ಇಲ್ಲಿನ ಸ್ವತ್ತಿನ ಪೈಕಿ 13X41 (533 ಚದರ ಅಡಿಗಳ ಜಾಗವನ್ನು) ಅಲ್ ಮದೀನ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಷಿಯೇಷನ್ ರವರಿಂದ ಸಾರ್ವಜನಿಕ ರಸ್ತೆ ಉಪಯೋಗಕ್ಕಾಗಿ ರಸ್ತೆ ನಿರ್ಮಾಣಕ್ಕೆ ಸ್ವಾಧೀನ ಪಡಿಸಿಕೊಂಡಿರುವುದಾಗಿ ಈ ಜಾಗದ ಬದಲಿಗೆ ಇದೇ ವಾರ್ಡಿನ ಜಲಕಂಠೇಶ್ವರ ರಸ್ತೆಯಲ್ಲಿ ಲೆಪ್ರಸಿ ಆಸ್ಪತ್ರೆಗೆ ಪಾಲಿಕೆಯಿಂದ ಗುತ್ತಿಗೆಗೆ ನೀಡಿರುವ ಸ್ವತ್ತಿಗೆ ಹೊಂದಿಕೊಂಡಿರುವ ನಿವೇಶನವನ್ನು ಬದಲೀ ನಿವೇಶನವನ್ನಾಗಿ ನೀಡಬೇಕೆಂದು ಕೋರಿರುತ್ತಾರೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ) ಸ್ಥಳ ಪರಿಶೀಲನಾ ವರದಿಯಲ್ಲಿ ಜಲಕಂಠೇಶ್ವರನಗರ ಮುಖ್ಯರಸ್ತೆಯಲ್ಲಿ 23X36 ಅಡಿ ಸ್ವತ್ತು ಹಂಚಿಕೆ ಮಾಡಲು ಲಭ್ಯವಿರುವುದಾಗಿ ನಕ್ಷೆಯೊಂದಿಗೆ ವರದಿ ಮಾಡಿರುತ್ತಾರೆ.

ಈ ಬಗ್ಗೆ ಉಪ ಆಯುಕ್ತರು (ಆಸ್ತಿಗಳು) ಸ್ಥಳೀಯ ಅಧಿಕಾರಿಗಳೊಂದಿಗೆ ದಿನಾಂಕ:02–07–2011 ರಂದು ನಡೆಸಿದ ಸ್ಥಳ ಪರಿಶೀಲನಾ ವರದಿಯಲ್ಲಿ ಅಲ್ ಮದೀನ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಷಿಯೇಷನ್ ರವರ ಸ್ವತ್ತಿನಲ್ಲಿ 13X41 ಅಡಿಗಳ ಪ್ರದೇಶವನ್ನು 6 ವರ್ಷಗಳ ಹಿಂದೆ ಪಾಲಿಕೆಗೆ ಬಿಟ್ಟುಕೊಟ್ಟಿದ್ದು, ಆ ಸ್ಥಳದಲ್ಲಿ ಪಾಲಿಕೆ ವತಿಯಿಂದ ಸಿಮೆಂಟಿನ ರಸ್ತೆ ಮಾಡಲಾಗಿರುವುದಾಗಿ, ಪ್ರಸ್ತಾಪಿಸಲಾಗಿರುವ ಆ ಕೊಳಚೆ ಪ್ರದೇಶದ ಜಾಗದ ಎರಡು ಪ್ರಮುಖ ರಸ್ತೆಗಳಿಗೆ ಸಂಪರ್ಕ ಕಲ್ಪಿಸಲಾಗಿರುತ್ತದೆ. ಬದಲಿ ನಿವೇಶನ ನೀಡಲು ಪ್ರಸ್ತಾಪಿಸಲಾಗಿರುವ ಜಾಗವನ್ನು ಪರಿಶೀಲಿಸಲಾಗಿ ಇದರ ಅಳತೆ 22X25 ಅಡಿಗಳಿದ್ದು, ಇದರಲ್ಲಿ ಒಂದು ಹಳೆ ಭಾವಿ ಇರುತ್ತದೆ. ಇದಕ್ಕೆ ಲಗತ್ತಾಗಿರುವ ಜಾಗವು ಪಾಲಿಕೆಯ ಜಾಗವಾಗಿದ್ದು, ಬೇರೆಯವರಿಂದ ಅತಿಕ್ರಮಣವಾಗಿರುತ್ತದೆ.

ಅರ್ಜಿದಾರರಿಗೆ ಬದಲಿಯಾಗಿ ನೀಡಲು ಪ್ರಸ್ತಾಪಿಸಿರುವ ಜಾಗ 550 ಚದರ ಅಡಿಗಳಾಗಿದ್ದು ಅವರು ಬಿಟ್ಟುಕೊಟ್ಟಿರುವ ಜಾಗ 533 ಚದರ ಅಡಿಗಳಾಗಿದ್ದು 17 ಚದರ ಅಡಿಗಳು ಜಾಸ್ತಿಯಾಗಿರುವುದರಿಂದ ಚಾಲ್ತಿಯಲ್ಲಿರುವ ಮಾರ್ಗಸೂಚಿ ಅನುಸಾರ ವ್ಯತ್ಯಾಸದ ಮೊತ್ತ ಪಾವತಿಸಿಕೊಳ್ಳಬಹುದಾಗಿದೆಯೆಂದು ಅಭಿಪ್ರಾಯಿಸಿರುತ್ತಾರೆ.

ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಅಲ್ ಮದೀನ್ ಎಜುಕೇಷನ್ ಅಂಡ್ ವೆಲ್‌ಫೇರ್ ಅಸೋಷಿಯೇಷನ್ ರವರಿಗೆ 22X25 ಅಡಿಗಳ ಜಾಗವನ್ನು ಬದಲೀ ನಿವೇಶನವನ್ನಾಗಿ ನೀಡಲು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 22–07–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09–08–2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 09–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.***

## *59]. ವಿಷಯದ ಸಂಖ್ಯೆ :–ತೆಆಸ್ಥಾಸ/283/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎ3(4)/ಪಿಆರ್/130/11–12 ದಿನಾಂಕ : 03–08–2011ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ:131, ಮೈಸೂರು ರಸ್ತೆ, ನಾಯಂಡನಹಳ್ಳಿ, ವಾರ್ಡ್ ಕಛೇರಿ ಕಟ್ಟಡದ ಮೊದಲನೆ ಅಂತಸ್ತಿನ 477 ಚ.ಅಡಿ ಪಾಲಿಕೆಯ ಕಟ್ಟಡವನ್ನು ಅಂಚೆ ಕಛೇರಿ ನಡೆಸಲು ಮಾಸಿಕ 2100/– ರೂ.ಗಳನ್ನು ನಿಗಧಿಪಡಿಸಿ, ದಿ:08–02–2002 ರಿಂದ 11 ತಿಂಗಳ ಅವಧಿಗೆ ನೀಡಿದ್ದು, ಗುತ್ತಿಗೆ ಅವಧಿ 08–01–2003ಕ್ಕೆ ಮುಕ್ತಾಯವಾಗಿರುತ್ತದೆ. ಸಿನಿಯರ್ ಸೂಪರಿಟೆಂಡೆಂಟ್ ಆಫ್ ಪೋಸ್ಟ್ ಆಫೀಸ್‌ರವರು ಈ ಕಟ್ಟಡದಲ್ಲಿ *ಸಾರ್ವಜನಿಕ ಅಂಚೆ ಕಛೇರಿ ನಡೆಸುತ್ತಿದ್ದು,* ಗುತ್ತಿಗೆ ಅವಧಿ ಮುಗಿದಿರುವುದರಿಂದ, ಗುತ್ತಿಗೆ ಅವಧಿಯನ್ನು ನವೀಕರಿಸಬೇಕೆಂದು ಕೋರಿರುತ್ತಾರೆ.

ಸಂಬಂಧಿಸಿದ ವಲಯಾಧಿಕಾರಿಗಳು ವರದಿಯಲ್ಲಿ ಈ ಪಾಲಿಕೆ ಕಟ್ಟಡದ ಅಳತೆ 477 ಚ,ಅಡಿ ಇದ್ದು, ಈ ಹಿಂದೆ ಗುತ್ತಿಗೆ ಹಣ ರೂ.2100/– ನಿಗಧಿಯಾಗಿದ್ದು, ಇದು ಕೇಂದ್ರ ಸರ್ಕಾರದ ಇಲಾಖೆಯಾಗಿರುವುದರಿಂದ, ಸಾರ್ವಜನಿಕರ ಹಿತದೃಷ್ಟಿಯಿಂದ ಬಾಕಿ ಗುತ್ತಿಗೆ ಹಣ ಪಾವತಿಸಿಕೊಂಡು ಕಾಮಗಾರಿ ಇಲಾಖೆಯವರು ನಿಗಧಿಪಡಿಸುವ ಗುತ್ತಿಗೆ ಮೊತ್ತದಂತೆ, ಮುಂದಿನ 5–ವರ್ಷಗಳ ಅವಧಿಗೆ ಗುತ್ತಿಗೆ ನವೀಕರಿಸಬಹುದಾಗಿದೆಂದು ಅಭಿಪ್ರಾಯಿಸಲಾಗಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾಯ್ದೆನ್ವಯ–1976 ಕಲಂ–176ರ (6) ಹಾಗೂ (ಬಿ)IIರ ಪ್ರಕಾರ ಸ್ಥಾಯಿ ಸಮಿತಿಗಳಿಗೆ 3 ವರ್ಷಗಳ ಅವಧಿಗೆ ಹಾಗೂ ಪಾಲಿಕೆ ಸಭೆಗೆ 5 ವರ್ಷಗಳ ಅವಧಿಗೆ ಗುತ್ತಿಗೆ ನೀಡುವ ಅವಕಾಶವು ಇರುತ್ತದೆ. ಹೆಚ್ಚಿನ ಅವಧಿಗೆ ಸರ್ಕಾರದ ಅನುಮೋದನೆ ಪಡೆಯಬೇಕಾಗಿರುತ್ತದೆ.

ಈ ಅಂಚೆ ಕಛೇರಿಗೆ ಗುತ್ತಿಗೆ ನವೀಕರಿಸುವ ವಿಚಾರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಆದೇಶದಂತೆ ಸರ್ಕಾರದ ಮುಖ್ಯಕಾರ್ಯದರ್ಶಿರವರ ಅಧ್ಯಕ್ಷತೆಯ ಸಲಹಾ ಸಮಿತಿಯ ಮುಂದೆ ಅಭಿಪ್ರಾಯಕ್ಕಾಗಿ ಮಂಡಿಸಲಾಗಿದ್ದು, ಸಮಿತಿಯು ಗುತ್ತಿಗೆಯನ್ನು ಗರಿಷ್ಟ ಮೊತ್ತ ವಿಧಿಸಿ, ನವೀಕರಿಸಲು ಸೂಚಿಸಿರುತ್ತದೆ.

ಪಾಲಿಕೆಯ ಸುತ್ತೋಲೆಯ ಸಂಖ್ಯೆ:ಉ.ಆ(ಕಂ)/ಪಿ.ಆರ್/115/01–02, ದಿನಾಂಕ:01–03–2002 ಪ್ರಕಾರ ಬೆಂಗಳೂರು ಮಹಾನಗರ ಪಾಲಿಕೆಯ ಯಾವುದೇ ಜಾಗವನ್ನು ಗುತ್ತಿಗೆ ನೀಡಬೇಕಾದಲ್ಲಿ ಸದರಿ ಪ್ರಸಕ್ತ ಮಾರುಕಟ್ಟೆ ಬೆಲೆ ಕನಿಷ್ಟ ಶೇ:10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣವೆಂದು ನಿರ್ಧರಿಸಬೇಕಾಗಿರುತ್ತದೆ. ಇದು ಕಟ್ಟಡವಾಗಿರುವುದರಿಂದ, ಕಾಮಗಾರಿ ಇಲಾಖೆಯವರು ಮಾರ್ಗಸೂಚಿಯನ್ವಯ ಮಾಸಿಕ 9,040/–ರೂ.ಗಳ ಗುತ್ತಿಗೆ ಹಣವನ್ನು ನಿಗಧಿಪಡಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯಂತೆ, ಅಂಚೆ ಕಛೇರಿಗೆ ಗುತ್ತಿಗೆ ನವೀಕರಿಸಲು ಹಾಗೂ ಬಾಕಿ ಇರುವ ಗುತ್ತಿಗೆ ಮೊತ್ತ ನಿಗಧಿಪಡಿಸುವ ಬಗ್ಗೆ ಈ ಪ್ರಕರಣವನ್ನು ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 03–08–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09–08–2011ರ ನಿರ್ಣಯ.

***ನಿರ್ಣಯ :*** ***ದಿನಾಂಕ : 09–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.9040/–/– (ಒಂಬತ್ತು ಸಾವಿರದ ನಲವತ್ತು) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## *60]. ವಿಷಯದ ಸಂಖ್ಯೆ :–ತೆಆಸ್ಥಾಸ/284/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಸ.ಕಂ.ಅ/ವಾ–127/ಪಿಆರ್/356/1/04–05 ದಿನಾಂಕ : 28–07–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಸ್ತಿ ಸಂಖ್ಯೆ: 13/1, 9ನೇ "ಜಿ" ಮುಖ್ಯ ರಸ್ತೆ ಭೈರವೇಶ್ವರ ನಗರ, ವಾರ್ಡ್ ಸಂಖ್ಯೆ:127 (38) ಸರ್ವೆ ನಂ. 93 ಭೈರವೇಶ್ವರನಗರ ಉದ್ಯಾವನದ ಬಳಿ ನಗರಪಾಲಿಕೆ ಖಾಲಿ ಜಾಗದಲ್ಲಿನ ಅಳತೆ 30X55

ಅಡಿಗಳ ವಿಸ್ತೀರ್ಣದ ಸ್ವತ್ತನ್ನು ಸೃಷ್ಠಿ ಸ್ಪೆಷಲ್ ಬುದ್ದಿಮಾಂದ್ಯ ಮಕ್ಕಳಿಗೆ ವಿಶೇಷ ತರಬೇತಿ ಕೇಂದ್ರ ಮತ್ತು ಶಾಲೆಯನ್ನು ನಡೆಸಲು ಗುತ್ತಿಗೆ ಆಧಾರದ ಮೇಲೆ 5 ವರ್ಷದ ಅವಧಿಗೆ ವಾರ್ಷಿಕ ರೂ. 1,000/–ಗಳನ್ನು ನಿಗಧಿ ಪಡಿಸಿ. ಸೃಷ್ಠಿ ಸ್ಪೆಷಲ್ ಅಕಾಡಮಿರವರಿಗೆ ನೀಡಲಾಗಿದ್ದು, ಸದರಿ ಗುತ್ತಿಗೆ ಅವಧಿಯು ದಿನಾಂಕ:01–04–2011ಕ್ಕೆ ಮುಕ್ತಾಯವಾಗಿರುತ್ತದೆ.

ಸ್ಥಳ ಪರಿಶೀಲನೆಯಂತೆ ಸದರಿ ಸ್ಥಳವು ನಗರ ಪಾಲಿಕೆ ಸ್ವತ್ತಾಗಿದ್ದು, ನಗರ ಪಾಲಿಕೆಯು ಹೊಸದಾಗಿ ನಿರ್ಮಿಸುತ್ತಿರುವ ನಗರ ಪಾಲಿಕೆಯ ಆಸ್ಪತ್ರೆ ಪಕ್ಕದಲ್ಲಿನ ನಿವೇಶನದ ಒಟ್ಟು ವಿಸ್ತೀರ್ಣ 30X55 ಅಡಿಗಳ ಸ್ವತ್ತಿನಲ್ಲಿ ಕಟ್ಟಡವಿದ್ದು, ಸದರಿ ಸಂಸ್ಥೆಯವರು 5 ರಿಂದ 30 ವರ್ಷದವರೆಗೆ ಗುತ್ತಿಗೆ ನವೀಕರಣಕ್ಕಾಗಿ ಕೋರಿರುತ್ತಾರೆ. ಅರ್ಜಿದಾರರ ಸಂಸ್ಥೆಯವರು 2006ರಿಂದ ಸುಮಾರು 170 ಮಂದಿ ಬುದ್ದಿ ಮಾಂದ್ಯ ಮಕ್ಕಳಿಗೆ ವಸತಿ ರಹಿತ ಶಾಲೆ ನಡೆಸುತ್ತಿದ್ದು ಗುತ್ತಿಗೆ ಅವಧಿಯನ್ನು ನವೀಕರಿಸಲು ನಗರ ಪಾಲಿಕೆ ಸದಸ್ಯರು ಎರಡು ವರ್ಷ ಗುತ್ತಿಗೆ ಅವಧಿಯನ್ನು ನವೀಕರಿಸಲು ಶಿಫಾರಸ್ಸು ಮಾಡಿರುತ್ತಾರೆ.

ಕಂಡಿಕೆ 105 ಮತ್ತು 106ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಚಂದ್ರಾ ಬಡಾವಣೆ) ಉಪ ವಿಭಾಗ ರವರ ವರದಿಯಂತೆ ಸದರಿ ಸ್ಥಳದ ಪ್ರಸಕ್ತ ಮಾರುಕಟ್ಟೆ ದರವು ಸ್ವತ್ತಿನ ವಿಸ್ತೀರ್ಣ 30X55 ಅಡಿಗಳಿದ್ದು, ಸ್ವತ್ತಿನ ಒಟ್ಟು ಮೌಲ್ಯವು ಇತ್ತಿಚೆಗೆ ಉಪನೋಂದಣಾಧಿಕಾರಿಯವರ ಕಛೇರಿಯಲ್ಲಿ ನೋಂದಣಿ ಆದ ದರ ಚದರ ಅಡಿ ಒಂದಕ್ಕೆ ರೂ.900/–ಗಳಾಗಿದ್ದು, ಲೋಕೋಪಯೋಗಿ ಇಲಾಖೆಯ ಸಂಯುಕ್ತಿಯಂತೆ ಪ್ರತಿ ವರ್ಷಕ್ಕೆ ಬಾಡಿಗೆ ರೂ. 165 X900X7/100= 1,03,950/– ಗಳಾಗಿದ್ದು, ಮಾಸಿಕ ಗುತ್ತಿಗೆ ಹಣವು ರೂ. 8,700/–ಗಳಾಗುತ್ತದೆ.

ಮೇಲಿನ ಹಿನ್ನೆಲೆಯಲ್ಲಿ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ:28–07–2011 ರ ಟಿಪ್ಪಣಿಯನ್ನು ಒಪ್ಪಿ ಎರಡು ವರ್ಷದ ಅವಧಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09–08–2011ರ ನಿರ್ಣಯ.

***ನಿರ್ಣಯ : ದಿನಾಂಕ : 09–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ದಿನಾಂಕ : 01–04–2011 ರಿಂದ ಜಾರಿಗೆ ಬರುವಂತೆ ಮಾಸಿಕ ರೂ.8700/– (ಎಂಟು ಸಾವಿರದ ಏಳುನೂರು) ಗಳಿಗೆ ಗುತ್ತಿಗೆ ಹಣವನ್ನು ನಿಗಧಿಪಡಿಸುವುದು ಹಾಗೂ ಗುತ್ತಿಗೆ ಅವಧಿ ಪೂರ್ಣಗೊಂಡ ನಂತರ ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆಯುವುದೆಂದು ಸಮಿತಿಯು ತೀರ್ಮಾನಿಸಿತು.***

## *61]. ವಿಷಯದ ಸಂಖ್ಯೆ :–ತೆಆಸ್ಥಾಸ/285/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಎಲ್ಎಕ್ಯೂ/ಸಿಆರ್/12/2011–12, ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮೈಸೂರು ರಸ್ತೆಯ ನಂ.133 ಹಂಪಿನಗರ ವಾರ್ಡ್‌ನಲ್ಲಿರುವ ಶ್ರೀ ಗಾಳಿ ಆಂಜನೇಯ ಸ್ವಾಮಿ ದೇವಸ್ಥಾನದ ಹತ್ತಿರ ಮೇಲುಸೇತುವೆ ನಿರ್ಮಾಣ ಮತ್ತು ರಸ್ತೆ/ಜಂಕ್ಷನ್ ಅಭಿವೃದ್ಧಿ ಕಾಮಗಾರಿಗಾಗಿ ಶ್ರೀಮತಿ.ಡಿ.ಸುಭದ್ರಮ್ಮ ಕೋಂ ಲೇ. ಡಿ.ಎನ್.ಗೋವಿಂದರಾಜು ರವರ 34.00 ಚ.ಮೀ ಅಳತೆಯ ನಿವೇಶನದಲ್ಲಿ 16.91 ಚ.ಮೀ. (182.ಚ.ಅಡಿ) ವಿಸ್ತೀರ್ಣದ ಜಾಗ ಮತ್ತು ಅದರಲ್ಲಿರುವ ಕಟ್ಟಡವನ್ನು ಭೂಸ್ವಾಧೀನಪಡಿಸಿಕೊಳ್ಳಲು ಕಾರ್ಯನಿರ್ವಾಹಕ ಅಭಿಯಂತರರು, ಮೂಲ ಭೂತ ಸೌಕರ್ಯ–2, ಬಿ.ಬಿ.ಎಂ.ಪಿ. ರವರು ಕಡತ ತಯಾರಿಸಿ, ದಿನಾಂಕ: 16–06–2011 ರಂದು ಶಿಫಾರಸ್ಸು ಮಾಡಿರುತ್ತಾರೆ.

ಭೂಸ್ವಾಧೀನ ಪ್ರಸ್ತಾಪಿತ ಸ್ವತ್ತಿನ ವಿವರವನ್ನು ಸಹಾಯಕ ಕಂದಾಯ ಅಧಿಕಾರಿಗಳು, ಗಾಳಿ ಆಂಜನೇಯ ದೇವಸ್ಥಾನ ವಲಯ, ಹಾಗೂ ಕಾರ್ಯನಿರ್ವಾಹಕ ಅಭಿಯಂತರರು, ಮೂಲಭೂತ ಸೌಕರ್ಯ–2, ಬಿ.ಬಿ.ಎಂ.ಪಿ. ರವರು ನೀಡಿದ್ದು, ಅವರ ವರದಿಯನ್ವಯ ಸ್ವತ್ತಿನ ವಿವರ ಈ ಕೆಳಗೆ ಕಂಡಂತಿರುತ್ತವೆ.

| ಮೋಜಣಿದಾರರ ನಕ್ಷೆಯಂತೆ | | | | | | | | |
|---|---|---|---|---|---|---|---|---|
| ಕ್ರ. ಸಂ. | ಸಿ.ಟಿ.ಎಸ್. ನಂ | ಸರ್ವೆ ನಂ | ನಿವೇಶನ ನಂ. | ಪಿ.ಐ.ಡಿ. ಸಂಖ್ಯೆ | ಖಾತೆದಾರರ/ ಅನುಭವದಾರರ ಹೆಸರು | ಭೂಸ್ವಾಧೀನಪಡಿಸಿ–ಕೊಳ್ಳುವ ವಿಸ್ತೀರ್ಣ | | ಆಸ್ತಿದಾರರು ನೀಡಿರುವ ದಾಖಲೆ ಹಾಗೂ ಆಸ್ತಿ ವಿವರ |
| 1 | 2 | 3 | 4 | 6 | 7 | 8 | 9 | 10 |
| | | | | | | ಚ.ಮೀ. | ಚ.ಅಡಿ | |

| | | | | | | | | |
|---|---|---|---|---|---|---|---|---|
| 1 | 943 | ದೀವಟಗೆ ರಾಮನಹಳ್ಳಿ ಸ.ನಂ.14 | 373 | 42–111–373/23 | ಶ್ರೀಮತಿ.ಡಿ.ಸುಭದ್ರಮ್ಮ ಕೋಂ ಲೇ.ಡಿ.ಎನ್.ಗೋವಿಂದರಾಜು | 16–.91 | 182 | ಜಿ.ಪಿ.ಎ ನಂ–642/ 15–12–1997, ನಿ.ನಂ.14/373 |

ಶ್ರೀಮತಿ.ಡಿ.ಸುಭದ್ರಮ್ಮ ರವರು ಸಲ್ಲಿಸಿರುವ ದಾಖಲಾತಿಗಳಂತೆ, ಮೇಲ್ಕಾಣಿಸಿದ ಸ್ವತ್ತು ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ದೀವಟಗೆ ರಾಮನಹಳ್ಳಿ ಗ್ರಾಮದ ಸರ್ವೆ ನಂ–14ರಲ್ಲಿ ಕವಿಕಾ ಎಂಪ್ಲಾಯೀಸ್ ಹೌಸ್ ಬಿಲ್ಡಿಂಗ್ ಕೋ ಆಪರೇಟೀವ್ ಸೊಸೈಟಿಯವರು ರಚಿಸಿರುವ ನಿವೇಶನ ಸಂಖ್ಯೆ: 373 ಆಗಿದ್ದು, ಅಳತೆ 30X20 ಚ.ಅಡಿಗಳಾಗಿದ್ದು, ಇದನ್ನು 15–06–1995ರಲ್ಲಿ ಶ್ರೀ.ಎನ್.ಅಶೋಕ್‌ರಾವ್ ಬಿನ್ ಲೇ.ಎನ್.ಎಸ್.ಎನ್.ರಾವ್ ರವರಿಗೆ ಮಂಜೂರಾಗಿರುತ್ತದೆ. ಇದನ್ನು ಅಶೋಕ್‌ರಾವ್‌ರವರು ದಿನಾಂಕ: 15–12–1997ರಲ್ಲಿ ಶ್ರೀ.ಡಿ.ಎನ್.ಗೋವಿಂದರಾವ್ ರವರಿಗೆ ಜಿ.ಪಿ.ಎ ಮೂಲಕ ವರ್ಗಾಯಿಸಿರುತ್ತಾರೆ. ಈ ಬಗ್ಗೆ ಅಫಿಡವಿಟ್ ಕೂಡ ಸಲ್ಲಿಸಿರುತ್ತಾರೆ. ಆದರೆ, ಕವಿಕಾ ಲೇಔಟ್ ಸೊಸೈಟಿಯಿಂದ ಶ್ರೀ.ಅಶೋಕ್‌ರವರಿಗೆ ಬಂದ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಈ ಸ್ವತ್ತಿನ ಮಾಲೀಕತ್ವದ ಬಗ್ಗೆ 5(ಎ) ವಿಚಾರಣೆಯಲ್ಲಿ ಹಕ್ಕು ದಾಖಲೆಗಳನ್ನು ಪರಿಶೀಲಿಸಿ, ಭೂಪರಿಹಾರ ಪಾವತಿಸುವ ಬಗ್ಗೆ ತೀರ್ಮಾನ ಕೈಗೊಳ್ಳುವ ಷರತ್ತಿಗೊಳಪಟ್ಟು, ಈ ಸ್ವತ್ತನ್ನು ಭೂಸ್ವಾಧೀನಪಡಿಸಿಕೊಳ್ಳಬಹುದೆಂದು ಅಭಿಪ್ರಾಯಪಡಲಾಗಿದೆ.

ಭೂಸ್ವಾಧೀನಪಡಿಸಿಕೊಳ್ಳಲು ಇಚ್ಛಿಸಿರುವ ಸ್ವತ್ತು ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಹೊಂದಿರುವ ವಸತಿ ಪ್ರದೇಶದಲ್ಲಿದ್ದು, ಸರ್ಕಾರವು ಪ್ರಕಟಿಸಿರುವ ಅಧಿಸೂಚನೆ ದಿನಾಂಕ: 19–04–2007ರಂತೆ ಪ್ರದೇಶದಲ್ಲಿನ ವಸತಿ ನಿವೇಶನಗಳ ದರವು ಪ್ರತಿ ಚ.ಅಡಿ 1 ಕ್ಕೆ ರೂ.800/–ಗಳಾಗಿರುತ್ತದೆ. ಈ ದರವನ್ನು ಸ್ವಾಧೀನಪಡಿಸಿಕೊಳ್ಳುವ ವಿಸ್ತೀರ್ಣಕ್ಕೆ ಅಳವಡಿಸಿದಾಗ, ಪರಿಹಾರದ ಮೊಬಲಗು ಈ ಕೆಳಕಂಡಂತೆ ಆಗುತ್ತದೆ.

**"ಅ"–ಭೂ ಪರಿಹಾರ ವೆಚ್ಚ**

| ಕ್ರ ಸಂ | ವಿವರಣೆ | ಮೊಬಲಗು ರೂ.ಗಳಲ್ಲಿ |
|---|---|---|
| 1 | ದಿನಾಂಕ: 19–04–2007ರ ಸರ್ಕಾರದ ಮಾರ್ಗಸೂಚಿ ದರದಂತೆ,<br>1. ಚ.ಅಡಿ ಒಂದಕ್ಕೆ ರೂ. 800/– ರಂತೆ 182 ಚ.ಅಡಿಗಳಿಗೆ | **1,45,600/–** |
| | 2. ಕಟ್ಟಡಗಳ ಮೌಲ್ಯ (ಇಂಜಿನಿಯರಿಂಗ್ ವಿಭಾಗದವರು ಸಲ್ಲಿಸಿರುವ ವ್ಯಾಲ್ಯುವೇಷನ್ ತಃಖ್ತೆಯಂತೆ) | **2,49,175/–** |
| | **ಒಟ್ಟು** | **3,94,775/–** |
| 2 | ಈ ಮೊಬಲಗಿಗೆ 1894ರ ಭೂಸ್ವಾಧೀನ ಕಾಯ್ದೆಯ ಕಲಂ.23(2)ರ ಅನ್ವಯ ಶೇಕಡಾ 30 ರಂತೆ ಶಾಸನ ಬದ್ಧ ಭತ್ಯೆ | **1,18,433/–** |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ)ರ ಅನ್ವಯ ಮಾರುಕಟ್ಟೆ ಬೆಲೆ ಮೇಲೆ ಶೇಕಡಾ 12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | **47,469/–** |
| | **ಒಟ್ಟು (1+2+3)** | **5,69,581/–** |

**"ಆ"– ಇತರೆ ವೆಚ್ಚ**

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇಕಡಾ 10 ರಷ್ಟು | **–** |
| 5 | ಆಡಿಟ್ ವೆಚ್ಚ ಶೇಕಡಾ 1 ರಷ್ಟು | **–** |
| 6 | ಪ್ರಕಟಣಾ ವೆಚ್ಚ (ಅಂದಾಜು) | **1,00,000/–** |
| | **ಒಟ್ಟು (1+2+3+6)** | **6,60,581/–** |

ಷರಾ: ದಿನಾಂಕ: 5–9–1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60, ರಂತೆ ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಚೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮ ಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ, ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ.

**(ಅ+ಆ) ಒಟ್ಟು**

**(ಆರು ಲಕ್ಷದ ಆರವತ್ತು ಸಾವಿರದ ಐದು ನೂರ ಎಂಭತ್ತೊಂದು ರೂ.ಗಳು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತುಗಳನ್ನು ಭೂಸ್ವಾಧೀನ ಕಾಯ್ದೆ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲುವ ಭೂ ಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು ರೂ. **6,60,581/– (ಆರು ಲಕ್ಷದ ಅರವತ್ತು ಸಾವಿರದ ಐದು ನೂರ ಎಂಭತ್ತೊಂದು ರೂ.ಗಳು ಮಾತ್ರ)** ಗಳನ್ನು ಪಾಲಿಕೆಯ 2011–12ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 02–08–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09–08–2011ರ ನಿರ್ಣಯ.

***ನಿರ್ಣಯ : ದಿನಾಂಕ : 09–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.***

## *62]. ವಿಷಯದ ಸಂಖ್ಯೆ :–ತೆಆಸ್ಥಾಸ/286/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಎ3(2)/ಪಿಆರ್/144/11–12, ದಿನಾಂಕ ಃ 28–07–2011ರಲ್ಲಿ ವಿವರಿಸಿರುವಂತೆ, ವಾರ್ಡ್ ನಂ:34 (98) ಆರ್.ಟಿ.ನಗರ ಮುಖ್ಯರಸ್ತೆ ಪಕ್ಕದ ಉದ್ಯಾನವನದಲ್ಲಿ 10x10 ಅಡಿಯ ಜಾಗವನ್ನು ಜ್ಯೂಸ್ ಅಂಗಡಿ ನಡೆಸಲು ಅನುಮತಿ ಕೋರಿ, ಅಧ್ಯಕ್ಷರು, ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿಸಮಿತಿ ರವರಿಗೆ ಮನವಿ ಸಲ್ಲಿಸಿದ್ದು, ಸದರಿ ಮನವಿ ಪತ್ರದಲ್ಲಿ ಸೂಕ್ತ ಕ್ರಮ ಕೈಗೊಂಡು ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರವರನ್ನು ಕೋರಿರುತ್ತಾರೆ.

ಈ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜೆ.ಸಿ.ನಗರ)ಉಪ ವಿಭಾಗದವರು ನಕ್ಷೆ ತಯಾರಿಸಿ ಸಲ್ಲಿಸಿದ್ದು, ನಕ್ಷೆಯಲ್ಲಿ ಬಿಬಿಎಂಪಿ ಉದ್ಯಾನವನ ಎಂಬುದಾಗಿದ್ದು, ಮುಂದಿನ ಆದೇಶ ಕೋರಿರುತ್ತಾರೆ.

ಆದರೆ, ಇದು ಹೊಸದಾಗಿ ಅನುಮತಿ ಕೋರಿರುವ ಪ್ರಕರಣವಾಗಿದ್ದು, ಸರ್ಕಾರದ ಆದೇಶ ಸಂಖ್ಯೆ: ನಅಇ/129/ಟಿ.ಎಂ.ಡಿ/2002, ಬೆಂಗಳುರು, ದಿನಾಂಕ:02–06–2003ರ ಸುತ್ತೋಲೆಯಲ್ಲಿ ಮಾರ್ಗಸೂಚಿ ಕ್ರಮಸಂಖ್ಯೆ(VI) ರನ್ವಯ ಸ್ಥಳೀಯ ಸಂಸ್ಥೆಗಳು ತಮ್ಮ ಅಧಿಕಾರಿವನ್ನು ಉಪಯೋಗಿಸಿ ಗುತ್ತಿಗೆ ಆಧಾರದ ಮೇಲೆ ನೀಡಿದಲ್ಲಿ, ಅಂತಹ ಗುತ್ತಿಗೆಗಳನ್ನು ಸಾರ್ವಜನಿಕ ಹರಾಜು ಮೂಲಕವೇ ನೀಡುವುದು. ಮೇಲ್ಕಣಿಸಿದ ಮಾರ್ಗಸೂಚಿಗಳನ್ನು ಉಲ್ಲಂಘಿಸತಕ್ಕದಲ್ಲ ಎಂಬುದಾಗಿದೆ.

ಪ್ರಸ್ತುತ ಜಾಗವು ಉದ್ಯಾನವನದಲ್ಲಿ ಬರುತ್ತಿದ್ದು, ಈ ಪ್ರದೇಶವು ಕರ್ನಾಟಕ ಉದ್ಯಾನವನ ಆಟದ ಮೈದಾನ ಮತ್ತು ತೆರೆದ ಪ್ರದೇಶಗಳ (ಪ್ರಿರ್ಸವೇಷನ್ ಅಂಡ್ ರೆಗ್ಯೂಲೇಷನ್) ಕಾಯ್ದೆ–1985ರನ್ವಯ ಸರ್ಕಾರವು ಹೊರಡಿಸಲಾಗಿರುವ ಅಧಿಸೂಚನೆ ದಿನಾಂಕ:28–04–2011 ರ ಪುಟ ಸಂಖ್ಯೆ:439 ಕ್ರಮ ಸಂಖ್ಯೆ:64ರಲ್ಲಿ ಪ್ರಕಟಗೊಂಡಿರುತ್ತದೆ. ಈ ಕಾಯ್ದೆಯ ಕಲಂ–(6)ರ ಅನುಸಾರ ಈ ಅಧಿಸೂಚನೆಯಲ್ಲಿ ಪ್ರಕಟಗೊಂಡಿರುವ ಪ್ರದೇಶವನ್ನು ನಿರ್ಧಿಷ್ಠ ಉದ್ದೇಶಕ್ಕೆ ಹೊರತುಪಡಿಸಿ, ಇತರೆ ಉಪಯೋಗದ ಉದ್ದೇಶಕ್ಕೆ ಪ್ರತಿಬಂಧಿಸಲಾಗಿದೆ ಹಾಗೂ ಕಲಂ–8(2)ರ ಅನುಸಾರ ಈ ಪ್ರದೇಶವನ್ನು ಬೇರೆ ಉದ್ದೇಶಕ್ಕೆ ಪರಬಾರೆ ಕ್ರಯ, ಗುತ್ತಿಗೆ ಅಥವಾ ಪರವಾನಿಗೆ ನೀಡುವುದು ಅನೂರ್ಜಿತ ಮತ್ತು ಪರಿಣಾಮ ಶೂನ್ಯ (NULL AND VOID) ಎಂದು ಸ್ಪಷ್ಟಪಡಿಸಲಾಗಿರುತ್ತದೆ. ಹಾಗೂ ಕಲಂ(11)ರ ಪ್ರಕಾರ ಕಲಂ(6) ಮತ್ತು (8)ನ್ನು ಉಲ್ಲಂಘಿಸಿದವರಿಗೆ 6 ತಿಂಗಳವರೆಗಿನ ಶಿಕ್ಷೆ ಅಥವಾ ದಂಡ ಎರಡೂ ವಿಧಿಸುವ ಅವಕಾಶ ಕಲ್ಪಿಸಲಾಗಿರುತ್ತದೆ.

ಮೇಲಿನ ಸರ್ಕಾರಿ ನಿಯಮಗಳ ಹಿನ್ನೆಲೆಯಲ್ಲಿ ಜ್ಯೂಸ್ ಅಂಗಡಿ ನಡೆಸಲು ಅನುಮತಿ ನೀಡುವುದು ಸೂಕ್ತವಲ್ಲವೆಂದು ಅಭಿಪ್ರಾಯಿಸಲಾಗಿದೆ. ಮೇಲ್ಕಂಡ ಅಂಶಗಳನ್ನು ಕುರಿತು ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವಂತೆ **ಅರ್ಜಿದಾರರು ನಿರುದ್ಯೋಗಿ ಮತ್ತು ಕಡು ಬಡವರಾಗಿರುವುದರಿಂದ ಸದರಿರವರ ಜಿವನೋಪಾಯದ ಹಿತದೃಷ್ಟಿಯಿಂದ ಮಾನ್ಯ ಆಯುಕ್ತರ ದಿನಾಂಕ : 28–07–2011ರ ಪ್ರಸ್ತಾವನೆಯನ್ನು ಮಾರ್ಪಡಿಸಿ 3 ವರ್ಷದ ಅವಧಿಗೆ ಗುತ್ತಿಗೆಗೆ ನೀಡಲು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09–08–2011ರ ನಿರ್ಣಯ.**

***ನಿರ್ಣಯ : ದಿನಾಂಕ : 09–08–2011 ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪುತ್ತಾ, ಮಾಸಿಕ ರೂ.1000/– (ಒಂದು ಸಾವಿರ) ಗುತ್ತಿಗೆ ಮೊತ್ತವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಿತು.***

## 63]. ವಿಷಯದ ಸಂಖ್ಯೆ :–ತೆಆಸ್ಥಾಸ/287/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಜಾ)ಪಿಆರ್/2492/10–11, ದಿನಾಂಕ : 02–08–2011ರಲ್ಲಿ ವಿವರಿಸಿರುವಂತೆ, ದಿನಾಂಕ : 02–08–2011ರ ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ದಿನಾಂಕ:08.02.2011ರಂದು ಪೂಜ್ಯ ಮಹಾಪೌರರಿಗೆ ಪತ್ರವನ್ನು ಸಲ್ಲಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ 30 ಸ್ಥಳಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ (ಪಿ.ಪಿ.ಪಿ) ದಡಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ಅವಕಾಶ ಕಲ್ಪಿಸಲಾಗುವುದೆಂದು ಇದರ ವಿರುದ್ಧವಾಗಿ 500 ಅಡಿಗಳ ವಾಣಿಜ್ಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಕೋರಿರುತ್ತಾರೆ. ಅದರಂತೆ, ಪೂಜ್ಯ ಮಹಾಪೌರರವರು ನಿಯಾಮಾನುಸಾರ ಕ್ರಮ ತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ಉಪ ಆಯುಕ್ತರು (ಜಾಹೀರಾತು)ರವರು ಈ ಕೆಳಕಂಡ ಸ್ಥಳಗಳನ್ನು ಸ್ಥಳ ತನಿಖೆ ಮಾಡಿ ಭಾವಚಿತ್ರದೊಂದಿಗೆ ವರದಿ ಮಾಡಿರುತ್ತಾರೆ. ಸ್ಥಳಗಳ ವಿವರ ಈ ಕೆಳಕಂಡಂತಿದೆ..

| ಕ್ರ. ಸಂ. | ಸ್ಥಳಗಳ ವಿವರ | ಸಂ. |
|---|---|---|
| 1. | ಎಂ.ಜಿ. ರಸ್ತೆ ಶಂಕರ್‌ನಾಗ್ ಥಿಯೇಟರ್ ಎದುರು | 1 |
| 2. | ಟ್ರಿನಿಟಿ ಚರ್ಚ್ ಸರ್ಕಲ್ | 1 |
| 3. | ಕಾಮರಾಜ ರಸ್ತೆ, ಸಿಗ್ನಲ್ ಹತ್ತಿರ | 1 |
| 4. | ರಿಚ್‌ಮಂಡ್ ರಸ್ತೆ, ಕೆ.ಎಸ್.ಆರ್.ಪಿ. ಕಾಂಪೌಂಡ್ | 1 |
| 5. | ರೆಸಿಡೆನ್ಸಿ ರಸ್ತೆ, ಬಿಷಪ್ ಕಾಟನ್ ಸ್ಕೂಲ್ ಕಾಂಪೌಂಡ್ | 1 |
| 6. | ಕೋರಮಂಗಲ ರಿಂಗ್ ರಸ್ತೆ, ಸೋನಿ ವರ್ಲ್ಡ್ ಎದುರು | 1 |
| 7. | ಕೋರಮಂಗಲ ರಿಂಗ್ ರಸ್ತೆ, ಈಜೀಪುರ ಜಂಕ್ಷನ್ | 1 |
| 8. | ಕೋರಮಂಗಲ ರಿಂಗ್ ರಸ್ತೆ, ಡೆಲ್ ನಂತರ | 1 |
| 9. | ಡಿಕೆನ್ಸನ್ ರಸ್ತೆ, ಕಲ್ಯಾಣ್ ಜುವೆಲ್ಲರ್ಸ್ ಎದುರು | 1 |
| 10. | ಸಿದ್ದಾಪುರ ಮುಖ್ಯರಸ್ತೆ ಬಸ್ ಸ್ಟಾಪ್ ಹತ್ತಿರ | 1 |
| 11. | ಜಯನಗರ 4ನೇ ಬ್ಲಾಕ್, ಕೂಲ್ ಜಾಯಿಂಟ್ ಸರ್ಕಲ್ ಹತ್ತಿರ, ವಿಜಯ ಕಾಲೇಜ್ ಕಾಂಪೌಂಡ್ | 1 |
| 12. | ಸಂಜಯ್ ಗಾಂಧಿ ಆಸ್ಪತ್ರೆ ಕಾಂಪೌಂಡ್ ಮುಂದೆ | 1 |
| 13. | ಜಯನಗರ ರಿಂಗ್ ರಸ್ತೆ, ಮಾರೇನಹಳ್ಳಿ ಪೆಟ್ರೋಲ್ ಬಂಕ್ ಪಕ್ಕ | 1 |
| 14. | ರೇಸ್ ಕೋರ್ಸ್ ರಸ್ತೆ | 1 |
| 15. | ಸ್ಯಾಂಕಿ ರಸ್ತೆ, ಮಾರುತಿ ಷೋ ರೂಂ ಪಕ್ಕದಲ್ಲಿ | 1 |
| 16. | ಮೇಖ್ರಿ ಸರ್ಕಲ್ ಏರ್ ಫೋರ್ಸ್ ಸ್ಟೇಷನ್ ಮುಂದೆ | 1 |
| 17. | ಬನ್ನೇರುಘಟ್ಟ ಮುಖ್ಯರಸ್ತೆ, ಜಯದೇವ ಆಸ್ಪತ್ರೆ ಎದುರು | 1 |
| 18. | ಮಲ್ಲೇಶ್ವರಂ ಮಂತ್ರಿ ಸ್ಕ್ವೇರ್ ಪಕ್ಕದಲ್ಲಿ | 1 |
| 19. | ಮಲ್ಲೇಶ್ವರಂ 18ನೇ ಕ್ರಾಸ್, ಬಸ್ ಸ್ಟಾಪ್ ಎದುರು | 1 |
| 20. | ಬಸವೇಶ್ವರನಗರ ಮುಖ್ಯರಸ್ತೆ, ವಲ್‌ಸಲಾ ಟ್ರಾವೆಲ್ಸ್ ಎದುರು | 1 |
| 21. | ಹಳೇ ಏರ್‌ಪೋರ್ಟ್ ರಸ್ತೆ, ಟೋಟಲ್ ಮಾಲ್ ಪಕ್ಕದಲ್ಲಿ: | 1 |
| 22. | ಇಂದಿರಾನಗರ 100 ಅಡಿ ರಸ್ತೆ, ನ್ಯೂ ಹಾರಿಜನ್ ಸ್ಕೂಲ್ ಹತ್ತಿರ | 1 |

| | | |
|---|---|---|
| 23. | ಸಿ.ಎಂ.ಹೆಚ್ ರಸ್ತೆ | 1 |
| 24. | ಹಡ್ಸನ್ ಸರ್ಕಲ್, ಕಸ್ತೂರಿಬಾ ರಸ್ತೆ | 1 |
| 25. | ಆರ್.ಟಿ. ನಗರ ಮುಖ್ಯರಸ್ತೆ, ಕೆ.ಎಫ್.ಸಿ. ಪಕ್ಕದಲ್ಲಿ | 1 |
| 26. | ಆಡುಗೋಡಿ ಪೊಲೀಸ್ ವಸತಿ ಗೃಹ | 1 |
| 27. | ಬಳ್ಳಾರಿ ರಸ್ತೆ, ಸಿಬಿಐ ಬಸ್ ಬೇ ಎದುರು: | 1 |
| 28. | ಪ್ಯಾಲೇಸ್ ರಸ್ತೆ, ಮಹೇಂದ್ರ ಷೋರೂಂ ಎದುರು | 1 |
| 29. | ಕೋರಮಂಗಲ, ಪಾಸ್ ಪೋರ್ಟ್ ಆಫೀಸ್ ಎದುರು | 1 |
| 30. | ಜಯನಗರ 1ನೇ ಬ್ಲಾಕ್, ರಾಣಿ ಸರಳಾದೇವಿ ಸ್ಕೂಲ್ ಕಾಂಪೌಂಡ್ | 1 |

ದಿನಾಂಕ:08.02.2011ರ ಪೂಜ್ಯ ಮಹಾಪೌರರ ಪತ್ರದಲ್ಲಿ ಮೆ॥ಎಸ್.ಎ.ಎಸ್. ಅಡ್ವರ್‌ಟೈಸರ್ಸ್ ಸಂಸ್ಥೆಯವರು ನಗರದ 54 ವಿವಿಧ ಸ್ಥಳಗಳಲ್ಲಿ ಪಿ.ಪಿ.ಪಿ. ಅಡಿಯಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಿಸಲು ಕೋರಿದ್ದು, ಇದರ ಬಗ್ಗೆ ನಿಯಾಮಾನುಸಾರ ಕ್ರಮ ವಹಿಸಲು ತಿಳಿಸಿರುತ್ತಾರೆ. ಅದರಂತೆ, ಸಾರ್ವಜನಿಕ ಶೌಚಾಲಯಗಳನ್ನು ಬಿ.ಓ.ಟಿ ಆಧಾರದ ಮೇಲೆ ನಿರ್ಮಿಸಲು ಕೆ.ಟಿ.ಪಿ.ಪಿ ಕಾಯ್ದೆಯಂತೆ ಟೆಂಡರ್ ಕರೆದು ಟೆಂಡರ್‌ನಲ್ಲಿ ಯಶಸ್ವಿಯಾದ ಬಿಡ್‌ದಾರರಿಗೆ ಈ ಕೆಳಕಂಡ ಷರತ್ತುಗಳೊಂದಿಗೆ ಅನುಮೋದನೆ ನೀಡಬಹುದಾಗಿದೆ.

**ಷರತ್ತುಗಳು:**

1. ಪ್ರತಿ ಶೌಚಾಲಯಕ್ಕೆ ವಾರ್ಷಿಕವಾಗಿ ರೂ.50,000/–ಗಳಂತೆ ಲೈಸನ್ಸ್ ಶುಲ್ಕವನ್ನು ಪಾವತಿಸುವುದು.
2. ಪಾಲಿಕೆಯು ನಿಗದಿಪಡಿಸುವ ಶುಲ್ಕವನ್ನು ಸಾರ್ವಜನಿಕರಿಂದ ವಸೂಲಿ ಮಾಡತಕ್ಕದ್ದು. (Pay and use)
3. ಕೆ.ಟಿ.ಪಿ.ಪಿ ಆಧಾರದ ಟೆಂಡರ್ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.
4. ಶೌಚಾಲಯಗಳ ಮೇಲೆ ಪಾಲಿಕೆಯು ಅನುಮೋದಿಸಿದ ನಕ್ಷೆಗೆ ಅನುಸಾರವಾಗಿ 300 ಚದರ ಅಡಿಗಳಿಗೆ ಮೀರದಂತೆ ವಾಣಿಜ್ಯ ಜಾಹೀರಾತುಗಳನ್ನು ಅಳವಡಿಸುವುದು.
5. ಜಾಹೀರಾತು ಬೈಲಾಗಳು–2006ರಂತೆ ಜಾಹೀರಾತು ತೆರಿಗೆಯನ್ನು ನಿಯಮಾನುಸಾರ ಪಾವತಿಸುವುದು ಮತ್ತು ಬೈಲಾ ನಿಯಮಗಳಿಗೆ ಬದ್ಧರಾಗಿರತಕ್ಕದ್ದು.
6. ಶೌಚಾಲಯಗಳನ್ನು ನಿರ್ಮಿಸುವ ಮೊದಲು ಪಾಲಿಕೆಯ ತಾಂತ್ರಿಕ ವಿಭಾಗದಿಂದ ಶೌಚಾಲಯದ ನಕ್ಷೆಯನ್ನು ಸಲ್ಲಿಸಿ ಅನುಮೋದಿಸಿಕೊಳ್ಳುವುದು.
7. ಶೌಚಾಲಯಗಳ ನಿರ್ಮಾಣಗಳ ಸ್ಥಳಗಳಲ್ಲಿ ನೀರಿನ ಸರಬರಾಜಿಗಾಗಿ ಬೋರ್‌ವೇಲ್‌ಗಳನ್ನು ಒದಗಿಸುವ ಜವಾಬ್ದಾರಿ ಹೊಂದಿರತಕ್ಕದ್ದು.
8. ಶೌಚಾಲಯಗಳನ್ನು ನಿರ್ಮಿಸುವ ಸ್ಥಳಗಳನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರಿಂದ ಗುರುತಿಸಿಕೊಂಡು ಇವರ ಉಸ್ತುವಾರಿಯಲ್ಲಿ ಶೌಚಾಲಯಗಳನ್ನು ನಿರ್ಮಿಸುವುದು.
9. ಅನುಮತಿ ಅವಧಿ ಮುಗಿದ ನಂತರ ನಿರ್ಮಿಸಿರುವ ಎಲ್ಲಾ ಸಾರ್ವಜನಿಕ ಶೌಚಾಲಯಗಳನ್ನು ಉತ್ತಮ ಸ್ಥಿತಿಯಲ್ಲಿ ನಗರ ಪಾಲಿಕೆಗೆ ಹಸ್ತಾಂತರಿಸುವುದು.
10. ಟೆಂಡರ್ ಪ್ರಕಟಣೆಯ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು.

**ದಿನಾಂಕ:31.03.2011ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನ ವಿಷಯದ ಸಂಖ್ಯೆ:299/2010–11ರಂತೆ "ಆಯುಕ್ತರವರ ದಿನಾಂಕ:25.03.2011ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, 10 ವರ್ಷಗಳ ಕಾಲಾವಧಿಗೆ ಪಿ.ಪಿ.ಪಿ. ಆಧಾರದ ಮೇಲೆ ಷರತ್ತುಗಳಿಗೆ ಒಳಪಟ್ಟು ನೀಡುವ ಮಾರ್ಪಾಡಿ ನೊಂದಿಗೆ, ಹೆಚ್ಚಿನ ಕಾಲಾವಧಿಗೆ ಅನುಮತಿ ನೀಡಲು ಸರ್ಕಾರದ ಅನುಮೋದನೆ ಕೋರಲು ಸಭೆಯು ತೀರ್ಮಾನಿಸುತ್ತಾ, ಪಟ್ಟಿಯಲ್ಲಿರುವ**

**54 ಸ್ಥಳಗಳಿಗೆ ಬದಲಾಗಿ, 30 ಸ್ಥಳಗಳಿಗೆ ಮಾತ್ರ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಅರ್ಥಿಕ ಸ್ಥಾಯಿ ಸಮಿತಿ ಪರಿಶೀಲಿಸಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧವಾಗಿ ಒಪ್ಪುವುದೆಂದು" ತೀರ್ಮಾನಿಸಲಾಗಿರುತ್ತದೆ.** ಅದರಂತೆ, ಈ ಮೇಲ್ಕಂಡ ಅಂಶಗಳ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 02–08–2011 ಟಿಪ್ಪಣಿಯನ್ನು ಒಪ್ಪಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ 09–08–2011ರ ನಿರ್ಣಯ.

**–ಮುಂದೂಡಿದೆ–**

## *64]. ವಿಷಯದ ಸಂಖ್ಯೆ :–ತೆಆಸ್ಥಾಸ/288/2011–12*

*ಆಯುಕ್ತರ ಟಿಪ್ಪಣಿ ಸಂಖ್ಯೆ : ವಿದ್ಯಾ(2)ಪಿಆರ್/118/10–11, ದಿನಾಂಕ : 08–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 33 ಪ್ರೌಢ ಶಾಲೆಗಳು ಹಾಗೂ 13 ಸಂಯುಕ್ತ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಎಸ್.ಎಸ್.ಎಲ್.ಸಿ., ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಮೆ: ಕಿಯೋನಿಕ್ಸ್ ಸಂಸ್ಥೆ ರವರು ಮಲ್ಟಿ ಮೀಡಿಯಾ ಆಧಾರಿತ ಶಿಕ್ಷಣವನ್ನು ಐದು ವರ್ಷಗಳವರೆಗೆ ನೀಡಲು ಪ್ರಥಮ ವರ್ಷದ ಅನುಷ್ಠಾನ ಮತ್ತು ನಿರ್ವಹಣಾ ವೆಚ್ಚವು ರೂ.4,91,23,436/–ಗಳು ಆಗುವುದಾಗಿ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.*

*ಪಾಲಿಕೆಯ ಎಸ್.ಎಸ್.ಎಲ್.ಸಿ., ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಮಲ್ಟಿ ಮೀಡಿಯಾ ಆಧಾರಿತ ಶಿಕ್ಷಣವು ಉಪಯುಕ್ತವಾಗಿದ್ದು, ಸದರಿ ಕಾರ್ಯಕ್ರಮಕ್ಕೆ ವಿನಿಯೋಗಿಸಲು ಶಿಕ್ಷಣ ಇಲಾಖೆಯ ಆಯವ್ಯಯದಲ್ಲಿ ಅನುದಾನವನ್ನು ನಿಗದಿಪಡಿಸಿಲ್ಲದಿದ್ದರಿಂದ, ಸದರಿ ಕಾರ್ಯಕ್ರಮದ ಪ್ರಥಮ ವರ್ಷದ ಅನುಷ್ಠಾನ ಮತ್ತು ನಿರ್ವಹಣಾ ವೆಚ್ಚವಾದ ರೂ.4,91,23,436/–ಗಳನ್ನು ಸಾಮಾನ್ಯ ಆಡಳಿತದಲ್ಲಿ ಭರಿಸಿ ಮೆ:ಕಿಯೋನಿಕ್ಸ್ ಸಂಸ್ಥೆಯವರೊಂದಿಗೆ ಒಡಂಬಡಿಕೆ ಮಾಡಿಕೊಂಡು ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿತ್ತು. ಅದರಂತೆ, ದಿನಾಂಕ:22.02.2011ರಂದು ಸದರಿ ಪ್ರಸ್ತಾವನೆಯನ್ನು ಶಿಕ್ಷಣ ಸ್ಥಾಯಿ ಸಮಿತಿಯು ಅನುಮೋದಿಸಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಕ್ಕೆ ಕಳುಹಿಸಿದ್ದರ ಹಿನ್ನೆಲೆಯಲ್ಲಿ ದಿನಾಂಕ:14.03.2011ರಂದು ನಡೆದ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸಭೆಯಲ್ಲಿ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯವನ್ನು ಅನುಮೋದಿಸಿ ಪಾಲಿಕೆಯ ನಿರ್ಣಯಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.*

*ಪಾಲಿಕೆ ಸಭೆಯ ಅನುಮೋದನೆ ನಿರೀಕ್ಷಿಸಿ ದಿನಾಂಕ:19.03.2011ರಂದು ಮಲ್ಟಿ ಮೀಡಿಯಾ ಆಧಾರಿತ ಶಿಕ್ಷಣ ಯೋಜನೆಯನ್ನು ಅನುಷ್ಠಾನಗೊಳಿಸಲು ಮೆ:ಕಿಯೋನಿಕ್ಸ್ ಸಂಸ್ಥೆಯು ತಮ್ಮ ಜವಾಬ್ದಾರಿಯ ಮೇಲೆ ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಳ್ಳಲು ಸಂಕಲ್ಪನಾ ಪತ್ರ (Letter of Intend)ನ್ನು ನೀಡಲಾಗಿರುತ್ತದೆ.*

*ಶಿಕ್ಷಣ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಗಳನ್ನು ದಿನಾಂಕ:29.03.2011ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಅಧಿಕ ವಿಷಯದ ಸಂಖ್ಯೆ:1(285)ರನ್ವಯ ಸರ್ವಾನುಮತದಿಂದ ಅಂಗೀಕರಿಸಲಾಗಿರುತ್ತದೆ.*

*ನಂತರ, ಮಲ್ಟಿ ಮೀಡಿಯಾ ಆಧಾರಿತ ಶಿಕ್ಷಣದ ಒಂದು ವರ್ಷದ ಅಂದಾಜು ವೆಚ್ಚ ರೂ.4,91,23,436/–ಗಳು ಎಂಬುದರ ಬದಲಿಗೆ ಐದು ವರ್ಷಗಳ ಅಂದಾಜು ವೆಚ್ಚ ರೂ.4,91,23,436/–ಗಳು ಎಂದು ತಿದ್ದುಪಡಿ ಮಾಡಿ ಟಿಪ್ಪಣಿಯನ್ನು ಮಂಡಿಸಲಾಗಿ, ಸದರಿ ತಿದ್ದುಪಡಿ ಟಿಪ್ಪಣಿಯು ದಿನಾಂಕ:31.03.2011ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ವಿಷಯದ ಸಂಖ್ಯೆ:297/10–11ರಲ್ಲಿ ಸರ್ವಾನುಮತದಿಂದ ಅಂಗೀಕಾರವಾಗಿರುತ್ತದೆ.*

ಮುಂದುವರೆದಂತೆ, ಮೆ:ಕಿಯೋನಿಕ್ಸ್ ಸಂಸ್ಥೆಯು ದಿನಾಂಕ:13.05.2011ರಂದು ಮತ್ತು ದಿನಾಂಕ:29.07.2011ರಂದು ಮನವಿಗಳನ್ನು ಸಲ್ಲಿಸಿ, ಎರಡನೇ ವರ್ಷದಿಂದ ಪ್ರತಿ ಶೈಕ್ಷಣಿಕ ವರ್ಷಗಳಲ್ಲಿ ಸದರಿ ಕಾರ್ಯಕ್ರಮದ ಮುಂದುವರಿಕೆ ಕಾರ್ಯಾಚರಣೆ (Operation Charges) ಮತ್ತು ನಿರ್ವಹಣಾ ವೆಚ್ಚ (Maintenance Cost) ರೂ.75.00 ಲಕ್ಷಗಳನ್ನು (ಈ ವೆಚ್ಚವು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಬೆಲೆ ಪರಿವಿಡಿಯ ಆಧಾರದ ಮೇಲೆ ಶೇ.5 ರಿಂದ 10ರಷ್ಟು ವ್ಯತ್ಯಾಸವಾಗಬಹುದು) ಪಾಲಿಕೆಯ ಭರಿಸಬೇಕಾಗಿ ಕೋರಿರುತ್ತಾರೆ.

ಪರಿಶೀಲಿಸಲಾಗಿ, ಮೆ: ಕಿಯೋನಿಕ್ಸ್ ಸಂಸ್ಥೆಯು ಸದರಿ ಕಾರ್ಯಕ್ರಮಕ್ಕೆ ಅಗತ್ಯವಿರುವ ಯಂತ್ರ, ಸಲಕರಣೆ ಮತ್ತು ಪರಿಕರಗಳ ಅನುಷ್ಠಾನಿಸುವ ವೆಚ್ಚ ಮತ್ತು ಪ್ರಥಮ ವರ್ಷದ ನಿರ್ವಹಣಾ ವೆಚ್ಚವು ಸೇರಿದಂತೆ ಒಟ್ಟು ವೆಚ್ಚ ರೂ.4,91,23,436/–ಗಳು ಆಗುವುದರ ಜೊತೆಗೆ 2ನೇ ವರ್ಷದಿಂದ ಕಾರ್ಯಾಚರಣೆ (Operation Charges) ಮತ್ತು ನಿರ್ವಹಣಾ ವೆಚ್ಚವಾಗಿ (Maintenance Cost) ರೂ.75.00 ಲಕ್ಷಗಳನ್ನು (ಈ ವೆಚ್ಚವು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಬೆಲೆ ಪರಿವಿಡಿಯ ಆಧಾರದ ಮೇಲೆ ಶೇ.5 ರಿಂದ 10 ರಷ್ಟು ವ್ಯತ್ಯಾಸವಾಗಬಹುದು) ಪ್ರತಿ ಶೈಕ್ಷಣಿಕ ವರ್ಷಕ್ಕೂ ಈ ಮೊತ್ತವನ್ನು ಪಾಲಿಕೆಯು ಭರಿಸಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳ ಆಧಾರದ ಮೇಲೆ ಸದರಿ ಪ್ರಸ್ತಾವನೆಯ ಅನುಮೋದನೆಗಾಗಿ ಮಂಡಿಸಿರುವ ದಿನಾಂಕ : 08.08.2011ರ ಮಾನ್ಯ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ : 22.08.2011ರ ನಿರ್ಣಯ.

**ನಿರ್ಣಯ : ದಿನಾಂಕ : 22–08–2011 ರ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.**

## 65]. ವಿಷಯದ ಸಂಖ್ಯೆ :–ತೆಆಸ್ಥಾಸ/289/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ : ವಿದ್ಯಾ(2)ಪಿಆರ್/45/11–12, ದಿನಾಂಕ : 16–08–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪ್ರೌಢ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಶ್ರೀ ಕಲ್ಲಹಳ್ಳಿ ಕೆಂಪೇಗೌಡ, ಸಿಂಧೂ ಪ್ರಕಾಶನ ರವರು **"ಕೈಲಾಸ ಮಾನಸ ಸರೋವರ ಮಡಿಲಲ್ಲಿ"** ಎಂಬ ಪುಸ್ತಕವನ್ನು ಬರೆದಿದ್ದು, ಸದರಿ ಪುಸ್ತಕಗಳನ್ನು ಪಾಲಿಕೆಯ ಶಾಲಾ/ಕಾಲೇಜುಗಳ ಗ್ರಂಥಾಲಯಗಳಿಗೆ ಖರೀದಿಸಬೇಕೆಂದು ಮನವಿಯನ್ನು ಸಲ್ಲಿಸಿದ್ದು, ಉಲ್ಲೇಖದ ರೀತ್ಯ ಉಪ ಮಹಾಪೌರರು ಸದರಿ ಪುಸ್ತಕಗಳನ್ನು ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಖರೀದಿಸಿ ವಿದ್ಯಾರ್ಥಿಗಳಿಗೆ ಒದಗಿಸುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮತೆಗೆದುಕೊಳ್ಳಲು ಸೂಚಿಸಿರುತ್ತಾರೆ.

ಸದರಿ ಪುಸ್ತಕವು ಪಾಲಿಕೆಯಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸಂಸ್ಕೃತಿ ಮತ್ತು ಸಾಹಿತ್ಯದ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಉತ್ತಮ ಕೃತಿಯಾಗಿರುತ್ತದೆ. ತಲಾ ಒಂದು ಪುಸ್ತಕಕ್ಕೆ ರೂ.150/–ಗಳ ಮುಖಬೆಲೆ ಇದ್ದು, ಪಾಲಿಕೆಯ ಶಾಲಾ/ಕಾಲೇಜುಗಳಿಗೆ 300 ಪುಸ್ತಕಗಳನ್ನು ಖರೀದಿಸಲು ರೂ.45,000/–ಗಳು ವೆಚ್ಚವಾಗಲಿದೆ. ಸದರಿ ಪುಸ್ತಕವನ್ನು ಖರೀದಿಸಲು ಪಾಲಿಕೆಯ ಶಿಕ್ಷಣ ಇಲಾಖೆಯಲ್ಲಿ ಯಾವುದೇ ಆಯ–ವ್ಯಯ ನಿಗದಿಪಡಿಸದಿರುವ ಕಾರಣ, ಜಿ.ಎ.ಡಿ. ಶೀರ್ಷಿಕೆಯಡಿಯಲ್ಲಿ ಉಪ ಮಹಾಪೌರರು ನೀಡಿರುವ ಟಿಪ್ಪಣಿಯಾನ್ವಯ ಪುಸ್ತಕ ಖರೀದಿ ಮಾಡಬಹುದಾಗಿರುತ್ತದೆ.

ತತ್ಸಂಬಂಧವಾಗಿ, 2011–12ನೇ ಸಾಲಿನ ಆಯ–ವ್ಯಯದ ಲೆಕ್ಕ ಶೀರ್ಷಿಕೆ ಜಿ.ಎ.ಡಿ.ಯಲ್ಲಿ ಶ್ರೀ.ಕಲ್ಲಹಳ್ಳಿ ಕೆಂಪೇಗೌಡ, ಸಿಂಧೂ ಪ್ರಕಾಶನ ಬರೆದಿರುವ **"ಕೈಲಾಸ ಮಾನಸ ಸರೋವರದ ಮಡಿಲಲ್ಲಿ"** ಎಂಬ 300 ಪುಸ್ತಕಗಳನ್ನು ತಲಾ ರೂ.150/–ಗಳಂತೆ ಖರೀದಿಸಲು ತಗಲುವ ವೆಚ್ಚ ರೂ.45,000/–ಗಳನ್ನು ಮಂಜೂರು ಮಾಡುವ ಸಂಬಂಧ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ದಿನಾಂಕ : 16.08.2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ : 22–08–2011ರ ನಿರ್ಣಯ.

**ನಿರ್ಣಯ : ದಿನಾಂಕ : 22–08–2011 ರ ಶಿಕ್ಷಣ ಸ್ಥಾಯಿ ಸಮಿತಿಯ ನಿರ್ಣಯವನ್ನು ಒಪ್ಪಿದೆ.**

## 66]. ವಿಷಯದ ಸಂಖ್ಯೆ :–ತೆಆಸ್ಥಾಸ/290/2011–12

ಆಯುಕ್ತರ ಟಿಪ್ಪಣಿ ಸಂಖ್ಯೆ: ಬಿ12(3ಎ)ಸಿಪಿಆರ್/04/10–11, ದಿನಾಂಕ : 07–09–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರ ಪೂಜ್ಯ ಮಹಾಪೌರರ ಟಿಪ್ಪಣಿ ಸಂಖ್ಯೆ : ಎಂ.ಪಿ.ಎಸ್/ಪಿಆರ್/581–2011–12, ದಿನಾಂಕ 30–05–2011ರ ಟಿಪ್ಪಣಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರ ಹುದ್ದೆಯು ಪ್ರತಿಷ್ಠಿತ ಹುದ್ದೆಯಾಗಿದ್ದು, ಸದರಿ ಹುದ್ದೆಯಲ್ಲಿ ಜವಾಬ್ದಾರಿಯುತವಾದ ಕೆಲಸಕಾರ್ಯಗಳನ್ನು ನಿರ್ವಹಿಸಬೇಕಾಗಿರುವುದರಿಂದ ಹಾಗೂ ಪ್ರತಿನಿತ್ಯ ಸಾರ್ವಜನಿಕರಿಂದ ಬರುವ ದೂರುಗಳಿಗೆ, ಟೀಕೆ ಟಿಪ್ಪಣಿಗಳಿಗೆ ಅಲ್ಲದೆ ಪತ್ರಿಕಾ ಮಾಧ್ಯಮ ಮತ್ತು ದೃಶ್ಯ ಮಾಧ್ಯಮಗಳ ಟೀಕೆ ಟಿಪ್ಪಣಿಗಳಿಗೆ ಸ್ಪಂಧಿಸುವ ಮೂಲಕ ಕೆಲಸ ನಿರ್ವಹಿಸಬೇಕಾಗಿರುವುದರಿಂದ ಒಬ್ಬ ನುರಿತ ಪತ್ರಿಕಾ ಕಾರ್ಯದರ್ಶಿಯವರ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ. ಆದ್ದರಿಂದ, ಶ್ರೀ ಬಿ. ಎನ್. ರಾಘವೇಂದ್ರ, ನಂ.1652, ಹೂಸ ನಂ.50, 2ನೇ ಮುಖ್ಯರಸ್ತೆ, ರಾಮ ಮೋಹನಪುರ, ಬೆಂಗಳೂರು–21 ಇವರು ಪತ್ರಿಕಾ ಮತ್ತು ದೃಶ್ಯ ಮಾಧ್ಯಮಗಳ ಕಾರ್ಯಚಟುವಟಿಕೆಗಳಲ್ಲಿ ಒಳ್ಳೆಯ ಅನುಭವ ಹೊಂದಿರುವುದರಿಂದ, ಸದರಿಯವರನ್ನು ಸಂಚಿತ ವೇತನದ ಆಧಾರದ ಮೇಲೆ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನಿಯೋಜಿಸುವ ಬಗ್ಗೆ ಸೂಕ್ತ ಹಾಗೂ ಜರೂರು ಕ್ರಮ ತೆಗೆದುಕೊಳ್ಳುವಂತೆ ಕೋರಿರುತ್ತಾರೆ.

ಈ ಸಂಬಂಧವಾಗಿ, ಶ್ರೀ ಬಿ. ಎನ್. ರಾಘವೇಂದ್ರ, ಇವರನ್ನು ಕಾನೂನು ಕೋಶದ ಮುಖ್ಯಸ್ಥರ ವರದಿ ದಿನಾಂಕ : 06–07–2011ರ ಕಾನೂನು ಕೋಶದ ಮುಖ್ಯಸ್ಥರ ವರದಿಯನ್ವಯ 1977ರ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷವ್ ನಿಯಮಾವಳಿಗಳ ನಿಯಮ–20(ಬಿ)ರನ್ವಯ ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳುವ ಬಗ್ಗೆ ಸರ್ಕಾರದ ಪೂರ್ವಾನುಮತಿ ಪಡೆದ ನಂತರ ಸದರಿಯವರನ್ನು ನಿಯಮಾನುಸಾರ ಸಂಚಿತ ವೇತನದ ಮೇಲೆ ನೇಮಿಸಿಕೊಳ್ಳಬಹುದು ಎಂದು ಅಭಿಪ್ರಾಯ ನೀಡಿರುತ್ತಾರೆ.

ಆದ್ದರಿಂದ, ಈ ಹಿಂದಿನ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯಲ್ಲಿ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ:ತೆಆಸ್ಥಾಸ/115/2010–11 ಸಭೆಯ ನಡವಳಿಗಳು ಇದರಂತೆ ಕೈಗೊಂಡ ತೀರ್ಮಾನದಂತೆ ಶ್ರೀ ಲಿಂಗರಾಜು, ಈ ಹಿಂದಿನ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯವರಿಗೆ ಮಾಸಿಕ ಸಂಚಿತ ವೇತನ ರೂ 15,000/–ಗಳನ್ನು ನಿಗದಿ ಪಡಿಸಿರುವುದನ್ನು ತಮ್ಮ ಅವಗಾಹನೆಗೆ ತಂದು, ಶ್ರೀ ಬಿ. ಎನ್. ರಾಘವೇಂದ್ರ ರವರನ್ನು ಪೂಜ್ಯ ಮಹಾಪೌರರ ಪತ್ರಿಕಾ ಕಾರ್ಯದರ್ಶಿಯನ್ನಾಗಿ ಕರ್ನಾಟಕ ಮುನಿಸಿಪಲ್ ಕಾರ್ಪೋರೆಷನ್ ನಿಯಮ–20(ಬಿ) ರೀತ್ಯ ನೇಮಿಸಿಕೊಳ್ಳಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ : ದಿನಾಂಕ : 07–09–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.</u>***

## ***<u>67]. ವಿಷಯದ ಸಂಖ್ಯೆ :–ತೆಆಸ್ಥಾಸ/291/2011–12</u>***

ಆಯುಕ್ತರ ಟಿಪ್ಪಣಿ ದಿನಾಂಕ : 07–09–2011ರಲ್ಲಿ ವಿವರಿಸಿರುವಂತೆ, ಸದರಿ ಪ್ರದೇಶವು 150 ಎಕರೆ ವಿಸ್ತೀರ್ಣವಿದ್ದು 100ಎಕರೆ ಜಾಗವನ್ನು ಮೇ॥ ಶ್ರೀನಿವಾಸ ಗಾಯತ್ರಿ ರಿಸೋಸ್ ರಿಕವರಿ ಲಿಮಿಟೆಡ್ ರವರಿಗೆ ತ್ಯಾಜ್ಯದಿಂದ ವಿದ್ಯುತ್ ಉತ್ಪಾದನೆ ಯೋಜನೆಗೆ ನೀಡಲಾಗಿದೆ. ಇನ್ನೂಳಿದ 50 ಎಕರೆ ಪ್ರದೇಶದಲ್ಲಿ ಪಾಲಿಕೆ ವತಿಯಿಂದ ಲ್ಯಾಂಡ್‌ಫಲ್ ನಿರ್ಮಿಸಲಾಗಿರುತ್ತದೆ.

ಸದರಿ ತ್ಯಾಜ್ಯ ಸಂಸ್ಕರಣಾ / ವಿಲೇವಾರಿ ಘಟಕದಲ್ಲಿ ಪ್ರತಿನಿತ್ಯ ಅಂದಾಜು 1450 ಮೆ.ಟನ್ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ. ಸದರಿ ತ್ಯಾಜ್ಯ ಸಂಸ್ಕರಣಾ / ವಿಲೇವಾರಿ ಘಟಕಕ್ಕೆ ಸಂಪರ್ಕ ಕಲ್ಪಿಸಲು ಅಪ್ರೋಚ್ ರಸ್ತೆಯಿದ್ದು, ಸದರಿ ಅಪ್ರೋಚ್ ರಸ್ತೆಯ ಉದ್ದ ಅಂದಾಜು 2.2 ಕಿ.ಮೀಗಳಿರುತ್ತದೆ. ಈ ರಸ್ತೆಯಲ್ಲಿ ಸುಮಾರು 180 ತ್ಯಾಜ್ಯ ವಿಲೇವಾರಿ ಲಾರಿಗಳು ಪ್ರತಿನಿತ್ಯ ಸಂಚರಿಸುತ್ತವೆ. ಲಾರಿಗಳ ಅಧಿಕ ಸಂಚಾರ ಮತ್ತು ಭಾರದಿಂದ ಇಲ್ಲಿನ ಅಪ್ರೋಚ್ ರಸ್ತೆಯು ಹಾಳಾಗಿದ್ದು, ಸಂಚಾರಕ್ಕೆ ತೀವ್ರ ಅಡಚಣೆಯಾಗಿರುತ್ತದೆ.

ಸದರಿ ಅಪ್ರೋಚ್ ರಸ್ತೆಯ ಸುಮಾರು 1.5 ಕಿಮೀ ಉದ್ದದ ರಸ್ತೆಯು ತೀರಾ ಹಾಳಾಗಿ ಗುಂಡಿಗಳು ನಿರ್ಮಾಣವಾಗಿರುತ್ತದೆ. ರಸ್ತೆಯನ್ನು ಮರು ನಿರ್ಮಾಣ ಮಾಡಬೇಕಾಗಿರುತ್ತದೆ.

ಇದರಿಂದ ತ್ಯಾಜ್ಯ ವಿಲೇವಾರಿ ಲಾರಿಗಳು ಸಂಚರಿಸಲು ಬಹಳ ಕಷ್ಟಕರವಾಗಿರುತ್ತದೆ ಹಾಗೂ ಸಾರ್ವಜನಿಕ ವಾಹನಗಳ ಓಡಾಟಕ್ಕೆ ಬಹಳ ತೊಂದರೆಯಾಗಿರುತ್ತದೆ.

ಇತ್ತಿಚೆಗೆ ಮಾನ್ಯ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ಸದರಿ ಘಟಕಕ್ಕೆ ಬೇಟಿ ನೀಡಿದ ಸಂದರ್ಭದಲ್ಲಿ ಸದರಿ ಅಪ್ರೋಚ್ ರಸ್ತೆಯನ್ನು ಉತ್ತಮಪಡಿಸಲು ಸೂಚಿಸಿರುತ್ತಾರೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿ ಅಪ್ರೋಚ್ ರಸ್ತೆಯನ್ನು ಉತ್ತಮಪಡಿಸಬೇಕಾದ ಅವಶ್ಯಕತೆಯಿರುತ್ತದೆ. ಲೋಕೋಪಯೋಗಿ ಇಲಾಖೆ ದರಪಟ್ಟಿ 2010–11ನೇ ಸಾಲಿನಂತೆ ಅಂದಾಜು ಪಟ್ಟಿಯನ್ನು ರೂ.58.97 ಲಕ್ಷಗಳಿಗೆ ತಯಾರಿಸಲಾಗಿರುತ್ತದೆ. ಸದರಿ ಕಾಮಗಾರಿಯ ಅಂದಾಜು ವೆಚ್ಚವನ್ನು ಲೆಕ್ಕಶೀರ್ಷಿಕೆ (ಪಿ02200) 13ನೇ ಹಣಕಾಸು ಆಯೋಗದ 2010–11ನೇ ಸಾಲಿನ ಅನುದಾನದಡಿಯಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಮೀಸಲಿರಿಸಿರುವ ರೂ.4000 ಲಕ್ಷಗಳ ಅನುದಾನದಡಿಯಲ್ಲಿ ಮೀಸಲಿರಿಸಿರುವ ಮೊತ್ತದಲ್ಲಿ ಭರಿಸಬಹುದಾಗಿರುತ್ತದೆ.

ಈ ಮೇಲ್ಕಂಡ ಅಂಶಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸುತ್ತಾ ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿರುವ ಬಗ್ಗೆ.

1. ಅಂದಾಜು ಮೊತ್ತ ರೂ.58.97 ಲಕ್ಷಗಳಿಗೆ ಕಾಮಗಾರಿ ಸಂಕೇತಕ್ಕಾಗಿ.
2. ಅಂದಾಜು ಮೊತ್ತ ರೂ.58.97 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಗಾಗಿ.
3. ಅಂದಾಜು ಮೊತ್ತ ರೂ.58.97 ಲಕ್ಷಗಳ ಕಾಮಗಾರಿಯನ್ನು ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ ಕೋರಿ ಮಂಡಿಸಿದೆ.

***ನಿರ್ಣಯ : ದಿನಾಂಕ : 07–09–2011ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *68]. ವಿಷಯದ ಸಂಖ್ಯೆ :–ತೆಆಸ್ಥಾಸ/292/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 15–09–2011ರಲ್ಲಿ ವಿವರಿಸಿರುವಂತೆ, ವಾರ್ಡ್ 47ರ ದೇವರಜೀವನಹಳ್ಳಿಯ ಪಾಲಿಕೆ ಸದಸ್ಯರಾದ ಶ್ರೀ ಆರ್. ಸಂಪತ್‌ರಾಜ್ ರವರ ಡಿ.ಜೆ ಹಳ್ಳಿ ವ್ಯಾಪ್ತಿಯಲ್ಲಿ ಬರುವ ರಸ್ತೆಗಳನ್ನು ಹಾಗು ಮೋರಿಗಳು ಮತ್ತು ಕಲ್ವರ್ಟ್ ಅಭಿವೃದ್ಧಿಪಡಿಸುವ ಬಗ್ಗೆ ಪತ್ರವನ್ನು ನೀಡಿರುತ್ತಾರೆ.ಅದರಂತೆ ಸ್ಥಳ ಪರಿಶೀಲಿಸಿ , ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಈ ಕೆಳಕಂಡ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಲು ಅವಶ್ಯವಿರುತ್ತದೆ.

1) **ಟ್ಯಾನರಿ ರಸ್ತೆಯಿಂದ, ಡಿ.ಜೆ ಹಳ್ಳಿ ಮುಖ್ಯ ರಸ್ತೆಯ ಆನಂದ್ ಥಿಯೇಟರ್ ರಸ್ತೆಯವರೆಗೆ ಅಭಿವೃದ್ಧಿ:–**
   ಈ ರಸ್ತೆಯು 450 ಮೀ ಉದ್ದವಿದ್ದು 8 ಮೀ ಅಗಲವಿದ್ದು, ಇದು ಅತಿ ಸಂಚಾರ ದಟ್ಟಣೆಯಿಂದ ಕೂಡಿದ್ದು, ರಸ್ತೆಯು ಬಹಳಷ್ಟು ಗುಂಡಿಗಳ್ಳಿಂದ ಕೂಡಿರುತ್ತದೆ ಹಾಗೂ ಡಾಂಬರ ಮೇಲ್ಮೈ ಹಾಳಾಗಿರುತ್ತದೆ ಹಾಗೂ ಎರಡು ಬದಿಯ ಚರಂಡಿಗಳು ಶಿಥಿಲವಾಗಿರುತ್ತದೆ ಮತ್ತು ಚರಂಡಿಯಲ್ಲಿ ಹೂಳು ತುಂಬಿದ್ದು ನೀರು ಸರಾಗವಾಗಿ ಹರಿದು ಹೋಗುವುದಿಲ್ಲ. ಆದುದರಿಂದ ಈ ರಸ್ತೆಯಲ್ಲಿ ಎರಡು ಬದಿಗೆ RCC ಚರಂಡಿ ಕವರ್ ಸಹಿತವಾಗಿ ನಿರ್ಮಿಸಿ ಮಳೆ ನೀರು ಕೊಯ್ಲು ಇಂಗುಗುಂಡಿ ಅಳವಡಿಸಿ, ಅಡ್ಡ ಮೋರಿಗಳನ್ನು ನಿರ್ಮಿಸಿ ,ಡಾಂಬರೀಕರಣ ಮಾಡಿ ರಸ್ತೆ ಅಭಿವೃದ್ಧಿಪಡಿಸಲು ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು, ಇದರ ಮೊತ್ತವು ರೂ.63.10 ಲಕ್ಷಗಳಾಗಿರುತ್ತದೆ.
2) **ಮುನಿನಾಗಪ್ಪ ಬಡಾವಣೆಯ ಮುಖ್ಯ ರಸ್ತೆಯ ಅಭಿವೃದ್ಧಿ**
   ಈ ರಸ್ತೆಯು 250 ಮೀ ಉದ್ದವಿದ್ದು, ರಸ್ತೆಯು ಬಹಳಷ್ಟು ಗುಂಡಿಗಳ್ಳಿಂದ ಕೂಡಿರುತ್ತದೆ ಹಾಗೂ ಡಾಂಬರ ಮೇಲ್ಮೈ ಹಾಳಾಗಿರುತ್ತದೆ ಹಾಗೂ ಎರಡು ಬದಿಯ ಚರಂಡಿಗಳು ಶಿಥಿಲವಾಗಿರುತ್ತದೆ ಮತ್ತು ಅಡ್ಡ ಮೋರಿಗಳಿರುವುದಿಲ್ಲ. ಈ ರಸ್ತೆಯಲ್ಲಿ ಎರಡು ಬದಿಗೆ RCC ಚರಂಡಿ ನಿರ್ಮಿಸಿ, ಮಳೆ ನೀರು ಕೊಯ್ಲು ಅಳವಡಿಸಿ ಅಡ್ಡ ಮೋರಿಗಳನ್ನು ನಿರ್ಮಿಸಲು ಹಾಗೂ ರಸ್ತೆಗೆ ಡಾಂಬರು ಅಳವಡಿಸಿ ರಸ್ತೆ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿ ತಯಾರಿಸಿಲಾಗಿದ್ದು, ಇದರ ಮೊತ್ತವು ರೂ.53.00 ಲಕ್ಷಗಳಾಗಿರುತ್ತದೆ.
3) **ಮುರುಗನ್ ದೇವಸ್ಥಾನ ರಸ್ತೆಯ ಅಭಿವೃದ್ಧಿ**
   ಈ ರಸ್ತೆಯ 205 ಮೀ ಉದ್ದವಿದ್ದು, ಡಾಂಬರು ರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು, ಈ ರಸ್ತೆಯನ್ನು ಹೊಸದಾಗಿ ಹಾಗೂ ರಸ್ತೆಯ ಒಂದು ಬದಿಗೆ RCC ಚರಂಡಿ ನಿರ್ಮಿಸಿ, ಅಡ್ಡ ಮೋರಿಗಳನ್ನು ನಿರ್ಮಿಸಿ ಮಳೆ ನೀರು ಕೋಯ್ಲು ಅಳವಡಿಸಿ ಅಭಿವೃದ್ಧಿಪಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಇದರ ಮೊತ್ತ ರೂ.40.23 ಲಕ್ಷಗಳಾಗಿರುತ್ತವೆ.
4) **ರೋಷನ್ ನಗರದ ಅಭಿವೃದ್ಧಿ**
   ಈ ಪ್ರದೇಶವು ಕೊಳಚೆ ಪ್ರದೇಶವಾಗಿದ್ದು, ಇಲ್ಲಿ ವಾಸವಾಗಿರುವ ಜನ ಹಿಂದುಳಿದ ವರ್ಗದವರಾಗಿದ್ದು, ಸದರಿ ಪ್ರದೇಶದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿದ್ದು, ಮಾನ್ಯ ಪಾಲಿಕೆ ಸದಸ್ಯರು, ಈ ನಗರಕ್ಕೆ ತುರ್ತಾಗಿ ತಾತ್ಕಲಿಕ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕೋರಿರುತ್ತಾರೆ. ಈ ನಗರದಲ್ಲಿ ಚಪಡ್ಡಿ ಕಲ್ಲಿನ ರಸ್ತೆ ಹಾಗೂ

ರಸ್ತೆ ಬದಿಯಲ್ಲಿ L ಆಕಾರದ ಚರಂಡಿಯನ್ನು ನಿರ್ಮಿಸಲು ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ. ಇದರ ಮೊತ್ತ ರೂ.14.82 ಲಕ್ಷ ರೂಪಾಯಿಗಳಾಗಿರುತ್ತದೆ.

5) **<u>ಬಂಗಾರಗಿರಿ ರಸ್ತೆಯ ಎಡಬದಿ ಒಳಚರಂಡಿ ಅಭಿವೃದ್ಧಿ ಮತ್ತು ಶ್ರೀನಿವಾಸ ನಗರದ ಸಿಮೆಂಟ್ ಕಾಂಕ್ರೀಟ್ ರಸ್ತೆಯ ದುರಸ್ತಿ ಕಾಮಗಾರಿ.</u>**

ಸದರಿ ರಸ್ತೆಯ 105 ಮೀ ಉದ್ದವಿದ್ದು, ಈ ರಸ್ತೆಗೆ RCC ಚರಂಡಿ ನಿರ್ಮಿಸಿ, ಮಳೆ ನೀರು ಕೊಯ್ಲು ಅಳವಡಿಸಿ ಅಡ್ಡ ಮೋರಿಗಳನ್ನು ನಿರ್ಮಿಸಲು ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಹಾಗೂ ಶ್ರೀನಿವಾಸನಗರದಲ್ಲಿ BWSSB ರವರು ಅಗೆದ ಸ್ಥಳಗಳಲ್ಲಿ ರಸ್ತೆ ಅಭಿವೃದ್ಧಿಗೆ ಅಂದಾಜು ಪಟ್ಟಿಯಲ್ಲಿ ಅಗತ್ಯ ಅಂಶಗಳನ್ನು ಅಳವಡಿಸಿಕೊಳ್ಳಲಾಗಿದೆ. ಇದರ ಅಂದಾಜು ಮೊತ್ತ ರೂ. 16.48 ಲಕ್ಷಗಳಾಗಿರುತ್ತವೆ.

ಆದುದರಿಂದ ಡಿ.ಜೆ ಹಳ್ಳಿಯ ವ್ಯಾಪ್ತಿಗೆ ಬರುವ ಮೇಲ್ಕಂಡ ಕಾಮಗಾರಿಗಳು ಸಾರ್ವಜನಿಕ ಹಿತದೃಷ್ಟಿಯಿಂದ ಅವಶ್ಯಕತೆಯಿದ್ದು ಈ ಕಾಮಗಾರಿಗಳ ಸಮಗ್ರ ಯೋಜನಾ ವರದಿಯನ್ನು 2011–12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ದರಪಟ್ಟಿಯಂತೆ ಒಟ್ಟು ಅಂದಾಜು ಪಟ್ಟಿಗಳ ಮೊತ್ತ ರೂ.188.50 ಲಕ್ಷಗಳಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ಕೋರಿ ಬೃಹತ್ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿಗೆ ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 24–06–2011 ರಂದು ನೆಡೆಸಲಾದ ಸಭೆಯ ನಡುವಳಿಯಲ್ಲಿ ಅನುಮೋದಿಸಿರುವ ಪ್ರಯುಕ್ತ ಸದರಿ ಕಾಮಗಾರಿಯ ಅಂದಾಜಿನ ವೆಚ್ಚವನ್ನು 2011–12 ನೇ ಸಾಲಿನ ಆಯವ್ಯಯದಲ್ಲಿ ಭರಿಸಲು ಕೋರಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

*<u>ನಿರ್ಣಯ :</u>* **<u>ದಿನಾಂಕ:15–09–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ಶಾಖೆಯ ಲೆಕ್ಕ ಶೀರ್ಷಿಕೆಯಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.</u>**

## ***<u>69]. ವಿಷಯದ ಸಂಖ್ಯೆ :–ತೆಆಸ್ಥಾಸ/293/2011–12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ:ಜಆ(ಕ)ಪಿಎಸ್ಆರ್(4)61/2011–12, ದಿನಾಂಕ : 15–09–2011ರಲ್ಲಿ ವಿವರಿಸಿರುವಂತೆ, ಪೂಜ್ಯ ಮಹಾಪೌರರು ಟಿಪ್ಪಣಿ ಬರೆದು ಶ್ರೀಮತಿ ಜ್ಯೋತಿ ನಂ. 531/ಬಿ, ಶಿವಶಂಕರ ಬ್ಲಾಕ್, ಪೋಲೀಸ್ ಸ್ಟೇಷನ್ ರಸ್ತೆ, 1ನೇ ಅಡ್ಡರಸ್ತೆ, ಹೆಬ್ಬಾಳ, ಬೆಂಗಳೂರು ಇಲ್ಲಿ ವಾಸಿಸುತ್ತಿರುವ ಇವರು ತಮ್ಮ ಪುತ್ರನಾದ ಕುಮಾರ್ ಎಂ. ಹೇಮಂತ್ ಇವರು ವಿದ್ಯುತ್ ಅವಘಡದಿಂದಾಗಿ ಎರಡು ಕೈಗಳನ್ನು ಕಳೆದುಕೊಂಡಿದ್ದು ಸದರಿ ಬಾಲಕನು 10ನೇ ತರಗತಿಯನ್ನು ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದು ಅವನ ಮುಂದಿನ ವಿದ್ಯಾಭ್ಯಾಸಕ್ಕಾಗಿ ಧನ ಸಹಾಯ ಮಾಡುವಂತೆ ಕೋರಿ ಸಲ್ಲಿಸಿರುವ ಮನವಿಯನ್ನು ತಮ್ಮ ಪತ್ರದೊಂದಿಗೆ ಲಗತ್ತಿಸುತ್ತಾ, ಕುಮಾರ್ ಎಂ. ಹೇಮಂತ್ ಇವರು ವಿದ್ಯುತ್ ಅವಘಡದಿಂದ ತಮ್ಮ ಎರಡು ಕೈಗಳನ್ನು ಕಳೆದುಕೊಂಡಿದ್ದರೂ ಸಹಿತ ಅವರ ಕಾರ್ಯಕೌಶಲ್ಯಕ್ಕೆ ಕೊರತೆಯಿಲ್ಲ ಎಂಬಂತೆ ಅವರ ಕುರಿತು ಕನ್ನಡ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಹಲವಾರು ವರದಿಗಳೇ ಸಾಕ್ಷಿಯಾಗಿರುವುದಲ್ಲದೇ ರಾಜ್ಯದ ಅತ್ಯಂತ ಗಣ್ಯವ್ಯಕ್ತಿಗಳಿಂದ ಪ್ರಶಸ್ತಿ ಪುರಸ್ಕಾರ ಪಡೆದಿರುತ್ತಾರೆ. ಸದರಿ ಬಾಲಕನ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ಪಾಲಿಕೆಯಿಂದ ಧನ ಸಹಾಯ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಲು ನಿರ್ದೇಶಿಸಿರುತ್ತಾರೆ.

ಪೂಜ್ಯ ಮಹಾಪೌರರ ಟಿಪ್ಪಣಿಯೊಂದಿಗೆ ಸದರಿಯವರ ಮನವಿ, ಬಾಲಕನ ವಿದ್ಯುತ್ ಅವಘಡ, ಬಾಲಕನ ಸಾಧನೆ ಮತ್ತು ಚಿತ್ರಕಲಾ ಕೌಶಲ್ಯ, ಹಾಗೂ ಪ್ರಶಸ್ತಿ ಸ್ವೀಕರಿಸಿರುವ ಪತ್ರಿಕಾ ಪ್ರಕಟಣೆಗಳ ಪ್ರತಿಗಳನ್ನು ಒದಗಿಸಿರುತ್ತಾರೆ.

ಪಾಲಿಕೆಯಲ್ಲಿ ಕೊಡುಗೆ ಮತ್ತು ಸಹಾಯಾನುದಾನ ಮಂಜೂರು ಮಾಡಲು ಅಳವಡಿಸಿಕೊಂಡಿರುವ ಮಾರ್ಗ ಸೂಚಿಗಳನ್ವಯ ಅಗತ್ಯ ದಾಖಲೆಗಳನ್ನು ಪಡೆದು ಸಂಘ–ಸಂಸ್ಥೆಗಳು ನಡೆಸುವ ಕ್ರೀಡೆಗಳಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ವೃದ್ದಾಶ್ರಮ, ಅನಾಥಾಶ್ರಮ ಇತ್ಯಾದಿಗಳಿಗೆ, ಅಧ್ಯಯನ ಪೀಠಗಳಿಗೆ ಅನುದಾನ ನೀಡಲು ನಿರ್ದೇಶನವಿರುತ್ತದೆ. ವಿದ್ಯಾಭ್ಯಾಸಕ್ಕಾಗಿ ಅನುದಾನ ನೀಡುವ ಕುರಿತು ಯಾವುದೇ ನಿರ್ದೇಶನವಿರುವುದಿಲ್ಲ.

ಮುಂದುವರೆದಂತೆ, ಪ್ರಸಕ್ತ 2011–12 ನೇ ಸಾಲಿನ ಮಹಾನಗರ ಪಾಲಿಕೆಯ ಆಯವ್ಯಯವು ತಹಲ್‌ವರೆವಿಗೂ ಅನುಮೋದನೆಯಾಗಿರುವುದಿಲ್ಲ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಸದರಿ ಬಾಲಕನ ವಿದ್ಯಾಭ್ಯಾಸಕ್ಕಾಗಿ ರೂ. 1.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 15–09–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸಂಸ್ಕೃತಿ ಮತ್ತು ಕ್ರೀಡೆ– ಕೊಡುಗೆಗಳು ಮತ್ತು ಸಹಾಯಧನ ಲೆಕ್ಕಶೀರ್ಷಿಕೆ ಅಡಿಯಲ್ಲಿ ಒದಗಿಸಿರುವ ಅನುದಾನದಲ್ಲಿ ರು.1.00 ಲಕ್ಷ (ಒಂದು ಲಕ್ಷ) ಗಳನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.***

## *70]. ವಿಷಯದ ಸಂಖ್ಯೆ :–ತೆಆಸ್ಥಾಸ/294/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 15–09–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ –38 ರ ವ್ಯಾಪ್ತಿಯಲ್ಲಿನ ಮುನೇಶ್ವರನಗರ ಮತ್ತು ಪೀಣ್ಯ 4ನೇ ಬಡಾವಣೆಯಲ್ಲಿ ವಾಸಿಸುವ ಶೇ.22.75 ರ ಪರಿಶಿಷ್ಟ ಜಾತಿ / ಪಂಗಡದ ಜನರು ಅಭಿವೃದ್ಧಿ ಕಾಮಗಾರಿಗಳಿಂದ ವಂಚಿತರಾಗಿರುತ್ತಾರೆ. ಶೇ.22.75 ರ ಅನುದಾನದಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕೋರಿರುತ್ತಾರೆ.

ಸಂಘ ಸಂಸ್ಥೆಯವರು ಕೋರಿರುವಂತೆ 2010–11ನೇ ಸಾಲಿನ ಶೇ.22.75 ರ ಅನುದಾನದಡಿ ಮುನೇಶ್ವರನಗರ ಮತ್ತು ಪೀಣ್ಯ 4ನೇ ಬಡಾವಣೆಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು 2011–12ನೇ ಸಾಲಿನ ಆಯವ್ಯಯದಲ್ಲಿ ರೂ.59.00 ಲಕ್ಷಗಳ ಅನುದಾನ ಮೀಸಲಿರಿಸಲು ಮಂಜರಾತಿಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 15–09–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿನ ಶೇ.22.75 ರ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## *71]. ವಿಷಯದ ಸಂಖ್ಯೆ :–ತೆಆಸ್ಥಾಸ/295/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 15–09–2011ರಲ್ಲಿ ವಿವರಿಸಿರುವಂತೆ, ವಾರ್ಡ್ ಸಂಖ್ಯೆ 97ರ 5 ಕಾಮಗಾರಿಗಳ ಅಂದಾಜು ಮೊತ್ತ ರೂ. 100.00 ಲಕ್ಷಗಳಿಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ : ತೆಆಸ್ಥಾಸ /257/2010–11 ದಿನಾಂಕ 14–3–2011 ರ ಸಭೆಯ ನಡವಳಿಯಲ್ಲಿ ಸದರಿ ವಾರ್ಡ್‌ಗೆ ಗೋಷ್ವಾರೆ 3 ರಲ್ಲಿ ಒದಗಿಸಿರುವ ಮೊತ್ತ ರೂ. 100.00 ಲಕ್ಷಗಳಲ್ಲಿ ಅನುಮೋದನೆ ನೀಡಲು ಕೋರಿರುತ್ತಾರೆ.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ವಿಷಯದ ಸಂಖ್ಯೆ : ತೆಆಸ್ಥಾಸ /257/2010–11 ದಿನಾಂಕ 14–3–2011 ರ ಸಭೆಯ ನಡವಳಿಯಲ್ಲಿ ಗೋಷ್ವಾರೆ 3 ರ ಕ್ರಮ ಸಂಖ್ಯೆ 12ರಲ್ಲಿ ವಾರ್ಡ್ ಸಂಖ್ಯೆ 97ರ ಅಭಿವೃದ್ಧಿ ಕಾಮಗಾರಿಗಳಿಗಾಗಿ ರೂ. 100.00 ಲಕ್ಷಗಳನ್ನು ಅಳವಡಿಸಿಕೊಳ್ಳಲಾಗಿದೆ.

ಮೇಲ್ಕಂಡ ಮೊತ್ತ ರೂ. 100.00 ಲಕ್ಷಗಳಿಗೆ 2010–11 ನೇ ಸಾಲಿನಲ್ಲಿ ಜಾಬ್ ಸಂಖ್ಯೆಯನ್ನು ಪಡೆದಿರುವುದಿಲ್ಲ. ಆದ್ದರಿಂದ ಸದರಿ ಮೊತ್ತವು 2011–12 ನೇ ಸಾಲಿನ ಆಯವ್ಯಯದಲ್ಲಿ ಸೇರ್ಪಡೆಯಾಗಿರುವುದಿಲ್ಲ.

2011–12 ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಹಾಗೂ ಮೇಲ್ಕಂಡ 2010–11 ನೇ ಸಾಲಿನ ಅನುದಾನವನ್ನು 2011–12 ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ2255 ಅಡಿಯಲ್ಲಿ ವಾರ್ಡ್ ಸಂಖ್ಯೆ 97ರ ವಿಶೇಷ ಅಭಿವೃದ್ಧಿ ಕಾಮಗಾರಿಗಳು ಅಡಿ ಸೂಕ್ತ ಅನುದಾನ ಒದಗಿಸಿಕೊಳ್ಳಲು ಹಾಗೂ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :*** ***ದಿನಾಂಕ : 15–09–2011 ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಗಳನ್ನು 2011–12ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ2255 ರಲ್ಲಿ ಚಾಲ್ತಿ ಕಾಮಗಾರಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಿತು.***

## *72]. ವಿಷಯದ ಸಂಖ್ಯೆ :–ತೆಆಸ್ಥಾಸ/296/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : ಉಆ(ಕಂ)ಪಿಆರ್/1507/11–12, ದಿನಾಂಕ : 15–09–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಾಯ ಕೇಂದ್ರಗಳಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಮುಂದುವರೆಸುವ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಹಾಯ ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಆಸ್ತಿ ತೆರಿಗೆ ಸ್ವೀಕರಿಸಲು ಪ್ರತಿಯೊಂದು ವಾರ್ಡ್‌ನಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾಗಿರುತ್ತದೆ. ಸದರಿ ಕೇಂದ್ರಗಳಲ್ಲಿ ಆಸ್ತಿ ತೆರಿಗೆ ಸ್ವೀಕರಿಸುವಲ್ಲಿ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕಿಯೋನಿಕ್ಸ್ ಸಂಸ್ಥೆಯ ಜೊತೆಯಲ್ಲಿ Memorandum of Understanding ಅನುಸಾರ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನಿಯೋಜಿಸಿ ಕಾರ್ಯನಿರ್ವಹಿಸತ್ತಿದ್ದು ಸದರಿಯವರುಗಳನ್ನು ಕಾಲಕಾಲಕ್ಕೆ ನವೀಕರಿಸುತ್ತಾ ಬಂದಿರುತ್ತದೆ.

ಮುಂದುವರೆದಂತೆ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ದಿನಾಂಕ : 1–6–2011 ರಿಂದ ನಾಲ್ಕು ತಿಂಗಳ ಅವಧಿಗೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲಾಗಿದ್ದು ದಿನಾಂಕ : 8–6–2011 ರಂದು ನಡೆದ ಸಭೆಯ ವಿಷಯದ ಸಂಖ್ಯೆ : ತೆಆಸ್ಥಾಸ : 60 : 2011–12 ರಲ್ಲಿ ದಿನಾಂಕ : 25–5–2011ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲ ಸ್ವತ್ತುಗಳನ್ನು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡಿಸಲು ಸಮಗ್ರ ಸರ್ವೆ ಕಾರ್ಯವು ಪೂರ್ಣಗೊಂಡಿದ್ದು ಸದರಿ ಸರ್ವೆ ಕಾರ್ಯದಲ್ಲಿ ಗುರುತಿಸಲಾಗಿರುವ ಎಲ್ಲಾ ಸ್ವತ್ತುಗಳನ್ನು ಜಿ.ಐ.ಎಸ್ ಮಾಹಿತಿಯೊಂದಿಗೆ ತಾಳೆಮಾಡಿ, ಪ್ರತಿಯೊಂದು ಸ್ವತ್ತಿಗೂ ಹೊಸದಾಗಿ ಪಿ.ಐ.ಡಿ ಸಂಖ್ಯೆಯನ್ನು ನೀಡುವ ಕಾರ್ಯವು ಶೇಕಡ 60 ರಷ್ಟು ಪೂರ್ಣಗೊಂಡಿರುತ್ತದೆ. ಸದರಿ ಕಾರ್ಯವು ಪೂರ್ಣಗೊಳಿಸಲು ಸುಮಾರು 3 ರಿಂದ 4 ತಿಂಗಳ ಕಾಲಾವಕಾಶ ಅವಶ್ಯಕತೆ ಇರುತ್ತದೆ. ತದನಂತರ ಆಸ್ತಿ ತೆರಿಗೆ, ಬೇಡಿಕೆ, ಬಾಕಿ ಇತ್ಯಾದಿ ವಿವರಗಳನ್ನು ಸಿದ್ಧಪಡಿಸಿ ಪ್ರತಿಯೊಂದು ಸ್ವತ್ತಿನ ಮಾಲೀಕರಿಗೆ ಸೂಚನಾ ಪತ್ರವನ್ನು ಜಾರಿ ಮಾಡಿ ಅವುಗಳಲ್ಲಿ ಏನಾದರೂ ನ್ಯೂನತೆಗಳು ಕಂಡು ಬಂದಲ್ಲಿ ಸ್ವತ್ತಿನ ಮಾಲೀಕರಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ಗಣಕಯಂತ್ರದಲ್ಲಿ ದಾಖಲಿಸಿಕೊಳ್ಳಬೇಕಾಗಿರುತ್ತದೆ. ಹಾಗೂ ಕಂದಾಯ ಇಲಾಖೆಯ ಕಾರ್ಯನಿರ್ವಾಹಕ ಸಿಬ್ಬಂದಿಯು ಸದರಿ ಕಾರ್ಯಕ್ಕೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಬೇಕಾಗಿರುತ್ತದೆ. 2011–2012ನೇ ಸಾಲಿಗೆ ಸಂಬಂಧಪಟ್ಟಂತೆ ಎರಡನೇ ಕಂತಿನ ಆಸ್ತಿ ತೆರಿಗೆ ಸ್ವೀಕೃತಿಯು ದಿನಾಂಕ : 1–10–2011 ರಿಂದ ಪ್ರಾರಂಭಗೊಂಡು ದಿನಾಂಕ : 29–11–2011 ರಂದು ಮುಕ್ತಾಯಗೊಳ್ಳುತ್ತದೆ. ಈ ಅವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಸ್ತಿ ತೆರಿಗೆ ಮಾಲೀಕರು ತೆರಿಗೆ ಪಾವತಿಸಲು ಬರುತ್ತಾರೆ. ಈ ಸಂಬಂಧ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳ ಸೇವೆಯು ಅತ್ಯವಶ್ಯಕವಾಗಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ಕಂದಾಯ ಇಲಾಖೆಯ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಈಗಾಗಲೇ ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳನ್ನೆ ದಿನಾಂಕ : 1–10–2011 ರಿಂದ ನಾಲ್ಕು ತಿಂಗಳ ಅವಧಿಗೆ ಮುಂದುವರೆಸುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

*ನಿರ್ಣಯ : ದಿನಾಂಕ : 15–09–2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.*

## *73]. ವಿಷಯದ ಸಂಖ್ಯೆ :–ತೆಆಸ್ಥಾಸ/297/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 15–09–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಕಾರ್ಯಪಾಲಕ ಅಭಿಯಂತರರು, (ಯೋಜನೆ ದಕ್ಷಿಣ) ರವರು **Improvements to Chamundeshwari Kabbadi Play ground in 18th Main Road, Jayanagar in Ward No.168** ಕಾಮಗಾರಿಗೆ ರೂ.65.00 ಲಕ್ಷಗಳಿಗೆ 2010–11ನೇ ಸಾಲಿಗೆ ಕಾಮಗಾರಿ ಸಂಖ್ಯೆ ನೀಡುವಂತೆ ಜಂಟಿ ಆಯುಕ್ತರು ದಕ್ಷಿಣ ರವರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

2010–11ನೇ ಸಾಲಿನಲ್ಲಿ ಪರಿಷ್ಕೃತ ಆಯವ್ಯಯದಲ್ಲಿ ಮರು ಹೊಂದಾಣಿಕೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ 22–3–2011 ರಂದು ನಡೆದ ಸಭೆಯ ನಡವಳಿ ವಿಷಯ ಸಂಖ್ಯೆ ತೆಆಸ್ಥಾಸ/257/2010–11 ರಂತೆ, ಗೋಷ್ವಾರೆ 3 ರಲ್ಲಿನ

ಕ್ರಮ ಸಂಖ್ಯೆ 29 ರಲ್ಲಿ 168 ವಾರ್ಡ್‌ನ ಪಟ್ಟಾಭಿರಾಮನಗರದಲ್ಲಿ ಆಟದ ಮೈದಾನಗಳ ಅಭಿವೃದ್ಧಿ ಕಾಮಗಾರಿಗಾಗಿ ರೂ.65.00 ಲಕ್ಷಗಳ ಅನುದಾನವನ್ನು ಮರು ಹೊಂದಾಣಿಕೆಯಲ್ಲಿ ಮೀಸಲಿರಿಸಿದೆ.

ಸದರಿ ಅನುದಾನಕ್ಕೆ ಎದುರಾಗಿ 2010–11ನೇ ಸಾಲಿನಲ್ಲಿ ಕಾಮಗಾರಿ ಸಂಖ್ಯೆ ನೀಡಿರುವುದಿಲ್ಲ. ಸದರಿ ಅನುದಾನವನ್ನು ಆಯವ್ಯಯದ ಪ್ರಧಾನ ಲೆಕ್ಕ ಶೀರ್ಷಿಕೆ "24 – ಸಂಸ್ಕೃತಿ ಮತ್ತು ಕ್ರೀಡೆ – ಆಟದ ಮೈದಾನದ ಸಮಗ್ರ ಅಭಿವೃದ್ಧಿ – ಪಿ.1543/160 ರಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

2011–12ನೇ ಸಾಲಿನ ಆಯವ್ಯಯ ಅನುಮೋದನೆ ನಿರೀಕ್ಷಿಸಿ ಕಡತವನ್ನು ಮಂಡಿಸಲಾಗಿದ್ದು, ಕಂಡಿಕೆ 17 ರಲ್ಲಿ ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

**2011–12ನೇ ಸಾಲಿನ ಕರಡು ಆಯವ್ಯಯದಲ್ಲಿ ಸದರಿ ಮೊತ್ತವನ್ನು ಅಳವಡಿಸಿಕೊಂಡಿರುವುದಿಲ್ಲ.**

ಆದ್ದರಿಂದ 2011–12ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ " 24 ಸಂಸ್ಕೃತಿ ಮತ್ತು ಕ್ರೀಡೆ – ಆಟದ ಮೈದಾನದ ಸಮಗ್ರ ಅಭಿವೃದ್ಧಿ – ಪಿ.1543/160 ರಲ್ಲಿ ಚಾಲ್ತಿ ಕಾಮಗಾರಿಯಾಗಿ ರೂ.65.00 ಲಕ್ಷಗಳನ್ನು ಅಳವಡಿಸಿಕೊಳ್ಳುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಟಿಪ್ಪಣಿ.

*ನಿರ್ಣಯ :* *ದಿನಾಂಕ:15–09–2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಕಾಮಗಾರಿಯನ್ನು 2011– 12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಸಂಸ್ಕೃತಿ ಮತ್ತು ಕ್ರೀಡೆ – ಆಟದ ಮೈದಾನದ ಅಭಿವೃದ್ಧಿಗಾಗಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.*

## *74]. ವಿಷಯದ ಸಂಖ್ಯೆ :–ತೆಆಸ್ಥಾಸ/298/2011–12*

ಆಯುಕ್ತರ ಟಿಪ್ಪಣಿ ಸಂಖ್ಯೆ : CFO/70/Code/2011, ದಿನಾಂಕ : 16–09–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿವಿಧ ವಿಭಾಗಗಳಿಂದ ಈ ಹಿಂದೆ ನೀಡಿರುವ ಕಾಮಗಾರಿಯ ಸಂಕೇತ ಸಂಖ್ಯೆಯನ್ನು ಪುನರ್ ನವೀಕರಣಕ್ಕಾಗಿ ಒಟ್ಟು 31 ಕಡತಗಳು ರೂ. 891.80 ಲಕ್ಷಗಳಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ವಿವರಗಳು ಈ ಕೆಳಕಂಡಂತಿರುತ್ತದೆ.

ರೂ. ಲಕ್ಷಗಳಲ್ಲಿ

| ಕ್ರ. ಸಂ | ಕಾಮಗಾರಿಯ ಹೆಸರು | ಅಂದಾಜು ಮೊಬಲಗು | ಆಯುಕ್ತರ ಅನುಮೋದನೆ | ಲೆಕ್ಕ ಶೀರ್ಷಿಕೆ | ಇದುವರೆಗೆ ಪಾವತಿ | ಪುನರ್ ನವೀಕರಣ ಮೊಬಲಗು | 2011–12ರಲ್ಲಿ ಅನುದಾನ ಲಭ್ಯತೆ ಮುಂದುವರೆದ ಕಾಮಗಾರಿಗಳಿಗೆ |
|---|---|---|---|---|---|---|---|
| 1 | Reprises to drains, cc roads to Cross roading JC Industrial area, | 40.00 | ಕಂಡಿಕೆ 14 ದಿ: 07.07.11 | P0598 | – | 34.93 | ಮುಂದುವರೆದ ಕಾಮಗಾರಿಗಳಿಗೆ ಅನುದಾನ ಲಭ್ಯ ಇರುವುದಿಲ್ಲ. 11–12ನೇ ಸಾಲಿನಲ್ಲಿ ಮುಂದುವರೆದ ಕಾಮಗಾರಿಗಳಿಗೆ ಅನುದಾನ ಸೇರಿಸುವ ಷರತ್ತಿನಂತೆ ಪರಿಗಣಿಸಲಾಗುವುದು. |
| 2 | Constructing Culverts, drains and formatting to pipe line road from ring road to Rajyothsavangara in W.N. 185 | 40.00 | ಕಂಡಿಕೆ 14 ದಿ: 07.07.11 | P0616 | – | 43.99 | 1622.00 |

| | | | | | | | |
|---|---|---|---|---|---|---|---|
| 3 | Reprises to drains construction of culverts and improvements to the road of Ramaiahnagar in w.N.185 | 40.00 | ಕಂಡಿಕೆ 14 ದಿ: 07.07.11 | P0616 | – | 43.99 | 1578.01 |
| 4 | construction of culverts and improvements to Main road of gowravanagar in w.N.195 | 49.00 | ಕಂಡಿಕೆ 14 ದಿ: 07.07.11 | P0616 | – | 54.90 | 1523.11 |
| 5 | construction of culverts drains improvements to main road of RBI layout in w.No.195 | 40.00 | ಕಂಡಿಕೆ 14 ದಿ: 07.07.11 | P0616 | – | 43.99 | 1479.12 |
| 6 | construction of culverts drains and improvements road of Krishnanagar W.No195 | 40.00 | ಕಂಡಿಕೆ 14 ದಿ: 07.07.11 | P0616 | – | 43.99 | 1435.13 |
| 7 | construction of culverts drains improvements road of RBI layout in W.No.195 | 43.00 | ಕಂಡಿಕೆ 14 ದಿ: 07.07.11 | P0616 | – | 47.30 | 1387.83 |
| 8 | construction of culverts drains Konanakunte near chandranna's house in w.N.195 | 9.50 | ಕಂಡಿಕೆ 14 ದಿ: 07.07.11 | P0625 | – | 10.45 | 1622.00 |
| 9 | Providing chain link fencing of either side of VV vally in Primary & Secondary drain from Sankey tank to vatal nagaraj road | 80.00 | ಕಂಡಿಕೆ 37, ದಿ: 07.09.11 | P0543 | 72.64 | 11.11 | 2259.61 |
| 10 | Constructin of RCC drain including chain link fencing from vinayakanagar temple to Singapura at Ch: 208 to 270 mtr. | 24.00 | ಕಂಡಿಕೆ 162, ದಿ: 11.07.11 | P0625 | – | 26.40 | 1611.55 |

| | | | | | | | |
|---|---|---|---|---|---|---|---|
| 11 | Constructing RCC drain including chain link fencing from Vinayakanagar temple to singapura at Ch: 104-208 mtr | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1585.15 |
| 12 | Construction of RCC drain including chain link fencing from vinayaka nagar temple to singapura ch: 0.00 to 104.00 mtr. | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1552.15 |
| 13 | Construction of RCC drain from MS playa circle to varadarajanagar-vinayakanagar junction at ch: 495-548 mtrs | 18.50 | ಕಂಡಿಕೆ 162, ದಿ: 11.07.11 | P0625 | – | 20.35 | 1519.15 |
| 14 | Construction of RCC drain from MS playa circle to varadarajanagar-vinayakanagar junction at ch: 330-495 mtrs | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1498.80 |
| 15 | Construction of RCC drain from MS playa circle to varadarajanagar-vinayakanagar junction at ch: 165-330 mtrs | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1465.80 |
| 16 | Construction of RCC drain from MS playa circle to varadarajanagar-vinayakanagar junction at ch: 000-165 mtrs | 30.00 | ಕಂಡಿಕೆ 162, ದಿ: 11.07.11 | P0625 | – | 33.00 | 1432.80 |
| 17 | Construction of RCC drain at srinidhi layout in Vidyaranyapuram sub division | 24.00 | ಕಂಡಿಕೆ 162, ದಿ: 11.07.11 | P0625 | – | 26.40 | 1399.80 |
| 18 | Formation improvements | 25.00 | ಕಂಡಿಕೆ 162, ದಿ: | P0619 | – | 27.50 | 918.00 |

| | | | | | | | |
|---|---|---|---|---|---|---|---|
| | and asphalting to road MS playa 1st & 2nd cross in Vidyaranyapuram sub division | | 11.07.11 | | | | |
| 19 | Formation improvements and asphalting to road MS playa 3rd, 4th & 5th cross in Vidyaranyapuram sub division | 19.00 | ಕಂಡಿಕೆ 162, ದಿ: 11.07.11 | P0619 | – | 20.90 | 890.50 |
| 20 | Formation improvements and asphalting to road MS playa 6th cross in Vidyaranyapuram sub division | 10.00 | ಕಂಡಿಕೆ 162, ದಿ: 11.07.11 | P0619 | – | 11.00 | 879.50 |
| 21 | Formation improvements and asphalting to Vinayakanagar 11th cross in Vidyaranyapuram sub division | 23.50 | ಕಂಡಿಕೆ 162, ದಿ: 11.07.11 | P0619 | – | 25.85 | 868.50 |
| 22 | Formation improvements and asphalting to Vinayakanagar 2nd cross in Vidyaranyapuram sub division | 14.00 | ಕಂಡಿಕೆ 162, ದಿ: 11.07.11 | P0619 | – | 15.40 | 842.65 |
| 23 | Formation improvements and asphalting to Vinayakanagar 3rd cross in Vidyaranyapuram sub division | 14.00 | ಕಂಡಿಕೆ 162, ದಿ: 11.07.11 | P0619 | – | 15.40 | 827.25 |
| 24 | Formation improvements and asphalting to Vinayakanagar 2nd & 3rd main in Vidyaranyapuram sub division | 26.00 | ಕಂಡಿಕೆ 162, ದಿ: 11.07.11 | P0619 | – | 28.60 | 811.85 |
| 25 | Formation improvements and asphalting to Vinayakanagar 4th | 16.00 | ಕಂಡಿಕೆ 162, ದಿ: 11.07.11 | P0619 | – | 17.60 | 783.25 |

| | | | | | | | |
|---|---|---|---|---|---|---|---|
| | main in Vidyaranyapuram sub division | | | | | | |
| 26 | Formation improvements and asphalting to Vinayakanagar 5th & 6th main in Vidyaranyapuram sub division | 24.50 | ಕಂಡಿಕೆ 162, ದಿ: 11.07.11 | P0619 | – | 26.95 | 765.65 |
| 27 | Formation improvements and asphalting to Vinayakanagar 3rd cross & 5th main in Vidyaranyapuram sub division | 10.00 | ಕಂಡಿಕೆ 162, ದಿ: 11.07.11 | P0619 | – | 11.00 | 738.70 |
| 28 | Formation improvements and asphalting to Vinayakanagar 7th main in Vidyaranyapuram sub division | 25.00 | ಕಂಡಿಕೆ 162, ದಿ: 11.07.11 | P0619 | – | 27.50 | 727.70 |
| 29 | Improvements and asphalting to road varadarajanagara junction to towards singapura in vidyaranyapura sub division | 34.00 | ಕಂಡಿಕೆ 162, ದಿ: 11.07.11 | P0619 | – | 37.40 | 700.20 |
| 30 | Formation improvements and asphalting to road vinayakanagara 3rd cross, 1st, 2nd, 3rd & 4th main in vidyaranyapura sub division | 24.50 | ಕಂಡಿಕೆ 162, ದಿ: 11.07.11 | P0619 | – | 26.95 | 662.80 |
| 31 | Construction of cement concrete road at vinayakanagara in vidyaranyapura sub division | 24.50 | ಕಂಡಿಕೆ 162, ದಿ: 11.07.11 | P0619 | – | 26.95 | 635.85 |
| | **Total** | 889.00 | | | | 891.80 | |

ಸದರಿ 31 ಕಡತಗಳ ಕಾಮಗಾರಿಗಳಿಗೆ 2011–12 ನೇ ಸಾಲಿನಲ್ಲಿ ಅನುದಾನ ಲಭ್ಯವಿರುತ್ತದೆ. ಅಂತಿಮ ಕಾಲಂನಲ್ಲಿ ಅನುದಾನದ ಲಬ್ಯತೆಯ ಬಗ್ಗೆ ವಿವರಗಳನ್ನು ನಿಡಲಾಗಿದ್ದು, ಕಡತವನ್ನು ಮುಂದಿನ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***–ಮುಂದೂಡಿದೆ–***

## *75]. ವಿಷಯದ ಸಂಖ್ಯೆ :–ತೆಆಸ್ಥಾಸ/299/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 16–09–2011ರಲ್ಲಿ ವಿವರಿಸಿರುವಂತೆ, ರಕ್ಷಣಾ ಇಲಾಖೆಯ ಎಂ.ಇ.ಜಿ. ಅಂಡ್ ಸೆಂಟರ್, ಹಲಸೂರು ಇವರ ಪತ್ರದಂತೆ ಟ್ಯಾಂಕರ್‌ಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಶಾಶ್ವತವಾಗಿ ಪ್ರದರ್ಶಿಸಲು ನೀಡುವುದಾಗಿ ತಿಳಿಸಿರುತ್ತಾರೆ. ಆದರೆ ಇವುಗಳನ್ನು ದೆಹಲಿಯಿಂದ ಬೆಂಗಳೂರಿಗೆ ಸಾಗಾಣೆ ಮಾಡಬೇಕಾಗಿರುವುದರಿಂದ ಸಾಗಾಣಿಕೆ ವೆಚ್ಚವನ್ನು ಮಾತ್ರ ಭರಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ವಿನಂತಿಸಿರುತ್ತಾರೆ, ಇದಕ್ಕಾಗಿ ಸುಮಾರು 6.00 ಲಕ್ಷ ವೆಚ್ಚ ತಗುಲುವುದಾಗಿ ತಮ್ಮ ಪತ್ರದಲ್ಲಿ ಹೇಳಿರುತ್ತಾರೆ. ಆದ ಕಾರಣ ಸಾಗಾಣಿಕೆ ವೆಚ್ಚ ಭರಿಸಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ದಿನಾಂಕ : 16–09–2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## ಹೆಚ್ಚುವರಿ ವಿಷಯಗಳು :-

## *01]. ವಿಷಯದ ಸಂಖ್ಯೆ :–ತೆಆಸ್ಥಾಸ/300/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 17–09–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಗುತ್ತಿಗೆದಾರರ ಬಿಲ್ಲುಗಳನ್ನು ಪಾವತಿಸಲು ಬಿಲ್ ಡಿಸ್ಕೌಂಟಿಗ್ ಪದ್ಧತಿಯನ್ನು ಅಳವಡಿಸಿಕೊಳ್ಳಲಾಗಿದೆ. ಈ ಪದ್ಧತಿಯಲ್ಲಿ ಬ್ಯಾಂಕ್‌ನವರು 6 ತಿಂಗಳವರೆಗಿನ ಬಡ್ಡಿಯನ್ನು ಗುತ್ತಿಗೆದಾರರಿಂದ ಪಡೆದು ಅನಂತರದಲ್ಲಿ ಪಾಲಿಕೆಯು ಬಡ್ಡಿಯನ್ನು ಪಾವತಿಸಬೇಕಾಗಿರುತ್ತದೆ. ಈ ವ್ಯವಸ್ಥೆಯಲ್ಲಿ ಬಡ್ಡಿದರವು ಹೆಚ್ಚಿದ್ದು, ಪಾಲಿಕೆಗೆ ಹೊರೆಯಾಗಿರುತ್ತದೆ. ಈ ಹೆಚ್ಚಿನ ಹೊರೆಯನ್ನು ಬ್ಯಾಂಕ್‌ಗಳಿಂದ ಕಡಿಮೆ ಬಡ್ಡಿದರದಲ್ಲಿ ಅಲ್ಪಾವಧಿ ಸಾಲ ಪಡೆದು ತೀರುವಳಿ ಮಾಡಿಕೊಳ್ಳಬಹುದಾಗಿದೆ.

ಆದ್ದರಿಂದ ಸದ್ಯ ಬಾಕಿ ರೂ.446.10 ಕೋಟಿ ಮೊತ್ತವನ್ನು ಪಾವತಿಸುವುದು ಅನಿವಾರ್ಯವಾಗಿರುತ್ತದೆ. ಅಲ್ಲದೆ, ಮಾಸಿಕ ರೂ.5.5 ಕೋಟಿ ಬಡ್ಡಿ ಕಟ್ಟುವ ಬದಲು ಅಲ್ಪಾವಧಿ ಸಾಲ ಪಡೆದಲ್ಲಿ, ಬ್ಯಾಂಕ್‌ಗೆ ಪಾವತಿಸಬಹುದಾದ ಬಡ್ಡಿಯ ಮೊತ್ತ ರೂ.3.97 ಕೋಟಿ ಮಾತ್ರವಾಗಿರುತ್ತದೆ. ಈ ಪ್ರಕಾರ ಪಾಲಿಕೆಗೆ ಮಾಸಿಕ ರೂ.1.58 ಕೋಟಿ ಮೊತ್ತ ಉಳಿತಾಯವಾಗಿರುತ್ತದೆ. ಆದ್ದರಿಂದ ಅಲ್ಪಾವಧಿ ಸಾಲ ಒಟ್ಟು ರೂ.500.00 ಕೋಟಿಯನ್ನು ಪಡೆದು, ಈ ಸಾಲವನ್ನು ಮುಂದೆ ಪಡೆಯಬಹುದಾದ ದೀರ್ಘಾವಧಿ ಸಾಲ ಅಥವಾ ಪಾಲಿಕೆಯ ಸಂಪನ್ಮೂಲಗಳ ಸಂಗ್ರಹದಿಂದ ತೀರಿಸಬಹುದಾಗಿರುತ್ತದೆ.

ಈ ವಿಷಯದಲ್ಲಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ : ಪಾಲಿಕೆಯ ಅನುಮೋದನೆಯನ್ನು ನಿರೀಕ್ಷಿಸಿ ದಿನಾಂಕ : 17–09–2011 ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.***

## *02]. ವಿಷಯದ ಸಂಖ್ಯೆ :–ತೆಆಸ್ಥಾಸ/301/2011–12*

ಆಯುಕ್ತರ ಟಿಪ್ಪಣಿ ದಿನಾಂಕ : 17–09–2011ರಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಂದ ರೂ.1000–00 ಕೋಟಿ ಸಾಲ ಪಡೆಯಲು ಕಂಡಿಕೆ (4) ರಲ್ಲಿ ಮಾನ್ಯ ಆಯುಕ್ತರವರು ಆದೇಶ ನೀಡಿರುವುದರಿಂದ ಪಾಲಿಕೆ ದಿನನಿತ್ಯದ ವಹಿವಾಟುಗಳನ್ನು, ನಿರ್ವಹಣಾ ವೆಚ್ಚಗಳನ್ನು ಹಾಗೂ ತುರ್ತುಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಅಲ್ಲದೆ, ಅತಿಹೆಚ್ಚಿನ

ಬಡ್ಡಿದರದ ಮೇಲೆ ಪಡೆಯಲಾಗಿರುವ ಸಾಲಗಳನ್ನು ಮರುಪಾವತಿ ಮಾಡಿದಲ್ಲಿ ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಸ್ವಲ್ಪಮಟ್ಟಿಗೆ ಸುಧಾರಿಸಿದಂತಾಗುತ್ತದೆ.

ಈ ವಿಷಯದಲ್ಲಿ ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***<u>ನಿರ್ಣಯ : ದಿನಾಂಕ : 17-09-2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.</u>***

## ***<u>03]. ವಿಷಯದ ಸಂಖ್ಯೆ :-ತೆಆಸ್ಥಾಸ/302/2011-12</u>***

ಆಯುಕ್ತರ ಟಿಪ್ಪಣಿ ಸಂಖ್ಯೆ ಃ ಮುಲೆಅ/ಪಿಆರ್/24/11-12, ದಿನಾಂಕ ಃ 22-09-2011ರಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರವು ಮಹಾನಗರ ಪಾಲಿಕೆಯಾಗಿ ಪ್ರಸ್ತುತ ಸುಮಾರು 800.00 ಚ.ಕಿ.ಮೀ ವಿಸ್ತೀರ್ಣದಿಂದ ಕೂಡಿರುತ್ತದೆ. ಬೆಂಗಳೂರು ನಗರದ ವ್ಯಾಪ್ತಿಯನ್ನು 5 ಹೊಸ ವಲಯಗಳಾದ ರಾಜರಾಜೇಶ್ವರಿನಗರ, ಬೊಮ್ಮನಹಳ್ಳಿ, ಮಹದೇವಪುರ, ಬ್ಯಾಟರಾಯನಪುರ, ದಾಸರಹಳ್ಳಿ ವಲಯಗಳಾಗಿ ಸೃಷ್ಟಿಸಿ ಸೇರ್ಪಡೆ ಮಾಡಲಾಗಿದ್ದು, ಹಾಲಿ 8 ವಲಯಗಳಾಗಿ ವಿಭಜಿಸಿ ಕಾರ್ಯನಿರ್ವಹಣೆ ಮಾಡಲಾಗಿರುತ್ತದೆ. ಬೆ0ಗಳೂರು ನಗರದ ಜನಸ0ಖ್ಯೆಯು 2001ರ ಜನಗಣತಿ ಪ್ರಕಾರ ಸುಮಾರು 60 ಲಕ್ಷವಿದ್ದು 2025ರ ವೇಳೆಗೆ ಜನಸ0ಖ್ಯೆಯ ಪ್ರಮಾಣ ಸುಮಾರು 122 ಲಕ್ಷಗಳಷ್ಟು ಆಗಬಹುದೆ0ದು ಅ0ದಾಜಿಸಲಾಗಿದೆ. ವಾಹನ ಸ0ಖ್ಯೆಯ ವಾರ್ಷಿಕ ಬೆಳವಣಿಗೆಯು ಪ್ರಸ್ತುತ 12 ರಿ0ದ 14 ರಷ್ಟಿದ್ದು, ಒಟ್ಟು ವಾಹನ ಸ0ಖ್ಯೆಯು 35 ರಿ0ದ 38 ಲಕ್ಷಗಳಷ್ಟು ಇರುತ್ತದೆ.

ಬೆ0ಗಳೂರು ಮಹಾನಗರವು ದಕ್ಷಿಣ ಭಾರತದಲ್ಲೇ ಒ0ದು ಪ್ರಮುಖ ನಗರವಾಗಿ ಬೆಳವಣಿಗೆಯಾಗುತ್ತಿದ್ದು, ಆರ್ಥಿಕವಾಗಿ ವಾರ್ಷಿಕ ಸುಮಾರು 26000.00 ಕೋಟಿಗಳಷ್ಟು ವಹಿವಾಟು ನಡೆಸಲಾಗುತ್ತಿರುತ್ತದೆ ಎ0ದು ಅ0ದಾಜಿಸಲಾಗಿದೆ ಹಾಗೂ ಬೆ0ಗಳೂರು ನಗರವು ಮಾಹಿತಿ ತ0ತ್ರಜ್ಞಾನದಲ್ಲಿ ಪ್ರಪ0ಚದಲ್ಲೇ ಒ0ದು ಪ್ರಮುಖ ನಗರವಾಗಿ ಗುರುತಿಸಲಾಗಿದೆ ಹಾಗು ಇದು ಸಿಲಿಕಾನ್ ನಗರವೆ0ದು ಪ್ರಸಿದ್ಧಿಯಾಗಿದೆ. ಈ ಎಲ್ಲಾ ಕಾರಣಗಳಿ0ದ ಬೃಹತ್ ಬೆ0ಗಳೂರು ಮಹಾನಗರ ಪಾಲಿಕೆಯು ಬೆ0ಗಳೂರಿನ ಸಮಗ್ರ ಅಭಿವೃದ್ಧಿಗೆ ಸಮರೋಪಾದಿಯಲ್ಲಿ ಕಾಮಗಾರಿಗಳನ್ನು ಕೈಗೊ0ಡು ನಿರ್ವಹಿಸಲಾಗುತ್ತಿದೆ.

ಬೃಹತ್ ಬೆ0ಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 4 ಮುಖ್ಯ ಕಣಿವೆಗಳಾದ ವೃಷಭಾವತಿ, ಕೋರಮ0ಗಲ, ಹೆಬ್ಬಾಳ, ಛಲ್ಲಘಟ್ಟ ನೀರುಗಾಲುವೆಗಳು ಹರಿಯುತ್ತಿರುತ್ತವೆ. ನಗರ ಪ್ರದೇಶದಲ್ಲಿ ಈಶಾನ್ಯ ಮತ್ತು ನೈರುತ್ಯ ಮು0ಗಾರು ಮಳೆಯಿ0ದ ಒಟ್ಟು ಸುಮಾರು 800 ಮಿಲಿ ಮೀಟರ್‌ನಷ್ಟು ವಾರ್ಷಿಕ ಮಳೆಯಾಗುತ್ತಿರುತ್ತದೆ.

2011-12ನೇ ಸಾಲಿಗೆನಲ್ಲಿ ಮಹಾನಗರ ಪಾಲಿಕೆಯಿಂದ ಮುಂದುವರೆದ ಕಾಮಗಾರಿಗಳು ಹಾಗೂ ಹೊಸ ಕಾಮಗಾರಿಗಳ ಅಡಿಯಲ್ಲಿ ಯೋಜನಾ ಶಾಖೆಯ ವತಿಯಿಂದ ಆರ್.ಓ.ಬಿ./ ಆರ್.ಯು.ಬಿ.ಗಳು. ಸುರ0ಗಮಾರ್ಗಗಳು, ರಸ್ತೆಗೆ ಸ0ಬ0ಧಪಟ್ಟ ಕಾಮಗಾರಿಗಳು, ಮೂಲಭೂತ ಸೌಕರ್ಯಗಳ ಶಾಖೆಗೆ ಸ0ಬ0ಧಪಟ್ಟ ಕಾಮಗಾರಿಗಳು ಬೃಹತ್ ರಸ್ತೆಗಳು ವಿಭಾಗದ ಕಾಮಗಾರಿಗಳು, ಮಳೆನೀರಿನ ಚರ0ಡಿಗಳ ಕಾಮಗಾರಿಗಳು, ಸ0ಸ್ಕೃತಿ ಮತ್ತು ಕ್ರೀಡೆಗೆ ಸ0ಬ0ಧಪಟ್ಟ0ತೆ ಕ್ರೀಡಾ0ಗಣ ಆಟದ ಮೈದಾನ ಮತ್ತು ಉದ್ಯಾನವನದ ಕಾಮಗಾರಿಗೆ ಒಟ್ಟು ರೂ.112636.38 ಲಕ್ಷಗಳನ್ನು 2011-12ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಲಾಗಿದೆ. ಇವುಗಳಲ್ಲಿ ಯೋಜನಾ ವಿಭಾಗದ ಕಾಮಗಾರಿಗಳ, ಜೆ.ಎನ್.ಎನ್.ಯು.ಆರ್.ಎ0 ಕಾಮಗಾರಿಗಳಿಗೆ ಹಾಗೂ ಮೆಗಾಸಿಟಿ ಯೋಜನೆಯ ಕಾಮಗಾರಿಗಳಿಗೆ ಸಾಲ ಪಡೆಯಲು 2011-12 ನೇ ಸಾಲಿನ ಆಯವ್ಯಯದಲ್ಲಿ ಒಟ್ಟು ರೂ.50000.00 ಲಕ್ಷಗಳನ್ನು ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಅದರ0ತೆ ಈ ಕೆಳಕ0ಡ ಲೆಕ್ಕ ಶೀರ್ಷಿಕೆಯಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊ0ಡು ಬೃಹತ್ ಬೆ0ಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕಾಗಿರುತ್ತದೆ.

| ಆಯವ್ಯಯ ಪುಸ್ತಕದ ಕ್ರಮ ಸ0ಖ್ಯೆ | ಲೆಕ್ಕ ಶೀರ್ಷಿಕೆಯ ವಿವರ | ಆಯವ್ಯಯ ಪುಸ್ತಕದ ಪು.ಸ0. | 2010-11ನೇ ಸಾಲಿಗೆ ಬೇಕಾಗುವ ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 19 | ಕಾಮಗಾರಿ ಯೋಜನಾ ಶಾಖೆ | | |
| 1 | ಇತರೆ ಮೂಲಭೂತ ಸೌಕರ್ಯ ಕಾಮಗಾರಿಗಳು | 116-122 | 7639.62 |
| 2 | ಆರ್.ಓ.ಬಿ/ ಆರ್.ಯು.ಬಿ.ಗಳು | 122-124 | 8879.20 |
| 3 | ಕ್ರೀಡಾ0ಗನ ಆಟದ ಮೈದಾನಗಳು ಮತ್ತು | 125-126 | 4254.85 |

| | | | |
|---|---|---|---|
| | ಉದ್ಯಾನವನಗಳು | | |
| 4 | ಸುರ0ಗಮಾರ್ಗಗಳು | 126 | 587.28 |
| 5 | ಮೂಲಭೂತ ಸೌಕರ್ಯ ಕಾಮಗಾರಿಗಳು (ಕೆ.ಆರ್.ಪುರಂ ರುದ್ರಭೂಮಿ ಮತ್ತು ವಿದ್ಯುತ್ ಚಿತಾಗಾರ | 121 | 1928.25 |
| 6 | ರಸ್ತೆಗೆ ಸ0ಬ0ಧಿಸಿದ ಕೆಲಸಗಳು (ರಸ್ತೆ ಮೇಲು ಸೇತುವೆ) | 127–128 | 6198.00 |
| 7 | ರಸ್ತೆಗೆ ಸ0ಬ0ಧಪಟ್ಟ ಕೆಲಸಗಳು | 116–122 | 7639.62 |
| 20 | ಕಾಮಗಾರಿ ಮೂಲಭೂತ ಸೌಕರ್ಯಗಳ ಶಾಖೆ | | |
| 1 | ಕೂಡು ರಸ್ತೆಗಳ ಅಭಿವೃದ್ದಿ (ಬೃಹತ್ ರಸ್ತೆಗಳು) ರಸ್ತೆಗೆ ಸ0ಬ0ಧಪಟ್ಟ ಕೆಲಸಗಳು | 144–146 | 12453.38 |
| 2 | ರಸ್ತೆ ಅಗಲೀಕರಣ | 146–147 | 19294.52 |
| 21<br>1 | ಮಳೆನೀರಿನ ಚರ0ಡಿಗಳ ಕಾಮಗಾರಿಗಳು (ಜೆ.ಎನ್.ಎನ್.ಯು.ಆರ್.ಎ0.) | 150 | 21218.66 |
| 2 | ಇತರೆ ಕಾಮಗಾರಿಗಳು ಕೊಳಚೆ ಚರ0ಡಿ ಮೋರಿಗಳ ಕಾಮಗಾರಿಗಳು | 152 | 13465.00 |
| 24 | ಸ0ಸ್ಕೃತಿ ಮತ್ತು ಕ್ರೀಡೆ: ಮೂಲಭೂತ ಸೌಕರ್ಯಗಳು ಕ್ರೀಡಾ0ಗಣ ಆಟದ ಮೈದಾನಗಳು ಮತ್ತು ಉದ್ಯಾನವನಗಳು | 125 | 9078.00 |
| | | **ಒಟ್ಟು** | **112636.38** |

ಮೇಲ್ಕ0ಡ ಲೆಕ್ಕಶೀರ್ಷಿಕೆಯಲ್ಲಿನ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಪಾಲಿಕೆಯ ಸಂಪಮ್ಮೂಲಗಳಿಂದ 2011–12ನೇ ಸಾಲಿನಲ್ಲಿ ವಿವಿಧ ಹಣಕಾಸು ಸ0ಸ್ಥೆಗಳಿ0ದ ಬ್ಯಾ0ಕುಗಳಿ0ದ ರೂ.500.00 ಕೋಟಿಗಳ **ದೀರ್ಘಾವದಿ ಸಾಲ** ಪಡೆಯಲು ಸೂಕ್ತ ನಿರ್ಣಯಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

***ನಿರ್ಣಯ :   ದಿನಾಂಕ : 22–09–2011 ರ ಆಯುಕ್ತರ ಟಿಪ್ಪಣಿ ಒಪ್ಪಿದೆ.***

## *04]. ವಿಷಯದ ಸಂಖ್ಯೆ :–ತೆಆಸ್ಥಾಸ/303/2011–12*

ದೇಶದ ಪ್ರಮುಖ ನಗರಗಳಾದ **ದೆಹಲಿ, ಚಂದಿಘಡ್** ಹಾಗೂ **ನೈನ್‌ತಾಲ್** ಮಹಾನಗರಗಳಲ್ಲಿ ಕಂದಾಯ, ಜಾಹೀರಾತು ಮತ್ತು ಇತರೇ ಕ್ಷೇತ್ರಗಳಲ್ಲಿ ಆರ್ಥಿಕ ಸಬಲೀಕರಣಗಳ ಬಗ್ಗೆ ಅಳವಡಿಸಿಕೊಂಡಿರುವ ಆಧುನಿಕತೆಯ ಪ್ರಚಲಿತ ವಿದ್ಯಾಮಾನಗಳನ್ನು ಮತ್ತು ಪ್ರಗತಿಪರ ತಂತ್ರಜ್ಞಾನಗಳ ಮಾದರಿಗಳನ್ನು ಒಳಗೊಂಡಂತೆ ಹಾಗೂ ಜನಪ್ರತಿನಿಧಿಗಳ ಕಾರ್ಯನಿರ್ವಹಣಾ ಶೈಲಿಯ ಬಗ್ಗೆ ಅಧ್ಯಯನ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು, ಅಧ್ಯಕ್ಷರು, ಸಮಿತಿಯ ಎಲ್ಲಾ ಸದಸ್ಯರು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸಮಿತಿಯ ಆಪ್ತ ಕಾರ್ಯದರ್ಶಿಗಳನ್ನೊಳಗೊಂಡಂತೆ, 2011ನೇ ಸಾಲಿನ ನವೆಂಬರ್ ಮಾಹೆಯಲ್ಲಿ ಮೇಲ್ಕಂಡ ನಗರಗಳಿಗೆ ಬೇಟಿ ನೀಡಲು ಉದ್ದೇಶಿಸಿದ್ದು, ಪ್ರವಾಸವನ್ನು ವಿಮಾನದಲ್ಲಿ ಕೈಗೊಳ್ಳಲು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಜಿ. ಮಂಜುನಾಥ ರಾಜು**
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**